ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೆನಪು
ಸದಾ ಮಿನುಗುವ ತಾರೆ

ಇಂದು
ಭೂಮಿಕಾ 11

ಪೋಕ್ಸೊ: ಮದುವೆ ಷರತ್ತು ವಿಧಿಸಿ ಜಾಮೀನು 8
ದಾಖಲೆ ಸಂಖ್ಯೆಯಲ್ಲಿ ಅಂಗಾಂಗ ದಾನ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,960 ▲	17,787 ▲	₹52,350 (ಬೆಂಗಳೂರು) ▲	₹59,800 (ಬೆಂಗಳೂರು) ▲	82.47 ▼

ಎಲ್ಲ ರಾಜ್ಯಗಳ ಪೊಲೀಸರಿಗೆ ಒಂದೇ ದಿರಿಸಿಗೆ ಮೋದಿ ಸಲಹೆ

ಒಂದು ದೇಶ, ಒಂದು ಸಮವಸ್ತ್ರ

ಸೂರಜ್‌ಕುಂಡ್ (ಹರಿಯಾಣ) (ಪಿಟಿಐ): ದೇಶದ ಎಲ್ಲಾ ರಾಜ್ಯಗಳ ಪೊಲೀಸರಿಗೆ ಒಂದೇ ರೀತಿಯ ಸಮವಸ್ತ್ರ ರೂಪಿಸುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ. ಒಂದೇ ಸಮವಸ್ತ್ರ ಇದ್ದರೆ, ಎಲ್ಲಾ ರಾಜ್ಯದ ಪೊಲೀಸರಿಗೆ ಏಕರೂಪದ ಗುರುತು ದೊರೆಯುತ್ತದೆ ಎಂದು ಅವರು ಶುಕ್ರವಾರ ಹೇಳಿದ್ದಾರೆ.

ಇಲ್ಲಿ ನಡೆದ ಎರಡು ದಿನಗಳ ಚಿಂತನ ಶಿಬಿರದಲ್ಲಿ ಅವರು ಈ ಮಾತು ಹೇಳಿದ್ದಾರೆ. ಶಿಬಿರದಲ್ಲಿ ರಾಜ್ಯಗಳ ಗೃಹ ಸಚಿವರ ಜತೆಗಿನ ಸಂವಾದದ ವೇಳೆ ಮೋದಿ ಅವರು ಈ ಪ್ರಸ್ತಾವ ಇರಿಸಿದ್ದಾರೆ.

‘ದೇಶದಾದ್ಯಂತ ಪೊಲೀಸರಿಗೆ ಒಂದೇ ಸ್ವರೂಪದ ಸಮವಸ್ತ್ರ ಇದ್ದರೆ, ಅವರನ್ನು ಗುರುತಿಸಲು ಜನರಿಗೆ ಅನುಕೂಲವಾಗುತ್ತದೆ. ಜತೆಗೆ ಎಲ್ಲಾ ಪೊಲೀಸರಿಗೆ ಒಂದೇ ಗುಣಮಟ್ಟದ ಸಮವಸ್ತ್ರ ದೊರೆಯುತ್ತದೆ. ಇದನ್ನು ನಾನು

> **ಅಪರಾಧ ಕೃತ್ಯಗಳ ತನಿಖೆಯಲ್ಲಿ ಆಧುನಿಕ ತಂತ್ರಜ್ಞಾನಗಳು ಮಹತ್ವದ ಪಾತ್ರವಹಿಸುತ್ತವೆ. ಹೀಗಾಗಿ ತಂತ್ರಜ್ಞಾನ ಅಳವಡಿಕೆಗೆ ರಾಜ್ಯ ಸರ್ಕಾರಗಳು ಹಣ ಇಲ್ಲ ಎನ್ನಬಾರದು**
> **ನರೇಂದ್ರ ಮೋದಿ,** ಪ್ರಧಾನಿ

ಹೇರುತ್ತಿಲ್ಲ. ಸಲಹೆ ನೀಡುತ್ತಿದ್ದೇನೆ ಅಷ್ಟೆ. ಇದು ಸಂಪೂರ್ಣವಾಗಿ ಅನುಷ್ಠಾನಕ್ಕೆ ಬರಲು ಐದು ಅಥವಾ ಐವತ್ತು ಅಥವಾ ನೂರು ವರ್ಷಗಳಾಗಬಹುದು. ಆದರೆ, ಆ ದಿಕ್ಕಿನಲ್ಲಿ ನಾವು ಯೋಚಿಸುವುದನ್ನು ಆರಂಭಿಸಬೇಕು’ ಎಂದು ಅವರು ಸಲಹೆ ನೀಡಿದ್ದಾರೆ.

ಪ್ರಧಾನಿ ಮೋದಿ ಮತ್ತು ಅವರ ಸರ್ಕಾರವು ಹಲವು ಯೋಜನೆ ಹಾಗೂ ಸವಲತ್ತುಗಳನ್ನು ದೇಶದಾದ್ಯಂತ ಏಕರೂಪಗೊಳಿಸುವ ಕ್ರಮ ತೆಗೆದುಕೊಂಡಿದೆ. ‘ಒಂದು ದೇಶ, ಒಂದು ಮೊಬಿಲಿಟಿ’, ‘ಒಂದು ದೇಶ, ಒಂದು ಗ್ರಿಡ್’, ‘ಒಂದು ದೇಶ, ಒಂದು ಪಡಿತರ ಚೀಟಿ’ ಅಂತಹ ಯೋಜನೆಗಳಲ್ಲಿ ಪ್ರಮುಖವಾದವುಗಳು.

ದೇಶದಾದ್ಯಂತ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ‘ಒಂದು ದೇಶ, ಒಂದು ಚುನಾವಣೆ’ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಬಿಜೆಪಿಯ ಹಲವು ನಾಯಕರು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸಹ ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಈ ಪದ್ಧತಿ ಅಳವಡಿಕೆಗೆ ಸಿದ್ಧವಿರುವುದಾಗಿ ಚುನಾವಣಾ ಆಯೋಗವೂ ಹೇಳಿತ್ತು.

‘ಪೆನ್ನು ಹಿಡಿದ ನಕ್ಸಲರು’

ಪೆನ್ನು ಹಿಡಿದ ನಕ್ಸಲರು ದೇಶದ ಹೊಸ ತಲೆಮಾರಿನ ಜನರ ತಲೆಯನ್ನು ಕೆಡಿಸುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

‘ಇಂತಹವರಿಗೆ ವಿದೇಶಗಳಿಂದ ನೆರವು ಬರುತ್ತಿದೆ. ಇಂತಹ ಕೆಲಸದಲ್ಲಿ ತೊಡಗಿದವರು ಬಂದೂಕು ಹಿಡಿದ ನಕ್ಸಲರಾಗಿರಲಿ ಅಥವಾ ಪೆನ್ನು ಹಿಡಿದ ನಕ್ಸಲರಾಗಿರಲಿ, ಅವರನ್ನು ನಾವು ತಡೆಯುತ್ತೇವೆ’ ಎಂದು ಮೋದಿ ಹೇಳಿದ್ದಾರೆ.

ಇಂದು ಅಪರಾಧ ಎಂಬುದು ಸ್ಥಳೀಯ ಮಟ್ಟಕ್ಕೆ ಸೀಮಿತವಾಗಿಲ್ಲ. ಅದು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಣೆಯಾಗಿದೆ. ಅದನ್ನು ತಡೆಗಟ್ಟಲು ರಾಜ್ಯಗಳ ನಡುವೆ ಸಹಕಾರವಿರಬೇಕು. ಅಪರಾಧಗಳನ್ನು ತಡೆದರೆ ಮಾತ್ರ ರಾಜ್ಯಗಳ ಅಭಿವೃದ್ಧಿ ಸಾಧ್ಯ ಎಂದು ಅವರು ಹೇಳಿದ್ದಾರೆ.

ಸುಳ್ಳು ಸುದ್ದಿ ಎಂಬುದು ದೊಡ್ಡ ಸಮಸ್ಯೆಯಾಗಿದೆ. ಒಂದು ಸಣ್ಣ ಸುಳ್ಳು ಸುದ್ದಿಯೂ ದೇಶಕ್ಕೆ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸಂದೇಶಗಳನ್ನು ಬೇರೆಯವರಿಗೆ ಕಳುಹಿಸುವ ಮುನ್ನ, ಅದು ಸತ್ಯವೇ ಅಥವಾ ಸುಳ್ಳೇ ಎಂಬುದನ್ನು ಪರಿಶೀಲಿಸುವುದನ್ನು ಕಲಿತುಕೊಳ್ಳುವ ಅಗತ್ಯವಿದೆ ಎಂದು ಮೋದಿ ಹೇಳಿದ್ದಾರೆ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಕಂದಾಯ ಸಚಿವ ಆರ್‌. ಅಶೋಕ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ತಿನ ಸದಸ್ಯ ಬಿ.ಎಸ್‌. ಅರುಣ್‌, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್‌, ಕಾರ್ಯದರ್ಶಿ ಎನ್‌. ಮಂಜುಳಾ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

ನಾಡೆಲ್ಲ ಕೋಟಿ ಕಂಠದ ‘ಡಿಂಡಿಮ’

ಕಡಲಾಳಕ್ಕೆ ಕಲರವ ಮುಟ್ಟಿಸಿದ ದೋಣಿಗಳು, ಆಗಸದಲ್ಲೂ ಝೇಂಕರಿಸಿದ ಕನ್ನಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡಲ ಮಡಿಲಿನಿಂದ ಹಿಡಿದು ಆಕಾಶದೆತ್ತರಕ್ಕೂ ವಿಶ್ವ ವಿನೂತನವಾಗಿ ಹರಡಿದ ಕನ್ನಡದ ಕಲರವ, ಸರ್ವರ ಹೃದಯ ಸಂಸ್ಕಾರಿಯಾಗಿ ಕನ್ನಡ ಡಿಂಡಿಮವ ಬಾರಿಸಿತು.

ಕನ್ನಡ ರಾಜ್ಯೋತ್ಸವದ ಭಾಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶುಕ್ರವಾರ ಆಯೋಜಿಸಿದ್ದ ‘ಕೋಟಿ ಕಂಠ ಗಾಯನ’ ಕಾರ್ಯಕ್ರಮದಿಂದಾಗಿ ನಾಡಿನುದ್ದಕ್ಕೂ ಎಲ್ಲೆಲ್ಲೂ ಕನ್ನಡ ಗೀತೆಗಳದ್ದೆ ಝೇಂಕಾರ. ಬೆಂಗಳೂರಿನ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸಾವಿರ ಸಾವಿರ ಸಂಖ್ಯೆಯಲ್ಲಿ ಕನ್ನಡದ ದನಿಗಳು ಜೊತೆಯಾಗಿ ಹಾಡಿದವು. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್, ಕಂದಾಯ ಸಚಿವ ಆರ್.ಅಶೋಕ ಹಾಗೂ ಹಲವು ಶಾಸಕರು ಧ್ವನಿಗೂಡಿಸಿದರು.

ನೇತ್ರಾವತಿ ಮತ್ತು ಫಲ್ಗುಣಿ ನದಿಗಳು ಅರಬ್ಬಿ ಸಮುದ್ರ ಸೇರುವ ಸಂಗಮದಲ್ಲಿ ಅಲೆಗಳ ಅಬ್ಬರಕ್ಕೆ ಕನ್ನಡದ ಹಾಡುಗಳ ಅಬ್ಬರವೂ ಜೊತೆಯಾಯಿತು. ಬೋಳೂರಿನ ಸುಲ್ತಾನ್ ಬತ್ತೇರಿಯಿಂದ ಹೊರಟ 50 ದೋಣಿಗಳು ತೋಟ ಬೆಂಗ್ರೆ ಅಳಿವೆ ಬಾಗಿಲುವರೆಗೆ ಸಾಗಿ ಕನ್ನಡದ ಹಾಡುಗಳನ್ನು ಕಡಲಾಳಕ್ಕೂ ತಲುಪಿಸಿದವು.

8ನೇ ಪುಟ ನೋಡಿ

ಕರ್ನಾಟಕ ನಂ. 1 ಮಾಡ್ತೇವೆ: ಬೊಮ್ಮಾಯಿ

‘ಕರ್ನಾಟಕದಲ್ಲಿ ನೆಲೆಸಿರುವ ಪ್ರತಿಯೊಬ್ಬ ವ್ಯಕ್ತಿಗೂ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡುತ್ತೇವೆ. ಎಲ್ಲರಿಗೂ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡುವ ಮೂಲಕ ಕರ್ನಾಟಕವನ್ನು ಭಾರತದಲ್ಲೇ ನಂಬರ್ 1 ರಾಜ್ಯವನ್ನಾಗಿ ಮಾಡುವ ಛಲವನ್ನು ತೊಟ್ಟಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕ ಇನ್ನಷ್ಟು ಶಕ್ತಿಶಾಲಿಯಾಗಿ ಹೊರ ಹೊಮ್ಮಲು ಎಲ್ಲ ಕನ್ನಡಿಗರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ‘ಕೋಟಿ ಕಂಠ ಗಾಯನ ಎಲ್ಲ ಕನ್ನಡಿಗರನ್ನೂ ಒಂದುಗೂಡಿಸುವ ಶ್ರೇಷ್ಠ ಕಾರ್ಯಕ್ರಮ. ಇದರಿಂದ ಕನ್ನಡಿಗರಲ್ಲಿ ಒಗ್ಗಟ್ಟು ಮೂಡುವುದಕ್ಕೆ ಸಹಾಯಕವಾಗಲಿದೆ. ಕರ್ನಾಟಕ ಅತ್ಯುನ್ನತ ಸ್ಥಾನಕ್ಕೆ ಏರಬೇಕು ಎಂಬ ಹಿರಿಯರ ಕನಸು ನನಸಾಗುವ ಸಂಕ್ರಮಣ ಕಾಲದಲ್ಲಿದ್ದೇವೆ. ಈ ಬಾರಿ ಕೋಟಿ ಕಂಠ ಗಾಯನ ವಿಶ್ವ ದಾಖಲೆಯನ್ನು ಸೃಷ್ಟಿಸಿದೆ’ ಎಂದು ಬೊಮ್ಮಾಯಿ ಹೇಳಿದರು.

ರಾಜ್ಯೋತ್ಸವ ಪಟ್ಟಿ ಪ್ರಕಟ ಇಂದು?

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿಗಳಿಗೆ ಆಯ್ಕೆಯಾದ ಸಾಧಕರ ಅಂತಿಮ ಪಟ್ಟಿ ಶನಿವಾರ ಹೊರಬೀಳಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಉನ್ನತಮಟ್ಟದ ಸಮಿತಿ ಸಭೆ ನಡೆಯಿತು. ಅದರಲ್ಲಿ 134 ಜನರ ಪಟ್ಟಿಯೊಂದನ್ನು ಸಿದ್ಧಪಡಿಸಲಾಗಿದ್ದು, ಬೊಮ್ಮಾಯಿ ಅವರು ರಾತ್ರಿ ಮತ್ತೊಂದು ಸುತ್ತಿನ ಸಭೆ ನಡೆಸಿ ಪಟ್ಟಿಯನ್ನು ಅಖೈರುಗೊಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಈ ವರ್ಷ 67 ನೇ ರಾಜ್ಯೋತ್ಸವ ಆಗಿರುವುದರಿಂದ ಒಟ್ಟು 67 ಮಂದಿ ಸಾಧಕರಿಗೆ ಪ್ರಶಸ್ತಿಗಳನ್ನು ನೀಡಲಾಗುವುದು. ಹೈಕೋರ್ಟ್ ಆದೇಶ ಇರುವುದರಿಂದ ಈ ಬಾರಿಯೂ 60 ವರ್ಷ ಮೇಲ್ಪಟ್ಟವರಿಗೆ ಪ್ರಶಸ್ತಿ ನೀಡಲಾಗುವುದು ಎಂದೂ ತಿಳಿಸಿವೆ.

₹3.60 ಲಕ್ಷ ಕೋಟಿ ಮೊತ್ತದ ಒಪ್ಪಂದ

ಟ್ವಿಟರ್ ಖರೀದಿಸಿದ ಮಸ್ಕ್

ನ್ಯೂಯಾರ್ಕ್ (ಪಿಟಿಐ): ‘ಹಕ್ಕಿ ಸ್ವತಂತ್ರವಾಗಿದೆ’ ಎಂದು ಟ್ವಿಟರ್ ಕಂಪನಿಯನ್ನು ಖರೀದಿಸಿದ ಬಳಿಕ ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಇಲಾನ್ ಮಸ್ಕ್ ಶುಕ್ರವಾರ ಟ್ವೀಟ್ ಮಾಡಿದ್ದಾರೆ.

ಇಲಾನ್ ಮಸ್ಕ್

ಒಪ್ಪಂದದಂತೆ ₹3.60 ಲಕ್ಷ ಕೋಟಿ ಮೊತ್ತಕ್ಕೆ ಟ್ವಿಟರ್ ಕಂಪನಿಯನ್ನು ಅವರು ಖರೀದಿ ಮಾಡಿದ್ದಾರೆ.

ಮಸ್ಕ್ ಅವರು ಏಪ್ರಿಲ್‌ನಲ್ಲಿ ಟ್ವಿಟರ್ ಅನ್ನು ಖರೀದಿಸುವ ಸಂಬಂಧ ಆರಂಭಿಕ ಹಂತದ ಒಪ್ಪಂದ ಮಾಡಿಕೊಂಡಿದ್ದರು. ಆ ಬಳಿಕ ನಕಲಿ ಖಾತೆಗಳ ಮಾಹಿತಿಯನ್ನು ಟ್ವಿಟರ್ ನೀಡುತ್ತಿಲ್ಲ ಎಂದು ಆರೋಪಿಸಿ ಖರೀದಿ ಒಪ್ಪಂದದಿಂದ ಹಿಂದೆ ಸರಿಯುವ ಪ್ರಯತ್ನ ನಡೆಸಿದರು. ಹೀಗಾಗಿ ಟ್ವಿಟರ್ ಕಂಪನಿಯು ಮಸ್ಕ್ ವಿರುದ್ಧ ಕಾನೂನು ಹೋರಾಟ ಕೈಗೊಂಡಿತ್ತು. ಖರೀದಿ ಒಪ್ಪಂದ ಅಂತಿಮಗೊಳಿಸಲು ಅಮೆರಿಕ ನ್ಯಾಯಾಲಯವು ಅಕ್ಟೋಬರ್ 28ರ ಗಡುವು ನೀಡಿತ್ತು. ಈ ಬೆನ್ನಲ್ಲೇ ಗುರುವಾರ ತಡರಾತ್ರಿಯೇ ಮಸ್ಕ್ ಅವರು ಖರೀದಿ ಒಪ್ಪಂದ ಪೂರ್ಣಗೊಳಿಸಿದ್ದಾರೆ.

ವಿಶ್ವದ ಸಿರಿವಂತ ವ್ಯಕ್ತಿಯು ಟ್ವಿಟರ್ ಖರೀದಿ ಒಪ್ಪಂದವನ್ನು ಗುರುವಾರ ಪೂರ್ಣಗೊಳಿಸಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ ಹೇಳಿದೆ. ಟ್ವಿಟರ್‌ನ ವಹಿವಾಟು, ಅದರ ಉದ್ಯೋಗಿಗಳು ಮತ್ತು ಷೇರುದಾರರಲ್ಲಿ ಮೂಡಿದ್ದ ಅನಿಶ್ಚಿತತೆಯು ದೂರವಾಗಿದೆ ಎಂದು ಸಿಎನ್‌ಎನ್ ಪ್ರತಿಕ್ರಿಯೆ ನೀಡಿದೆ.

ಇನ್ನೊಂದು ಸುದ್ದಿ 14

ಭಾರತ ಮೂಲದ ಅಧಿಕಾರಿಗಳ ವಜಾ

ಟ್ವಿಟರ್ ಖರೀದಿಸಿದ ಬೆನ್ನಲ್ಲೇ ಕಂಪನಿಯ ಉನ್ನತ ಹುದ್ದೆಯಲ್ಲಿ ಇರುವವರನ್ನು ಮಸ್ಕ್ ವಜಾ ಮಾಡಿದ್ದಾರೆ. ಟ್ವಿಟರ್‌ನಲ್ಲಿ ಇರುವ ನಕಲಿ ಖಾತೆಗಳ ಬಗ್ಗೆ ಇವರೆಲ್ಲರೂ ದಾರಿ ತಪ್ಪಿಸಿದ್ದರು ಎಂದು ಮಸ್ಕ್ ಆರೋಪಿಸಿದ್ದಾರೆ.

ಟ್ವಿಟರ್‌ನ ಸಿಇಒ ಆಗಿದ್ದ ಭಾರತ ಮೂಲದ ಪರಾಗ್ ಅಗ್ರವಾಲ್, ಕಾನೂನು ವ್ಯವಹಾರ ಮತ್ತು ನೀತಿ ವಿಭಾಗದ ಮುಖ್ಯಸ್ಥೆ ವಿಜಯಾ ಗದ್ದೆ, ಮುಖ್ಯ ಹಣಕಾಸು ಅಧಿಕಾರಿ ನೆಡ್ ಸೆಗಲ್ ಹಾಗೂ ಜನರಲ್ ಕಾನ್ಸುಲ್ ಸೀನ್ ಎಡ್ಜೆಟ್ ಅವರನ್ನು ವಜಾ ಮಾಡಿದ್ದಾರೆ. ಪರಾಗ್ ಅವರು 2021ರ ನವೆಂಬರ್‌ನಲ್ಲಿ ಟ್ವಿಟರ್‌ನ ಸಿಇಒ ಆಗಿ ನೇಮಕ ಆಗಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಾಸಿಗಾಗಿ ಪೋಸ್ಟಿಂಗ್: ಉನ್ನತ ಮಟ್ಟದ ತನಿಖೆಗೆ ಆಗ್ರಹ

ಇನ್‌ಸ್ಪೆಕ್ಟರ್ ಹುದ್ದೆಗೆ ₹80 ಲಕ್ಷ: ಎಂಟಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇನ್‌ಸ್ಪೆಕ್ಟರ್ ಹುದ್ದೆಗೆ ₹70 ರಿಂದ ₹80 ಲಕ್ಷ ಕೊಟ್ಟು ಬಂದರೆ ಹೃದಯಾಘಾತವಾಗದೆ ಇನ್ನೇನಾಗುತ್ತದೆ’ ಎಂದು ಸಚಿವ ಎಂ.ಟಿ.ಬಿ. ನಾಗರಾಜ್ ನೀಡಿರುವ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈ ವಿಡಿಯೊವನ್ನು ಲಗತ್ತಿಸಿ ಟ್ವೀಟ್ ಮಾಡಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು, ‘ಈಗ ಸರ್ಕಾರವೇ ಸತ್ಯ ಹೇಳಿದೆ! ಸದ್ಯ, ಸಾವಿನಲ್ಲೂ ಸತ್ಯ ಹೇಳುವ ಧೈರ್ಯವನ್ನು ಸರ್ಕಾರ ಮಾಡಿದೆ. ಬೊಮ್ಮಾಯಿ ಸಂಪುಟದ ಸಚಿವರೇ ವಿಷಯ ಬಹಿರಂಗಪಡಿಸಿದ್ದಾರೆ. ಸಚಿವ ಎಂ.ಟಿ.ಬಿ. ನಾಗರಾಜ್ ಅವರ ಹೇಳಿಕೆಯು ಈ ಸರ್ಕಾರದ ಕಾಸಿಗಾಗಿ ಪೋಸ್ಟಿಂಗ್ ದಂಧೆಗೆ ಹಿಡಿದ ಕನ್ನಡಿ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಸಚಿವರೇ ಹೇಳಿದಂತೆ ₹70-80 ಲಕ್ಷಗಳನ್ನು ನಂದೀಶ್ ಅವರು ಯಾರಿಗೆ ಕೊಟ್ಟರು? ಇದರಲ್ಲಿ ಅವರ ಮೇಲಿನ ಉನ್ನತ ಅಧಿಕಾರಿಗಳು, ಗೃಹ ಸಚಿವರು ಮತ್ತು ಮುಖ್ಯಮಂತ್ರಿಗೆ ಪರ್ಸಂಟೇಜ್ ಹೋಗಿದೆಯಾ? ಅಥವಾ ಕಾಣದ ರಿಮೋಟ್ ಯಾವುದಾದರೂ ಇದೆಯಾ? ಸಚಿವರಂತೆ ನೀವೂ ಸತ್ಯ ಹೇಳಿ ಸಿ.ಎಂ. ಸಾಹೇಬರೇ’ ಎಂದು ಟ್ವೀಟ್ ಮಾಡಿದ್ದಾರೆ.

‘ಸಂಘ ಸಂಸ್ಕಾರದ ಗೃಹ ಸಚಿವರು ಉತ್ತರ ನೀಡಲೇಬೇಕು. ಧಮ್ಮಿದ್ರೆ, ತಾಕತ್ತಿದ್ರೆ ಎನ್ನುವ ಮುಖ್ಯಮಂತ್ರಿ ಅವರು ಈ ಬಗ್ಗೆ ಮೌನ ಮುರಿಯುವ ತಾಕತ್ತು ತೋರಬೇಕು’ ಎಂದು ಹೇಳಿದ್ದಾರೆ.

4ನೇ ಪುಟ ನೋಡಿ

ಎಸ್‌ಎಸ್‌ಸಿ: ಮತ್ತೆ ಕನ್ನಡ ಕಡೆಗಣನೆ

ಕಾನ್‌ಸ್ಟೆಬಲ್ ಹುದ್ದೆಗೆ ಅರ್ಜಿ ಆಹ್ವಾನ: ಇಂಗ್ಲಿಷ್, ಹಿಂದಿಯಲ್ಲಿ ಮಾತ್ರ ಪರೀಕ್ಷೆ

• ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿರುವ ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ಮತ್ತೊಮ್ಮೆ ಪ್ರಾದೇಶಿಕ ಭಾಷೆಗಳ ವಿರೋಧಿ ನೀತಿ ಅನುಸರಿಸಿದೆ.

ಎಸ್‌ಎಸ್‌ಸಿ ನಡೆಸುವ ಪರೀಕ್ಷೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ಮಾತ್ರ ಕಡ್ಡಾಯಗೊಳಿಸಿರುವುದಕ್ಕೆ ಕನ್ನಡ ಸಂಘಟನೆಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಎಸ್‌ಎಸ್‌ಸಿ ಧೋರಣೆಯಿಂದ ಕನ್ನಡಿಗರಿಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ ಎಂದು ಸಂಘಟನೆಗಳ ಕಾರ್ಯಕರ್ತರು ಕಿಡಿಕಾರಿದ್ದಾರೆ.

ಗಡಿ ಭದ್ರತಾ ಪಡೆ(ಬಿಎಸ್‌ಎಫ್), ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್), ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್), ಇಂಡೊ ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ), ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ), ಸಚಿವಾಲಯ ಭದ್ರತಾ ಪಡೆಯಲ್ಲಿ (ಎಸ್‌ಎಸ್‌ಎಫ್) ಕಾನ್‌ಸ್ಟೆಬಲ್ ಮತ್ತು ಅಸ್ಸಾಂ ರೈಫಲ್ಸ್‌ನಲ್ಲಿ ರೈಫಲ್‌ಮೆನ್ (ಜನರಲ್ ಡ್ಯೂಟಿ) ಹಾಗೂ ಮಾದಕ ದ್ರವ್ಯ ನಿಯಂತ್ರಣ (ಎನ್‌ಸಿಬಿ) ಇಲಾಖೆಯಲ್ಲಿ ಸಿಪಾಯಿ ಹುದ್ದೆಗಳಿಗೆ ಎಸ್‌ಎಸ್‌ಸಿ ಅರ್ಜಿ ಆಹ್ವಾನಿಸಿದೆ.

ಅ.27ರಿಂದ ನ.30ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. 2023ರ ಜನವರಿಯಲ್ಲಿ ಪರೀಕ್ಷೆ ನಡೆಯಲಿದೆ ಎಂದು ಎಸ್‌ಎಸ್‌ಸಿ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

4ನೇ ಪುಟ ನೋಡಿ

‘ಕನ್ನಡಿಗರಿಗೆ ಅನ್ಯಾಯವಾಗಲಿದೆ’

‘10ನೇ ತರಗತಿ ಓದಿರುವ ವಿದ್ಯಾರ್ಥಿ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಪರೀಕ್ಷೆ ಬರೆಯುವುದು ಹೇಗೆ ಸಾಧ್ಯ? ಬಹುತೇಕ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದವರಲ್ಲೇ ಓದಿರುತ್ತಾರೆ’ ಎಂದು ಕನ್ನಡ ಪರ ಕಾರ್ಯಕರ್ತ ಅರುಣ್ ಜಾವಗಲ್ ಹೇಳಿದ್ದಾರೆ.

‘ಎಸ್‌ಎಸ್‌ಸಿ ಪ್ರಾದೇಶಿಕ ಭಾಷೆಗಳ ವಿರೋಧಿಯಾಗಿದ್ದು, ಕನ್ನಡಿಗರು ಈ ಹುದ್ದೆಗಳಿಂದ ವಂಚಿತರಾಗಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಹಿಂದಿ ಭಾಷಿಕ ಪ್ರದೇಶಗಳ ಅಭ್ಯರ್ಥಿಗಳು ಮಾತ್ರ ಆಯ್ಕೆಯಾಗುತ್ತಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.‘ಕಳೆದ ಬಾರಿಯ ಪ್ರತಿಭಟನೆಗೆ ಬೆಲೆ ನೀಡಿಯಾದರೂ ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ನೀಡಬೇಕಾಗಿತ್ತು. ಈಗ ಮತ್ತೊಮ್ಮೆ ಹೋರಾಟ ಮಾಡುತ್ತೇವೆ’ ಎಂದು ಅವರು ಹೇಳಿದ್ದಾರೆ.

ಬಿಬಿಎಂಪಿ ಕಚೇರಿ ಆವರಣದಲ್ಲಿ ಕನ್ನಡದ ಕಲವರ ಪಸರಿಸಿತ್ತು. ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಿಬ್ಬಂದಿ ಕನ್ನಡ ಗೀತೆಗಳನ್ನು ಹಾಡಿದರು (ಎಡಚಿತ್ರ) ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ನಿರ್ದೇಶಕ(ಸಿಬ್ಬಂದಿ ಮತ್ತು ಜಾಗೃತ) ವೈ. ನವೀನ್ ಭಟ್ ಭಾಗವಹಿಸಿದ್ದರು

ಸಾರಿಗೆ ಸಂಸ್ಥೆಗಳಲ್ಲಿ ಕನ್ನಡ ಕಲರವ

ಕೆಎಸ್‌ಆರ್‌ಟಿಸಿಯ ಕೇಂದ್ರ ಕಚೇರಿ, ಘಟಕಗಳು, ವಿಭಾಗೀಯ ಕಚೇರಿ, ಕಾರ್ಯಾಗಾರಗಳು ಮತ್ತು ಬಸ್ ನಿಲ್ದಾಣಗಳಲ್ಲೂ ಕನ್ನಡ ಗೀತೆಗಳನ್ನು ಹಾಡಿ ಸಂಭ್ರಮಿಸಲಾಯಿತು.

ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು-ಕುಮಾರ್, ನಿರ್ದೇಶಕ(ಸಿಬ್ಬಂದಿ ಮತ್ತು ಜಾಗೃತ) ವೈ.ನವೀನ್ ಭಟ್ ಮತ್ತು ಸಿಬ್ಬಂದಿ ಕನ್ನಡ ಗೀತೆಗಳನ್ನು ಹಾಡಿದರು.

ಬಿಎಂಟಿಸಿ ಕೇಂದ್ರ ಕಚೇರಿಯಲ್ಲೂ ಕೋಟಿ ಕಂಠ ಗಾಯನ ಆಯೋಜಿಸಲಾಗಿತ್ತು. ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಮತ್ತು ಸಿಬ್ಬಂದಿ ಕನ್ನಡ ಗೀತೆಗಳನ್ನು ಹಾಡಿದರು.

ಕೋಟಿ ಕಂಠದಿಂದ ಹೊಮ್ಮಿದ ಕನ್ನಡ ಕಹಳೆ...

ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರು ಸೆಲ್ಫಿ ಕ್ಲಿಕ್ಕಿಸಿಕೊಂಡ ದೃಶ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿರುವ ಕೋಟಿ ಕಂಠ ಗಾಯನದ ಪ್ರಯುಕ್ತ ರಾಜಧಾನಿಯ ಎಲ್ಲೆಡೆ ಕನ್ನಡದ ಕಹಳೆ ಮೊಳಗಿತು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮತ್ತು ಕಂಠೀರವ ಕ್ರೀಡಾಂಗಣದಲ್ಲಿ ಪ್ರಮುಖ ಕಾರ್ಯಕ್ರಮಗಳು ನಡೆದವು. ರಾಜಭವನ, ಹೈಕೋರ್ಟ್, ಪುರಭವನ, ಸರ್ಕಾರಿ ಕಚೇರಿಗಳು, ಬಿಬಿಎಂಪಿ ಕಚೇರಿ, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಲಾಲ್‌ಬಾಗ್, ಕಬ್ಬನ್ ಪಾರ್ಕ್ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ ಏಕಕಾಲಕ್ಕೆ ಕನ್ನಡ ಗೀತೆಗಳನ್ನು ಸಾಮೂಹಿಕವಾಗಿ ಹಾಡಲಾಯಿತು. ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸರಿಯಾಗಿ ಆರಂಭವಾದ ಕನ್ನಡ ಗಾಯನವು 27 ನಿಮಿಷಗಳ ಕಾಲ ನಡೆಯಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕಿಕ್ಕಿರಿದು ತುಂಬಿದ್ದರು. ಕನ್ನಡ ಹಾಡುಗಳನ್ನು ಹಾಡುವ ಜೊತೆಗೆ ಕನ್ನಡವನ್ನು ಬಳಸುವ ಸಂಕಲ್ಪ ವಿಧಿ ಬೋಧಿಸಲಾಯಿತು. ಕ್ರೀಡಾಂಗಣದ ಎಲ್ಲೆಡೆ ಕನ್ನಡದ ಬಾವುಟಗಳು ರಾರಾಜಿಸಿದ್ದವು. ರಾಜ್ಯದ ಸಂಸ್ಕೃತಿ ಬಿಂಬಿಸುವ ಹಾಗೂ ಜ್ಞಾನಪೀಠ ಪುರಸ್ಕೃತರ ಕಲಾಕೃತಿಗಳು ಗಮನ ಸೆಳೆದವು. ಗಣ್ಯರು, ಗಾಯಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾವಿದರು ಸೇರಿ 50 ಸಾವಿರ ಮಂದಿ ಒಕ್ಕೊರಲಿನಿಂದ ಕನ್ನಡದ ಹಾಡಿಗೆ ಧ್ವನಿಯಾದರು.

ಗಣ್ಯರು ಕನ್ನಡದ ಶಾಲುಗಳನ್ನು ಕೊರಳಿಗೆ ಹಾಕಿಕೊಂಡಿದ್ದರೆ, ಬಹುತೇಕ ಮಹಿಳೆಯರು ಹಳದಿ ಮತ್ತು ಕೆಂಪು ಬಣ್ಣದ ಬಟ್ಟೆಗಳನ್ನೇ ಧರಿಸಿದ್ದರು. ಇಡೀ ಕ್ರೀಡಾಂಗಣ ಕನ್ನಡಮಯವಾಗಿತ್ತು.

ಪುರಭವನದ ಎದುರು ಕುವೆಂಪು ಕಲಾನಿಕೇತನ ಸಂಸ್ಥೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ರಾ.ನಂ. ಚಂದ್ರಶೇಖರ, ಕುವೆಂಪು ಪ್ರಕಾಶ್, ವ.ಚ.ಚನ್ನೇಗೌಡ, ರಫಾಯಲ್ ರಾಜ್, ಟಿ.ಎನ್.ನಂಜಪ್ಪ ಭಾಗವಹಿಸಿ ಕನ್ನಡ ಗೀತೆಗಳನ್ನು ಹಾಡಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಬನ್ನೇರುಘಟ್ಟ ಜೈವಿಕ ಉದ್ಯಾನವನ ಜಂಟಿಯಾಗಿ ಆಯೋಜಿಸಿದ್ದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸೇರಿ 3 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯಕ್ಷಗಾನ ಕಲಾವಿದರ ನೃತ್ಯ —ಪ್ರಜಾವಾಣಿ ಚಿತ್ರಗಳು/ಕಿಶೋರ್‌ಕುಮಾರ್ ಬೋಳಾರ್

ದೂರ ಉಳಿದ ಚಿತ್ರರಂಗ

ವಿಶ್ವವ್ಯಾಪಿ ನಡೆದ ಈ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದವರು ಭಾಗವಹಿಸಿರಲಿಲ್ಲ. ತಮ್ಮ ಚಿತ್ರಗಳ ಪ್ರಚಾರದ ಸಲುವಾಗಿ ಕನ್ನಡ ಭಾಷೆಯ ಬಗ್ಗೆ ಮಾತನಾಡುವ ಚಿತ್ರರಂಗದ ಯಾವುದೇ ವ್ಯಕ್ತಿಯೂ ಭಾಗವಹಿಸಿರಲಿಲ್ಲ. ಆದರೆ, ಜನ ಸಾಮಾನ್ಯರು, ಕನ್ನಡ ಪ್ರೇಮಿಗಳು ಸ್ವಯಂ ಪ್ರೇರಣೆಯಿಂದ ಭಾಗವಹಿಸಿದ್ದರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಗಳು ಹೇಳಿವೆ.

ಅದಮ್ಯ ಚೇತನ ಸಂಸ್ಥೆಯಿಂದ ಆಯೋಜಿಸಿದ್ದ ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಲೇಖಕರಾದ ಟಿ.ಎಸ್. ಗೋಪಾಲ್, ಜಿ.ಎಂ. ಇನಾಂದರ್ ಭಾಗವಹಿಸಿದ್ದರು

ನೆಲಗದರನಹಳ್ಳಿಯ ನಿಸರ್ಗ ವಿದ್ಯಾ ವಾಹಿನಿ ಶಾಲೆಯಲ್ಲಿ ಕೋಟಿ ಕಂಠ ಗಾಯನ ಕಾರ್ಯಕ್ರಮ ನಡೆಯಿತು.

ನಿಸರ್ಗ ವಿದ್ಯಾ ವಾಹಿನಿ ಶಾಲೆಯಲ್ಲಿ ಕೋಟಿ ಕಂಠ ಗಾಯನ

ಪ್ರಜಾವಾಣಿ ವಾರ್ತೆ

ಪೀಣ್ಯ,ದಾಸರಹಳ್ಳಿ:'ಕನ್ನಡ ಭಾಷೆಯ ಇತಿಹಾಸ, ಸಂಸ್ಕೃತಿ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ನಾಡಿನಾದ್ಯಂತ ಕೋಟ್ಯಾಂತರ ಕನ್ನಡ ಅಭಿಮಾನಿಗಳು ಭಾಗವಹಿಸುವ ಮೂಲಕ ಕೋಟಿ ಕಂಠ ಗಾಯನವನ್ನು ಯಶಸ್ವಿಗೊಳಿಸಿದ್ದಾರೆ' ಎಂದು ಮಾಜಿ ಶಾಸಕ ಎಸ್. ಮುನಿರಾಜು ಹೇಳಿದರು.

ನೆಲಗದರನಹಳ್ಳಿಯ ನಿಸರ್ಗ ವಿದ್ಯಾ ವಾಹಿನಿ ಶಾಲೆಯ ಮಾಲೀಕ ನಿಸರ್ಗ ಕೆಂಪರಾಜು ಅವರ ನೇತೃತ್ವದಲ್ಲಿ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕೋಟಿ ಕಂಠ ಗಾಯನದ 'ನನ್ನ ನಾಡು, ನನ್ನ ಹಾಡು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಾಲೆಯ ಮಾಲೀಕ ನಿಸರ್ಗ ಕೆಂಪರಾಜು ಮಾತನಾಡಿದರು. ಬಿಜೆಪಿ ಮಹಿಳಾ ಮೋರ್ಚಾದ ಸುಜಾತ ಮುನಿರಾಜು, ಬಿಜೆಪಿ ಮುಖಂಡರಾದ ಲಾರಿ ಮುನಿರಾಜು, ಬಿ.ಟಿ ಶ್ರೀನಿವಾಸ್, ಕಾರ್ಲೆ ನಂಜಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಪಿ.ಎಚ್. ರಾಜು, ಟಿ. ಶಿವಕುಮಾರ್, ಡಿ.ಕೆ. ಮಹೇಶ್, ಸುಜಾತ ,ರಾಜೇಶ್ವರಿ, ನಿಸರ್ಗ ವಿದ್ಯಾ ವಾಹಿನಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ. CAO/CN/BNC/97/2022 ದಿನಾಂಕ: 19.10.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಯಲಹಂಕ-ಪೆನುಕೊಂಡಾ ದ್ವಿಪಥೀಕರಣ. ದೊಡ್ಡಬಳ್ಳಾಪುರ ಯಾರ್ಡ್‌ನಲ್ಲಿ ಬಾಕಿ ಉಳಿದಿರುವ ಕೆಲಸಗಳಾದ ಸಂ. 476, 1x6x3.80ಮೀ ಅಳತೆಯುಳ್ಳ ಆರ್‌ಸಿಸಿ ಬಾಕ್ಸ್‌ನ ಕೆಳಸೇತುವೆಯ ವಿಸ್ತರಣೆ ಮತ್ತು ಅಗಲೀಕರಣ ಹಾಗೂ ಇದರ ಜೊತೆಗೆ ಸರಕು ಪ್ಲಾಟ್‌ಫಾರ್ಮ್ ಅಪ್ರೋಚ್‌ಗಳ ನಿರ್ಮಾಣ (ಅಂದಾಜು 300 ಮೀ ಉದ್ದ) ಮತ್ತು ಇದಕ್ಕೆ ಸಂಬಂಧಪಟ್ಟ ಪಿ-ವೇ ಕೆಲಸಗಳು. (ಟೆಂಡರು ಉಲ್ಲೇಖ ಸಂ. YNK-PKD-048)	ರೂ. 10,01,02,319/-
2	ತುಮಕೂರು-ದಾವಣಗೆರೆ ಹೊಸ ಬ್ರಾಡ್‌ಗೇಜ್ ಲೈನ್ ಯೋಜನೆ: ಉರುಕೆರೆ ಮತ್ತು ತಿಮ್ಮರಾಜನಹಳ್ಳಿ ನಿಲ್ದಾಣಗಳ ಮಧ್ಯೆ, ಪ್ರಸ್ತಾವನೆಯ ಪ್ರಕಾರ ಕಿ.ಮೀ. 20/925, ಸ್ಪಾನ್ 1x61 ಮೀ. ಓಪನ್ ವೆಬ್ ಗಿರ್ಡರ್‌ನ ಕೆನಾಲ್ ಕ್ರಾಸಿಂಗ್ ಸೇತುವೆ ಸಂ. 16ಎನ ನಿರ್ಮಾಣ. (ಟೆಂಡರು ಉಲ್ಲೇಖ ಸಂ. TK-DVG-19)	ರೂ. 5,18,78,297/-
3	ತುಮಕೂರು-ಚಿತ್ರದುರ್ಗ-ದಾವಣಗೆರೆ ಹೊಸ ಲೈನ್ ಯೋಜನೆಯ ನಿರ್ವಹಣೆಗಾಗಿ ಯೋಜನಾ ನಿರ್ವಹಣೆಯನ್ನು ನಡೆಸಿಕೊಂಡು ಹೋಗುವ ಸಲುವಾಗಿ ಅಧಿಕೃತ ಇಂಜಿನಿಯರ್‌ರ ಪ್ರಸ್ತಾವನೆಗಾಗಿ ವಿನಂತಿ (ಆರ್‌ಎಫ್‌ಪಿ) ಆಧಾರದ ಮೇರೆಗೆ ನೇಮಕಾತಿ – ತೊಳಹುಣಿಸೆ (ಹೊರತುಪಡಿಸಿ) & ಭರಮಸಾಗರ (ಹೊರತುಪಡಿಸಿ) ನಿಲ್ದಾಣಗಳ ಮಧ್ಯೆ ಇಂಜಿನಿಯರಿಂಗ್ ಸಂಗ್ರಹಣೆ ಮತ್ತು ನಿರ್ಮಾಣ (ಇಪಿಸಿ) ವಿಧಾನದಲ್ಲಿ ಚೈನೇಜ್ 192000 – ಚೈನೇಜ್ 171640 ನಡುವೆ ಹೊಸ ಬಿಜಿ ಲೈನ್‌ನ ನಿರ್ಮಾಣ ಹಾಗೂ ವಿದ್ಯುತ್ ಮತ್ತು ದೂರಸಂಪರ್ಕ ಕೆಲಸಗಳನ್ನು ಒಳಗೊಂಡಂತಿರಬೇಕು. (ಟೆಂಡರು ಉಲ್ಲೇಖ ಸಂ. PMS-TK-DVG)	ರೂ. 2,60,66,849/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಕ್ರಸಂ. 1 & 2ಕ್ಕೆ : ದಿನಾಂಕ 10.11.2022 ಮತ್ತು ಕ್ರಸಂ. 3ಕ್ಕೆ : 16.12.2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು ದಂಡು

PUB/445/AAD/PRB/SWR/2022-23

S.W.Railways SWRRLY SWRRLY

ಕಸಾಪ: ಪುಸ್ತಕಗಳಿಗೆ ರಿಯಾಯಿತಿ ಘೋಷಣೆ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ಪ್ರಕಟಣೆಯ ಎಲ್ಲ ಪುಸ್ತಕಗಳಿಗೆ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ಘೋಷಿಸಿದೆ.

ಈ ಕೊಡುಗೆ ನ.1ರಿಂದ ನ.30ರವರೆಗೆ ಇರಲಿದೆ. ರಜಾ ದಿನಗಳು ಸೇರಿ ವಾರದ ಎಲ್ಲ ದಿನಗಳು ಬೆಳಿಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ.

ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು, ಸಂಕ್ಷಿಪ್ತ ಕನ್ನಡ ಇಂಗ್ಲಿಷ್ ನಿಘಂಟು, ಬೃಹತ್ ಕನ್ನಡ-ಕನ್ನಡ ನಿಘಂಟು, ದಲಿತ ಸಾಹಿತ್ಯ ಸಂಪುಟಗಳು, ಪರೀಕ್ಷೆ ಪುಸ್ತಕಗಳು, ಶತಮಾನೋತ್ಸವ ಮಾಲಿಕೆ ಪುಸ್ತಕಗಳು, ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಎಲ್ಲ ಸಂಪುಟಗಳು, ಮಹಿಳಾ ಸಾಹಿತ್ಯ ಸಂಪುಟಗಳು ಮಾರಾಟಕ್ಕೆ ಲಭ್ಯವಿವೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಹೂಡಿಕೆದಾರರ ಸಮಾವೇಶಕ್ಕೆ ವಿರೋಧ

ಬೆಂಗಳೂರು: ರಾಜ್ಯ ಸರ್ಕಾರವು ನ.2ರಿಂದ 4ರವರೆಗೆ ಇಲ್ಲಿ ಹಮ್ಮಿಕೊಂಡಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಸಂಯುಕ್ತ ಹೋರಾಟ- ಕರ್ನಾಟಕವು ವಿರೋಧ ವ್ಯಕ್ತಪಡಿಸಿದ್ದು, ನ.2ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು, ದಲಿತರು ಹಾಗೂ ಕಾರ್ಮಿಕರ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸಂಚಾಲಕ ಮಾವಳ್ಳಿ ಶಂಕರ್, 'ಹೂಡಿಕೆದಾರರ ಸಮಾವೇಶದ ಮಾಹಿತಿಯನ್ನು ಸರ್ಕಾರ ನೀಡುತ್ತಿಲ್ಲ. ದೇವನಹಳ್ಳಿ ಸೇರಿ ನಗರದ ವಿವಿಧೆಡೆಯ ಕೃಷಿ ಭೂಮಿಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಒದಗಿಸಿ, ಕೈಕಟ್ಟಿ ನಿಲ್ಲಲಾಗುತ್ತಿದೆ. ಇಂತಹ ಸಮಾವೇಶಗಳಿಂದ ರಾಜ್ಯದ ಅಭಿವೃದ್ಧಿಗೆ, ಉದ್ಯೋಗ ಸೃಷ್ಟಿಗೆ ಸಹಾಯವಾಗುತ್ತಿಲ್ಲ. ಬದಲಾಗಿ ಕಾರ್ಪೊರೇಟ್ ಕಂಪನಿಗಳು, ಏಜೆಂಟ್‌ಗಳಿಗೆ ಅಪಾರ ಲಾಭವಾಗುತ್ತಿದೆ. ಸರ್ಕಾರವು ಈ ಹಿಂದಿನ ಸಮಾವೇಶದ ಪ್ರತಿಫಲದ ಬಗ್ಗೆ ಶ್ವೇತಪತ್ರ ಹೊರಡಿಸಬೇಕು' ಎಂದು ಆಗ್ರಹಿಸಿದರು.

ಸಮಿತಿಯ ಸಂಯೋಜಕ ಜಿ.ಸಿ. ಭಯ್ಯಾರೆಡ್ಡಿ, 'ಸಮಾವೇಶದ ಹೆಸರಿನಲ್ಲಿ ಬಲತ್ಕಾರದ ಭೂಸ್ವಾಧೀನಗಳನ್ನು ನಿಲ್ಲಿಸಬೇಕು. ರೈತರು, ದಲಿತರ ಸ್ವಾಧೀನದಲ್ಲಿರುವ ಕೃಷಿ ಭೂಮಿಗಳನ್ನು ಸಕ್ರಮ ಮಾಡಿಕೊಡಬೇಕು. ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ರಾಜ್ಯದ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರಬಾರದು' ಎಂದು ಹೇಳಿದರು.

ಅಡಿಕೆಗೆ ರೋಗ: ನೆರವಿಗೆ ಚುಂಚನಗಿರಿ ಶ್ರೀ ಪತ್ರ

ಬೆಂಗಳೂರು: ಅಡಿಕೆ ಬೆಳೆಗಾರರಿಗೆ ಆರ್ಥಿಕ ನೆರವು ನೀಡಲು ಮುಂದಾಗಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಆಶಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಸ್ವಾಮೀಜಿ, ಚಿಕ್ಕಮಗಳೂರು, ಶಿವಮೊಗ್ಗ ಸೇರಿ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಅತಿಯಾದ ಮಳೆಯಿಂದ ಜೀವನಾಧಾರವಾಗಿದ್ದ ಅಡಿಕೆ, ಕಾಫಿ, ಕಾಳು ಮೆಣಸಿನ ಬೆಳೆ ನೆಲಕಚ್ಚಿದೆ. ಶೇ 90ರಷ್ಟು ಬೆಳೆಗೆ ಹಾನಿಯಾಗಿದೆ. ಅದರ ಜೊತೆಯಲ್ಲಿ ಅಡಿಕೆ ಮರಗಳಿಗೆ ಹಲವು ದಶಕಗಳಿಂದ ಬಾಧಿಸುತ್ತಿರುವ ಹಳದಿ ಎಲೆ ಚುಕ್ಕೆ ರೋಗದಿಂದ ಬೆಳೆ ನಾಶವಾಗಿದೆ. ಇದರಿಂದ ಜೀವನ ನಡೆಸಲಾಗದೆ ಅಡಿಕೆ ಬೆಳೆಗಾರರ ಕುಟುಂಬಗಳು ಕಂಗಾಲಾಗಿವೆ ಎಂದು ತಿಳಿಸಿದ್ದಾರೆ.

ಅಡಿಕೆ ಮರಗಳಿಗೆ ಎಲೆಚುಕ್ಕೆ ರೋಗವು ವ್ಯಾಪಕವಾಗಿ ಹರಡುತ್ತಿದೆ. ಕೆಲವು ಸಣ್ಣ ಹಿಡುವಳಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಲೆನಾಡಿನ ರೈತರಿಗೆ ರೈತರಿಗೆ ಭವಿಷ್ಯದ ಬಗ್ಗೆ ಆತಂಕ ಎದುರಾಗಿದೆ. ರೋಗ ನಿಯಂತ್ರಣಕ್ಕೆ ಔಷಧ ಸಿಂಪಡಣೆ ಮಾಡಿದರೂ ಎಲೆಚುಕ್ಕೆ ರೋಗ ನಿಯಂತ್ರಣಕ್ಕೆ ಬಂದಿಲ್ಲ. ಇದರಿಂದ ಪರಿಸರಕ್ಕೂ ಹಾನಿಯಾಗುತ್ತಿದೆ ಎಂದು ಸ್ವಾಮೀಜಿ ಆತಂಕ ವ್ಯಕ್ತಪಡಿಸಿದ್ದಾರೆ.

ಬಡ ರೈತರ ಪರಿಸ್ಥಿತಿಯನ್ನು ಅವಲೋಕಿಸಿ ಅಡಿಕೆಗೆ ತಗುಲಿರುವ ರೋಗ ನಿಯಂತ್ರಣಕ್ಕೆ ಸೂಕ್ತ ಔಷಧ ಒದಗಿಸಿಕೊಡಬೇಕು. ಜತೆಗೆ, ಆರ್ಥಿಕ ನೆರವು ಒದಗಿಸಬೇಕು ಎಂದು ಸ್ವಾಮೀಜಿ ಪತ್ರದಲ್ಲಿ ತಿಳಿಸಿದ್ದಾರೆ.

SBI STATE BANK OF INDIA

RASMECC-61059.1st Flor, SBM Building, Station Road, BALLAR1- 583101.
Phone:-08392475127, Fax:- 08392-279341,E Mai, sbi.61059@sbi.co.in.

NOTICE
VOLUNTARY VACATION OF SERVICE
OF SHRI B.M. RAGHU, MANAGER (Maintenance) PF NO.6181685

You have been absenting from duties without sanction of leave from 13-06-2022 onwards The Notice dated 23-09-2022 sent by the Bank to your last known residential address advising you to report for duty within 30 (thirty) days of the Notice in terms of Rule 40(3) of the Officers Service Rules, 1992 has been returned `Undelivered' by the Postal Authorities.

2. As you have failed to report for duty without sanction of any leave and since the Notice sent by the Bank to your recorded address has been returned undelivered to the Bank, and you have also remained consecutively absent from duty for more than 90 days, you shall be deemed to have voluntarily vacated your services in the Bank in terms of Rule 4(3) of the Officers Service Rules, 1992 applicable to you in case you do not report to duty within thirty days from this Notice. Consequently, you will be liable to pay the emoluments in lieu of the three months' Notice period to the Bank will be constrained to set-off the same against your Terminal Benefits and any other amount payable to you without prejudice to the Bank's right to recover the full amount or part thereof from you.

Place : Ballari
Date: 28-10-2022

Sd/-
Assistant General Manager

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ SBI

ಎಲ್ ಆರ್ ಬಂಡೆ, ಕಾವಲ್‌ಬೈರಸಂದ್ರ, ಬೆಂಗಳೂರು - 560032

ಅಡವಿಟ್ಟ ಚಿನ್ನದ ಸಾಲ ಪಡೆದು ಹರಾಜು ಪ್ರಕ್ರಿಯೆ

ಶ್ರೀಯುತ ಮಹಮ್ಮದ್ ಪೀರ್ ತಮ್ಮ ಚಿನ್ನಾಭರಣಗಳನ್ನು ಅಡವಿಟ್ಟು ಸಾಲ ಪಡೆದುಕೊಂಡಿದ್ದರು ಸಾಲದ ಖಾತೆ ಸಂಖ್ಯೆ ರಲ್ಲಿ . 40907655315. ರೂ.1,30,000/- ಅಡಬಾಕಿಯಾಗಿದ್ದು ಸಾಲ ಮರು ಪಾವತಿ ಮಾಡಿರುವುದಿಲ್ಲ ಆ ಸಂಬಂಧ ಅಡವಿಟ್ಟ ಚಿನ್ನಾಭರಣವನ್ನು ಪ್ರಸ್ತುತ ಮಾರುಕಟ್ಟೆ ಮೌಲ್ಯದ ಪ್ರಕಾರ ದಿನಾಂಕ 31/10/2022 ರಂದು ಮೇಲ್ಕಂಡ ಬ್ಯಾಂಕಿನ ಆವರಣದಲ್ಲಿ ಮಧ್ಯಾಹ್ನ 2.00 ಗಂಟೆಯಿಂದ 4.00 ಗಂಟೆಯ ಒಳಗೆ ಹರಾಜು ಮಾಡಲಾಗುವುದು

Branch Managar

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಸಂಘ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ರಾಮನಗರ ಜಿಲ್ಲೆ, ರಾಮನಗರ – 562 159.

ದೂರವಾಣಿ : 080–2727 3094, ಇಮೇಲ್ : dhoramanagaram@gmail.com

ಸಂಖ್ಯೆ: ಎನ್.ಹೆಚ್.ಎಂ./ರಾ.ನ./ಹೆಚ್.ಆರ್./ಸಿ.ಹೆಚ್.ಓ./44/22–23 ದಿ: 25–10–2022

ಪ್ರಕಟಣೆ

ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ.) ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ, ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಆನ್‌ಲೈನ್ ಮೂಲಕ 154 ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ.) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಬಿ.ಎಸ್‌ಸಿ (ನರ್ಸಿಂಗ್) ಮತ್ತು ಪೋಸ್ಟ್ ಬಿ.ಎಸ್‌ಸಿ (ನರ್ಸಿಂಗ್) ವಿದ್ಯಾರ್ಹತೆ ಹೊಂದಿರುವ ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಮಾಸಿಕ ಸಂಭಾವನೆ : ರೂ. 22,000/– ಮಾಸಿಕ ಸಂಭಾವನೆ ನೀಡಲಾಗುವುದು. ಜೊತೆಗೆ ಹೆಚ್ಚುವರಿಯಾಗಿ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ರೂ. 8,000/– ವರೆಗೆ ನೀಡಲಾಗುವುದು.

ಅರ್ಜಿಯನ್ನು ಕೇವಲ ಆನ್‌ಲೈನ್ ಮುಖಾಂತರ ಸಂಬಂಧಪಟ್ಟ ಮತ್ತು ಅವಶ್ಯ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹಾಗೂ ಪರೀಕ್ಷೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುವುದು. (ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ನೀಡಲಾಗಿರುವ ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದು).

1) ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ : 27–10–2022, 2) ಅನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 08–11–2022 ರ ಸಂಜೆ 5.00 ಗಂಟೆಯವರೆಗೆ, 3) ಆನ್‌ಲೈನ್ ಪರೀಕ್ಷೆ ದಿನಾಂಕ : 19–11–2022.

ಹೆಚ್ಚಿನ ಮಾಹಿತಿಗಾಗಿ http://karunadu.karnataka.gov.in/hfw ಸಂಪರ್ಕಿಸಬಹುದು.

ಸೂಚನೆ : ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ರಾಮನಗರ ಜಿಲ್ಲೆ.

ಡಿಐಪಿಆರ್/ರಾಮನಗರ/304/ಮಣಿಪಾಲ್/2022–23

ಹೇರ್‌ಲೈನ್ ಇಂಟರ್‌ನ್ಯಾಷನಲ್ ರಿಸರ್ಚ್ ಆ್ಯಂಡ್ ಟ್ರೀಟ್‌ಮೆಂಟ್ ಸೆಂಟರ್ ವರದಿ

ಕೋವಿಡ್‌ನಿಂದ ತಲೆಕೂದಲು ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕಿತರಾಗಿ ಚೇತರಿಸಿಕೊಂಡವರಿಗೆ ಕೆಲ ತಿಂಗಳ ಬಳಿಕ ಕೂದಲು ಉದುರುವಿಕೆ ಸಮಸ್ಯೆ ಕಾಣಿಸಿಕೊಳ್ಳಲು ಆರಂಭಿಸಿದೆ. ಕೋವಿಡ್ ಹಾಗೂ ಕೂದಲು ಉದುರುವಿಕೆಗೆ ಪರಸ್ಪರ ಸಂಬಂಧವಿದೆ ಎನ್ನುವುದು ಸಂಸ್ಥೆಯೊಂದರ ಅಧ್ಯಯನದಿಂದ ದೃಢಪಟ್ಟಿದೆ.

ಇಲ್ಲಿನ ಹೇರ್‌ಲೈನ್ ಇಂಟರ್‌ನ್ಯಾಷನಲ್ ರಿಸರ್ಚ್ ಆ್ಯಂಡ್ ಟ್ರೀಟ್‌ಮೆಂಟ್ ಸೆಂಟರ್ ಈ ಬಗ್ಗೆ ಅಧ್ಯಯನ ನಡೆಸಿದೆ. 2020ರ ಜುಲೈನಿಂದ 2022ರ ಜೂನ್ ಅವಧಿಯಲ್ಲಿ ಈ ಕೇಂದ್ರಕ್ಕೆ 2,525 ಮಂದಿ ಕೂದಲು ಉದುರುವಿಕೆ ಸಮಸ್ಯೆಗೆ ಚಿಕಿತ್ಸೆಗಾಗಿ ಭೇಟಿ ನೀಡಿದ್ದರು. ಇವರಲ್ಲಿ ಶೇ 80 ರಷ್ಟು ಮಂದಿ ಕೋವಿಡ್ ಪೀಡಿತರಾಗಿ ಚೇತರಿಸಿಕೊಂಡವರಾಗಿದ್ದಾರೆ.

ಅಧ್ಯಯನಕ್ಕೆ ಒಳಪಟ್ಟವರಲ್ಲಿ ಶೇ 70 ರಷ್ಟು ಮಂದಿ 40 ವರ್ಷದೊಳಗಿನವರಾಗಿದ್ದಾರೆ. ಅಧ್ಯಯನಕ್ಕೆ ಒಳಪಟ್ಟ ಮಹಿಳೆಯರಲ್ಲಿ ಶೇ 90 ರಷ್ಟು ಮಂದಿಯಲ್ಲಿ ಕೂದಲು ಉದುರುವಿಕೆ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ.



ಸಾಂದರ್ಭಿಕ ಚಿತ್ರ

ಪುರುಷರಲ್ಲಿ ಶೇ 85ರಷ್ಟು ಮಂದಿಯ ನೆತ್ತಿಯ ಭಾಗದಲ್ಲಿ ಕೂದಲು ಉದುರಿವೆ. ಐಟಿ ಕಂಪನಿ ಉದ್ಯೋಗಿಗಳು, ಪ್ರಾಧ್ಯಾಪಕರು, ಬ್ಯಾಂಕ್ ಉದ್ಯೋಗಿಗಳು, ಗೃಹಿಣಿಯರು, ಉದ್ಯಮಿಗಳು, ವಿದ್ಯಾರ್ಥಿಗಳು, ಸರ್ಕಾರಿ ಉದ್ಯೋಗಿಗಳು ಸೇರಿ ಬಹುತೇಕ ಎಲ್ಲ ವೃತ್ತಿಯವರಿಗೂ ಈ ಸಮಸ್ಯೆ ಕಾಡಿದೆ.

3 ತಿಂಗಳ ಬಳಿಕ ಸಮಸ್ಯೆ: 'ಕೋವಿಡ್‌ನಿಂದ ವ್ಯಕ್ತಿ ಬಳಲಿದಾಗ ಉಂಟಾಗುವ ಮಾನಸಿಕ ಹಾಗೂ ದೈಹಿಕ ಒತ್ತಡದಿಂದ ಬೆಳವಣಿಗೆಯ ಹಂತದಲ್ಲಿರುವ ಕೂದಲುಗಳು ನಿತ್ರಾಣದ ಹಂತಕ್ಕೆ ಹೋಗುತ್ತವೆ. ಮೂರು ತಿಂಗಳ ಬಳಿಕ ಅವು ಉದುರಲು ಪ್ರಾರಂಭಿಸುತ್ತವೆ' ಎಂದು ಕೇಂದ್ರದ ಚರ್ಮರೋಗ ತಜ್ಞೆ ಡಾ. ಕಲಾ ವಿಮಲ್ ತಿಳಿಸಿದರು.

'ಕೋವಿಡ್‌ನಿಂದ ದೇಹದಲ್ಲಿ ಪೋಷಕಾಂಶದ ಕೊರತೆ ಉಂಟಾ ಗುತ್ತದೆ. ಇದು ಕೂದಲಿನ ಮೇಲೆ ಪರಿಣಾಮ ಬೀರುತ್ತದೆ. ಸೋಂಕಿನಿಂದ ಚೇತರಿಸಿಕೊಂಡವರಲ್ಲಿ ಎರಡು ಹಂತದಲ್ಲಿ ಕೂದಲು ಉದುರುತ್ತದೆ. ಇದಕ್ಕೆ ಪ್ಲೇಟ್‌ಲೆಟ್ ರಿಚ್ ಪ್ಲಾಸ್ಮಾ ಸೇರಿ ವಿವಿಧ ಚಿಕಿತ್ಸೆಗಳು ಕೂಡ ಇವೆ' ಎಂದು ತಿಳಿಸಿದರು.

9 ತಿಂಗಳ ಬಳಿಕ ಬೆಳವಣಿಗೆ

'ಕೂದಲು ಚಕ್ರದಲ್ಲಿ ಅನಾಜೆನ್, ಕ್ಯಾಟಜೆನ್ ಮತ್ತು ಟೆಲೋಜೆನ್ ಎಂಬ ಮೂರು ಹಂತಗಳಿವೆ. ಟೆಲೋಜೆನ್ ಸುಮಾರು 100 ದಿನಗಳವರೆಗೆ ಇರುವ ವಿಶ್ರಾಂತಿ ಹಂತ. ಕೋವಿಡ್ ಪೀಡಿತರಾದಾಗ ಕೂದಲಿನ ಹೆಚ್ಚಿನ ಎಳೆಗಳು ಅಕಾಲಿಕವಾಗಿ ಟೆಲೋಜೆನ್ ಅಥವಾ ವಿಶ್ರಾಂತಿ ಹಂತವನ್ನು ತಲುಪುತ್ತವೆ. ಈ ವೇಳೆ ಕೂದಲು ಉದುರುತ್ತದೆ. ಹೊಸ ಕೂದಲು ಬೆಳೆಯಲು 9ರಿಂದ 12 ತಿಂಗಳು ಬೇಕಾಗುತ್ತದೆ' ಎಂದು ಡಾ. ಕಲಾ ವಿಮಲ್ ವಿವರಿಸಿದರು.

ನಗರದಲ್ಲಿ ಇಂದು

24ನೇ ವಾರ್ಷಿಕೋತ್ಸವ: ಉದ್ಘಾಟನೆ: ವಿ. ಕೃಷ್ಣ, ಗೌರವ ಸಮರ್ಪಣೆ: ನುಗ್ಗಿಮಕ್ಕಿ ರಾಮಚಂದ್ರ ರಾವ್, 'ಸ್ವರಲಯರತ್ನ' ಬಿರುದು ಪ್ರದಾನ: ಡಿ. ಬಾಲಕೃಷ್ಣ, ಬಿರುದು ಸ್ವೀಕಾರ: ಎನ್.ಆರ್. ಪ್ರಶಾಂತ್, 'ಸ್ವರಲಯಶೃಂಗ' ಬಿರುದು ಪ್ರದಾನ: ಎಂ. ವಾಸುದೇವರಾವ್, ಬಿರುದು ಸ್ವೀಕಾರ: ಸಿ.ಎನ್. ಚಂದ್ರಶೇಖರ್, ಆಯೋಜನೆ: ಸ್ವರಲಯ ಪ್ರೌಢ ಸಂಗೀತ ಕಲಾಶಾಲೆ, ಸ್ಥಳ: ಶ್ರೀ ರಾಮಲಲಿತ ಕಲಾ ಮಂದಿರ, ಜಯನಗರ 4ನೇ ಹಂತ, ಬೆಳಿಗ್ಗೆ 10

ರಾಜ್ಯಮಟ್ಟದ 13ನೇ ಕನ್ನಡ ಸಾಹಿತ್ಯ–ಸಂಸ್ಕೃತಿ ಸಮಾವೇಶ: ಸರ್ವಾಧ್ಯಕ್ಷತೆ: ಭೂಹಳ್ಳಿ ಪುಟ್ಟಸ್ವಾಮಿ, ಉದ್ಘಾಟನೆ: ಸಿ.ಪಿ. ಸಿದ್ಧಾಶ್ರಮ, ಗೌರವ ಅತಿಥಿ: ಎಸ್.ಎಲ್. ಭೋಜೇಗೌಡ, ದತ್ತಿ ಪ್ರಶಸ್ತಿ ಪ್ರದಾನ: ಎಸ್.ಜಿ. ಸುಶೀಲಮ್ಮ, ಆಯೋಜನೆ: ಬುದ್ಧ ಬಸವ ಗಾಂಧಿ ಸ್ಮಾರಕ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಕಸ್ತೂರಬಾ ಸಭಾಂಗಣ, ಶಿವಾನಂದ ವೃತ್ತದ ಸಮೀಪ, ಬೆಳಿಗ್ಗೆ 10.25

ವಸ್ತು ಪ್ರದರ್ಶನ: 'ಸರ್ದಾರ್ ಪಟೇಲ್–ಏಕೀಕರಣದ ಶಿಲ್ಪಿ' ವಿಷಯದ ಮೇಲೆ, ಉದ್ಘಾಟನೆ: ವೇಮಗಲ್ ಸೋಮಶೇಖರ್, ಉಪಸ್ಥಿತಿ: ಪ್ರೊ. ಜಯಕರ್ ಎಸ್.ಎಂ., ಎನ್. ಮಹೇಶ್ ಬಾಬು, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 11

ಕನ್ನಡ ಪುಸ್ತಕ ಹಬ್ಬ 2022: ಉದ್ಘಾಟನೆ: ನಿರಂಜನ ವಾನಳ್ಳಿ, ಮುಖ್ಯ ಅತಿಥಿ: ಪ್ರೇಮಶೇಖರ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡ ನಗರ, ಬೆಳಿಗ್ಗೆ 11

ಅಭಿನಂದನಾ ಸಮಾರಂಭ: ಬಿ.ಆರ್. ರಾಜಶೇಖರ್ 60, ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಪುಟ್ಟಣ್ಣ, ಅಭಿನಂದನಾ ನುಡಿ: ರಾಜಪ್ಪ ದಳವಾಯಿ, ಅಧ್ಯಕ್ಷತೆ: ಮಂಜುಳಾ ವಿಜಯಕುಮಾರ್, ಆಯೋಜನೆ: ಬಿ.ಆರ್.ಆರ್. ಅಭಿಮಾನಿಗಳ ಬಳಗ, ಬಿ.ಆರ್.ಆರ್. ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಸಿದ್ಧಗಂಗಾ ಪ್ರೌಢಶಾಲೆ ಪ್ರಾರ್ಥನಾ ಮಂದಿರ, ಶಿವನಗರ, ಮಧ್ಯಾಹ್ನ 2

ಸಿದ್ಧಲಿಂಗ ಸ್ವಾಮೀಜಿ

ನಾಟಕ ಪ್ರದರ್ಶನ: 'ಸಾಹೇಬರ ಸರ್ಕೀಟು' ಹಾಸ್ಯ ನಾಟಕ, ವಿನ್ಯಾಸ ಮತ್ತು ನಿರ್ದೇಶನ: ಪ್ರಮೋದ್ ಶಿಗ್ಗಾಂವ್, ಸಂಗೀತ: ಗಜಾನನ ಟಿ. ನಾಯ್ಕ್, ಬೆಳಕು: ಮುದ್ದಣ್ಣ ರಟ್ಟೆಹಳ್ಳಿ, ಪಾತ್ರವರ್ಗ: ರಾಮಕೃಷ್ಣ ಕನ್ನರಪಾಡಿ, ಕಿರಣ್, ಸುಂದರ್, ಲಕ್ಷ್ಮೀ ಚಂದ್ರಶೇಖರ್, ರಘುನಂದನ್, ವಾದಿರಾಜ್, ಪ್ರಸಾದ್ ಜೈನ್, ರಾಘವೇಂದ್ರ, ಹರ್ಷ, ಗೌತಮ್, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಸಾಹೇಬರ ಸರ್ಕೀಟು ನಾಟಕದ ದೃಶ್ಯ

ಸ್ಪಂದನ 2022: ರಾಜ್ಯದ ವಿಶೇಷ ಶಾಲೆಗಳ ವಿಶೇಷ ಶಿಕ್ಷಕರ–ಶಿಕ್ಷಕೇತರ ಸಿಬ್ಬಂದಿಯ ರಾಜ್ಯ ಮಟ್ಟದ ಸಮಾವೇಶ, ಉದ್ಘಾಟನೆ: ಹಾಲಪ್ಪ ಆಚಾರ್, ಅಧ್ಯಕ್ಷತೆ: ಕೋಟ ಶ್ರೀನಿವಾಸ್ ಪೂಜಾರಿ, ಮುಖ್ಯ ಅತಿಥಿಗಳು: ಯು.ಟಿ. ಖಾದರ್, ಮಹಾಂತೇಶ್ ಜಿ. ಕಿವದಸನ್ನವರ್, ಆಯೋಜನೆ: ಕರ್ನಾಟಕ ರಾಜ್ಯ ವಿಶೇಷ ಶಿಕ್ಷಕರು ಹಾಗೂ ಶಿಕ್ಷಕೇತರರ ಸಂಘ, ಕರ್ನಾಟಕ ರಾಜ್ಯ ವಿಕಲ ಚೇತನರ ಸೇವಾ ಸಂಸ್ಥೆಗಳ ಒಕ್ಕೂಟ, ಸ್ಥಳ: ಶಿಕ್ಷಕರ ಸದನ, ಕಾವೇರಿ ಭವನದ ಎದುರು, ಮಧ್ಯಾಹ್ನ 2.30

ವಿಶ್ವ ಪಾರ್ಶ್ವವಾಯು ದಿನ: ಮುಖ್ಯ ಅತಿಥಿ: ಡಾ.ಡಿ. ನಾಗರಾಜ್, ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್, ಸ್ಥಳ: ಸೆಮಿನಾರ್ ಹಾಲ್, ಡಾ.ಎಂ.ವಿ. ಗೋವಿಂದಸ್ವಾಮಿ ಬಿಲ್ಡಿಂಗ್, ನಿಮ್ಹಾನ್ಸ್, ಮಧ್ಯಾಹ್ನ 3

8 ಕೃತಿಗಳ ಲೋಕಾರ್ಪಣೆ: ಕೆ. ಷರಿಫಾ ಅವರ 'ಬಯಲಿಗೂ ಬಾಗಿಲು' ಕವನ ಸಂಕಲನ, 'ನೀರೊಳಗಣ ಕಿಚ್ಚು' ಕಥಾ ಸಂಕಲನ, ಕೆ. ಪ್ರಭಾಕರನ್ ಅನುವಾದಿಸಿರುವ 'ವಾಸ್ತು ಶಾಸ್ತ್ರ: ತಿರುಳೂ, ತಿಳಿಗೇಡಿತನವೂ', ಚಂದ್ರಕಾಂತ ಪೋಕಳೆ ಅನುವಾದಿಸಿರುವ 'ಸಾರ್ಥಕತೆ: ಗದ್ಯ ಬರಹಗಳ ಸಂಗ್ರಹ', ಡಾ.ಕೆ. ಸುಶೀಲಾ ಅವರ 'ಮಾಸ್ಕೋದ ಆ ದಿನಗಳು', 'ವೈದ್ಯರೊಬ್ಬರ ನೆನಪಿನಂಗಳದಿಂದ', 'ಆಧುನಿಕ ಕಾಯಿಲೆಗಳ ವಿಸ್ಮಯ ಲೋಕ', ಚಂಪಾ ಜೈಪ್ರಕಾಶ್ ಅವರ 'ಸುಬ್ಬರಾಯನ ಕುಂಟೆ, ಪುಸ್ತಕಗಳ ಬಿಡುಗಡೆ: ಡಾ. ವಸುಂಧರಾ ಭೂಪತಿ, ಆಯೋಜನೆ: ಕ್ರಿಯಾ ಮಾಧ್ಯಮ, ಚಿಂತನ ಪುಸ್ತಕ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

4ನೇ ಸಂಗೀತ ಸಮ್ಮೇಳನ: ಸಂಗೀತ ಸಮ್ಮೇಳನದ ಅಧ್ಯಕ್ಷತೆ: ಎಚ್.ಎಸ್. ಅನಸೂಯಾ ಕುಲಕರ್ಣಿ, ಯುವ ಸಂಗೀತ ಸಮ್ಮೇಳನದ ಅಧ್ಯಕ್ಷತೆ: ಬಿ.ಕೆ. ರಘು, ಅಧ್ಯಕ್ಷತೆ: ಎಂ.ಅನಂತ್, ಮುಖ್ಯ ಅತಿಥಿ: ಎಂ.ವಿ. ಸತ್ಯನಾರಾಯಣ, ಆಯೋಜನೆ: ಮಲ್ಲೇಶ್ವರ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀ ರಾಮ ಮಂದಿರ, ಮಲ್ಲೇಶ್ವರ, ಸಂಜೆ 5

ಸುನೀಲ್ ಸುರೇಶ್ ಅವರ 'ಆನ್‌ಟು ಎ ರಾಕೆಟ್ ಶಿಪ್' ಪುಸ್ತಕ ಬಿಡುಗಡೆ: ಬಸವರಾಜ ಬೊಮ್ಮಾಯಿ, ಉದ್ಘಾಟನಾ ಭಾಷಣ: ಕಸ್ತೂರಿ ರಂಗನ್, ಸ್ಥಳ: ಐಟಿಸಿ ಗಾರ್ಡೆನಿಯಾ, ಸಂಜೆ 5

'ಲಲಿತಾ ನಮನ' ಸಂಗೀತ ಕಾರ್ಯಕ್ರಮ: ಲಲಿತಾ ಉಭಯಕರ ಸ್ಮರಣಾರ್ಥ, ತಬಲಾ: ರೂಪಕ ಭಟ್ಟಾಚಾರ್ಯ, ಉದಯರಾಜ ಕರ್ಪೂರ, ಹಾರ್ಮೋನಿಯಂ: ಸತೀಶ ಕೊಳ್ಳಿ, ವ್ಯಾಸಮೂರ್ತಿ ಕಟ್ಟಿ, ಗಾಯನ: ವಾಸಿಂ ಅಹಮ್ಮದ್ ಖಾನ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಟಿಎಸ್‌ಆರ್ ಹಾಲ್, ಕೆನರಾ ಯೂನಿಯನ್, ಮಲ್ಲೇಶ್ವರ, ಸಂಜೆ 5.30

ವಿಚಾರ ಸಂಕಿರಣ: 'ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ–ಭಾರತೀಯ ಕಥನ', ಉಪನ್ಯಾಸಕರು: ಬಿ.ಜಿ. ಹರೀಶ, ಆಯೋಜನೆ: ಮಂಥನ, ಸ್ಥಳ: ರಾಷ್ಟ್ರೋತ್ಥಾನ ಯೋಗ ಕೇಂದ್ರ, ಜಯನಗರ 4ನೇ ಬ್ಲಾಕ್, ಸಂಜೆ 6.30

'ಭದ್ರಾ ರಾಷ್ಟ್ರೀಯ ಯೋಜನೆಗೆ ಶೀಘ್ರ ಒಪ್ಪಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಪ್ರಕಟಿಸುವ ಸಂಬಂಧ ಕೇಂದ್ರ ಸರ್ಕಾರ ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ನಿರೀಕ್ಷೆ ಇದೆ ಎಂದು ಜಲಸಂಪನ್ಮೂಲ ಸಚಿವ ಎಂ.ಗೋವಿಂದ ಕಾರಜೋಳ ಹೇಳಿದ್ದಾರೆ.

ಈಗಾಗಲೇ ಯೋಜನೆಗೆ ಕೇಂದ್ರದ ಹಣಕಾಸು ಇಲಾಖೆ ಅನುಮೋದನೆ ನೀಡಿದೆ. ರಾಷ್ಟ್ರೀಯ ಯೋಜನೆಯ ಮಾನ್ಯತೆ ಸಿಕ್ಕಿದ ಬಳಿಕ ಕೇಂದ್ರದಿಂದ ಶೇ 60ರಷ್ಟು ಅನುದಾನ ಸಿಗುತ್ತದೆ. ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಸಿಕ್ಕಿದ ಬಳಿಕ ಆದಷ್ಟು ಬೇಗನೇ ಅಧಿಸೂಚನೆಯೂ ಹೊರಬೀಳಲಿದೆ ಎಂದು ಅವರು ತಿಳಿಸಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ಒಟ್ಟು ₹23 ಸಾವಿರ ಕೋಟಿ ವೆಚ್ಚವಾಗಲಿದೆ. ಸದ್ಯ ₹16 ಸಾವಿರ ಕೋಟಿ ವೆಚ್ಚದ ಕೆಲಸ ಬಾಕಿ ಇದೆ. ರಾಷ್ಟ್ರೀಯ ಯೋಜನೆಯಾಗಿ ಘೋಷಣೆಯಾದ ಬಳಿಕ ಉಳಿಯುವ ಒಟ್ಟು ಕಾಮಗಾರಿಯ ವೆಚ್ಚದಲ್ಲಿ ಶೇ 60ರಷ್ಟನ್ನು ಕೇಂದ್ರ ಸರ್ಕಾರವೇ ನೀಡುತ್ತದೆ. ಕೇಂದ್ರದಿಂದ ಸುಮಾರು ₹5,300 ಕೋಟಿ ಸಿಗುವ ನಿರೀಕ್ಷೆ ಇದೆ ಎಂದು ಕಾರಜೋಳ ವಿವರಿಸಿದರು.

ಕೊಪ್ಪಳದ ನವಲಿ ಬಳಿ ತುಂಗಭದ್ರಾ ನದಿಗೆ ಸಮತೋಲನ ಜಲಾಶಯ ನಿರ್ಮಾಣಕ್ಕೆ ₹13 ಸಾವಿರ ಕೋಟಿ ವೆಚ್ಚದ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ಈ ಯೋಜನೆಗೆ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳೂ ಪಾಲುದಾರರಾಗಿವೆ. ಎಲ್ಲ ರಾಜ್ಯಗಳ ಸಮ್ಮತಿಯೊಂದಿಗೆ ಜಾರಿಗೊಳಿಸುವ ಪ್ರಯತ್ನ ನಡೆದಿದೆ ಎಂದು ಅವರು ಹೇಳಿದರು.

ನದಿ ಮಾಲಿನ್ಯ ತಡೆಯಲು ಸೂಚನೆ

ರಾಜ್ಯದಲ್ಲಿ ನದಿಗಳ ಮಾಲಿನ್ಯ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ ಎಂದು ಸಚಿವ ಗೋವಿಂದ ಕಾರಜೋಳ ಹೇಳಿದರು.

ಕಾವೇರಿ ನದಿಯೂ ಸೇರಿ ರಾಜ್ಯದ ಬಹುತೇಕ ನದಿಗಳು ಮಲಿನವಾಗಿವೆ. ಪಟ್ಟಣಗಳು, ಸ್ಥಳೀಯ ಸಂಸ್ಥೆಗಳು ಮತ್ತು ಕೈಗಾರಿಕಾ ತ್ಯಾಜ್ಯಗಳು ನದಿ ನೀರನ್ನು ಸೇರುತ್ತಿವೆ. ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕಾಲ ಕಾಲಕ್ಕೆ ತಪಾಸಣೆ ನಡೆಸುತ್ತಾರೆ, ಆದರೆ ಅದನ್ನು ತಡೆಗಟ್ಟಲು ಪ್ರಯತ್ನಿಸುತ್ತಿಲ್ಲ ಎಂದು ಸಚಿವರು ವಿವರಿಸಿದರು.

ಮಲಿನ ನೀರನ್ನು ಸಂಸ್ಕರಿಸಲು ಸಾಕಷ್ಟು ಅನುದಾನ ಮತ್ತು ಕಾರ್ಯಕ್ರಮಗಳು ಇವೆ. ಆದರೆ, ನದಿ ಕಲುಷಿತಗೊಳ್ಳುವುದನ್ನು ತಡೆಯುವ ಪ್ರಯತ್ನ ನಡೆದಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಬೊಮ್ಮಾಯಿ, ನದಿ ಕಲುಷಿತಗೊಳ್ಳುವುದನ್ನು ತಡೆಯಲು ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿದ್ದಾರೆ ಎಂದರು.

ಇಂದು ರಕ್ತದಾನ ಶಿಬಿರ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯ ಸ್ಮರಣೆ ಪ್ರಯುಕ್ತ ರೋಟರಿ ಡಿಸ್ಟ್ರಿಕ್ಟ್ 3190 ರಾಜ್ಯದಾದ್ಯಂತ ಶನಿವಾರ ರಕ್ತದಾನ ಶಿಬಿರ ಹಮ್ಮಿಕೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಗವರ್ನರ್ ಜಿತೇಂದ್ರ ಅನೇಜ, 'ವಿವಿಧ ರಕ್ತನಿಧಿಗಳ ಸಹಯೋಗದಲ್ಲಿ 'ಅಪ್ಪುಗೆ' ಶೀರ್ಷಿಕೆಯಡಿ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಬೆಳಿಗ್ಗೆ 9 ಗಂಟೆಯಿಂದ ಶಿಬಿರ ನಡೆಯಲಿದೆ. ಅಪಘಾತ, ಹೆರಿಗೆ, ಕ್ಯಾನ್ಸರ್, ರಕ್ತಹೀನತೆ ಸೇರಿ ವಿವಿಧ ಸಂದರ್ಭಗಳಲ್ಲಿ ಕೆಲವರಿಗೆ ತುರ್ತಾಗಿ ರಕ್ತ ಬೇಕಾಗಿರುತ್ತದೆ. ರಕ್ತದಾನ ಮಾಡುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕರ ಕರ್ತವ್ಯವಾಗಬೇಕು' ಎಂದು ಹೇಳಿದರು.

'ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗುತ್ತದೆ. ದೇಹದಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗಿ, ಹೃದಯಾಘಾತ ಸಾಧ್ಯತೆಯೂ ಶೇ 80ರಷ್ಟು ದೂರವಾಗುತ್ತದೆ. ರಕ್ತದ ಒತ್ತಡ, ಮಧುಮೇಹದಂತಹ ರೋಗಗಳನ್ನು ತಡೆಯಲೂ ರಕ್ತದಾನ ಸಹಕಾರಿ' ಎಂದು ತಿಳಿಸಿದರು.

ಕಾಣೆಯಾಗಿದ್ದಾರೆ

ಮಾ|| ವಿನೀತ್

17 ವರ್ಷ ವಯಸ್ಸು, ವಿನೀತ್ ದೊಡ್ಡಕನ್ನಹಳ್ಳಿ ಸರ್ಜಾಪುರ ರಸ್ತೆಯಿಂದ ದಿ: 16–10–2022 ರಂದು ಕಾಣೆಯಾಗಿರುತ್ತಾನೆ. 5.2 ಅಡಿ ಎತ್ತರ, ಎಣ್ಣೆ ಕೆಂಪು ಮೈಬಣ್ಣ, ಕೋಲು ಮುಖ, ಸಾಧಾರಣ ಮೈಕಟ್ಟು, ಕನ್ನಡ, ತೆಲುಗು, ಇಂಗ್ಲೀಷ್ ಮಾತನಾಡುತ್ತಾನೆ. ಈತನ ಬಗ್ಗೆ ಎಲ್ಲಾದರೂ ಸುಳಿವು ಸಿಕ್ಕಲ್ಲಿ ಹತ್ತಿರದ ಪೋಲೀಸ್ ಠಾಣೆ ಅಥವಾ 080-22942959, 9480801543, 9019933888 ಈ ನಂಬರಿಗೆ ಸಂಪರ್ಕಿಸಿ.

ಇಂಡಿಗೊ ವಿಮಾನದ ಎಂಜಿನ್‌ನಲ್ಲಿ ಬೆಂಕಿ: ತುರ್ತು ಭೂಸ್ಪರ್ಶ

ನವದೆಹಲಿ (ಪಿಟಿಐ): ದೆಹಲಿಯಿಂದ ಬೆಂಗಳೂರಿಗೆ ಹೊರಟಿದ್ದ ಇಂಡಿಗೊ ವಿಮಾನದ ಎಂಜಿನ್‌ವೊಂದಕ್ಕೆ ಬೆಂಕಿ ತಗುಲಿದ ಕಾರಣ ವಿಮಾನವು ದೆಹಲಿ ವಿಮಾನ ನಿಲ್ದಾಣದಲ್ಲಿಯೇ ತುರ್ತು ಭೂಸ್ಪರ್ಶಿಸಿದ ಘಟನೆ ಶುಕ್ರವಾರ ನಡೆದಿದೆ ಎಂದು ಮೂಲಗಳು ತಿಳಿಸಿವೆ.

'6ಇ–2131 ವಿಮಾನವು ರಾತ್ರಿ 9.30ರ ಸುಮಾರಿಗೆ ಟೇಕ್ ಆಫ್ ಆಗುವ ವೇಳೆ ಈ ಅವಘಡ ನಡೆದಿದ್ದು, ವಿಮಾನದಲ್ಲಿ 180 ಪ್ರಯಾಣಿಕರಿದ್ದರು. ಎಲ್ಲಾ ಪ್ರಯಾಣಿಕರನ್ನು ಪರ್ಯಾಯ ವಿಮಾನದ ಮೂಲಕ ಗಮ್ಯ ಸ್ಥಾನಕ್ಕೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರಯಾಣದ ವೇಳೆ ಉಂಟಾದ ಅನನುಕೂಲಕ್ಕೆ ವಿಷಾದಿಸುತ್ತೇವೆ' ಎಂದು ಇಂಡಿಗೊ ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ವಾರ್ತೆ

ನಿವೃತ್ತ ಡಿವೈಎಸ್‌ಪಿ ನಂಜುಂಡೇಗೌಡ

ಬೆಂಗಳೂರು: ನಿವೃತ್ತ ಡಿವೈಎಸ್‌ಪಿಯೂ ಆದ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕ ನಂಜುಂಡೇಗೌಡ ಅವರು ಮೈಸೂರಿನ ನೇತಾಜಿ ನಗರದ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ ನಿಧನರಾದರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು.



ಮೃತರಿಗೆ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯ ಉಪ ನಿರ್ದೇಶಕ ಟಿ.ಎನ್. ಶಿವಶಂಕರ್ ಸೇರಿ ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಶುಕ್ರವಾರ ಮಧ್ಯಾಹ್ನ 3ರ ತನಕ ನೇತಾಜಿ ನಗರದ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನ ಕೊಪ್ಪ ಸಮೀಪದ ತರೀಕೆರೆ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಾಣಸವಾಡಿ ಕೆರೆ: ಒತ್ತುವರಿದಾರರಿಂದ 'ರಾಜಕೀಯ ಒತ್ತಡ'

ಪ್ರತಿರೋಧದ ನಡುವೆ ತೆರವು

ಪ್ರಜಾವಾಣಿ ವಾರ್ತೆ

ಬಾಣಸವಾಡಿ ಕೆರೆ ಅಂಗಳದಲ್ಲಿ ಮಳಿಗೆಗಳನ್ನು ಶುಕ್ರವಾರ ತೆರವು ಮಾಡಲಾಯಿತು —ಪ್ರಜಾವಾಣಿ ಚಿತ್ರ

ಬೆಂಗಳೂರು: ಆರೋಪ, ಪ್ರತ್ಯಾರೋಪ, ಒತ್ತಡ, ಅಡೆ– ತಡೆಗಳ ನಡುವೆ ಬಾಣಸವಾಡಿ ಕೆರೆ ಅಂಗಳದ ಒತ್ತುವರಿ ತೆರವು ಕಾರ್ಯಾಚರಣೆ ಶುಕ್ರವಾರವೂ ನಡೆಯಿತು.

ಮುಖ್ಯರಸ್ತೆಯಲ್ಲಿ ಒತ್ತುವರಿಯಾಗಿದ್ದ ದೇವಸ್ಥಾನ, ಪೆಟ್ರೋಲ್ ಬಂಕ್ ಹಾಗೂ ವಾಣಿಜ್ಯ ಮಳಿಗೆಗಳನ್ನು ಹೊರತುಪಡಿಸಿದಂತೆ ಇತರೆ ಶೆಡ್ ಹಾಗೂ ಕಟ್ಟಡಗಳನ್ನು ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ನೇತೃತ್ವದಲ್ಲಿ ಸಿಬ್ಬಂದಿ ತೆರವುಗೊಳಿಸಿದರು. ಸುಮಾರು 75ಕ್ಕೂ ಹೆಚ್ಚು ಕಟ್ಟಡ ಹಾಗೂ ಇತರೆ ರೀತಿಯ ಅತಿಕ್ರಮಣವನ್ನು ತೆರವುಗೊಳಿಸಲು ಮೂರು ದಿನ ಕಾರ್ಯಾಚರಣೆಯನ್ನು ಗುರುವಾರ ತಾಲ್ಲೂಕು ಆಡಳಿತ ಆರಂಭಿಸಿದೆ.

'ಎಲ್ಲ ರೀತಿಯ ಒತ್ತುವರಿಯನ್ನೂ ತೆರವುಗೊಳಿಸಲಾಗುತ್ತದೆ. ಯಾವುದನ್ನೂ ಉಳಿಸುವುದಿಲ್ಲ. ಒಂದು ಬಾರಿ ಒತ್ತುವರಿಯನ್ನು ತೆರವು ಮಾಡಿದ್ದರೂ ಅದೇ ಸ್ಥಳದಲ್ಲಿ ಒತ್ತುವರಿ ಮಾಡಿಕೊಳ್ಳಲಾಗಿದೆ. ಇದಕ್ಕೆ ಯಾವ ರೀತಿಯಲ್ಲೂ ಮುಲಾಜು ತೋರುವುದಿಲ್ಲ' ಎಂದು ತಹಶೀಲ್ದಾರ್ ಅಜಿತ್‌ಕುಮಾರ್ ರೈ ತಿಳಿಸಿದರು.

ಒತ್ತುವರಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಸಾಕಷ್ಟು ಪ್ರತಿರೋಧ ವ್ಯಕ್ತವಾಯಿತು. 'ಆ ಕಟ್ಟಡ ತೆರವು ಮಾಡಿ, ಅದನ್ನು ಒಡೆಯಿರಿ, ಇದನ್ನು ಒಡೆಯಬೇಡಿ' ಎಂದೆಲ್ಲ ಸ್ಥಳೀಯರು ಹಾಗೂ ಸ್ಥಳೀಯ ರಾಜಕೀಯ ಮುಖಂಡರು ಆಗ್ರಹಿಸಿದರು.

ಒತ್ತುವರಿ ತೆರವು ಮಾಡದಂತೆ ಸಚಿವರು ಹಾಗೂ ಶಾಸಕರಿಂದ ತಹಶೀಲ್ದಾರ್ ಅವರ ಮೇಲೆ ಒತ್ತಡಹಾಕಲು ಸಾಕಷ್ಟು ಪ್ರಯತ್ನಪಟ್ಟರು. ಬಾಣಸವಾಡಿ ಕೆರೆ ಅಂಗಳದಲ್ಲಿ ಒತ್ತುವರಿಯಾಗಿರುವ ಎಲ್ಲ ಪ್ರದೇಶಗಳನ್ನೂ ತಾಲ್ಲೂಕು ಆಡಳಿತ ಗುರುತು ಮಾಡಿದೆ. ಎಲ್ಲವನ್ನೂ ತೆರವು ಮಾಡಲಾಗುತ್ತದೆ. ಎಲ್ಲಿಯವರೆಗೆ ಎಲ್ಲ ತೆರವು ಮುಗಿಯುವುದಿಲ್ಲವೋ ಅಲ್ಲಿಯವರೆಗೆ ಕಾರ್ಯಾಚರಣೆ ಮುಂದುವರಿಸಲು ನಿರ್ಧರಿಸಲಾಗಿದೆ.

ಬಿಡಿಎ, ಬಿಬಿಎಂಪಿ ಎಚ್ಚರಗೊಳ್ಳಲಿ...

'ತಾಲ್ಲೂಕು ಆಡಳಿತ ಬಾಣಸವಾಡಿ ಕೆರೆಯ ಒತ್ತುವರಿಯನ್ನು ತೆರವು ಮಾಡುತ್ತಿದೆ. ಬಿಡಿಎ ಹಾಗೂ ಬಿಬಿಎಂಪಿ ಈ ತೆರವುಗೊಳಿಸಿದ ಪ್ರದೇಶವನ್ನು ರಕ್ಷಿಸಿಕೊಳ್ಳಬೇಕು. ಮತ್ತೆ ಒತ್ತುವರಿಯಾಗದಂತೆ ತಡೆಯಬೇಕು. ಒತ್ತುವರಿ ತೆರವುಗೊಳಿಸಿದ ಮೇಲೆ ಈ ಪ್ರದೇಶವನ್ನು ಸಾರ್ವಜನಿಕ ಉಪಯೋಗಕ್ಕೆ ಬಳಸಿಕೊಳ್ಳಬೇಕು. ಉದ್ಯಾನ, ಆಟದ ಮೈದಾನ ಸೇರಿದಂತೆ ಇತರೆ ಸೌಲಭ್ಯಗಳನ್ನು ಇಲ್ಲಿ ಒದಗಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಬಾಣಸವಾಡಿ ರಾಜಶೇಖರ ರೆಡ್ಡಿ, ಜಗದೀಶ್ ರೆಡ್ಡಿ ಒತ್ತಾಯಿಸಿದರು.

ವಾಣಿಜ್ಯ ಕಟ್ಟಡ ತೆರವು ಮಾಡಿ

'ಬಾಣಸವಾಡಿ ಕೆರೆಯ ಒತ್ತುವರಿಯನ್ನು ತೆರವು ಮಾಡುತ್ತಿರುವುದು ಒಳ್ಳೆಯ ಕೆಲಸ. ಎಲ್ಲ ರೀತಿಯ ಒತ್ತುವರಿಯನ್ನೂ ತೆರವು ಮಾಡಬೇಕು. ಯಾವುದನ್ನೂ ಉಳಿಸಬಾರದು. ವಾಣಿಜ್ಯ ಕಟ್ಟಡಗಳನ್ನು ಉಳಿಸಿ, ಮನೆಗಳನ್ನು ಒಡೆಯುತ್ತಿದ್ದಾರೆ. ಬಡವರು, ಶ್ರೀಮಂತರು ಎನ್ನದೆ ಒತ್ತುವರಿ ಮಾಡಿಕೊಂಡಿರುವ ಎಲ್ಲ ಪ್ರದೇಶವನ್ನು ತೆರವು ಮಾಡಬೇಕು' ಎಂದು ಬಿಜೆಪಿಯ ಸ್ಥಳೀಯ ಮುಖಂಡ ಪದ್ಮನಾಭರೆಡ್ಡಿ ಆಗ್ರಹಿಸಿದರು.

'ಒಕ್ಕಲಿಗರ ಅಲೆ ಎದ್ದರೆ ತಡೆಯುವುದು ಕಷ್ಟ'

ಪ್ರಜಾವಾಣಿ ವಾರ್ತೆ

ನಂಜಾವಧೂತ ಸ್ವಾಮೀಜಿ

ಮದ್ದೂರು (ಮಂಡ್ಯ ಜಿಲ್ಲೆ): 'ಮೀಸಲಾತಿ ವಿಚಾರದಲ್ಲಿ ಒಕ್ಕಲಿಗರು ಶಾಂತ ಸಾಗರದಂತಿದ್ದಾರೆ. ಯಾವಾಗ ಬೇಕಾದರೂ ಅಲೆಗಳು ಏಳಬಹುದು. ಎದ್ದರೆ ತಡೆಯಲು ಕಷ್ಟವಾಗಬಹುದು' ಎಂದು ಸ್ಫಟಿಕಪುರ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಒಕ್ಕಲಿಗರ ಮೀಸಲಾತಿಗೆ ಒತ್ತಾಯಿಸಿ ಪಟ್ಟಣದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಅವರು, 'ಒಕ್ಕಲಿಗರಿಗೆ ರಾಮ–ಕೃಷ್ಣರಂತೆ ಬದುಕುವುದೂ ಗೊತ್ತು. ಉಗ್ರ ನರಸಿಂಹನ ಅವತಾರ ತಾಳುವುದೂ ಗೊತ್ತು. ಬೇರೆ ಸಮುದಾಯಗಳಿಗೆ ಮೀಸಲಾತಿ ನೀಡುವುದು ಸ್ವಾಗತಾರ್ಹ, ಆದರೆ ಒಕ್ಕಲಿಗರಿಗೂ ಮೀಸಲಾತಿಯಲ್ಲಿ ಪಾಲು ಸಿಗಬೇಕು' ಎಂದು ಪ್ರತಿಪಾದಿಸಿದರು.

'ಸರ್ಕಾರ ನಮ್ಮನ್ನು ಯಾವ ರೀತಿ ನಡೆಸಿಕೊಳ್ಳುತ್ತದೋ ಹಾಗೇ ನಡೆಯುತ್ತೇವೆ. ನಮ್ಮ ತಾಳ್ಮೆ ಪರೀಕ್ಷಿಸಬೇಡಿ. ಈ ಹೋರಾಟ ಉಗ್ರ ರೂಪ ಪಡೆಯಬಹುದು. ಒಂದು ಸಣ್ಣ ಕಿಡಿ ಅನ್ನ ಬೇಯಿಸುತ್ತದೆ, ಅದೇ ಕಿಡಿ ಹೊತ್ತಿ ಉರಿಯಲೂಬಹುದು' ಎಂದರು.

'ಚುನಾವಣೆಗೂ ಮೀಸಲಾತಿ ಹೋರಾಟಕ್ಕೂ ಸಂಬಂಧವಿಲ್ಲ. ರಾಜ್ಯದಲ್ಲಿ ಶೇ 16ರಷ್ಟು ಜನಸಂಖ್ಯೆ ಇದ್ದರೂ ಮೀಸಲಾತಿಯಲ್ಲಿ ತಾರತಮ್ಯ ಮಾಡಲಾಗಿದೆ. ಪ್ರವರ್ಗ 3ಎ ಅಡಿ ಬೇರೆ ಸಮುದಾಯಗಳನ್ನು ಸೇರಿಸಿರುವುದರಿಂದ ಒಕ್ಕಲಿಗರು ಅದನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. 3ಎ ಮೀಸಲಾತಿಯನ್ನು ಶೇ 4ರಿಂದ ಶೇ 12ಕ್ಕೆ ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

ಲಕ್ಷ ದೀಪೋತ್ಸವ ನ.19ರಿಂದ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ಕಾರ್ತಿಕ ಮಾಸದ ಲಕ್ಷದೀಪೋತ್ಸವ ನವೆಂಬರ್ 19ರಿಂದ 24ರ ವರೆಗೆ ನಡೆಯಲಿದೆ.

ಗುರುವಾಯನಕೆರೆಯಿಂದ ಧರ್ಮಸ್ಥಳವರೆಗಿನ ರಸ್ತೆ ದುರಸ್ತಿಗೆ ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ ಸಿಎಂಗೆ ಮನವಿ ಮಾಡಿದ್ದು, ₹1 ಕೋಟಿ ಮಂಜೂರು ಮಾಡಲಾಗಿದೆ.

PROPERTY CORNER ಕ್ಲಾಸಿಫೈಡ್ಸ್

ಕಾಡು ನೋಡಹೋದೆ ಕವಿತೆಯೊಡನೆ ಬಂದೆ

ನಾವು ನೋಡಿದ ಸಿನಿಮಾ

ಗಂಧದಗುಡಿ (ಡಾಕ್ಯುಡ್ರಾಮಾ- ಕನ್ನಡ)

- ನಿರ್ಮಾಣ: ಅಶ್ವಿನಿ ಪುನೀತ್ ರಾಜ್‌ಕುಮಾರ್
- ನಿರ್ದೇಶನ: ಅಮೋಘವರ್ಷ ಜೆ.ಎಸ್.
- ತಾರಾಗಣ: ಪುನೀತ್ ರಾಜ್‌ಕುಮಾರ್, ಅಮೋಘವರ್ಷ, ಅಶ್ವಿನಿ ಪುನೀತ್ ರಾಜ್‌ಕುಮಾರ್ ಮತ್ತಿತರರು

ಹರಿವ ನದಿಯ ಸ್ವಚ್ಛ ನೀರಿನ ಮೇಲೆ ಪುನೀತ್ ರಾಜ್‌ಕುಮಾರ್ ಪ್ರತಿಬಿಂಬ. ಅದೇ ಸ್ನಿಗ್ಧ ನಗು. ಅದೇ ದೃಢ ನಿಲುವು. ಕಣ್ಣ ಪಕ್ಕದ ಸುಕ್ಕುಗಳಲ್ಲಿ ಉಳಿದುಹೋದ ಅದೇ ಮುಗ್ಧತೆ. ಆ ದೃಶ್ಯವು ಕಣ್ಣಂಚಲ್ಲಿ ನೀರು ಜಮೆಯಾಗಿಸುವ ಹೊತ್ತಿಗೆ ಪ್ರಕೃತಿಯತ್ತ ಕ್ಯಾಮೆರಾ ಕಣ್ಣು ಹೊರಳಿಕೊಳ್ಳುತ್ತದೆ. ಅಲ್ಲಿಗೆ ಪುನೀತ್ ಪ್ರಕೃತಿಯ ಮಡಿಲಿಗೇ ಸೇರಿಹೋದರೆನ್ನುವ ದಿವ್ಯಭಾವವೊಂದರ ದಾಟುವಿಕೆ.

ಸ್ವಾರ್‌ಗಿರಿಯನ್ನೆಲ್ಲ ಮೂಟೆ ಕಟ್ಟಿ, ಪುನೀತ್ ಮುಗ್ಧ ಹುಡುಗನಂತೆ ಕಾಡು, ನದಿ, ಬೆಟ್ಟಗುಡ್ಡಗಳು, ಸಮುದ್ರದ ನೀರಿನಾಳ... ಹೀಗೆ ಎಲ್ಲೆಡೆಗೂ ಇಳಿದಿದ್ದಾರೆ. ಈ ಪ್ರಕೃತಿ ಪ್ರಯಾಣದ ಉದ್ದಕ್ಕೂ ಅವರ ಜತೆ ನಿರ್ದೇಶಕ ಅಮೋಘವರ್ಷ ಇದ್ದಾರೆ. ಇಬ್ಬರ ಸಂವಾದದಲ್ಲೇ ಕೆಲವು ಆಪ್ತ ಸಂಗತಿಗಳು ವಿನಿಮಯಗೊಳ್ಳುತ್ತವೆ. ರಾಜ್‌ಕುಮಾರ್ ಅವರು ತುಂಬಾ ಇಷ್ಟಪಡುತ್ತಿದ್ದ ಗಾಜನೂರಿನ ದೊಡ್ಡ ಆಲದಮರ ಅಂತಹ ನೆನಹುಗಳಲ್ಲಿ ಒಂದು. ಆ ಮರದಡಿಯಲ್ಲಿ ರಾಜ್‌ಕುಮಾರ್ ಧ್ಯಾನ ಮಾಡಿ, ಕರ್ಚೀಫನ್ನೆ ಮಡಚಿಟ್ಟು, ಸಣ್ಣ ತಲೆದಿಂಬಿನಂತೆ ಮಾಡಿಕೊಂಡು ಮಲಗುತ್ತಿದ್ದ ಘಟನೆಯನ್ನು ಪುನೀತ್ ನೆನಪಿಸಿಕೊಳ್ಳುತ್ತಾರೆ.

ವೀರಪ್ಪನ್ ಅಪಹರಿಸಿದ ಸಂದರ್ಭದಲ್ಲಿ ಅವರು ನಡೆದಾಡಿರಬಹುದಾದ ಜಾಗಗಳನ್ನೂ ಪುನೀತ್ ಬೇರೆಯದೇ ಕಣ್ಣುಗಳಿಂದ ನೋಡುತ್ತಾರೆ. ಅರಣ್ಯ ಇಲಾಖೆಯ ಸಿಬ್ಬಂದಿ ಜತೆ ಸರಳತೆಯಲ್ಲಿ ಬೆರೆಯುತ್ತಾರೆ. ಯಾವ ದೃಶ್ಯದಲ್ಲೂ ಒಂದಿನಿತೂ ಹೀರೊ ಎಂಬ ಭಾವ ಹೊಮ್ಮುವುದೇ ಇಲ್ಲ. ಕೊನೆಯಲ್ಲಿ ಬಳ್ಳಾರಿ ಭಾಗದ ಅಲೆಮಾರಿಗಳು ನೃತ್ಯ ಮಾಡುವಾಗ ಅಪ್ಪಿತಪ್ಪಿಯೂ ಪುನೀತ್ ಒಂದು ಕುಣಿತ ಹಾಕುವುದಿಲ್ಲ. ಮಗುವಿನಂತೆ ಕುಳಿತು ಅದನ್ನು ಎದೆಗಿಳಿಸಿಕೊಳ್ಳುತ್ತಾರೆ.

ಹಾವು ಕಂಡರೆ ತಮಗೆ ಯಾಕೆ ಭಯ ಎನ್ನುವುದಕ್ಕೆ ಬಾಲನಟನಾಗಿ ತಮಗಾಗಿದ್ದ ಅನುಭವವನ್ನೇ ಅವರು ಹಂಚಿಕೊಳ್ಳುತ್ತಾರೆ. ಅದೇನು ಎನ್ನುವುದನ್ನು ತಿಳಿಯಲು 'ಗಂಧದಗುಡಿ' ನೋಡಬೇಕು.

ನಿರ್ದೇಶಕ ಅಮೋಘವರ್ಷ ಇದನ್ನು 'ಡಾಕ್ಯುಡ್ರಾಮಾ' ಎಂದು ಕರೆಯಲು ಕಾರಣವಿದೆ: ಅದು ಬರೀ ಸಾಕ್ಷ್ಯಚಿತ್ರವಲ್ಲ. ಪ್ರಕೃತಿ ಮಡಿಲಿನಲ್ಲಿ ನಡೆಯುವ ಕೆಲವು ಅನಿರೀಕ್ಷಿತ ಡ್ರಾಮಾಗಳೂ ಅಡಕವಾಗಿವೆ.

ಇಡೀ ಚಲನಚಿತ್ರದ ತುಂಬೆಲ್ಲ ಎದೆಯಲ್ಲಿ ಕಾಮನಬಿಲ್ಲು ಮೂಡಿಸುವ ಅಸಂಖ್ಯ ದೃಶ್ಯಗಳಿವೆ. ನೇತ್ರಾಣಿ ದ್ವೀಪದ ಪಕ್ಕದ ಸಮುದ್ರದಾಳಕ್ಕೆ ಡೈವ್ ಮಾಡಿ, ಅಲ್ಲಿನ ಸಕಲ ಜೀವ ಚರಾಚರಗಳನ್ನು ಪುನೀತ್ ಹಾಗೂ ಅಮೋಘವರ್ಷ ತಾವಷ್ಟೆ ನೋಡದೆ ನಾವೂ ನೋಡುವಂತೆ ಮಾಡಿರುವುದು ಅದಕ್ಕೆ ಒಂದು ಉದಾಹರಣೆ.

ಅಲ್ಲಲ್ಲಿ, ಪ್ರಾಣಿ–ಪಕ್ಷಿಗಳ ಬಗೆಗಿನ ಕೆಲವು ವೈಜ್ಞಾನಿಕ ಮಾಹಿತಿಯನ್ನೂ ಅಮೋಘವರ್ಷ ನೀಡುತ್ತಾ ಹೋಗುತ್ತಾರೆ. ಕಡಲಾಳದಲ್ಲಿ ಸಿಲುಕಿದ್ದ ಪ್ಲಾಸ್ಟಿಕ್ ಒಂದನ್ನು ಹೊರಗೆ ತರುವ ಪುನೀತ್ ಮುಗುಮ್ಮಾಗಿ ಒಂದು ಸಂದೇಶವನ್ನೂ ದಾಟಿಸುತ್ತಾರೆ. 'ಕಾಡಿನಲ್ಲಿ ಪ್ರಾಣಿಗಳ ಪಾಲಿಗೆ ನಾವೇ ಝೂನಲ್ಲಿ ಇರುವವರಂತೆ ಕಾಣುತ್ತೇವೆ' ಎನ್ನುವ ಅವರ ಮಾತಿನ ಅರ್ಥಸಾಧ್ಯತೆಯೂ ದೊಡ್ಡದು.

ಪ್ರತೀಕ್ ಶೆಟ್ಟಿ ಸಿನಿಮಾಟೊಗ್ರಫಿ ಕರ್ನಾಟಕದ ಹಲವು ಕಣ್ತುಂಬಿಕೊಳ್ಳಬೇಕಾದ ಸ್ಥಳಗಳನ್ನು ಸೊಗಸಾಗಿ ಕಟ್ಟಿಕೊಟ್ಟಿದೆ. ಅಮೋಘವರ್ಷ ಆಗಲಿ, ಪುನೀತ್ ಆಗಲಿ ಎಲ್ಲಿಯೂ ಅಭಿನಯಿಸಿದ್ದಾರೆ ಎನಿಸುವುದಿಲ್ಲ. ಅಜನೀಶ್ ಲೋಕನಾಥ್ ಸಂಗೀತ ಪ್ರಕೃತಿ ಸೌಂದರ್ಯವನ್ನು ಕರ್ಣಾನಂದದೊಂದಿಗೆ ನೋಡುವಂತೆ ಮಾಡಿದೆ.

ಸಹಜ ಪಯಣದ ಅನುಭವಗಳ ದೃಶ್ಯದೈರಿ ಎನ್ನಬಹುದಾದ 'ಗಂಧದಗುಡಿ'ಯಲ್ಲಿ ಪುನೀತ್ ಒಂದೊಂದು ಕದಲಿಕೆಯೂ ಅವರಿನ್ನೂ ಜೀವಂತವಾಗಿದ್ದಾರೇನೊ ಎನ್ನುವ ಭಾವವನ್ನು ಮೂಡಿಸುತ್ತದೆ. ಬಹುಶಃ ಇದೇ ಕಾರಣಕ್ಕೆ ಅಶ್ವಿನಿ ಇದನ್ನು ಎಲ್ಲರೂ ನೋಡಲಿ ಎಂದು ಬಯಸಿ ತೆರೆಗೆ ತಂದಿದ್ದಾರೋ ಏನೋ.

–ವಿಶಾಖ ಎನ್.

ಮುರುಘಾ ಶ್ರೀ ಜಾಮೀನು ಆಕ್ಷೇಪಣೆಗೆ ವಾರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ತಮ್ಮ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಸಂತ್ರಸ್ತ ಬಾಲಕಿಯರ ಪರ ವಕಾಲತ್ತಿನ ಕಾನೂನು ಬದ್ಧತೆ ಪ್ರಶ್ನಿಸಿದ್ದಾರೆ.

ಶ್ರೀಗಳ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಶ್ರೀಗಳ ಪರ ಹಾಜರಿದ್ದ ವಕೀಲ ಸ್ವಾಮಿನಿ ಗಣೇಶ್ ಮೋಹನಂಬಾಳ್, 'ಸಂತ್ರಸ್ತರ ಪರವಾಗಿ ಮಣಿ ಎಂಬ ಮಹಿಳೆ ವಕಾಲತ್ತು ಸಲ್ಲಿಸಿದ್ದಾರೆ. ತಾವು ಬಾಲಕಿಯರ ಪೋಷಕರು ಎಂದು ಅವರು ಹೇಳಿಕೊಂಡಿದ್ದಾರೆ. ಆದರೆ, ಈ ವಕಾಲತ್ ನಾಮೆಗೆ ಸಂತ್ರಸ್ತ ಬಾಲಕಿಯರು ಒಪ್ಪಿಗೆ ನೀಡಿರುವ ಬಗ್ಗೆ ಅಧಿಕೃತ ದಾಖಲೆಯಿಲ್ಲ' ಎಂದು ಆಕ್ಷೇಪಿಸಿದರು.

'ಈ ಕುರಿತಂತೆ ಲಿಖಿತ ಆಕ್ಷೇಪಣೆ ಸಲ್ಲಿಕೆಗೆ ಸಮಯಾವಕಾಶ ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಒಂದು ವಾರ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು.

ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಮುರುಘಾ ಶ್ರೀಗಳನ್ನು ಪೊಲೀಸರು 2022ರ ಸೆಪ್ಟೆಂಬರ್ 1ರಂದು ಬಂಧಿಸಿದ್ದು ಅಂದಿನಿಂದಲೂ ಅವರು ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮುರುಘಾ ಮಠದಲ್ಲಿ ಮಹಜರು

ಚಿತ್ರದುರ್ಗ: ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಎರಡನೇ ದೂರು ಕುರಿತು ಇಲ್ಲಿನ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಕಚೇರಿ, ವಿಶ್ರಾಂತಿ ಕೊಠಡಿ ಹಾಗೂ ಹಾಸ್ಟೆಲ್‌ಗೆ ಶುಕ್ರವಾರ ಸಂತ್ರಸ್ತೆಯರೊಂದಿಗೆ ತೆರಳಿದ ತನಿಖಾಧಿಕಾರಿಗಳು ಸ್ಥಳ ಮಹಜರು ನಡೆಸಿದರು.

ಬೆಳಿಗ್ಗೆ ಮಹಜರು ಬಳಿಕ ಸಂತ್ರಸ್ತ ವಿದ್ಯಾರ್ಥಿನಿಯರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ನಾಲ್ವರು ಸಂತ್ರಸ್ತ ವಿದ್ಯಾರ್ಥಿನಿಯರ ಪೈಕಿ ಇಬ್ಬರು ವೈದ್ಯಕೀಯ ಪರೀಕ್ಷೆಗೆ ಒಳಗಾದರು. ಜಿಲ್ಲಾ ಆಸ್ಪತ್ರೆಯ ವೈದ್ಯೆ ಡಾ.ರೂಪಶ್ರೀ ನೇತೃತ್ವದ ತಂಡ ಈ ಪ್ರಕ್ರಿಯೆ ಪೂರ್ಣಗೊಳಿಸಿತು. ಮೈಸೂರಿನಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತ ಬಾಲಕಿಯರನ್ನು ತನಿಖೆಯ ಕಾರಣಕ್ಕೆ ಪೊಲೀಸರು ಚಿತ್ರದುರ್ಗಕ್ಕೆ ಕರೆತಂದಿದ್ದರು.

ಅ.31ಕ್ಕೆ ಮುಂದೂಡಿಕೆ: ಎರಡನೇ ಪ್ರಕರಣದ ಇಬ್ಬರು ಆರೋಪಿಗಳು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಅ.31ಕ್ಕೆ ಮುಂದೂಡಿತು. 6 ಮತ್ತು 7ನೇ ಆರೋಪಿಗಳಾದ ಮಠಾಲಿಂಗ ಹಾಗೂ ಕರಿಬಸಪ್ಪ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2022–23/5316 ದಿನಾಂಕ: 28–10–2022

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ (04) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 157100, 157098, 157096, 157097. 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ. 200.00 ಲಕ್ಷ, ಗರಿಷ್ಠ ರೂ. 244.00 ಲಕ್ಷ. 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೊತ್ತ: ಕನಿಷ್ಠ ರೂ. 254000.00 ಗರಿಷ್ಠ ರೂ. 310000.00, 5) ಪ್ರಿ ಬಿಡ್: 10.11.2022 (11.00 ಗಂಟೆ), 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **14.11.2022 (17.30 ಗಂಟೆ)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **15.11.2022 (16.00 ಗಂಟೆ)**, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16.11.2022 (16.30 ಗಂಟೆ), 9) ಆರ್ಥಿಕ ಬಿಡ ತೆರೆಯುವ ದಿನಾಂಕ : **18.11.2022 (11.30 ಗಂಟೆ)**, 10) ಹೆಚ್ಚಿನ ವಿವರಗಳಿಗಾಗಿ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ: ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ: **www.e-proc.Karnatak.gov.in**

ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/773/ಎಂ.ಸಿ&ಎ/2022–23

ಕೃಷಿ ವಿ.ವಿಗಳಿಗೆ ಕುಲಪತಿ ನೇಮಕ

ಪಿ.ಎಲ್ ಪಾಟೀಲ

ಸುರೇಶ್

ಧಾರವಾಡ/ಬೆಂಗಳೂರು: ಧಾರವಾಡ ಕೃಷಿ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಕುಲಪತಿ ನೇಮಕ ಮಾಡಿ ರಾಜ್ಯಪಾಲರಾದ ಥಾವರಚಂದ್ ಗೆಹಲೋತ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಧಾರವಾಡ ಕೃಷಿ ವಿ.ವಿ. ಕುಲಪತಿಯಾಗಿ ವಿ.ವಿಯ ಸಂಶೋಧನಾ ನಿರ್ದೇಶಕ ಡಾ. ಪಿ.ಎಲ್.ಪಾಟೀಲ ಅವರನ್ನು ನೇಮಿಸಲಾಗಿದೆ. ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಮಂಟಗಣಿಯವರಾದ ಅವರು ಮಣ್ಣು ವಿಜ್ಞಾನ ತಜ್ಞ.

ಬೆಂಗಳೂರು ಕೃಷಿ ವಿ.ವಿ. ಕುಲಪತಿಯಾಗಿ ಡಾ.ಎಸ್.ವಿ.ಸುರೇಶ್ ಅವರನ್ನು ನೇಮಿಸಲಾಗಿದೆ. ತುಮಕೂರು ಜಿಲ್ಲೆಯವರಾದ ಸುರೇಶ್, ವಿವಿಯ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಶುಕ್ರವಾರ ಅವರು ಅಧಿಕಾರ ವಹಿಸಿಕೊಂಡರು.

ದಕ್ಷಿಣ ಕರ್ನಾಟಕದ 10 ಜಿಲ್ಲೆಗಳ ವ್ಯಾಪ್ತಿಯನ್ನು ಈ ವಿಶ್ವವಿದ್ಯಾಲಯ ಹೊಂದಿದೆ.

ಜಾನುವಾರು ಹತ್ಯೆ: ಆಸ್ತಿ ಮುಟ್ಟುಗೋಲು

ಮಂಗಳೂರು: ಮಾಂಸಕ್ಕಾಗಿ ಜಾನುವಾರುಗಳನ್ನು ಅಕ್ರಮವಾಗಿ ಹತ್ಯೆ ಮಾಡಿದ್ದ ಮೂರು ಪ್ರಕರಣಗಳಲ್ಲಿ, ಹತ್ಯೆಗೆ ಬಳಸಿದ್ದ ಜಾಗವನ್ನು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ 2020ರ ಪ್ರಕಾರ ಸರ್ಕಾರದ ವಶಕ್ಕೆ ಪಡೆಯುವಂತೆ ಇಲ್ಲಿನ ಉಪವಿಭಾಗಾಧಿಕಾರಿ ಮದನ್ ಮೋಹನ್ ಆದೇಶ ಮಾಡಿದ್ದಾರೆ. ಈ ಜಾಗವನ್ನು ಮುಟ್ಟುಗೋಲು ಹಾಕಿಕೊಂಡ ಬಗ್ಗೆ ಅದರ ಪಹಣಿಯ ಕಲಂ 11ರಲ್ಲಿ ಹಾಗೂ ಅದರ ಖಾತಾಗಳಲ್ಲೂ ಇತ್ತೀಚೆಗೆ ನಮೂದಿಸಲಾಗಿದೆ.

ಕಾಟಿಪಳ್ಳ, ಅರ್ಕುಳ ಹಾಗೂ ಗಂಜಿಮಠದಲ್ಲಿ ಜಾನುವಾರುಗಳ ಅಕ್ರಮ ಹತ್ಯೆ ನಡೆದಿತ್ತು. ಈ ಬಗ್ಗೆ ಆಸ್ತಿ ಮುಟ್ಟುಗೋಲು ಹಾಕುವಂತೆ ಉಪವಿಭಾಗಾಧಿಕಾರಿಯವರು ಆಗಸ್ಟ್‌ನಲ್ಲಿ ಆದೇಶಿಸಿದ್ದರು. ಈ ಕಾಯ್ದೆಯು ಜಾರಿಗೆ ಬಂದ ಬಳಿಕ, ಜಾನುವಾರು ಹತ್ಯೆ ನಡೆಸಲಾದ ಜಾಗದ ಮಾಲೀಕರ ಆಸ್ತಿ ಮುಟ್ಟುಗೋಲಿನಂತಹ ಕಠಿಣ ಕ್ರಮವನ್ನು ಮಂಗಳೂರಿನಲ್ಲಿ ಮೊದಲ ಬಾರಿ ಕೈಗೊಳ್ಳಲಾಗಿದೆ.

ಗಂಜಿಮಠ ಅಂಚೆಯ ಬಡಗ ಉಳಿಪಾಡಿ ಗ್ರಾಮದ ಯೂಸುಫ್, ಹಕೀಮ್ ಮತ್ತು ಸಿರಾಜ್ ಶೆಡ್ ನಿರ್ಮಿಸಿಕೊಂಡು ಕೋಣವನ್ನು ಹತ್ಯೆ ಮಾಡಿದ್ದಾಗಿ ಬಜಪೆ ಪೊಲೀಸರು ಪ್ರಕರಣ ದಾಖಲಿಸಿದ್ದರು.

'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ 2020ರನ್ವಯ, ಎಫ್‌ಐಆರ್ ಆಧಾರದಲ್ಲಿ ಸ್ವತ್ತು ಮುಟ್ಟುಗೋಲಿಗೆ ಕ್ರಮವಹಿಸಿದ್ದೇವೆ. ಈ ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಆರೋಪ ಸಾಬೀತಾದರೆ, ಆಸ್ತಿಯು ಸರ್ಕಾರದ ವಶದಲ್ಲೇ ಮುಂದುವರಿಯಲಿದೆ' ಎಂದು ಉಪ ವಿಭಾಗಾಧಿಕಾರಿ ಮದನ ಮೋಹನ್ ಸಿ. 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ

NAAC Accredited with 'A' GRADE

ಜ್ಞಾನಭಾರತಿ ಆವರಣ, ಬೆಂಗಳೂರು – 560 056. Website: www.bangaloreuniversity.ac.in

ಸಂಖ್ಯೆ: ಎಸಿಎ.4/ಸ್ನಾ./ಪ/ಪತ್ರಿಕಾ ಪ್ರಕಟಣೆ/2022–2023 ದಿನಾಂಕ: 28.10.2022

ಅಧಿಸೂಚನೆ

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ: 28.10.2022

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣ, ಸ್ನಾತಕೋತ್ತರ ಕೇಂದ್ರ, ರಾಮನಗರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ, ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ 2022–23ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎ. **ಜ್ಞಾನಭಾರತಿ ಆವರಣ:**

1) **ಕಲಾ ನಿಕಾಯ: ಎಂ.ಎ.** – ಅರ್ಥಶಾಸ್ತ್ರ, ಆಂಗ್ಲ, ಹಿಂದಿ, ಇತಿಹಾಸ, ಪತ್ರಿಕೋದ್ಯಮ ಮತ್ತು ಸಂವಹನ, ಕನ್ನಡ, ತೌಲನಿಕ ಕನ್ನಡ, ತತ್ವಶಾಸ್ತ್ರ, ರಾಜ್ಯಶಾಸ್ತ್ರ, ಗ್ರಾಮೀಣಾಭಿವೃದ್ಧಿ ಅಧ್ಯಯನ, ಸಂಸ್ಕೃತ, ಸಮಾಜಶಾಸ್ತ್ರ, ತೆಲುಗು, ಉರ್ದು, ಮಹಿಳಾ ಅಧ್ಯಯನ, ಪ್ರದರ್ಶನ ಕಲೆ, ನೃತ್ಯ (ಭರತನಾಟ್ಯ), ನಾಟಕ, ಸಂಗೀತ, ಮೃದಂಗ, ಸಮಾಜಕಾರ್ಯ (ಎಂ.ಎಸ್.ಡಬ್ಲ್ಯೂ) ಮತ್ತು ದೃಶ್ಯಕಲೆ.
   ಸ್ವ ಹಣಕಾಸು ಕೋರ್ಸುಗಳು: ಎಂ.ಎ.– ಮಾಧ್ಯಮ ಅಧ್ಯಯನ ಮತ್ತು ಸಾರ್ವಜನಿಕ ಸಂಪರ್ಕ ಮತ್ತು ಜಾಹೀರಾತು.
2) **ವಿಜ್ಞಾನ ನಿಕಾಯ: ಎಂ.ಎಸ್ಸಿ.**– ಅನ್ವಯಿಕ ತಳಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಜೀವರಸಾಯನಶಾಸ್ತ್ರ, ಜೀವತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, (Specialization in Organic, Inorganic & Physical Chemistry at 2nd year level only) ಗಣಕ ವಿಜ್ಞಾನ, ವಿದ್ಯುನ್ಮಾನ ಮಾಧ್ಯಮ, ವಿದ್ಯುನ್ಮಾನ ವಿಜ್ಞಾನ, ಪರಿಸರ ವಿಜ್ಞಾನ, ಫುಡ್ ಟೆಕ್ನಾಲಜಿ, ಅಪೆರಲ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್, ಭೂಗೋಳಶಾಸ್ತ್ರ, ಯೋಗ ವಿಜ್ಞಾನ, ಜೀವ ವಿಜ್ಞಾನ, ಗಣಿತ ಶಾಸ್ತ್ರ, ಸೂಕ್ಷ್ಮ ಜೀವಶಾಸ್ತ್ರ, ಭೌತಶಾಸ್ತ್ರ, ಮನಃಶಾಸ್ತ್ರ, ಸಂಖ್ಯಾಶಾಸ್ತ್ರ, ಪ್ರಾಣಿಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, (ಎಂ.ಎಲ್.ಐ.ಎಸ್.ಸಿ) (ಮೊದಲ ಎರಡು ಸೆಮಿಸ್ಟರ್‌ಗಳನ್ನು ಪೂರೈಸ ಬಯಸಿದಲ್ಲಿ ಸ್ನಾತಕ ಪದವಿಯೊಂದಿಗೆ ನಿರ್ಗಮಿಸಬಹುದು).
   ಸ್ವ ಹಣಕಾಸು ಕೋರ್ಸುಗಳು: – ಎಂ.ಎಸ್ಸಿ.–ಫಿಲ್ಮ್ ಮೇಕಿಂಗ್, ವಿಧಿ ವಿಜ್ಞಾನ, ಗ್ರಾಫಿಕ್ಸ್ ಮತ್ತು ಅನಿಮೇಷನ್, ನೈಸರ್ಗಿಕ ವಿಪತ್ತು ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ, ಭೌಗೋಳಿಕ ಮಾಹಿತಿ ವಿಜ್ಞಾನ, ಅಣುಜೀವ ವಿಜ್ಞಾನ ಮತ್ತು ಮನಃಶಾಸ್ತ್ರ ಸಮಾಲೋಚನೆ.
3) **ವಾಣಿಜ್ಯ ನಿಕಾಯ: ಎಂ.ಕಾಂ.**
   ಸ್ವ ಹಣಕಾಸು ಕೋರ್ಸುಗಳು: ಎಂ.ಕಾಂ (ಎಫ್.ಎ.), ಎಂ.ಕಾಂ (ಐ.ಬಿ.) ಮತ್ತು ಎಂ.ಟಿ.ಟಿ.ಎಂ.
4) **ಶಿಕ್ಷಣ ನಿಕಾಯ: ಎಂ.ಎಡ್, ಬಿ.ಪಿ.ಎಡ್, ಮತ್ತು ಎಂ.ಪಿ.ಎಡ್.**
5) **ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಒದಗಿಸಲಾಗುವ ವಿಷಯಗಳು: ಎಂ.ಎ.**– ಕನ್ನಡ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಗ್ರಾಮೀಣಾಭಿವೃದ್ಧಿ ಅಧ್ಯಯನ, ಅರ್ಥಶಾಸ್ತ್ರ, ಎಂ.ಎಸ್.ಡಬ್ಲ್ಯೂ (ಸಮಾಜಕಾರ್ಯ), ಎಂ.ಎಸ್ಸಿ.–ಗಣಿತಶಾಸ್ತ್ರ ಮತ್ತು ಎಂ.ಕಾಂ. **ವಿಶ್ವವಿದ್ಯಾಲಯದಿಂದ ಸಂಯೋಜನೆಗೊಂಡ 60 ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಬೋಧಿಸುವ ವಿಷಯಗಳ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ನೋಡಬಹುದು.**

ಸೂಚನೆ: ಸ್ವ–ಹಣಕಾಸು ಪಿ.ಜಿ ಕೋರ್ಸ್‌ಗಳು, ಪ್ರತಿ ಕೋರ್ಸ್‌ಗೆ ಕನಿಷ್ಕ 10 ಅಭ್ಯರ್ಥಿಗಳ ಪ್ರವೇಶವಿದ್ದಲ್ಲಿ ಮಾತ್ರ ಅಂತಹ ಕೋರ್ಸ್‌ಗಳನ್ನು ನಡೆಸಲಾಗುತ್ತದೆ, ಇಲ್ಲದಿದ್ದರೆ ಶುಲ್ಕವನ್ನು ಮರುಪಾವತಿಸಲಾಗುತ್ತದೆ.

ಅರ್ಜಿಯನ್ನು ಸಲ್ಲಿಸಲು ಮಾರ್ಗಸೂಚಿಗಳು:

- ಪ್ರತಿಯೊಂದು ಸ್ನಾತಕೋತ್ತರ ಕೋರ್ಸಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು.
- ವಿದ್ಯಾರ್ಥಿಗಳು ತಮ್ಮ ಸ್ನಾತಕೋತ್ತರ ಪ್ರವೇಶ ಅರ್ಜಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಂತರಜಾಲದ ಮುಖಾಂತರವೇ ಸಲ್ಲಿಸಕ್ಕದ್ದು **(www.bangaloreuniversity.ac.in).**
- ಅರ್ಜಿ ನಮೂನೆ ಮತ್ತು ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಂತರಜಾಲ **www.bangaloreuniversity.ac.in** ನಲ್ಲಿ ನೋಡಬಹುದು. **ಅರ್ಜಿ ಶುಲ್ಕ:** ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರತಿ ಕೋರ್ಸಿಗೂ ರೂ.200/– ಮತ್ತು ಪರಿಶಿಷ್ಟ ಜಾತಿ/ಪಂಗಡ ಪ್ರವರ್ಗ–1/ ಹಾಗೂ ವಿಶೇಷ ಚೇತನಾರು (PWD) ಅಭ್ಯರ್ಥಿಗಳು ಪ್ರತಿ ಕೋರ್ಸಿಗೂ ರೂ.100/–ಗಳನ್ನು ಆನ್‌ಲೈನ್ ಮುಖಾಂತರ ಸಂದಾಯ ಮಾಡಬೇಕು ಮೂಲ ಶುಲ್ಕದ ರಸೀದಿಯನ್ನು ಭರ್ತಿ ಮಾಡಿದ ಅರ್ಜಿಯ ಜೊತೆ ಲಗತ್ತಿಸಬೇಕು.
- ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಭರ್ತಿ ಮಾಡಲು **ದಿನಾಂಕ: 31.10.2022** ರಿಂದ ಆನ್‌ಲೈನ್ ಪೋರ್ಟಲ್ ತೆರೆದಿರುತ್ತದೆ.
- ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು (ಸೂಕ್ತ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳನ್ನು ಲಗತ್ತಿಸದ ಅರ್ಜಿಗಳನ್ನು)
- ಆನ್‌ಲೈನ್ ಮುಖಾಂತರ ಭರ್ತಿ ಮಾಡಿದ ಅರ್ಜಿಗಳ ಜೊತೆ ಸೀಟುಗಳ ಕೋರಿಕೆಗೆ ಬೇಕಾಗಿರುವ ಪೂರಕ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ತುಂಬಬೇಕು (ಲಗತ್ತಿಸುವುದು).
- **ಆನ್‌ಲೈನ್ ಮುಖಾಂತರ ಭರ್ತಿ ಮಾಡಿದ ಅರ್ಜಿಗಳ ಜೊತೆ ಸೀಟುಗಳ ಕೋರಿಕೆಗೆ ಬೇಕಾಗಿರುವ ಪೂರಕ ದಾಖಲೆಗಳ ಸಮೇತ ಡೌನ್‌ಲೋಡ್ ಮಾಡಿಕೊಂಡ ಅರ್ಜಿಗಳನ್ನು ಅಭ್ಯರ್ಥಿಗಳು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಆಯಾ ವಿಭಾಗದ ಮುಖ್ಯಸ್ಥರ/ನಿರ್ದೇಶಕರ ವಿಳಾಸಕ್ಕೆ ಅರ್ಜಿಗಳನ್ನು ಕಳುಹಿಸುವುದು / ಸಲ್ಲಿಸುವುದು.**
- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಆಯಾಯ ವಿಭಾಗದ ಮುಖ್ಯಸ್ಥರನ್ನು/ನಿರ್ದೇಶಕರನ್ನು ಸಂಪರ್ಕಿಸಬಹುದು.
- ಅಭ್ಯರ್ಥಿಗಳು ಅರ್ಜಿಗಳನ್ನು ತುಂಬುವ ಮೊದಲು, ಅರ್ಹತಾ ನಿಯಮ ನಿಬಂಧನೆಗಳು ಶುಲ್ಕಪಾವತಿಯ ಸ್ವರೂಪ ಮೊದಲಾದ ನಿರ್ದೇಶನಗಳಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಜಾಲ **www.bangaloreuniversity.ac.in** ಗೆ ಭೇಟಿ ನೀಡಲು ಸೂಚಿಸಲಾಗಿದೆ. ಅರ್ಜಿ ನಮೂನೆ ಅಂತರ ಜಾಲದಲ್ಲಿ ಲಭ್ಯವಿದೆ.
- ಅರ್ಜಿಯನ್ನು ತುಂಬುವ ಮೊದಲು ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಜಾಲಕ್ಕೆ ಅಧಿಕೃತ e-mail ಗುರುತಿನೊಂದಿಗೆ ಲಾಗ್‌ಇನ್ ಆಗಬೇಕಾಗಿರುತ್ತದೆ. ಆದ್ದರಿಂದ ಅರ್ಜಿ ತುಂಬುವ ಮೊದಲು ಅಭ್ಯರ್ಥಿಗಳು ವೈಯಕ್ತಿಕ ಇ–ಮೇಲ್ ಮೂಲಕ ಅರ್ಜಿ ತುಂಬುವ ಪ್ರಕ್ರಿಯೆಯನ್ನು ಆರಂಭಿಸಲು ಸೂಚಿಸಲಾಗಿದೆ.
- ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸಂಭಂದಪಟ್ಟಂತೆ ಪ್ರವೇಶ ಶುಲ್ಕಗಳನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು.
- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆಗಳು: **88007 75164 / 080-22961052 / 1040.**

ಅರ್ಜಿಗಳನ್ನು ಸಲ್ಲಿಸುವ ಹಾಗೂ ಪ್ರವೇಶ ಪ್ರಕ್ರಿಯೆಯ ದಿನಾಂಕಗಳು:

ಅ)	ಅರ್ಜಿಗಳನ್ನು ಆನ್‌ಲೈನ್ ಪೋರ್ಟಲ್ ಮುಖಾಂತರ ಭರ್ತಿ ಮಾಡಲು ಪ್ರಾರಂಭಿಕ ದಿನಾಂಕ	31.10.2022
ಆ)	ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ	14.11.2022
ಇ)	ರೂ. 200/– ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	17.11.2022
ಈ)	ಡೌನ್‌ಲೋಡ್ ಮಾಡಿಕೊಂಡ ಅರ್ಜಿಗಳ ಜೊತೆಯಲ್ಲಿ ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ	19.11.2022
ಉ)	ಬಿ.ಪಿ.ಎಡ್, ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆ ನಡೆಸುವ ದಿನಾಂಕ	21 & 22.11.2022
ಊ)	ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ	24.11.2022
ಋ)	ಜೇಷ್ಠತಾ ಪಟ್ಟಿಯಲ್ಲಿನ ದೋಷಗಳ ಬಗ್ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ಆನ್ ಲೈನ್ /ಆಫ್ ಲೈನ್)	28.11.2022
ಎ)	ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ	30.11.2022
ಏ)	ಆಫ್‌ಲೈನ್ ಮುಖಾಂತರ ವಿಜ್ಞಾನ ವಿಷಯಗಳ ಪ್ರವೇಶ ಪ್ರಕ್ರಿಯೆ ದಿನಾಂಕಗಳು	03 & 04.12.2022
ಐ)	ಆಫ್‌ಲೈನ್ ಮುಖಾಂತರ ಕಲಾ, ಮತ್ತು ಶಿಕ್ಷಣ ವಿಷಯಗಳ ಪ್ರವೇಶ ಪ್ರಕ್ರಿಯೆ ದಿನಾಂಕಗಳು	03 & 04.12.2022
ಒ)	ಆನ್ ಲೈನ್ ಮುಖಾಂತರ ವಾಣಿಜ್ಯ ವಿಷಯಗಳ ಪ್ರವೇಶ ಪ್ರಕ್ರಿಯೆ ದಿನಾಂಕಗಳು	03 & 04.12.2022

ಸಹಿ/– ಕುಲಸಚಿವರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರ ಕಛೇರಿ, ಬಿಬಿಎಂಪಿ, ಎನ್.ಆರ್ ಚೌಕ, ಬೆಂಗಳೂರು–560 002.

ಸಂ: ಸಿ.ಪಿ.ಎಂ.ಓ./ಎನ್‌ಯು.ಹೆಚ್.ಎಂ/ಪಿಆರ್–23/2022–23 ದಿನಾಂಕ: 28.10.2022

ಪ್ರಕಟಣೆ

"ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿಯ **ಎನ್.ಯು.ಹೆಚ್.ಎಂ, ಎನ್.ಟಿ.ಇ.ಪಿ, ಆರ್.ಸಿ.ಹೆಚ್, ಕಾರ್ಯಕ್ರಮದಡಿಯಲ್ಲಿ** ಖಾಲಿ ಇರುವ ವೃಂದಗಳ ಹುದ್ದೆಗಳಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ **ದಿನಾಂಕ: 31.08.2021, 30.10.2021, 02.11.2021** ರಂದು **ಮೆರಿಟ್ ಕಮ್ ರೋಸ್ಟರ್** ಆಧಾರದ ಮೇಲೆ ವಾಕ್–ಇನ್–ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ವಿವಿಧ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆ ನಡೆಸಿ, ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು **ದಿನಾಂಕ: 15.09.2022** ರಂದು ದಿನಪತ್ರಿಕೆಯಲ್ಲಿ ಸಾರ್ವಜನಿಕರ ಪ್ರಕಟಣೆ ನೀಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಈ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಅಂತಿಮ ಆಯ್ಕೆ ಪಟ್ಟಿಯನ್ನು ಪಾಲಿಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಈ ಮೂಲಕ ಸಂಬಂಧಪಟ್ಟ ಅಭ್ಯರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸಿದೆ."

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.).

ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ, 7ನೇ ಮಹಡಿ, ಕ.ಗೃ.ಮಂ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009

ಸಂ: ಜಅಇ/ಪಿಎಂಕೆಎಸ್ವೈ–ಡಬ್ಲ್ಯೂಡಿಸಿ2.0/ಎಂಇಎಲ್ಡಿ/ಆರ್‌ಎಫ್‌ಪಿ–II/2022–23 ದಿನಾಂಕ: 28.10.2022

ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸುವ ಸೂಚನೆ

"ಪ್ರಧಾನ ಮಂತ್ರಿ ಕೃಷಿ ಸಿಂಚಯೀ ಯೋಜನೆ – ಜಲಾನಯನ ಅಭಿವೃದ್ಧಿ ಘಟಕ 2.0 (PMKSY-WDC 2.0) ಅಡಿಯಲ್ಲಿ ಉಸ್ತುವಾರಿ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲೀಕರಣ ಸೇವೆಗಳನ್ನು ಒದಗಿಸುವುದು"

ಕರ್ನಾಟಕ ಇ–ಸಂಗ್ರಹಣ ವೇದಿಕೆ ಮೂಲಕ ಇಲಾಖೆಯು PMKSY-WDC 2.0 ಕಾರ್ಯಕ್ರಮದ ಯೋಜನೆಗಳ ಉಸ್ತುವಾರಿ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲೀಕರಣ ಕಾರ್ಯವನ್ನು ಕೈಗೊಳ್ಳಲು ಬಾಹ್ಯ ಸಂಸ್ಥೆಯನ್ನು ಆಯ್ಕೆ ಮಾಡಲು ಬಿಡ್ಡಳನ್ನು ಆಹ್ವಾನಿಸುತ್ತಿದೆ. ಟೆಂಡರ್ ದಾಖಲಾತಿಗಳೊಂದಿಗೆ ವಿವರವಾದ ಮಾಹಿತಿಯನ್ನು ಕರ್ನಾಟಕ ಇ–ಸಂಗ್ರಹಣೆ ವೇದಿಕೆ (https://eproc.karnataka.gov.in) ಯಲ್ಲಿ ಅಳವಡಿಸಲಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅವಲೋಕಿಸಿ ಟೆಂಡರ್ಗಳನ್ನು ಸಲ್ಲಿಸುವುದು. ಟೆಂಡರ್ ದಾಖಲಾತಿಗಳು ಲಭ್ಯವಾಗುವ ದಿನಾಂಕ: 29.10.2022 ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 14.11.2022 ರಂದು ಸಾಯಂಕಾಲ 5.30 ಗಂಟೆಯವರೆಗೆ ಇರುತ್ತದೆ. ಪ್ರಿಬಿಡ್ ಸಭೆ ದಿನಾಂಕ: 05.11.2022 ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಯಾಗಿರುತ್ತದೆ.

ಸಹಿ/–
ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು

DIPR/CP/2820/Zen/2022-23

ಕಾರ್ಯಪಾಲಕ ಇಂಜಿನಿಯರ್‌ರವವ ಕಚೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.

ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಜೆಇ–1/ಟೆಂಡರ್/2022–23 ದಿನಾಂಕ: 25.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–24/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ – ಏಕ ಲಕೋಟೆ ಮತ್ತು ದ್ವಿಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–1 KW–2 & KW–3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್ ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್ ಫೋರ್ಡ್ ಟೌನ್, ಬೆಂಗಳೂರು–560025, ದೂರವಾಣಿ: 080–22485867, 080–22485927) ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ 2022–23ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ; 2022–23ನೇ ಸಾಲಿನ 5054 ಮುಖ್ಯ ಮಂತ್ರಿ ವಿಶೇಷ ಮಂಜೂರಾತಿ ಯೋಜನೆಯಡಿಯ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ದ್ವಿಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **25.10.2022** ರಿಂದ **04.11.2022** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/637/MCA/2022-23

'ಆರೋಗ್ಯ ವಿಮೆಗೂ ಮೊದಲಿನ ಮಾಹಿತಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಮೆ ಹೊಂದಿದವರು ತಮ್ಮ ಅನಾರೋಗ್ಯದ ಮಾಹಿತಿಯನ್ನು ವಿಮಾ ಕಂಪನಿಗೆ ಮುಂಚಿತವಾಗಿಯೇ ನೀಡಬೇಕು. ಇದು ಅವರ ಕರ್ತವ್ಯ ಕೂಡಾ. ಹಾಗೊಂದು ವೇಳೆ ಮಾಹಿತಿಯನ್ನು ನೀಡದೇ ಇದ್ದಾಗ ವಿಮಾ ಕಂಪನಿ ಪಾಲಿಸಿಯನ್ನು ನಿರಾಕರಿಸಬಹುದು' ಎಂದು ಹೈಕೋರ್ಟ್ ಆದೇಶಿಸಿದೆ.

ನಗರದ ದಂಪತಿ ವಿಮಾ ಒಂಬುಡ್ಸ್‌ಮನ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, 'ಮೆಡಿಕ್ಲೈಮ್ ಪಾಲಿಸಿ ಎನ್ನುವುದು ಒಂದು ಬಗೆಯ ಒಪ್ಪಂದ. ಆ ಒಪ್ಪಂದ ವಿಶ್ವಾಸದ ತಳಹದಿಯ ಮೇಲೆ ನಿಂತಿರುತ್ತದೆ. ಪಾಲಿಸಿ ಪಡೆದವರಿಗೆ ಮೊದಲೇ ಅನಾರೋಗ್ಯ ಇತ್ತೆಂಬ ಅಂಶದ ಆಧಾರದಲ್ಲಿ ಕಂಪನಿ ಪಾಲಿಸಿಯನ್ನು ನಿರಾಕರಿಸಿದರೆ ಅದರಲ್ಲಿ ದೋಷ ಹುಡುಕಲಾಗದು' ಎಂದು ತಿಳಿಸಿದೆ.

ಪ್ರಕರಣವೇನು?: ಅರ್ಜಿದಾರರು 2017ರ ಏಪ್ರಿಲ್ 29ರಂದು ಅನಾರೋಗ್ಯಗಳಿಗೆ ವಿಮಾ ಸೌಲಭ್ಯ ಒದಗಿಸುವ 'ಹೋಂ ಸುರಕ್ಷಾ ಪ್ಲಸ್' ಪಾಲಿಸಿ ಮಾಡಿಸಿದ್ದರು. 2020ರ ಆಗಸ್ಟ್ 10ರಂದು ಮಲ್ಟಿಪಲ್ ಸ್ಕೆಲಿರೊಸಿಸ್‌ನಿಂದ ಬಳಲುತ್ತಿರುವುದಾಗಿ ವೈದ್ಯರಿಂದ ಚಿಕಿತ್ಸೆ ಪಡೆದು, ಆ ವೆಚ್ಚದ ಮರು ಪಾವತಿಗೆ ಹಕ್ಕು ಮಂಡಿಸಿದ್ದರು.

ವಿಮಾ ಕಂಪನಿ ಇದನ್ನು ಪರಿಶೀಲಿಸಿದಾಗ ದಂಪತಿಗೆ ಈ ಕಾಯಿಲೆ ವಿಮೆ ಮಾಡಿಸುವ ಮುನ್ನವೇ ಇದ್ದುದು ಕಂಡು ಬಂದ ಕಾರಣ ಚಿಕಿತ್ಸಾ ವೆಚ್ಚ ನೀಡಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ದಂಪತಿ ವಿಮಾ ಒಂಬುಡ್ಸ್‌ಮನ್‌ಗೆ ದೂರು ಸಲ್ಲಿಸಿ, ಕಂಪನಿಯಿಂದ ₹ 28 ಲಕ್ಷ ಕೊಡಿಸುವಂತೆ ಮನವಿ ಮಾಡಿದ್ದರು. ದಾಖಲೆ ಪರಿಶೀಲಿಸಿದ ಒಂಬುಡ್ಸ್‌ಮನ್ ದಂಪತಿಯ ಮನವಿಯನ್ನು ತಿರಸ್ಕರಿಸಿತ್ತು.

ಎಸ್‌ಎಸ್‌ಸಿ: ಮತ್ತೆ ಕನ್ನಡ ಕಡೆಗಣನೆ

ಒಂದನೇ ಪುಟದಿಂದ...

ಒಟ್ಟು 24,369 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆದರೆ, ಈ ಹುದ್ದೆಗಳಿಗೆ ನಡೆಯುವ ಪರೀಕ್ಷೆಯನ್ನು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಬರೆಯಲು ಅವಕಾಶ ಕಲ್ಪಿಸಲಾಗಿದೆ.

ನೇಮಕಾತಿ ಪ್ರಕ್ರಿಯೆಯು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಇ) ಮತ್ತು ದೈಹಿಕ ಸಾಮರ್ಥ್ಯ ಹಾಗೂ ವೈದ್ಯಕೀಯ ಪರೀಕ್ಷೆಗಳನ್ನು ಒಳಗೊಂಡಿದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆಯು ಕೇವಲ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ನಡೆಯಲಿದೆ.

ಜತೆಗೆ, ಅಭ್ಯರ್ಥಿಗಳ ಇಂಗ್ಲಿಷ್/ಹಿಂದಿ ಭಾಷಾ ಜ್ಞಾನವನ್ನು ಸಹ ಪರೀಕ್ಷಿಸಲಾಗುವುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ಯಾವುದೇ ಮಂಡಳಿಯಿಂದ ಹತ್ತನೇ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ದೇಶದ ವಿವಿಧೆಡೆ ಪರೀಕ್ಷೆ ನಡೆಯಲಿದ್ದು, ಕರ್ನಾಟಕದಲ್ಲಿ ಬೆಳಗಾವಿ, ಬೆಂಗಳೂರು, ಹುಬ್ಬಳ್ಳಿ, ಕಲ ಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಉಡುಪಿಯಲ್ಲಿ ನಡೆಯಲಿದೆ.

ಆಕ್ರೋಶ: ಕಳೆದ ತಿಂಗಳು ಕೇಂದ್ರ ಸರ್ಕಾರಿ ಕಚೇರಿಗಳಲ್ಲಿ ಖಾಲಿ ಉಳಿದಿದ್ದ 20 ಸಾವಿರಕ್ಕೂ ಹೆಚ್ಚು 'ಬಿ' ಮತ್ತು 'ಸಿ' ದರ್ಜೆಯ ಹುದ್ದೆಗಳಿಗೆ ಎಸ್‌ಎಸ್‌ಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ನೇಮಕಾತಿ ಪ್ರಕ್ರಿಯೆಯು ಸಹ ಕೇವಲ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಡೆಯಿತು. ಇದು ಸಹ ಕನ್ನಡಿಗರ ಉದ್ಯೋಗಾವಕಾಶಗಳನ್ನು ಕಸಿಯಿತು. ಈಗ ಮತ್ತೊಮ್ಮೆ ಇದೇ ರೀತಿ ಅನ್ಯಾಯ ನಡೆಯುತ್ತಿದೆ ಎಂದು ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ದೂರಿದ್ದಾರೆ.

ವಾಂತಿ–ಭೇದಿ: ಮತ್ತೆ 15 ಮಂದಿ ಆಸ್ಪತ್ರೆಗೆ

ರಾಮದುರ್ಗ: ತಾಲ್ಲೂಕಿನ ಮುದೇನೂರದಲ್ಲಿ ಕಲುಷಿತ ನೀರು ಸೇವನೆಯಿಂದ ಉಲ್ಬಣಿಸಿದ ವಾಂತಿ–ಭೇದಿ ನಿಯಂತ್ರಣಕ್ಕೆ ಬಂದಿಲ್ಲ. ಶುಕ್ರವಾರ ಮತ್ತೆ 15 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿವಿಧ ಆಸ್ಪತ್ರೆಗಳಲ್ಲಿ ದಾಖಲಾಗಿದ್ದ 94 ಮಂದಿಗೂ ಚಿಕಿತ್ಸೆ ಮುಂದುವರಿದಿದೆ. ಪ್ರಾಣಾಪಾಯ ಇಲ್ಲ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಆರ್.ಎಸ್.ಬಂತಿ ತಿಳಿಸಿದ್ದಾರೆ.

ಎಂಜಿನಿಯರ್, ಪಿಡಿಒ ಅಮಾನತು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಹೊತಪೇಟ ಗ್ರಾಮದಲ್ಲಿ ವಾಂತಿ–ಭೇದಿ ಪ್ರಕರಣ ಸಂಬಂಧ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಕಿರಿಯ ಎಂಜಿನಿಯರ್ ಚನ್ನವೀರಯ್ಯ ಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುನಂದಾ ಅವರನ್ನು ಜಿಲ್ಲಾ ಪಂಚಾಯಿತಿ ಸಿಇಒ ಅಮರೇಶ ನಾಯಕ ಸೇವೆಯಿಂದ ಅಮಾನತುಗೊಳಿಸಿ ಆದೇಶ ನೀಡಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸಂವಾದ
ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ
ಭಾಗವಹಿಸುವವರು:

ಮುರುಗೇಶ ನಿರಾಣಿ
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ಬಿ.ವಿ. ಗೋಪಾಲ ರೆಡ್ಡಿ
ಅಧ್ಯಕ್ಷ, ಎಫ್‌ಕೆಸಿಸಿಐ

ಮಧ್ಯಾಹ್ನ 3.30ರಿಂದ 4ರವರೆಗೆ
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಕನ್ನಡ ಧ್ವನಿ
ನಾಳೆ

ಎಂ.ಡಿ.ಪಲ್ಲವಿ, ಗಾಯಕಿ
ರಾಗ ಭಾವ-ಪಲ್ಲವಿ
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ

ಇನ್‌ಸ್ಪೆಕ್ಟರ್ ಹುದ್ದೆಗೆ ₹80 ಲಕ್ಷ: ಎಂಟಿಬಿ

ಒಂದನೇ ಪುಟದಿಂದ...

ಅಮಾನತುಗೊಂಡಿದ್ದ ಕೆ.ಆರ್.ಪುರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಎಚ್.ಎಲ್. ನಂದೀಶ್ ಹೃದಯಾಘಾತದಿಂದ ಗುರುವಾರ ಮೃತಪಟ್ಟ ಸಂದರ್ಭದಲ್ಲಿ ಅಂತಿಮ ದರ್ಶನ ಪಡೆಯಲು ಬಂದ ಸಚಿವ ಎಂ.ಟಿ.ಬಿ. ನಾಗರಾಜ್, ಬೆಂಗಳೂರು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದ್ದರು. ನಂದೀಶ್ ಅವರನ್ನು ಪಬ್ ವಿಚಾರದಲ್ಲಿ ಅಮಾನತುಗೊಳಿಸಿದ್ದಕ್ಕಾಗಿ ಕಿಡಿಕಾರಿದ್ದರು.

'ತಪ್ಪು ನಡೆದಿದ್ದರೆ ಪೊಲೀಸ್ ಕಮಿಷನರ್ ನೋಟಿಸ್ ನೀಡಬಹುದಿತ್ತು. ಸಣ್ಣ ವಿಷಯಕ್ಕೆ ಅಮಾನತುಗೊಳಿಸಲಾಗಿತ್ತು. ಕಮಿಷನರ್ ಅವರು ದೊಡ್ಡ ಅಪರಾಧ ಮಾಡಿದವರನ್ನೇ ಏನೂ ಮಾಡಿಲ್ಲ. ಲೂಟಿ ಮಾಡುವವರು ಮಾಡುತ್ತಿದ್ದಾರೆ. ಈ ಇನ್‌ಸ್ಪೆಕ್ಟರ್‌ಗೆ ಒಂದು ಅವಕಾಶ ಕೊಡಬೇಕಾಗಿತ್ತು. ಎಚ್ಚರಿಕೆ ನೀಡಬೇಕಾ ಗಿತ್ತು' ಎಂದು ಸಚಿವ ನಾಗರಾಜ್ ಹೇಳಿದ್ದರು.

ಪ್ರಕರಣದ ಹಿನ್ನಲೆ: ಕೆ.ಆರ್. ಪುರ ಠಾಣೆ ವ್ಯಾಪ್ತಿಯಲ್ಲಿದ್ದ ಟಾನಿಕ್ ಬಾರ್ ಆ್ಯಂಡ್ ರೆಸ್ಟೋರೆಂಟ್ ತಡರಾತ್ರಿ ಎರಡು ಗಂಟೆಯವರೆಗೂ ತೆರೆದಿತ್ತು. ಸಿಸಿಬಿ ಅಧಿಕಾರಿಗಳು ದಾಳಿ ಮಾಡಿ, ಮಾಲೀಕರು ಹಾಗೂ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿದ್ದರು. ಅವಧಿ ಮೀರಿ ವಹಿವಾಟು ನಡೆಸುತ್ತಿದ್ದರೂ ಬಾರ್ ಆ್ಯಂಡ್ ರೆಸ್ಟೋರೆಂಟ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಇನ್‌ಸ್ಪೆಕ್ಟರ್ ನಂದೀಶ್ ಅವರನ್ನು ಅಮಾನತುಗೊಳಿಸಲಾಗಿತ್ತು.

'ಸರ್ಕಾರದಿಂದ ನಡೆದಿರುವ ಕಗ್ಗೊಲೆ'

'ಇನ್‌ಸ್ಪೆಕ್ಟರ್ ನಂದೀಶ್ ಅವರ ಸಾವು ಸರ್ಕಾರದಿಂದಲೇ ಆಗಿರುವ ಕಗ್ಗೊಲೆಯೇ ಹೊರತು ಕೇವಲ ಹೃದಯಾಘಾತ ಅಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ದೂರಿದ್ದಾರೆ.

'ನಂದೀಶ್ ಅವರ ಸಾವಿಗೆ ಕಾರಣವಾದ ಅಂಶಗಳ ಬಗ್ಗೆ ಉನ್ನತ ಮಟ್ಟದ ತನಿಖೆ ಮಾಡಬೇಕು. ಈ ಸಾವಿಗೆ ಬಿಜೆಪಿ ಹೈಕಮಾಂಡ್ ಕೃಪಾಕಟಾಕ್ಷ ಇರುವ, ಅದರಲ್ಲೂ ಉತ್ತರ ಭಾರತ ಮೂಲದ ಹಿರಿಯ ಅಧಿಕಾರಿಗಳ ಉದ್ಧಟತನ, ಕಿರುಕುಳ, ಸರ್ಕಾರದ ನಡವಳಿಕೆ, ಕಾಸಿಗಾಗಿ ಹುದ್ದೆ ಕೊಡುತ್ತಿರುವುದೇ ಕಾರಣ' ಎಂದು ದೂರಿದರು.

‘ವಿಶ್ವಮಾನವ’ನ ಕಣ್ತುಂಬಿಕೊಂಡ ಪ್ರೇಕ್ಷಕ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ‘ಗಂಧದ ಗುಡಿ’ಯೊಳಗೆ ಸಂಭ್ರಮದಿಂದ ಪ್ರವೇಶಿಸಿದ ಸಾವಿರಾರು ಪ್ರೇಕ್ಷಕರು ಕಣ್ಣಂಚಿನಲ್ಲಿ ಕಣ್ಣೀರು ತುಂಬಿ ಕೊಂಡೇ ಚಿತ್ರಮಂದಿರದಿಂದ ಹೊರಕ್ಕೆ ಭಾರವಾದ ಹೆಜ್ಜೆ ಹಾಕಿದರು. ‘ಮತ್ತೆ ನಮ್ಮ ಅಪ್ಪುವನ್ನು ಬೆಳ್ಳಿತೆರೆಯಲ್ಲಿ ಕಾಣಲು ಸಾಧ್ಯವಿಲ್ಲವಲ್ಲಾ’ ಎನ್ನುವ ದುಃಖವೇ ಅವರಲ್ಲಿ ಮಡುಗಟ್ಟಿತ್ತು.

ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ ನಿರ್ಮಾಣಗೊಂಡ, ಅಮೋಘವರ್ಷ ನಿರ್ದೇಶನದ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಹೆಜ್ಜೆಹಾಕಿರುವ ಡಾಕ್ಯೂಫಿಲಂ ‘ಗಂಧದಗುಡಿ’ ರಾಜ್ಯದಾದ್ಯಂತ 200ಕ್ಕೂ ಅಧಿಕ ಪರದೆಗಳಲ್ಲಿ ತೆರೆಕಂಡಿತು. ವಿದೇಶಗಳಲ್ಲೂ ನೂರಾರು ಪರದೆಗಳಲ್ಲಿ ಚಿತ್ರ ಬಿಡುಗಡೆಯಾಗಿದೆ. ರಾಜ್ಯದ ಪ್ರಮುಖ ಚಿತ್ರಮಂದಿರಗಳಲ್ಲಿ ಉತ್ಸವದ ರೀತಿ ‘ಗಂಧದಗುಡಿ’ಯನ್ನು ಅಭಿಮಾನಿಗಳು ಬರಮಾಡಿಕೊಂಡರು. ಹಲವೆಡೆ ಸಿಹಿಹಂಚಿ, ಪಟಾಕಿ ಸಿಡಿಸಿ ಅಭಿಮಾನಿಗಳು ಸಂಭ್ರಮಿಸಿದರು. ಪುನೀತ್ ಅವರ ಕಟೌಟ್‌ಗೆ ಹಾಲಿನ ಅಭಿಷೇಕವನ್ನೂ ಮಾಡಿದರು. ಬೆಳಗ್ಗೆ 6ರಿಂದಲೇ ಹಲವು ಚಿತ್ರಮಂದಿರಗಳಲ್ಲಿ ಪ್ರದರ್ಶನ ಆರಂಭವಾಗಿದ್ದ ಕಾರಣ, ಬೆಳಗಿನ ಜಾವವೇ ಅಭಿಮಾನಿಗಳು ಚಿತ್ರಮಂದಿರಗಳ ಮುಂದೆ ಜಮಾಯಿಸಿದ್ದರು.

ನಟ ರಾಘವೇಂದ್ರ ರಾಜ್‌ಕುಮಾರ್ ತಾನೂ ಅಭಿಮಾನಿಯೆಂಬಂತೆ ಜನಗಳ ಜೊತೆಗೂಡಿ ಚಿತ್ರಮಂದಿರದೆದುರು ಡಾನ್ಸ್ ಮಾಡಿದರು. ಚಿತ್ರವನ್ನು ನೋಡಿ ಶಿಳ್ಳೆಯನ್ನೂ ಹೊಡೆದರು.

ಗಂಧದಗುಡಿಯ ಕೊನೆಯ ದೃಶ್ಯದ ತೀವ್ರತೆಗೆ ಇಡೀ ದೊಡ್ಮನೆ ಕುಟುಂಬವೇ ಕಣ್ಣೀರಾಯಿತು. ಚಿತ್ರದ ಅವಧಿ ಕಡಿಮೆಯಾಗಿದ್ದ ಕಾರಣ ಹಲವು ಚಿತ್ರಮಂದಿರಗಳಲ್ಲಿ ಹೆಚ್ಚುವರಿ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು.

ನರ್ತಕಿ ಚಿತ್ರಮಂದಿರದಲ್ಲಿ ಅಭಿಮಾನಿಗಳ ಸಂಭ್ರಮಾಚರಣೆ –ಪ್ರಜಾವಾಣಿ ಚಿತ್ರ

ನರ್ತಕಿ ಚಿತ್ರಮಂದಿರದಲ್ಲಿ ಪುನೀತ್ ಕಟೌಟ್‌ಗೆ ಹಾಲಿನ ಅಭಿಷೇಕ – ಪ್ರಜಾವಾಣಿ ಚಿತ್ರ

ಪ್ರತಿಕ್ರಿಯೆಗಳು

ಶಿವರಾಜ್ ಕುಮಾರ್

‘ಗಂಧದಗುಡಿ’ ಒಂದು ಭಾವನೆ. ಮನಸ್ಸಿಗೆ ತುಂಬಾ ಹತ್ತಿರವಾದ ಸಿನಿಮಾ ಇದು. ಗಂಧದಗುಡಿಯ ಗಂಧ ನಮ್ಮ ಕುಟುಂಬದ ಜೊತೆಗಿದೆ ಎನಿಸುತ್ತಿದೆ. ಈ ಚಿತ್ರವನ್ನು ನೋಡುವುದಷ್ಟೇ ಅಲ್ಲ, ಅರಿತುಕೊಳ್ಳ ಬೇಕು. ಈ ಚಿತ್ರದ ಮೂಲಕ ಅಪ್ಪು ಉಸಿರು ಹೆಚ್ಚಿದೆ.

–ಶಿವರಾಜ್‌ಕುಮಾರ್, ನಟ

ರಾಘವೇಂದ್ರ ರಾಜ್‌ಕುಮಾರ್

ನಾವು ಮಾಡಿರುವುದು ಯಾವುದೂ ಸಿನಿಮಾ ಅಲ್ಲ. ಇದೇ ನಿಜವಾದ ಸಿನಿಮಾ. ಪವರ್‌ಸ್ಟಾರ್ ಎಂಬ ಪಟ್ಟ ಬದಿಗಿಟ್ಟು ಇಲ್ಲಿ ಅಪ್ಪು ಕಾಣಿಸಿಕೊಂಡ. ನಾಳೆ ನಾವು ಯಾರೂ ಉಳಿಯುವುದಿಲ್ಲ. ಈ ಸಿನಿಮಾ ಉಳಿಯುತ್ತದೆ. ಅಪ್ಪು ಉಳಿಯುತ್ತಾನೆ.

–ರಾಘವೇಂದ್ರ ರಾಜ್‌ಕುಮಾರ್, ನಟ

ಸುಧಾಮೂರ್ತಿ

ಸಿನಿಮಾ ನೋಡಿ ಸಂತೋಷವಾಗಿದೆ. ಜೊತೆಗೆ ಗರ್ವವೂ ಇದೆ. ಇದನ್ನು ನಿರ್ಮಾಣ ಮಾಡಿದ ಅಶ್ವಿನಿಗೆ ಧನ್ಯವಾದ. ಪ್ರಕೃತಿಯ ಜೊತೆಗೆ ಮಾನವನ ಸಹಜೀವನ ಇಲ್ಲಿದೆ. ಕೊನೆಯ ದೃಶ್ಯದಲ್ಲಿ ಪುನೀತ್ ಅವರ ಪ್ರತಿಬಿಂಬ ನೋಡಿ ಕಣ್ಣೀರು ಬಂತು. ಇದು ಪುನೀತ್ ಅವರ ಅತ್ಯುತ್ತಮ ಕೊಡುಗೆ.

–ಸುಧಾಮೂರ್ತಿ, ಲೇಖಕಿ

ಸಂತೋಷ್ ಆನಂದರಾಮ್

ಗಂಧದ ಗುಡಿ ಮೂಲಕ ನೀವು ಬಿಟ್ಟುಹೋಗಿರುವ ನೆನಪು, ನೀವು ಕೊಟ್ಟು ಹೋಗಿರುವ ಬೆಳಕು ನಮ್ಮ ಮನೆ ಮನಗಳನ್ನು ಬೆಳಗುವಂತದ್ದು. ನಿಮ್ಮನ್ನು ಒಮ್ಮೆ ಅಪ್ಪಿಕೊಳ್ಳುವ ಆಸೆ ಯಾಗುತ್ತಿದೆ. ಇದು ನನ್ನೊಬ್ಬನ ಆಸೆ ಅಲ್ಲ ಎಲ್ಲ ಕನ್ನಡಿಗರದ್ದು. ಮುಂದಿನ ನಿಮ್ಮ ಜನ್ಮ ಬರೆದಿಟ್ಟಾಯ್ತು ಬ್ರಹ್ಮ ಇಲ್ಲಿಯೇ ಇಲ್ಲಿಯೇ.

–ಸಂತೋಷ್ ಆನಂದರಾಮ್, ನಿರ್ದೇಶಕ

ಚೇತನ್ ಕುಮಾರ್

‘ಗಂಧದ ಗುಡಿ’ ಒಂದು ಅದ್ಭುತ ಅನುಭವ. ‘ಅಪ್ಪು’ ಅವರೊಳಗಿನ ನಿಜವಾದ ನಾಯಕನ ದರ್ಶನ, ವಿಶ್ವಮಾನವನ ದಿಗ್ದರ್ಶನ, ಶ್ರೇಷ್ಠತೆಯ ನಿದರ್ಶನ. ವಿಶ್ವಕ್ಕೆ ಸಂದೇಶವನ್ನು ಹೊತ್ತು ಬಂದ ದೇವಮಾನವರಂತೆ ಅಪ್ಪು ಕಾಣುತ್ತಾರೆ. ಕಾಡುಮೇಡು ಸುತ್ತಾಡಿ ನಮ್ಮ ದೇವರು ಗಂಧದಗುಡಿಯಲ್ಲಿ ಇದ್ದಾರೆ.

–ಚೇತನ್ ಕುಮಾರ್, ನಿರ್ದೇಶಕ

ಸುದ್ದಿ 2 ನಿಮಿಷ

ಓಲಾ ಉಬರ್: ಸಭೆ ಇಂದು

ಬೆಂಗಳೂರು: ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆಯಲ್ಲಿ ಆಟೊ ರಿಕ್ಷಾಗಳ ಸೇವೆಯನ್ನು ಅಧಿಕೃತಗೊಳಿಸಲು ಸಿದ್ಧತೆ ನಡೆಸಿರುವ ಸಾರಿಗೆ ಇಲಾಖೆ, ದರ ನಿಗದಿ ಬಗ್ಗೆ ಶನಿವಾರ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಈ ವಿಷಯದಲ್ಲಿ ನಿರ್ಧಾರ ಕೈಗೊಂಡು ಹೈಕೋರ್ಟ್‌ಗೆ ಸಾರಿಗೆ ಇಲಾಖೆ ನ.7ರಂದು ವರದಿ ಸಲ್ಲಿಸಬೇಕಿದೆ. ‘ನ್ಯಾಯಾಲಯಕ್ಕೆ ವಿವರಣೆ ಸಲ್ಲಿಸಬೇಕಿದ್ದು, ಸಾರಿಗೆ ಇಲಾಖೆ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಭೆ ನಡೆಸಲಾಗುವುದು. ಆ್ಯಪ್ ಆಧಾರಿತ ಕಂಪನಿಗಳು, ಆಟೊ ಚಾಲಕರ ಸಂಘದವರು ಸಭೆ ಯಲ್ಲಿ ಭಾಗವಹಿಸಲಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಇಂದು ವಸ್ತು ಪ್ರದರ್ಶನ

ಬೆಂಗಳೂರು: ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜೀವನ ಹಾಗೂ ಕೊಡುಗೆಗಳನ್ನು ಸ್ಮರಿಸುವ ‘ಸರ್ದಾರ್ ಪಟೇಲ್- ಏಕೀಕರಣದ ಶಿಲ್ಪಿ’ ಎನ್ನುವ ವಿಷಯ ಕುರಿತ ವಸ್ತುಪ್ರದರ್ಶನದ ಉದ್ಘಾಟನೆಯನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅ. 29ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಸ್ತು ಸಂಗ್ರಹಾಲಯದಲ್ಲಿ ನಡೆಯಲಿರುವ ಈ ವಸ್ತುಪ್ರದರ್ಶನದ ಉದ್ಘಾಟನೆಯನ್ನು ಗಾಂಧಿವಾದಿ ವೇಮಗಲ್ ಸೋಮಶೇಖರ್ ಅವರು ನೆರವೇರಿಸಲಿದ್ದಾರೆ. ವಸ್ತು ಪ್ರದರ್ಶನದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜೀವನದ ವಿವಿಧ ಮಜಲುಗಳನ್ನು ಪರಿಚಯಿಸುವ ಛಾಯಾಚಿತ್ರಗಳು ಹಾಗೂ ರಾಷ್ಟ್ರದ ಏಕೀಕರಣಕ್ಕಾಗಿ ಅವರು ನೀಡಿದ ಕೊಡುಗೆಗಳನ್ನು ಒಳಗೊಂಡ ವಿಡಿಯೊ ಪ್ರದರ್ಶನ ಮಾಡಲಾಗುವುದು. ಇದರೊಂದಿಗೆ ದೇಶದ ಏಕತೆ ಹಾಗೂ ಸಮಗ್ರತೆಯನ್ನು ಬಿಂಬಿಸುವ ದೇಶ ಭಕ್ತಿಗೀತೆಗಳನ್ನು ಪ್ರಸ್ತುತ ಪಡಿಸಲಾಗುವುದು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲದೆ ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಮಠಾಧೀಶೆಯ ಖಾಸಗಿ ವಿಡಿಯೊ ಬಹಿರಂಗ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಮಠಾಧೀಶೆಯೊಬ್ಬರು ವ್ಯಕ್ತಿಯೊಬ್ಬರ ಜೊತೆ ಇರುವ ಖಾಸಗಿ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡತೊಡಗಿದೆ. ವಿಡಿಯೊದಲ್ಲಿರುವ ವ್ಯಕ್ತಿ ತಾಲ್ಲೂಕು ಪಂಚಾಯ್ತಿಯ ಮಾಜಿ ಸದಸ್ಯ ಎನ್ನಲಾಗಿದೆ.

ವಿಡಿಯೊ ಬಹಿರಂಗವಾಗುತ್ತಿದ್ದಂತೆ ಇಬ್ಬರೂ ತಮ್ಮ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿದ್ದು, ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ತಿಳಿದು ಬಂದಿದೆ. ಈ ಸಂಬಂಧ ಇದುವರೆಗೆ ಯಾವುದೇ ದೂರು ದಾಖಲಾಗಿಲ್ಲ. ಮಠಾಧೀಶೆ ಮತ್ತು ರಾಜಕಾರಣಿ ಸರಸಸಲ್ಲಾಪದ ವಿಡಿಯೊ ಮಾಡಿ ಹರಿಬಿಟ್ಟಿರುವುದು ಭಾರಿ ಚರ್ಚೆಗೆ ಕಾರಣವಾಗಿದೆ.

ಕ್ರಿಕೆಟ್: ಬೆಟ್ಟಿಂಗ್ ಕಾವು ಜೋರು

ಟ್ವೆಂಟಿ20 ವಿಶ್ವಕಪ್: ಪೊಲೀಸರಿಂದ 18 ಬುಕ್ಕಿಗಳ ಬಂಧನ

● ಆದಿತ್ಯ ಕೆ.ಎ.

ಬೆಂಗಳೂರು: ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಕಾವು ಪಂದ್ಯದಿಂದ ಪಂದ್ಯಕ್ಕೆ ಜೋರಾಗುತ್ತಿದ್ದು, ಅದರ ಜೊತೆಗೆ ರಾಜ್ಯದಲ್ಲಿ ಬೆಟ್ಟಿಂಗ್ ಭರಾಟೆಯೂ ಸದ್ದು ಮಾಡುತ್ತಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ನಡೆಯುತ್ತಿರುವ ಬೆಟ್ಟಿಂಗ್‌ನಲ್ಲಿ ಲಕ್ಷದಿಂದ ಕೋಟಿಯ ತನಕ ಹಣ ಬದಲಾವಣೆ ಆಗುತ್ತಿದೆ. ಪಂದ್ಯಗಳು ರೋಚಕವಾದಷ್ಟೂ ದೊಡ್ಡ ಮೊತ್ತದ ಹಣವು ವರ್ಗಾವಣೆ ಆಗುತ್ತಿರುವುದು ಪೊಲೀಸ್ ತನಿಖೆಯಿಂದ ತಿಳಿದುಬಂದಿದೆ.

ಭಾರತ, ಪಾಕಿಸ್ತಾನದ ನಡುವೆ ನಡೆದ ಪಂದ್ಯದ ವೇಳೆ ಕೋಟ್ಯಂತರ ರೂಪಾಯಿ ಬೆಟ್ಟಿಂಗ್ ನಡೆದಿರುವುದು ಬೆಳಕಿಗೆ ಬಂದಿದೆ. ಪಾಕಿಸ್ತಾನ ತಂಡಕ್ಕೆ ಜಿಂಬಾಬ್ವೆ ತಂಡವು ಆಘಾತ ನೀಡಿದ್ದು, ಪಂದ್ಯವು ಕೊನೆಯ ಬಾಲ್ ತನಕ ರೋಚಕತೆ ಉಳಿಸಿಕೊಂಡಿತ್ತು. ಈ ಪಂದ್ಯದಲ್ಲೂ ದೊಡ್ಡಮಟ್ಟದಲ್ಲಿ ಬೆಟ್ಟಿಂಗ್ ನಡೆದಿದೆ. ಪೊಲೀಸರು ಬೆಟ್ಟಿಂಗ್ ದಂಧೆ ನಡೆಸುವವರ ಬೆನ್ನುಹತ್ತಿದ್ದಾರೆ.

ರಾಜಧಾನಿ ಬೆಂಗಳೂರಿನ ಪಶ್ಚಿಮ ವಿಭಾಗದಲ್ಲಿ ಹೆಚ್ಚು ಬೆಟ್ಟಿಂಗ್ ಪ್ರಕರಣಗಳು ಪತ್ತೆಯಾಗಿವೆ. ಬೆಟ್ಟಿಂಗ್ ಅಡ್ಡೆಗಳ ಮೇಲೆ ದಾಳಿ ನಡೆಸಿರುವ ಪೊಲೀಸರು, 18 ಆರೋಪಿಗಳನ್ನು ಬಂಧಿಸಿದ್ದಾರೆ. ಅವರಿಂದ ₹ 4.68 ಲಕ್ಷ ವಶ ಪಡಿಸಿಕೊಂಡಿದ್ದಾರೆ.

ಪ್ರಜಾವಾಣಿ ವಿಶೇಷ

ಬಂಧಿತ ಆರೋಪಿಗಳು

ಸುರೇಶ್ (34), ಸಿ.ಆರ್.ರಾಜೇಶ್ (28), ಮಹಮ್ಮದ್ ಸಲ್ಲಾವುದ್ದೀನ್ (46), ಯೋಗೇಶ್ (28), ಅಮರನಾಥ್ (42), ಮಹೇಂದ್ರ (30), ಸುನಿಲ್ ಕುಮಾರ್ (30), ಮಂಜುನಾಥ್ (30), ರಂಜಿತ್ (27), ಎಸ್. ಹೇಮಂತ್ (40), ಮಾದಪ್ಪ (30) ವಿನೋದ್ 25), ವಸೀಂ ಅಕ್ರಂ (26) ಹಾಗೂ ಗಂಗಾಧರ್ ಬಂಧಿತರು.

ಕ್ರಿಕೆಟ್ ಬೆಟ್ಟಿಂಗ್ ನಡೆಸುವ ಅಡ್ಡೆಗಳ ಮೇಲೆ ವಿಶೇಷ ತಂಡಗಳಿಂದ ದಾಳಿ ಮುಂದುವರಿಸಲಾಗಿದೆ. ಬುಕ್ಕಿಗಳಿಂದ 17 ಮೊಬೈಲ್ ವಶಕ್ಕೆ ಪಡೆಯಲಾಗಿದೆ

ಲಕ್ಷ್ಮಣ ನಿಂಬರಗಿ, ಡಿಸಿಪಿ, ಪಶ್ಚಿಮ ವಿಭಾಗ

‘ಬಸವೇಶ್ವರ ನಗರ, ಬ್ಯಾಟರಾಯನಪುರ, ಚಂದ್ರಾಲೇಔಟ್, ಸಿಟಿ ಮಾರುಕಟ್ಟೆ, ಗೋವಿಂದರಾಜ ನಗರ, ಕಾಮಾಕ್ಷಿಪಾಳ್ಯ, ಮಾಗಡಿ, ರಾಜರಾಜೇಶ್ವರಿ ನಗರ, ಉಪ್ಪಾರಪೇಟೆ, ವಿಜಯನಗರ ವ್ಯಾಪ್ತಿಯ ಅಡ್ಡೆಗಳಲ್ಲಿ ಬೆಟ್ಟಿಂಗ್ ನಡೆಸುತ್ತಿದ್ದ ಬುಕ್ಕಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಸತಿ ಗೃಹಗಳ ಮೇಲೆ ಪೊಲೀಸ್ ಕಣ್ಣು: ಪಂದ್ಯಗಳು ನಡೆಯುವ ಸಮಯದಲ್ಲಿ ಲಾಡ್ಜ್‌ಗಳಲ್ಲಿ ಬುಕ್ಕಿಗಳು ಉಳಿದುಕೊಂಡು ಬೆಟ್ಟಿಂಗ್ ನಡೆಸುತ್ತಾರೆ. ಇಂತಹ ಲಾಡ್ಜ್‌ಗಳ ಮೇಲೆ ಪೊಲೀಸರು ಕಣ್ಣಿಟ್ಟಿದ್ದು ದಿಢೀರ್ ದಾಳಿ ನಡೆಸುತ್ತಿದ್ದಾರೆ.

ಬೆಟ್ಟಿಂಗ್ ಕಟ್ಟುವ ಕ್ರಿಕೆಟ್ ಪ್ರೇಮಿಗಳನ್ನು ಆ್ಯಪ್, ವಾಟ್ಸ್‌ಆ್ಯಪ್, ಮೊಬೈಲ್ ಮೂಲಕ ಸಂಪರ್ಕಿಸಿ ಗೂಗಲ್ ಪೇ, ಫೋನ್ ಪೇ ಮೂಲಕ ಬುಕ್ಕಿಗಳು ಹಣ ಪಡೆಯುತ್ತಿದ್ದಾರೆ. ಈ ಹಣವು ಒಬ್ಬರಿಂದ ಮತ್ತೊಬ್ಬರಿಗೆ ಬದಲಾವಣೆ ಆಗುತ್ತಿದೆ. ಗಾಂಧಿನಗರ, ಶಿವಾಜಿನಗರ, ಉಪ್ಪಾರಪೇಟೆ, ಚಿಕ್ಕಪೇಟೆ ವ್ಯಾಪ್ತಿಯ ವಸತಿಗೃಹಗಳ ಮೇಲೆ ಪೊಲೀಸರು ದಾಳಿ ನಡೆಸುತ್ತಿದ್ದು, ದಂಧೆಕೋರರು ಸಿಕ್ಕಿಬಿದ್ದಿದ್ದಾರೆ. ಸಿಕ್ಕಿಬಿದ್ದವರಲ್ಲಿ ಯುವಕರೇ ಹೆಚ್ಚು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರ್ಥಿಕ ಸಂಕಷ್ಟ: ಮನೆಯಲ್ಲಿದ್ದ ಚಿನ್ನಾಭರಣ ಮಾರಾಟ ಮಾಡಿ, ಕ್ರಿಕೆಟ್ ಪ್ರೇಮಿಗಳು ಬೆಟ್ಟಿಂಗ್ ಆಡುತ್ತಿದ್ದಾರೆ. ಸ್ನೇಹಿತರಿಂದ ಸಾಲ ಪಡೆದು ಬೆಟ್ಟಿಂಗ್‌ಗೆ ಹಣ ವಿನಿಯೋಗಿಸಿದ್ದಾರೆ. ಇದರಿಂದ ಯುವಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ವಿಚಾರಣೆಯ ವೇಳೆ ಬೆಳಕಿಗೆ ಬಂದಿದೆ. ಬೆಟ್ಟಿಂಗ್ ಗೀಳಿನ ಯುವಕರ ಕುಟುಂಬಗಳೂ ಸಂಕಷ್ಟಕ್ಕೆ ಸಿಲುಕುತ್ತಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪಂದ್ಯದ ಗೆಲುವು, ಸೋಲಿನ ಮೇಲೆ ಮಾತ್ರವಲ್ಲದೇ ಪ್ರತಿ ಬಾಲಿನ ಮೇಲೆ ಬೆಟ್ಟಿಂಗ್ ಕಟ್ಟಲಾಗುತ್ತಿದೆ. ಆಟಗಾರನ ವೈಯಕ್ತಿಕ ಸ್ಕೋರ್, ವಿಕೆಟ್, ಸಿಕ್ಸರ್ ಹಾಗೂ ಬೌಂಡರಿಗಳ ಮೇಲೂ ಬೆಟ್ಟಿಂಗ್ ನಡೆಯುತ್ತಿದೆ. ಗೆದ್ದವರಿಗೆ ದುಪ್ಪಟ್ಟು ಹಣ ಸಿಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಹೆಡ್‌ಬುಷ್’ ಪ್ರಚಾರ: ಐವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಡಾಲಿ ಧನಂಜಯ್ ಅಭಿನಯದ ‘ಹೆಡ್ ಬುಷ್’ ಸಿನಿಮಾ ಪ್ರಚಾರಕ್ಕೆಂದು ಅಕ್ರಮವಾಗಿ ಗುಂಪು ಸೇರಿ ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡಿದ್ದ ಆರೋಪದಡಿ ಐವರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕರ್ತವ್ಯದಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಶಿವಕುಮಾರ್ ನೀಡಿರುವ ದೂರು ಆಧರಿಸಿ ಐವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ವಿಧಾನಸೌಧ ಮೆಟ್ರೊ ನಿಲ್ದಾಣದ ಮುಂಭಾಗ ಹಾಗೂ ದೇವರಾಜ್ ಅರಸು ರಸ್ತೆಯಲ್ಲಿ ಅಕ್ರಮವಾಗಿ ಸೇರಿದ್ದ ಆರೋಪಿಗಳು, ಹೆಡ್‌ಬುಷ್ ಸಿನಿಮಾ ಪೋಸ್ಟರ್ ಪ್ರದರ್ಶಿಸಿ ಜೋರಾಗಿ ಘೋಷಣೆ ಕೂಗುತ್ತಿದ್ದರು. ಸಿನಿಮಾ ಪೋಸ್ಟರ್ ಅಂಟಿಸಿದ್ದ ಬೈಕ್ ಹಾಗೂ ಕಾರುಗಳನ್ನು ರಸ್ತೆಯಲ್ಲಿ ನಿಲ್ಲಿಸಿದ್ದರು. ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದರು. ನಂತರ, ಕೆ.ಆರ್. ವೃತ್ತದ ರಸ್ತೆಯಲ್ಲೂ ಆರೋಪಿಗಳು ಸಂಚರಿಸಿದ್ದರು.’

‘ಕರ್ತವ್ಯದಲ್ಲಿದ್ದ ಸಿಬ್ಬಂದಿ ಆರೋಪಿಗಳ ವರ್ತನೆಯನ್ನು ಪ್ರಶ್ನಿಸಿದ್ದರು. ಅವರ ವಿರುದ್ಧವೂ ಆರೋಪಿಗಳು ಹರಿಹಾಯ್ದಿದ್ದರು’ ಎಂದು ತಿಳಿಸಿದರು.

ಕೈದಿಗಳಿಗೆ ನೀಡಲು ಯತ್ನ: ಜೈಲಿನ ಪ್ರವೇಶ ದ್ವಾರದಲ್ಲಿ ಸಿಕ್ಕಿಬಿದ್ದ ಆರೋಪಿಗಳು

ಟೂತ್‌ಪೇಸ್ಟ್, ಪ್ಯಾಂಟ್ ಸ್ಟಿಕರ್‌ನಲ್ಲಿ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸಿಬ್ಬಂದಿ ಕಣ್ತಪ್ಪಿಸಿ ಕೈದಿಗಳಿಗೆ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಆರೋಪದಡಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕುರುಬರಹಳ್ಳಿ ಜೆ.ಸಿ.ನಗರದ ಪಿ.ರುದ್ರೇಶ್, ಮುನಿಸ್ವಾಮಿಯಪ್ಪ ಲೇಔಟ್‌ನ ಪಿ. ಪ್ರಶಾಂತ್, ಎಸ್. ಉಮಾಶಂಕರ್, ಮಂಜುನಾಥ್ ನಗರದ ವಿಜಯ್ ಹಾಗೂ ಸುಜಾತಾ ಬಂಧಿತರು. ಇವರೆಲ್ಲ, ಟೂತ್‌ಪೇಸ್ಟ್ ಟ್ಯೂಬ್ ಹಾಗೂ ಪ್ಯಾಂಟ್ ಸ್ಟಿಕರ್‌ಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಕೈದಿಗಳಿಗೆ ನೀಡಲು ಬಂದಿದ್ದರು. ಪ್ರವೇಶ ದ್ವಾರದಲ್ಲಿ ಪರಿಶೀಲನೆ ನಡೆಸಿದಾಗ ಸಿಕ್ಕಿಬಿದ್ದರು’ ಎಂದು ಜೈಲಿನ ಮೂಲಗಳು ಹೇಳಿವೆ.

‘ಡ್ರಗ್ಸ್ ಸಮೇತ ಆರೋಪಿಗಳನ್ನು ವಶಕ್ಕೆ ಪಡೆದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರಿಗೆ ಒಪ್ಪಿಸಲಾಗಿದೆ. ಐವರನ್ನೂ ಬಂಧಿಸಿರುವ ಪೊಲೀಸರು, ಡ್ರಗ್ಸ್ ಎಲ್ಲಿಂದ ತಂದಿದ್ದರೆಂಬುದನ್ನು ತಿಳಿಯಲು ತನಿಖೆ ಮುಂದುವರಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಡಾಬರ್ ರೆಡ್ ಟ್ಯೂಬ್‌ನಲ್ಲಿ ಹಶೀಷ್: ‘ಜೈಲಿನಲ್ಲಿರುವ ವಿಚಾರಣಾಧೀನ ಕೈದಿ ಎನ್. ಕಿರಣ್ ಅಲಿಯಾಸ್ ಕರಿಯನನ್ನು ಮಾತನಾಡಿಸಲೆಂದು ಅ. 20ರಂದು ಆರೋಪಿ ರುದ್ರೇಶ್ ಬಂದಿದ್ದ. ಮಾತುಕತೆ ವೇಳೆಯೇ ಕೈದಿಯ ಕೈಗೆ ಡಾಬರ್ ರೆಡ್ ಟೂತ್ ಪೇಸ್ಟ್ ಟ್ಯೂಬ್ ನೀಡಿದ್ದ’ ಎಂದು ಜೈಲಿನ ಮೂಲಗಳು ಹೇಳಿವೆ.

‘ಕರ್ತವ್ಯದಲ್ಲಿದ್ದ ಸಿಬ್ಬಂದಿಗೆ ಅನುಮಾನ ಬಂದಿತ್ತು. ಪೇಸ್ಟ್ ಟ್ಯೂಬ್ ಮುರಿದು ನೋಡಿದಾಗ, 50 ಗ್ರಾಂ ಹಶೀಷ್ ಡ್ರಗ್ಸ್ ಪತ್ತೆಯಾಯಿತು’ ಎಂದು ಮೂಲಗಳು ತಿಳಿಸಿವೆ.

‘ಇನ್ನೊಬ್ಬ ವಿಚಾರಣಾಧೀನ ಕೈದಿ ಶ್ರೀನಿವಾಸ್ ಅಲಿಯಾಸ್ ಚಿಕ್ಕಕಾಟುನನ್ನು ನೋಡಲು ಆರೋಪಿಗಳಾದ ಪಿ. ಪ್ರಶಾಂತ್ ಹಾಗೂ ಎಸ್. ಉಮಾಶಂಕರ್ ಅ. 20ರಂದು ಮಧ್ಯಾಹ್ನ ಜೈಲಿಗೆ ಬಂದಿದ್ದರು. ಅವರು ಸಹ ಕೈದಿಗೆ 2 ಬೆಡ್ ಶೀಟ್ ಹಾಗೂ ಡಾಬರ್ ರೆಡ್ ಟೂಥ್ ಪೇಸ್ಟ್ ಟ್ಯೂಬ್ ನೀಡಿದ್ದರು. ಈ ಟ್ಯೂಬ್‌ನಲ್ಲೂ 40 ಗ್ರಾಂ ಹಶೀಷ್ ಸಿಕ್ಕಿತು’ ಎಂದು ಜೈಲಿನ ಮೂಲಗಳು ಹೇಳಿವೆ.

ಪ್ಯಾಂಟ್ ಸ್ಟಿಕರ್‌ನಲ್ಲಿ ಡ್ರಗ್ಸ್: ‘ವಿಚಾರಣಾಧೀನ ಕೈದಿ ನವೀನ್‌ಕುಮಾರ್‌ನನ್ನು ನೋಡಲು ಅ. 25ರಂದು ಸಂಜೆ ವಿಜಯ ಹಾಗೂ ಸುಜಾತಾ ಬಂದಿದ್ದರು. ಸಿಬ್ಬಂದಿ ಕಣ್ತಪ್ಪಿಸಿ ಕೈದಿಗೆ ಪ್ಯಾಂಟ್ ನೀಡಿದ್ದರು. ಅದನ್ನು ನೋಡಿದ್ದ ಸಿಬ್ಬಂದಿ, ಪರಿಶೀಲನೆ ನಡೆಸಿದ್ದರು. ಪ್ಯಾಂಟ್‌ನ ಹಿಂಬದಿಯಲ್ಲಿದ್ದ ಸ್ಟಿಕರ್ ಒಳಗಿನ ಚಿಕ್ಕ ಪಾಕೆಟ್‌ನಲ್ಲಿ 5 ಗ್ರಾಂ ಎಂಡಿಎಂಎ ಡ್ರಗ್ಸ್ ಪತ್ತೆಯಾಯಿತು’ ಎಂದು ಜೈಲಿನ ಮೂಲಗಳು ತಿಳಿಸಿವೆ.

ಪೊಲೀಸರು, ‘ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಆರೋಪದಡಿ ಕೈದಿಗಳ ಸಮೇತ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಜಪ್ತಿ ಮಾಡಿರುವ ಡ್ರಗ್ಸ್ ಮೌಲ್ಯದ ಲಕ್ಷಕ್ಕೂ ಹೆಚ್ಚಿದೆ’ ಎಂದರು.

ಅಪರಾಧ ಸುದ್ದಿ

ಡ್ರಗ್ಸ್ ಮಾರಾಟ: ವಿದ್ಯಾರ್ಥಿ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಿಗೆ ಡ್ರಗ್ಸ್ (ಮಾದಕ ವಸ್ತು) ಮಾರಾಟ ಮಾಡುತ್ತಿದ್ದ ಆರೋಪದಲ್ಲಿ ಬಂಧನಕ್ಕೊಳಗಾಗಿರುವ ಕೇರಳದ 24 ವರ್ಷದ ವಿದ್ಯಾರ್ಥಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಜಾಮೀನು ಕೋರಿ ತಿರುವನಂತಪುರಂನ ಶ್ರೀಜಿತ್ ಎಂಬುವವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ‘ಅರ್ಜಿದಾರನ ಬಳಿ ದೊರೆತ ಮಾದಕ ವಸ್ತು ಪ್ರಮಾಣ ಕಡಿಮೆ ಎಂಬುದು ಸತ್ಯ. ಆದರೆ, ಪ್ರಕರಣದ ಮತ್ತೊಬ್ಬ ಆರೋಪಿಯ ಬಳಿ 50 ಗ್ರಾಂ ಎಂಡಿಎಂಎ ದೊರೆತಿದೆ. ಅದು ವಾಣಿಜ್ಯ ಬಳಕೆಯ ಪ್ರಮಾಣವನ್ನು ಮೀರಿದ್ದಾಗಿದೆ. ಅರ್ಜಿದಾರನ ಮೇಲಿನ ಆರೋಪಗಳಿಗೆ ಇನ್ನೂ 20 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲು ಅವಕಾಶವಿದೆ. ಹಾಗಾಗಿ, ಇದು ಜಾಮೀನು ನೀಡಲು ಅರ್ಹವಾದ ಪ್ರಕರಣವಲ್ಲ’ ಎಂದು ತಿಳಿಸಿ ಅರ್ಜಿ ವಜಾಗೊಳಿಸಿದೆ.

ನಗರದ ತಮ್ಮೇನಹಳ್ಳಿ ಸಬ್ ವೇ ಬಳಿ 2022ರ ಜೂನ್ 29ರಂದು ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವೇಳೆ ಅರ್ಜಿದಾರ ಹಾಗೂ ಮತ್ತೊಬ್ಬ ವ್ಯಕ್ತಿಯನ್ನು ಮಾದನಾಯಕನ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದರು.



ಪ್ರಶಸ್ತಿ ಪ್ರದಾನ

ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಅಜಿತ್ ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ (ಎಡದಿಂದ ಕುಳಿತವರು) ಎಂ.ಜಿ. ವೆಂಕಟರಾಘವನ್ (ನಾಟ್ಯಶ್ರೀ ಪ್ರಶಸ್ತಿ), ಕೆ.ರಾಘವೇಂದ್ರ ಪೈ (ಯೋಗಶ್ರೀ ಪ್ರಶಸ್ತಿ), ಮೋಹನ್ ಅಗಾಶೆ (2022ನೇ ಸಾಲಿನ ಜೀವಮಾನ ಸಾಧನೆಗೆ ರಾಷ್ಟ್ರೀಯ ಅಜಿತಶ್ರೀ ಪ್ರಶಸ್ತಿ), ಶ್ರೀಕಂಠೇಶ್ (ನಾಟ್ಯಶ್ರೀ ಪ್ರಶಸ್ತಿ) ಮತ್ತು ಉಲ್ಲಾಳ ಮೋಹನ್ ಕುಮಾರ್ (ನಾಟ್ಯಾಶ್ರೀ ಪ್ರಶಸ್ತಿ) ಅವರಿಗೆ ನೀಡಿ ಗೌರವಿಸಲಾಯಿತು. ರಂಗ ನಿರ್ದೇಶಕ ರಾಜಾರಾಮ್, ಶಿಕ್ಷಣ ತಜ್ಞ ಗುರುರಾಜ ಕರಜಗಿ, ಅಜಿತ್ ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಬಿ.ಎಲ್.ಶಂಕರ್, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಮತ್ತು ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಇದ್ದಾರೆ

-ಪ್ರಜಾವಾಣಿ ಚಿತ್ರ

₹ 98 ಲಕ್ಷದ ಚಿನ್ನಾಭರಣ ವಶ

ಬೆಂಗಳೂರು: ಸಿಸಿಬಿ ಪೊಲೀಸರು ಎರಡು ಪ್ರತ್ಯೇಕ ಪ್ರಕರಣ ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ ₹ 98 ಲಕ್ಷ ಮೌಲ್ಯದ 1 ಕೆ.ಜಿ 985 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಮೊಹಮ್ಮದ್ ಸದ್ದಾಂ (36), ಸೈಯದ್ ತಬ್ರೇಜ್ ಪಾಷಾ (32), ಆಬೀದ್ ಆಜಂ (31) ಹಾಗೂ ರಾಜಸ್ಥಾನ ರಂಜಿತ್ ಸಿಂಗ್ (42) ಬಂಧಿತ ಆರೋಪಿಗಳು.

ಈ ಆರೋಪಿಗಳು ಒಟ್ಟು 12 ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂದು ತನಿಖೆ ವೇಳೆ ದೃಢಪಟ್ಟಿದೆ.

ಆರೋಪಿಗಳಾದ ಸೈಯದ್ ತಬ್ರೇಜ್ ಪಾಷಾ, ಆಬೀದ್ ಆಜಂ, ಮಹಮ್ಮದ್ ಸದ್ದಾಂ 6 ವರ್ಷಗಳಿಂದ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಗಲು ವೇಳೆ ಬೀಗ ಹಾಕಿದ ಮನೆ ಗುರುತಿಸಿ ಬಾಗಿಲು ಮುರಿದು ಮೌಲ್ಯಯುತ ವಸ್ತುಗಳನ್ನು ಕಳವು ಮಾಡಿ ಪರಾರಿಯಾಗುತ್ತಿದ್ದರು. ಸಿಟಿ ಮಾರುಕಟ್ಟೆ, ಡಿಜೆ ಹಳ್ಳಿ, ಹಾಸನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಗಳವು ನಡೆಸಿ ಜೈಲಿಗೆ ಹೋಗಿದ್ದರು. ಜೈಲಿನಿಂದ ಹೊರಬಂದ ನಂತರವೂ ಮತ್ತೆ ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂದು ಸಿಸಿಬಿ ಪೊಲೀಸ್ ಮೂಲಗಳು ತಿಳಿಸಿವೆ.

ಇನ್ನೊಂದು ಪ್ರಕರಣದಲ್ಲಿ ಬಂಧಿತ ರಂಜಿತ್ ಸಿಂಗ್ ಚಿನ್ನದ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಮಾಲೀಕರ ಗಮನಕ್ಕೆ ಬಾರದಂತೆ ಅಂಗಡಿಯಲ್ಲಿ ಚಿನ್ನ ಕಳವು ಮಾಡುತ್ತಿದ್ದ. ಕಳವು ಮಾಡಿದ ಚಿನ್ನಾಭರಣವನ್ನು ರಾಜಸ್ತಾನಕ್ಕೆ ಸಾಗಿಸಿ ಅಲ್ಲಿನ ಚಿನ್ನಾಭರಣ ಅಂಗಡಿಗೆ ಮಾರಾಟ ಮಾಡಿದ್ದ. ಪೊಲೀಸರು ಹುಡುಕಾಟ ಆರಂಭಿಸಿರುವುದನ್ನು ತಿಳಿದು ಅಲ್ಲಿಯೇ ತಲೆಮರೆಸಿಕೊಂಡಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾಮಾಕ್ಷಿ ಪಾಳ್ಯದಲ್ಲಿ ಮೊದಲು ಪ್ರಕರಣ ದಾಖಲಾಗಿತ್ತು. ನಂತರ, ಪ್ರಕರಣವನ್ನು ಸಿಸಿಬಿ ವಹಿಸಲಾಗಿತ್ತು. ಸಿಸಿಬಿ ಪೊಲೀಸರು ರಾಜಸ್ತಾನದಲ್ಲಿ ಆರೋಪಿ ಬಂಧಿಸಿ 1 ಕೆ.ಜಿ 980 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ನಕಲಿ ಪ್ರಮಾಣಪತ್ರ: ಅಧಿಕಾರಿ ವಜಾ

ಬೆಂಗಳೂರು: ನಕಲಿ ಪದವಿ ಅಂಕಪಟ್ಟಿ ಮತ್ತು ಪ್ರಮಾಣಪತ್ರಗಳನ್ನು ಸಲ್ಲಿಸಿದ್ದಕ್ಕಾಗಿ ಬೀದರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯ ಸಹಾಯಕ ಸಾಂಖ್ಯಿಕ ಅಧಿಕಾರಿ ರಾಜಕುಮಾರ್ ಅವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕ ಎನ್. ಮಾಧುರಮ್ ಅವರು ಈ ಬಗ್ಗೆ ಆದೇಶ ಹೊರಡಿಸಿದ್ದಾರೆ.

ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಯಿಂದ ಸಹಾಯಕ ನಿರ್ದೇಶಕರ ವೃಂದಕ್ಕೆ ಮುಂಬಡ್ತಿ ಪಡೆಯಲು ಸಿಕ್ಕಿಂ ‘ಈಸ್ಟರ್ನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟಿಗ್ರೇಟೆಡ್ ಲರ್ನಿಂಗ್ ಇನ್ ಮ್ಯಾನೇಜ್‌ಮೆಂಟ್ ಯುನಿವರ್ಸಿಟಿ’ಯ ಪದವಿ ಪ್ರಮಾಣಪತ್ರ ಹಾಗೂ ಅಂಕಪಟ್ಟಿಗಳನ್ನು ಸಲ್ಲಿಸಿದ್ದರು. ಈ ದಾಖಲೆಗಳನ್ನು ಪರಿಗಣಿಸಿ ಸಹಾಯಕ ನಿರ್ದೇಶಕರ (ಸಮೂಹ ಬಿ) ಹುದ್ದೆಗೆ ಬಡ್ತಿ ನೀಡಲಾಗಿತ್ತು.

ಆದರೆ, ಈ ಪ್ರಮಾಣಪತ್ರಗಳು ನಕಲಿ ಎನ್ನುವುದು ಬಡ್ತಿ ನೀಡಿದ ನಂತರ ತಿಳಿದುಬಂದಿದೆ. ಈ ಪ್ರಮಾಣಪತ್ರಗಳು ನೈಜವಲ್ಲ ಎಂದು ವಿಶ್ವವಿದ್ಯಾಲಯ ತಿಳಿಸಿದೆ.

ಹೀಗಾಗಿ, ಈ ಪ್ರಕರಣದ ಬಗ್ಗೆ ನಡೆದ ವಿಚಾರಣೆಯಲ್ಲಿ ಆರೋಪಗಳು ಸಾಬೀತಾಗಿದ್ದರಿಂದ ರಾಜಕುಮಾರ್ ಅವರನ್ನು ವಜಾಗೊಳಿಸಿ ಆದೇಶ ಹೊರಡಿಸಲಾಗಿದೆ.

ವಾಮಾಚಾರ ಶಂಕೆ: ಮಹಿಳೆಯ ಹತ್ಯೆ

ಬರ್ಹಾಂಪುರ (ಪಿಟಿಐ): ವಾಮಾಚಾರ ನಡೆಸಿದ ಶಂಕೆಯ ಮೇರೆಗೆ ಒಡಿಶಾದ ಗಂಜಂ ಜಿಲ್ಲೆಯ ಬರ್ಹಾಂಪುರದಲ್ಲಿ 50 ವರ್ಷದ ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಿದ ಆರೋಪದಲ್ಲಿ 20 ಮಹಿಳೆಯರು ಸೇರಿದಂತೆ 33 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಐದು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡು, ಮತ್ತಷ್ಟು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದೇವೆ ಎಂದೂ ಹೇಳಿದ್ದಾರೆ.

₹ 72 ಲಕ್ಷ ಕದ್ದು ಸಿಕ್ಕಿಬಿದ್ದ ಕಾರು ಚಾಲಕ

ಬೆಂಗಳೂರು: ಕಾರು ಚಾಲಕನೊಬ್ಬ ಮಾಲೀಕರ ₹ 75 ಲಕ್ಷ ಕಳವು ಮಾಡಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ.

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ದೊಡ್ಡನಾಯಕನಹಳ್ಳಿಯ ಸಂತೋಷ್‌ಕುಮಾರ್ (34) ಬಂಧಿತ ಆರೋಪಿ.

‘ಎಂಟು ತಿಂಗಳಿಂದ ಆರೋಪಿ ಸಂತೋಷ್‌ಕುಮಾರ್ ಎಂಬಾತ ಹರೀಶ್ ಅವರ ಬಳಿ ಕಾರು ಚಾಲಕನಾಗಿದ್ದ. ಸೆ.19ರಂದು ಇಬ್ಬರೂ ಕಾರಿನಲ್ಲಿ ಹೊರಹೋಗಿದ್ದರು. ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಹರೀಶ್ ಅವರು ಕಾರಿನಿಂದ ಇಳಿದು ಅಂಗಡಿಗೆ ತೆರಳಿದ್ದರು. ಕಾರಿನಲ್ಲಿ ₹ 75 ಲಕ್ಷ ಹಣವಿರುವುದನ್ನು ತಿಳಿದಿದ್ದ ಆರೋಪಿ ಕಾರು ಸಮೇತ ಪರಾರಿಯಾಗಿದ್ದ. ಈ ಸಂಬಂಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಇನ್‌ಸ್ಪೆಕ್ಟರ್ ಜಿ.ಕೆ.ಶಂಕರನಾಯಕ್ ನೇತೃತ್ವದಲ್ಲಿ ತನಿಖೆಗೆ ತಂಡ ರಚಿಸಲಾಗಿತ್ತು. ಆರೋಪಿಯನ್ನು ಬಂಧಿಸಿ ಆತನಿಂದ ₹ 72 ಲಕ್ಷ ಹಣ ಹಾಗೂ ಒಂದು ಮೊಬೈಲ್ ವಶಕ್ಕೆ ಪಡೆಯಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

‘ರಾಹುಲ್ ಗಾಂಧಿಗಿಂತ ಪೆದ್ದ ಯಾರೂ ಇಲ್ಲ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ದೇಶದಲ್ಲಿ ರಾಹುಲ್ ಗಾಂಧಿಗಿಂತ ಪೆದ್ದ ಬೇರೆ ಯಾರೂ ಇಲ್ಲ’ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಟೀಕಿಸಿದರು.

‘ಶ್ರೀರಾಮುಲು ಪೆದ್ದ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೀಡಿದ್ದ ಹೇಳಿಕೆಗೆ ಗುರುವಾರ ಇಲ್ಲಿ ತಿರುಗೇಟು ನೀಡಿದರು.

‘ದೇಶದಲ್ಲಿ ಕಾಂಗ್ರೆಸ್ ಛೀ, ಥೂ ಅನ್ನಿಸಿಕೊಂಡು ಅಧಿಕಾರ ನಡೆಸಿದೆ. ಹಿಂದುಳಿದ ಸಮುದಾಯ ಬಳಸಿಕೊಂಡು ರಾಜಕೀಯ ಮಾಡಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿಯೇ ಮೀಸಲಾತಿ ಹೆಚ್ಚಿಸುವ ಅವಕಾಶವಿತ್ತು. ಆದರೆ, ಅವರಿಗೆ ಇಚ್ಛಾಶಕ್ತಿ ಇಲ್ಲ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

ವಚನಕಾರ ಚೆನ್ನಬಸವ ಜಯಂತಿ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಸರಿಗೆ ಅನ್ವರ್ಥಕ ನಾಮ ಚೆನ್ನಬಸವಣ್ಣ, ಅವರ ಹೆಸರಿನಲ್ಲಿಯೇ ಚೆನ್ನ ಇರುವುದರಿಂದ ವಚನ ಚಳವಳಿಯಲ್ಲಿ ಬಹು ಚೆಂದವಾಗಿ ಸುಶೋಭಿಸುತ್ತಿದ್ದಾರೆ’ ಎಂದು ಕವಯಿತ್ರಿ ಸೌಮ್ಯಾಗೌಡ ಹೇಳಿದರು.

ಪದ್ಮನಾಭನಗರದಲ್ಲಿ ನಡೆದ ಚೆನ್ನಬಸವ ಜಯಂತಿಯಲ್ಲಿ ಮಾತನಾಡಿದ ಅವರು, ‘ಪ್ರತಿಯೊಂದು ಮನೆಯು ಅನುಭವ ಮಂಟಪವಾಗಬೇಕು. ಪ್ರತಿಯೊಬ್ಬರೂ ಶರಣರಾಗಬೇಕೆಂಬ ಚೆನ್ನಬಸವಣ್ಣನವರ ಆಶಯದಂತೆ ಶ್ವೇತ ಶಿವಕುಮಾರಸ್ವಾಮಿಯವರ ಕಚೇರಿಯಲ್ಲಿ ಚೆನ್ನಬಸವಣ್ಣ ಜಯಂತಿ ನಡೆಯುತ್ತಿರುವುದು ಅರ್ಥ ಪೂರ್ಣ’ ಎಂದು ಪ್ರಶಂಸಿಸಿದರು.

ಉಪನ್ಯಾಸ ನೀಡಿದ ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ, ‘ಸೋದರಮಾವ ಬಸವಣ್ಣನವರಿಂದ ಸಕಲ ಪಾಂಡಿತ್ಯವನ್ನು ಪಡೆದ ಚೆನ್ನಬಸವಣ್ಣ ಮಹಾಜ್ಞಾನಿ. ಕನ್ನಡದ ಜನ ಅವರನ್ನು ಮರೆತಿರುವುದು ವಿಷಾದ ನೀಯ’ ಎಂದ ಅವರು, ‘ಚೆನ್ನಬಸವಣ್ಣನವರ 1763 ವಚನಗಳು ಸದ್ಯಕ್ಕೆ ಲಭ್ಯವಿವೆ’ ಎಂದು ತಿಳಿಸಿದರು.

ಪತ್ರಕರ್ತ ರೆಡ್ಡಿ, ಪ್ರಾಧ್ಯಾಪಕ ಶಿವಕುಮಾರ್, ನಿವೃತ್ತ ಯೋಧ ಗಂಗಾಧರ್ ಇದ್ದರು.

ವಚನಜ್ಯೋತಿ ಬಳಗ ಪದ್ಮನಾಭನಗರದಲ್ಲಿ ಆಯೋಜಿಸಿದ್ದ ಚೆನ್ನಬಸವಣ್ಣ ಜಯಂತಿಯಲ್ಲಿ ಕವಯಿತ್ರಿ ಸೌಮ್ಯಾಗೌಡ, ಬಳಗದ ಅಧ್ಯಕ್ಷ ಪಿನಾಕಪಾಣಿ, ಲೆಕ್ಕಪರಿಶೋಧಕ ಶಿವಕುಮಾರಸ್ವಾಮಿ, ವಿಮಾ ತಜ್ಞೆ ಶ್ವೇತ, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಪ್ರೊ. ವೀರಭದ್ರಯ್ಯ, ಪುಟಾಣಿಗಳಾದ ಸಾತ್ವಿಕ, ಶ್ರಾವಣಿ, ಸುರಭಿ, ತ್ರಿಲೋಕ್, ಸಮರ್ಥ್ , ಮಹರ್ತ್ ಇದ್ದರು

ಕಲ್ಮಶ ಹರಿಯಲ್ಲ, ಒತ್ತುವರಿ ತೆರವು: ₹2.53 ಕೋಟಿಗೆ ಟೆಂಡರ್ ಆಹ್ವಾನ ● ಸರ್ಕಾರಕ್ಕೆ ದಂಡ ವಿಧಿಸಿದ್ದ ಎನ್‌ಜಿಟಿ

ಚಂದಾಪುರ ಕೆರೆ ಸ್ವಚ್ಛತೆಗೆ ಪ್ರಥಮ ಹೆಜ್ಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಮಶದ ತಾಣವಾಗಿರುವ ಆನೇಕಲ್ ತಾಲ್ಲೂಕಿನ ಚಂದಾಪುರ ಕೆರೆಯನ್ನು ಸ್ವಚ್ಛಗೊಳಿಸಿ, ಎಲ್ಲ ರೀತಿಯಲ್ಲೂ ಅಭಿವೃದ್ಧಿಗೊಳಿಸುವ ಪ್ರಥಮ ಹೆಜ್ಜೆಯಾಗಿ ಸಣ್ಣ ನೀರಾವರಿ ಇಲಾಖೆ ₹2.53 ಕೋಟಿ ವೆಚ್ಚದ ಟೆಂಡರ್ ಕರೆದಿದೆ.

ಚಂದಾಪುರ ಕೆರೆಯಲ್ಲಿನ ಬೃಹತ್ ಮಟ್ಟದ ಕಲ್ಮಶಕ್ಕೆ ರಾಷ್ಟ್ರೀಯ ಹಸಿರುಪೀಠ (ಎನ್‌ಜಿಟಿ) ಇತ್ತೀಚೆಗೆ ರಾಜ್ಯ ಸರ್ಕಾರಕ್ಕೆ ದಂಡವನ್ನು ವಿಧಿಸಿತ್ತು.

23 ಎಕರೆ ವಿಸ್ತೀರ್ಣದಲ್ಲಿರುವ ಚಂದಾಪುರ ಕೆರೆ ಹಾಗೂ 600 ಎಕರೆ ಪ್ರದೇಶದಲ್ಲಿರುವ ಮುತ್ತಾನಲ್ಲೂರು ಕೆರೆ ನಡುವಿನ ರಾಜಕಾಲುವೆ ಹಾಗೂ ಕೆರೆ ಅಂಗಳದ ಒತ್ತುವರಿ ತೆರವು, ಕಾಲುವೆ ಮರು ನಿರ್ಮಾಣವೂ ಈ ಯೋಜನೆಯಲ್ಲಿದೆ.

ಚಂದಾಪುರ ಮತ್ತು ಮುತ್ತಾನಲ್ಲೂರು ಕೆರೆ ಹಾಗೂ ರಾಜಕಾಲುವೆಯ ಸರ್ವೆ ನಡೆಸಿ, ಅದರ ಬಫರ್ ಝೋನ್ ಅನ್ನೂ ಗುರುತಿಸಬೇಕು. ಎರಡೂ ಕೆರೆಗಳನ್ನು ಒತ್ತುವರಿಮುಕ್ತ ಮಾಡಬೇಕು ಎಂದು ಅ.27ರಂದು ಕರೆಯಾಗಿರುವ ಟೆಂಡರ್‌ನಲ್ಲಿ ನಮೂದಿಸಲಾಗಿದೆ.



ಚಂದಾಪುರ ಕೆರೆಯಿಂದ ಮುತ್ತಾನಲ್ಲೂರು ಕೆರೆವರೆಗಿನ ರಾಜಕಾಲುವೆ ನಕ್ಷೆ

ನ.5ಕ್ಕೆ ಟೆಂಡರ್ ಸಲ್ಲಿಸಲು ಕೊನೆಯ ದಿನ. ಆರು ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸಬೇಕು.

ಪರಿಣಾಮ: 'ಪ್ರಜಾವಾಣಿ'ಯಲ್ಲಿ **'ರಾಜಕಾಲುವೆ ಒತ್ತುವರಿ:** ನಿಂತ ಕಾಮಗಾರಿ' ಶೀರ್ಷಿಕೆಯಡಿ ಸೆ.3ರಂದು ವಿಶೇಷ ವರದಿ ಪ್ರಕಟವಾಗಿತ್ತು. ಚಂದಾಪುರ ಕೆರೆಯ ಕಲ್ಮಶದಿಂದ ಸಣ್ಣ ನೀರಾವರಿ ಇಲಾಖೆ ಕೈಗೊಂಡಿರುವ ಕೆರೆ ತುಂಬುವ ಯೋಜನೆಗೆ ಹಿನ್ನಡೆಯಾಗಿದೆ ಎಂಬ ಮಾಹಿತಿಯನ್ನು ಪ್ರಕಟಿಸಲಾಗಿತ್ತು.

ಕೆ.ಸಿ. ವ್ಯಾಲಿಯಿಂದ 75 ಕೆರೆಗಳನ್ನು ತುಂಬುವ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆ ಅನುಷ್ಠಾನಗೊಳಿಸಿದೆ. ಮುತ್ತಾನಲ್ಲೂರು ಕೆರೆಗೆ ಸಂಸ್ಕರಿತ ನೀರು ಪಂಪ್ ಆಗುತ್ತಿದೆ. ಆದರೆ, ಈ ಕೆರೆಗೆ ಚಂದಾಪುರ ಕೆರೆಯಿಂದ ಕಲ್ಮಶ ನೀರು ಬಂದು ಸೇರುತ್ತಿದೆ. ಹೀಗಾಗಿ ಈ ಸಂಸ್ಕರಿತ ನೀರು ಮತ್ತೆ ಕಲ್ಮಶವಾಗಿ ಕೆರೆಗಳಿಗೆ ಹರಿಯುತ್ತಿರುವುದರಿಂದ ಯೋಜನೆ ವಿಫಲವಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದರು.

ಇದನ್ನು ಒಪ್ಪಿದ್ದ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು, 'ಚಂದಾಪುರ ಕೆರೆ ನಮ್ಮ ಯೋಜನೆಯಲ್ಲಿಲ್ಲ. ಆದರೂ ಅದನ್ನು ಸ್ವಚ್ಛಗೊಳಿಸದ ಹೊರತು ಯೋಜನೆ ಪೂರ್ಣವಾಗುವುದಿಲ್ಲ ಎಂಬುದನ್ನು ಅರಿತು ಚಂದಾಪುರ ಕೆರೆ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುತ್ತಿದೆ' ಎಂದಿದ್ದರು. ಇದೀಗ ಚಂದಾಪುರ ಕೆರೆಗೆ ಕಲ್ಮಶ ಹರಿಯದಂತೆ ತಡೆದು, ಅದಕ್ಕೆ ಸಂಸ್ಕರಿತ ನೀರು ಮಾತ್ರ ಹೋಗುವಂತೆ ಮಾಡಲು ಯೋಜನೆ ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ.

ಹೋರಾಟದ ಫಲ: 'ಚಂದಾಪುರ ಹಾಗೂ ಮುತ್ತಾನಲ್ಲೂರು ಕೆರೆ ಸೇರಿ ಆನೇಕಲ್ ತಾಲ್ಲೂಕಿನಲ್ಲಿ ಕೆರೆಗಳ ಸರ್ವೆ ಆಗಬೇಕು. ಬಫರ್ ಝೋನ್ ಗುರುತಿಸಬೇಕು ಎಂದು ಹಲವು ವರ್ಷಗಳಿಂದ ನಾವು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಇದೀಗ ಅದರ ಫಲ ದೊರೆತಿದೆ. ಈ ಎರಡು ಕೆರೆಗಳಲ್ಲಿ ಕೈಗೊಂಡಿರುವ ರೀತಿಯಲ್ಲೇ ತಾಲ್ಲೂಕಿನ ಎಲ್ಲ ಕೆರೆಗಳ ಸರ್ವೆ ಆಗಬೇಕು. ಬಫರ್ ಝೋನ್ ಗುರುತು ಮಾಡಬೇಕು' ಎಂದು ಆನೇಕಲ್ ಪರಿಸರ ಸಂರಕ್ಷಣೆ ಫೆಡರೇಷನ್‌ನ ಕ್ಯಾಪ್ಟನ್ ಸಂತೋಷ್ ಕುಮಾರ್ ಹೇಳಿದರು.

ಏನೇನು ಕಾಮಗಾರಿ?

ಚಂದಾಪುರ ಕೆರೆಗೆ ಸಂಸ್ಕರಿತ ನೀರು ಮಾತ್ರ ಹರಿಯಲು ಸಂಸ್ಕರಣೆ ಘಟಕ ನಿರ್ಮಾಣ. ಕೆರೆಯ ಹೂಳು ತೆಗೆದು, ಏರಿ ಮರುನಿರ್ಮಾಣ. ನೈಸರ್ಗಿಕವಾಗಿ ನೀರು ಸ್ವಚ್ಛವಾಗಿರುವಂತೆ ಮಾಡಲು ಕೊಳವೆ ಮಾರ್ಗ, ವೆಟ್‌ಲ್ಯಾಂಡ್ ಹಾಗೂ ಸಸಿಗಳನ್ನು ನೆಡುವುದು. ಚಂದಾಪುರ ಮತ್ತು ಮುತ್ತಾನಲ್ಲೂರು ಕೆರೆಯ ಒತ್ತುವರಿಯನ್ನು ತೆರವುಗೊಳಿಸುವುದು. ಈ ಎರಡೂ ಕೆರೆಗಳ ನಡುವಿನ ರಾಜಕಾಲುವೆ ಒತ್ತುವರಿ ತೆರವು, ಹೂಳು ತೆಗೆಯುವುದು... ಈ ಎಲ್ಲ ಕಾಮಗಾರಿಗಳು ಮುಗಿದ ಮೇಲೆ ಅದನ್ನು ಎರಡು ವರ್ಷ ನಿರ್ವಹಣೆ ಮಾಡುವುದು.

ಮೈಸೂರು ರೇಸ್

ನಾಟಿ ಡ್ಯಾನ್ಸರ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಆನಿವರ್ಸರಿ ಕ್ಲಬ್ ಶನಿವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಡ್ಯಾನ್ಸರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಿಸ್ಟಿಕ್ ಮೌಂಟೇನ್ 3, ಸದರ್ನ್ ವಾರಿಯರ್ 6, ಆಂಟನೊರಿ 1
2ನೇ ರೇಸ್: ಜೆರ್ಸಿ ಲೆಜೆಂಡ್ 6, ಮೈ ಒನ್ ಅಂಡ್ ಒನ್ಲಿ 7, ಸ್ಪಿರಿಚ್ಯುಯಲ್ ಫೋರ್ಸ್ 11
3ನೇ ರೇಸ್: ಕೆನ್ಸಿಂಗ್‌ಟನ್ 2, ಕೇಪಬಲ್ 4
4ನೇ ರೇಸ್: ಸ್ಟಾರ್ ಕಾಮೆಟ್ 3, ವರ್ಲ್ಡ್‌ಲಿ ವೈಸ್ 8, ಅಸ್ಟ್ರಾಲಜರ್ 4
5ನೇ ರೇಸ್: ಮಿರ್ರಾ 7, ಲೊಕ್ ಲೊಮಂಡ್ 12, ಡೌಗ್ಲಾಸ್ 3
6ನೇ ರೇಸ್: ಆರ್ಕ್‌ವೇ 2, ಅಡ್ಜಸ್ಟ್‌ಮೆಂಟ್ 1, ಐ ದಿ ಮೈಂಡ್ 4
7ನೇ ರೇಸ್: ನಾಟಿ ಡ್ಯಾನ್ಸರ್ 1, ಚಾಸ್ಸಿ 3, ಸೀಝ್ ಪೆರಿಲಸ್ 5
8ನೇ ರೇಸ್: ಅಮೆಜೋನಿಯಾ 7, ತರೇಕ್ 11, ಹೀರೊಯಿಸ್ಮ್ 12
9ನೇ ರೇಸ್: ಲೈಟ್ನಿಂಗ್ ಚಾರ್ಲಿ 6, ಬೆಲ್ಲೊನಾ 7, ಇಂಪೆಕಬಲ್ 13

ಉತ್ತಮ ಬೆಟ್: ಕೆನ್ಸಿಂಗ್ಟನ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
5,6,7,8,9	1,2,3	4,5,6	7,8,9

'ಮಂಗಳೂರು ವಿವಿಯ ಸಾಂಸ್ಕೃತಿಕ ನೀತಿ ಶೀಘ್ರ'

ಮಂಗಳೂರು: ಶಿಕ್ಷಣದ ಜೊತೆಗೆ ಮಕ್ಕಳಲ್ಲಿ ಸಂಸ್ಕಾರ ಬೆಳೆಸುವ ಉದ್ದೇಶದಿಂದ ಮಂಗಳೂರು ವಿವಿ ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ನೀತಿ ಜಾರಿಮಾಡಲು ತೀರ್ಮಾನಿಸಿದ್ದು, ಕರಡು ಪ್ರತಿ ಸಿದ್ಧವಾಗಿದೆ ಎಂದು ಕುಲಪತಿ ಪಿ.ಎಸ್ ಯಡಪಡಿತ್ತಾಯ ತಿಳಿಸಿದರು.

ಪ್ರತಿಯನ್ನು ಒಂದು ವಾರದಲ್ಲಿ ವೆಬ್‌ಸೈಟ್‌ನಲ್ಲಿ ಹಾಕಲಾಗುವುದು, ಜನರಿಂದ ಸಲಹೆ ಆಹ್ವಾನಿಸಲಾಗುವುದು. ದೇಶದಲ್ಲೇ ಸಾಂಸ್ಕೃತಿಕ ನೀತಿ ಜಾರಿ ಮಾಡಿದ ಮೊದಲ ವಿವಿ ಎಂಬ ಹೆಗ್ಗಳಿಕೆ ಪ್ರಾಪ್ತವಾಗಲಿದೆ ಎಂದರು.

100 ಜೋಡಿಗಳ ಸಾಮೂಹಿಕ ವಿವಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಹಾಬ್ ತಂಜಲ್ ಸೆಂಟರ್ ಫಾರ್ ಹ್ಯುಮಾನಿಟಿ ಸಂಸ್ಥೆಯು 100 ಜೋಡಿಗಳ ಸಾಮೂಹಿಕ ವಿವಾಹವನ್ನು ಇದೇ 30ರಂದು ಶಿವಾಜಿನಗರದ ಈದ್ಗಾ ಮೈದಾನದಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಕಾರ್ಯದರ್ಶಿ ಎಂ.ಕೆ. ನೌಷಾದ್, 'ಕಳೆದ ವರ್ಷ ಕರ್ನಾಟಕ ಹಾಗೂ ನೆರೆಯ ರಾಜ್ಯಗಳ 208 ಜೋಡಿಗಳಿಗೆ ಮದುವೆಯ ಔತಣಕೂಟವನ್ನು ನೀಡಲಾಯಿತು. ಈ ಬಾರಿ 100 ಜೋಡಿಗಳ ವಿವಾಹದ ಜವಾಬ್ದಾರಿ ತೆಗೆದುಕೊಂಡಿದ್ದೇವೆ. ಜೋಡಿಗಳಿಗೆ ಒಡವೆ, ಉಡುಪು ಮತ್ತು ಎಲ್ಲ ಗೃಹೋಪಯೋಗಿ ವಸ್ತುಗಳನ್ನು ನಾವು ನೀಡುತ್ತಿದ್ದೇವೆ. ಜಾತಿ, ಧರ್ಮ ಮೀರಿ ಈ ವಿವಾಹ ಕಾರ್ಯಕ್ರಮ ನಡೆಸಲಾಗುತ್ತದೆ' ಎಂದು ಹೇಳಿದರು.

'ಪರಿಶಿಷ್ಟ ಜಾತಿ ಮತ್ತು ಹಿಂದೂ ಸಮುದಾಯದ ವಿವಿಧ ಜಾತಿಯವರು ದೇವಾಲಯಗಳಲ್ಲಿ ತಮ್ಮ ಸಂಪ್ರದಾಯದ ಪ್ರಕಾರ ವಿವಾಹವಾಗಲು ಸೌಲಭ್ಯ ಕಲ್ಪಿಸಲಾಗುವುದು' ಎಂದರು.

ರಸ್ತೆ ಅಭಿವೃದ್ಧಿ: ₹30 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ಇಲ್ಲಿನ 5 ಬಿಬಿಎಂಪಿ ವಾರ್ಡ್‌ಗಳ ವ್ಯಾಪ್ತಿಯಲ್ಲಿ ₹30 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಅವರು ನಾಗೇನಹಳ್ಳಿ ಗೇಟ್ ಸಮೀಪದಲ್ಲಿ ಚಾಲನೆ ನೀಡಿದರು.

ದೊಡ್ಡಬಳ್ಳಾಪುರ ಮುಖ್ಯರಸ್ತೆಯ ನಾಗೇನಹಳ್ಳಿ ಗೇಟ್‌ನಿಂದ ಪ್ರೆಸಿಡೆನ್ಸಿ ಶಾಲೆಯವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ, ರೈಲ್ವೆ ಗೇಟ್‌ನಿಂದ ಇಸ್ರೋ ಬಡಾವಣೆಯವರೆಗೆ ರಸ್ತೆ ಡಾಂಬರೀಕರಣ, ಗಂಟಿಗಾನಹಳ್ಳಿ ಮುಖ್ಯರಸ್ತೆ ವಿಸ್ತರಣೆ ಮತ್ತು ಅಭಿವೃದ್ಧಿ, ಕೋಗಿಲು ಮುಖ್ಯರಸ್ತೆಯ ಬಳ್ಳಾರಿ ಮುಖ್ಯರಸ್ತೆಯಿಂದ ಮಾರುತಿನಗರದ ವರೆಗಿನ ವೈಟ್ ಟಾಪಿಂಗ್ ಕಾಮಗಾರಿ ಹಾಗೂ ಉಪನಗರದ ಶಾರದಾನಗರ-ಮಾತೃ ಬಡಾವಣೆ, ನ್ಯಾಯಾಂಗ ಬಡಾವಣೆ, ಹಳೇನಗರದ ಡೌನ್ ಬಜಾರ್, ಚೌಡೇಶ್ವರಿ ದೇವಸ್ಥಾನದಿಂದ ಕೊಂಡಪ್ಪ ಬಡಾವಣೆಯವರೆಗಿನ ಮುಖ್ಯರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

ಯಲಹಂಕ ಸಮೀಪದ ನಾಗೇನಹಳ್ಳಿ ರೈಲ್ವೆ ಗೇಟ್‌ನಿಂದ ಇಸ್ರೋ ಬಡಾವಣೆಯವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್‌ಆರ್. ವಿಶ್ವನಾಥ್ ಚಾಲನೆ ನೀಡಿದರು

ನಂತರ ಮಾತನಾಡಿದ ಅವರು, 'ಕಳೆದ ಹಲವು ದಿನಗಳಿಂದ ನಗರದಲ್ಲಿ ಸುರಿದ ಭಾರಿ ಮಳೆಯಿಂದಾಗಿ ರಸ್ತೆಗಳು ಹಾಳಾಗಿವೆ. ಇದಕ್ಕೆ ಪರಿಹಾರವಾಗಿ ಮುಖ್ಯಮಂತ್ರಿಗಳು ₹8 ಸಾವಿರ ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ' ಎಂದು ತಿಳಿಸಿದರು.

ಇದರ ಭಾಗವಾಗಿ ಮೊದಲ ಹಂತದಲ್ಲಿ ವಾರ್ಡ್ ಮಟ್ಟದಲ್ಲಿ ಕಾಮಗಾರಿಗಳು ಚಾಲನೆಯಲ್ಲಿದ್ದು, ಪ್ರಮುಖ ರಸ್ತೆಗಳ ಕಾಮಗಾರಿ ಬಾಕಿಯಿತ್ತು. ಮಳೆ ಬಿಡುವು ನೀಡಿರುವುದರಿಂದ ಗ್ರಾಮದಿಂದ-ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಎರಡು ತಿಂಗಳ ಅವಧಿಯೊಳಗೆ ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡು ಸಾರ್ವಜನಿಕರ ಸಂಚಾರಕ್ಕೆ ಮುಕ್ತವಾಗಲಿವೆ ಎಂದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಚ್.ಬಿ.ಹನುಮಯ್ಯ, ಎಂ.ಸತೀಶ್, ಡಾ.ಶಶಿಕುಮಾರ್, ಡಿ.ಜಿ. ಅಪ್ಪಯ್ಯಣ್ಣ, ಸಿ.ವೆಂಕಟೇಶ್, ಆವಲಹಳ್ಳಿ ಕೇಶವಮೂರ್ತಿ, ನಾಗೇನಹಳ್ಳಿ ಶಿವಕುಮಾರ್, ವಿ.ವಿ.ರಾಮಮೂರ್ತಿ, ವಿ.ಎಂ.ಚಂದ್ರಯ್ಯ, ಕಾರ್ಯಪಾಲಕ ಎಂಜಿನಿಯರ್ (ರಸ್ತೆ, ಮೂಲಭೂತ ಸೌಕರ್ಯ) ಪುನೀತ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶಿವಣ್ಣ, ಸಹಾಯಕ ಎಂಜಿನಿಯರ್ ವರುಣ್ ಮತ್ತಿತರರು ಉಪಸ್ಥಿತರಿದ್ದರು.

'ಮೈಸೂರು ಸಕ್ಕರೆ ಕಾರ್ಖಾನೆ: ₹20 ಕೋಟಿ ಕೊಡಿ'

ಬೆಂಗಳೂರು: ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಪುನಃಶ್ಚೇತನಕ್ಕೆ ಕೂಡಲೇ ₹20 ಕೋಟಿ ಬಿಡುಗಡೆ ಮಾಡುವಂತೆ ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಈ ಕಾರ್ಖಾನೆಗೆ ₹50 ಕೋಟಿ ನೀಡುವುದಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಈವರೆಗೆ ₹30 ಕೋಟಿ ಬಿಡುಗಡೆ ಮಾಡಲಾಗಿದೆ. ಸೆಪ್ಟೆಂಬರ್ 1ರಿಂದಲೇ ಕಾರ್ಖಾನೆ ಕಾರ್ಯಾರಂಭ ಮಾಡಿದೆ. ಪ್ರತಿದಿನ 300-400 ಟನ್ ಕಬ್ಬು ಅರೆಯುವಿಕೆಯಿಂದ ಪ್ರಾರಂಭವಾಗಿ ಪ್ರಸ್ತುತ ಸುಮಾರು 1500-1600 ಟನ್ ಕಬ್ಬನ್ನು ಅರೆಯಲಾಗುತ್ತಿದೆ. ಮೈಸೂರು ಸಕ್ಕರೆ ಕಾರ್ಖಾನೆಗೆ ರೈತರು ಸುಮಾರು 3 ಲಕ್ಷ ಟನ್ ಕಬ್ಬನ್ನು ಸರಬರಾಜು ಮಾಡಲು ಒಪ್ಪಿಗೆ ಕರಾರಾಗಿರುತ್ತದೆ. ಕಾರ್ಖಾನೆಯ ಆರ್ಥಿಕ ಸ್ಥಿತಿ ಉತ್ತಮವಾಗಿರದೇ ಇರುವುದರಿಂದ ರೈತರು ಆತಂಕಕ್ಕೆ ಒಳಗಾಗಿದ್ದಾರೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ದಿನೇಶ್ ಗೂಳಿಗೌಡ

ಬೆಂಕಿ ನಂದಿಸಲು 4 ಗಂಟೆ ಹರಸಾಹಸ: ಮನೆಗೂ ಹಾನಿ

3 ಸಣ್ಣ ಹಡಗು ಬೆಂಕಿಗಾಹುತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಸರಕು ಸಾಗಣೆಗೆ ಬಳಸುವ ಮೂರು ಸಣ್ಣಹಡಗುಗಳು ನಗರದ ಕಸಬಾ ಬೆಂಗ್ರೆಯಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಬೆಂಕಿ ದುರಂತದಲ್ಲಿ ಆಹುತಿಯಾಗಿವೆ. ಮನೆ ಮತ್ತು ಶೆಡ್‌ಗೂ ಬೆಂಕಿಯಿಂದ ಹಾನಿ ಉಂಟಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸತತ ನಾಲ್ಕು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತಂದರು. ರಾತ್ರಿ 10 ಗಂಟೆವರೆಗೂ ಬೆಂಕಿ ನಂದಿಸುವ ಕಾರ್ಯಾಚರಣೆ ಮುಂದುವರಿದಿತ್ತು.

'ಲಕ್ಷದ್ವೀಪದ ನಿವಾಸಿಗಳಿಗೆ ಸೇರಿದವು ಎನ್ನಲಾದ ಅಲ್ ಮದಾತ್, ಅಲ್ ಜಲೀರಾ, ನಜಾತ್ ಎಂಬ ಮೂರು ಹಡಗುಗಳನ್ನು ಕಸಬಾ ಬೆಂಗರೆಯ ನದಿ ಕಿನಾರೆಯಲ್ಲಿ ದುರಸ್ತಿ ಸಲುವಾಗಿ ಲಂಗರು ಹಾಕಲಾಗಿತ್ತು. ಸಂಜೆ 4.30ರ ಸುಮಾರಿಗೆ ಹಡಗೊಂದರಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಸ್ಥಳೀಯರು ಸೇರಿ ತಕ್ಷಣವೇ ಬೆಂಕಿ ನಂದಿಸುವ ಪ್ರಯತ್ನ ನಡೆಸಿದೆವು. ಅಷ್ಟರಲ್ಲಿ ಬೆಂಕಿಯ ಕೆನ್ನಾಲಿಗೆಗಳು ಪಕ್ಕದಲ್ಲಿ ನಿಲ್ಲಿಸಿದ್ದ ಇನ್ನೆರಡು ಹಡಗುಗಳತ್ತಲೂ ಚಾಚಿಕೊಂಡವು. ಅಗ್ನಿಶಾಮಕ ದಳಕ್ಕೆ ತಕ್ಷಣವೇ ಮಾಹಿತಿ ನೀಡಿದ್ದೆವು. ಅವರು ಸ್ಥಳಕ್ಕೆ ತಲುಪುವಷ್ಟರಲ್ಲಿ ಮೂರೂ ಹಡಗುಗಳಿಗೂ ಬೆಂಕಿ ವ್ಯಾಪಿಸಿತ್ತು' ಎಂದು ಸ್ಥಳೀಯರು ಮಾಹಿತಿ ನೀಡಿದರು.

'ಹಡಗುಗಳಲ್ಲಿ ಡೀಸೆಲ್ ಇದ್ದುದರಿಂದ ಹಾಗೂ ಗಾಳಿ ಜೋರಾಗಿ ಬೀಸುತ್ತಿದ್ದುದರಿಂದ ಬೆಂಕಿ ನಂದಿಸಲು ಹೆಚ್ಚು ಸಮಯ ತಗುಲಿತು. ಅಗ್ನಿಶಾಮಕ ದಳದ 5 ವಾಹನಗಳು ಹಾಗೂ ನವಮಂಗಳೂರು ಬಂದರು ಮಂಡಳಿ ಮತ್ತು ಎಂಆರ್‌ಪಿಎಲ್‌ನ ಮೂರು ವಾಹನಗಳು ಸೇರಿ ಒಟ್ಟು ಎಂಟು ಅಗ್ನಿಶಾಮಕ ವಾಹನಗಳನ್ನು ಬೆಂಕಿ ನಂದಿಸುವ ಕಾರ್ಯಾಚರಣೆಗೆ ಬಳಸಿದ್ದೇವೆ. ಘಟನೆಯಿಂದ ಯಾರಿಗೂ ಗಾಯ-ಅಪಾಯವಾಗಿಲ್ಲ. ಆದರೆ, ಭಾರಿ ಪ್ರಮಾಣದಲ್ಲಿ ಆಸ್ತಿ ನಷ್ಟವಾಗಿದೆ' ಎಂದು ಮಂಗಳೂರಿನ ಮುಖ್ಯ ಅಗ್ನಿಶಾಮಕ ಅಧಿಕಾರಿ ತಿಪ್ಪೇಸ್ವಾಮಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಹಡಗುಗಳಿಗೆ ಹೊತ್ತಿಕೊಂಡಿದ್ದ ಬೆಂಕಿ ನಂದಿಸಲು ನೀರನ್ನು ಹಾಯಿಸಲಾಯಿತು

'ಲಕ್ಷದ್ವೀಪಕ್ಕೆ ಸರಕು ಸಾಗಿಸುವ ಹಡಗುಗಳು'

ಕಟ್ಟಡ ನಿರ್ಮಾಣಕ್ಕೆ ಬಳಸುವ ಜಲ್ಲಿ- ಕಲ್ಲು, ಸಿಮೆಂಟ್, ಕಬ್ಬಿಣ ಹಾಗೂ ಆಹಾರ ಸಾಮಗ್ರಿಗಳು ನಗರದಿಂದ ಲಕ್ಷದ್ವೀಪ ಸಮೂಹ ರವಾನಿಸಲಾಗುತ್ತದೆ. ನಗರದ ಹಳೆ ಬಂದರಿನಿಂದ ಲಕ್ಷದ್ವೀಪಕ್ಕೆ ಸರಕು ಸಾಗಿಸಲು ಈ ಸಣ್ಣ ಹಡಗುಗಳನ್ನು ಬಳಸಲಾಗುತ್ತಿತ್ತು. ದುರಸ್ತಿ ಸಲುವಾಗಿ ಎರಡು ವರ್ಷಗಳಿಂದ ಇವು ಕಸಬಾ ಬೆಂಗ್ರೆಯಲ್ಲೇ ಲಂಗರು ಹಾಕಿದ್ದವು. ಇದರ ದುರಸ್ತಿ ಮಾಡುತ್ತಿದ್ದ ಕಾರ್ಮಿಕರು ದೀಪಾವಳಿಗಾಗಿ ಊರಿಗೆ ಮರಳಿದ್ದರು ಎಂದು ಸ್ಥಳೀಯರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮಾಲೀಕರ ವಿವರಗಳು ಇನ್ನೂ ಲಭ್ಯವಾಗಿಲ್ಲ. ಈ **ದುರ್ಘಟನೆಯಿಂದ ಒಟ್ಟು ಎಷ್ಟು ನಷ್ಟ ಉಂಟಾಗಿದೆ ಎಂಬುದನ್ನು ಇನ್ನಷ್ಟೇ ಅಂದಾಜು ಮಾಡಬೇಕಿದೆ**

ತಿಪ್ಪೇಸ್ವಾಮಿ, ಮುಖ್ಯ ಅಗ್ನಿಶಾಮಕ ಅಧಿಕಾರಿ

ಭೂಮಾಲೀಕರ ಮನವೊಲಿಸಿದ ಶಾಸಕ ಮಂಜುನಾಥ್

ಸುಂಕದಕಟ್ಟೆ ರಸ್ತೆ ಸಮಸ್ಯೆ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಂಕದಕಟ್ಟೆಯಿಂದ ಹೆಗ್ಗನಹಳ್ಳಿ ಮೂಲಕ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಖಾಸಗಿ ಜಾಗ ಬಿಡಿಸಿಕೊಳ್ಳಲು ಭೂಮಾಲೀಕರೊಂದಿಗೆ ಶಾಸಕ ಆರ್. ಮಂಜುನಾಥ್ ಶುಕ್ರವಾರ ನಡೆಸಿದ ಮಾತುಕತೆ ಯಶಸ್ವಿಯಾಗಿದ್ದು, 30 ವರ್ಷಗಳಿಂದ ಇದ್ದ ಸಮಸ್ಯೆಗೆ ಪರಿಹಾರ ದೊರಕಿದಂತಾಗಿದೆ.

ಮಾಗಡಿ ರಸ್ತೆಯಿಂದ ಹೆಗ್ಗನಹಳ್ಳಿ ಕ್ರಾಸ್ ಕಡೆಗೆ ಹೋಗುವ ರಸ್ತೆ ಕಾಲುದಾರಿ ರೀತಿಯಲ್ಲಿದ್ದು, ಖಾಸಗಿ ರಸ್ತೆಯಲ್ಲೇ ದಿನಕ್ಕೆ 500ಕ್ಕೂ ಹೆಚ್ಚು ಬಿಎಂಟಿಸಿ ಬಸ್‌ಗಳು ಸಂಚರಿಸಬೇಕಿತ್ತು. ಈ ರಸ್ತೆಯಲ್ಲಿ ಸಂಚರಿಸಲಾಗದೆ ಚಾಲಕರು ಮತ್ತು ಪ್ರಯಾಣಿಕರು ಹೈರಾಣಾಗಿದ್ದಾರೆ.

ಸುಂಕದಕಟ್ಟೆಯಿಂದ ಹೆಗ್ಗನಹಳ್ಳಿ ಕ್ರಾಸ್, ನಾಗರಹೊಳೆ ವೃತ್ತ, ಪೀಣ್ಯ ಎರಡನೇ ಹಂತ, ರಾಜಗೋಪಾಲನಗರದ ಮೂಲಕ ಜಾಲಹಳ್ಳಿ ಕ್ರಾಸ್‌ಗೆ ಸಂಪರ್ಕ ಕಲ್ಪಿಸಲು ಇರುವ ಪ್ರಮುಖ ರಸ್ತೆ ಇದಾಗಿದೆ. ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಗೆ ಅದರಲ್ಲೂ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಈ ರಸ್ತೆಯೇ ಸಂಪರ್ಕ ಕೊಂಡಿ. ಮಾಗಡಿ ರಸ್ತೆಯಿಂದ ಹೆಗ್ಗನಹಳ್ಳಿ ಕ್ರಾಸ್‌ಗೆ ಸಂಪರ್ಕಿಸಲು ಇರುವುದು ಇದೊಂದೇ ರಸ್ತೆ. ಸೊಲ್ಲಾಪುರದಮ್ಮ ದೇವಸ್ಥಾನದ ಬಳಿಯಿಂದ ಹಾದು ಹೋಗುತ್ತಿದ್ದ ರಸ್ತೆಯೂ ಈಗ ಇಲ್ಲ. ಈಗ ಉಳಿದಿರುವುದು ಈ ಖಾಸಗಿ ರಸ್ತೆಯೊಂದೇ. ಕಿರಿದಾದ ರಸ್ತೆಯಲ್ಲೇ ಎರಡು ಕಡೆಯ ವಾಹನಗಳು ಕಷ್ಟದಲ್ಲಿ ಸಂಚರಿಸಬೇಕಾಗಿತ್ತು.

ಸಮರ್ಪಕ ಭೂಪರಿಹಾರ ಸಿಗದಿರುವುದರಿಂದ ರಸ್ತೆ ಅಭಿವೃದ್ಧಿಗೆ ಖಾಸಗಿ ರಸ್ತೆಯ ಮಾಲೀಕರು ಅವಕಾಶ ನೀಡಲು ಒಪ್ಪಿರಲಿಲ್ಲ. ಶುಕ್ರವಾರ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಆರ್. ಮಂಜುನಾಥ್, ಮಾಲೀಕರ ಮನವೊಲಿಸುವಲ್ಲಿ ಯಶಸ್ವಿಯಾದರು. 'ಪ್ರತಿ ಸೆಕೆಂಡ್‌ಗೆ ಒಂದರಂತೆ ಬಿಎಂಟಿಸಿ ಬಸ್‌ಗಳು ಈ ರಸ್ತೆಯಲ್ಲಿ ಸಂಚರಿಸುತ್ತಿವೆ. ರಸ್ತೆಯೇ ಇಲ್ಲವಾಗಿದ್ದರಿಂದ ಸಮಸ್ಯೆ ತೀವ್ರಗೊಂಡಿತ್ತು. ಟಿಡಿಆರ್ ಮೂಲಕ ಭೂಪರಿಹಾರ ಕೊಡಿಸುವ ಭರವಸೆ ನೀಡಿದ್ದರಿಂದ ಭೂಮಾಲೀಕರು ಒಪ್ಪಿದ್ದಾರೆ. ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ' ಎಂದು ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಐವರು ಎಂಜಿನಿಯರ್‌ಗಳ ಬದಲಾವಣೆ: ಧರಣಿ ಎಚ್ಚರಿಕೆ

'ದಾಸರಹಳ್ಳಿ ವಲಯದಲ್ಲಿ ಕಳೆದ ಆರು ದಿನಗಳಿಂದ ಐವರು ಕಾರ್ಯಪಾಲಕ ಎಂಜಿನಿಯರ್‌ಗಳನ್ನು ಬದಲಿಸಲಾಗಿದೆ. ಹೀಗೆ ಮಾಡಿದರೆ ಕ್ಷೇತ್ರದ ಅಭಿವೃದ್ಧಿ ಹೇಗೆ ಸಾಧ್ಯ' ಎಂದು ಮಂಜುನಾಥ್ ಪ್ರಶ್ನಿಸಿದರು.

'ಹೈಕೋರ್ಟ್ ಆದೇಶ ನೀಡಿದರೂ ₹110 ಕೋಟಿ ಮೊತ್ತದ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ನಡೆಸಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಅಡ್ಡಿಪಡಿಸುತ್ತಿದೆ. ಇದರ ವಿರುದ್ಧ ಪಾಲಿಕೆ ಕಚೇರಿ ಅಥವಾ ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಲಾಗುವುದು. ಈ ಸಂಬಂಧ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಜತೆ ಮಾತುಕತೆ ನಡೆಸಲಾಗುವುದು' ಎಂದು ಹೇಳಿದರು.

'ಪಂಚಮಸಾಲಿ ಮೀಸಲಾತಿ ಸರ್ಕಾರಕ್ಕೆ ಗಡುವು ಸರಿಯಲ್ಲ'

ಹರಿಹರ: 'ಪಂಚಮಸಾಲಿ ಸಮಾಜಕ್ಕೆ 2 'ಎ' ಮೀಸಲಾತಿ ಸಂಬಂಧ ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಶ್ರೀಗಳು ಸರ್ಕಾರಕ್ಕೆ ಗಡುವು ವಿಧಿಸುವುದು ಸರಿಯಲ್ಲ' ಎಂದು ಇಲ್ಲಿನ ವೀರಶೈವ ಲಿಂಗಾಯಿತ ಪಂಚಮಸಾಲಿ ಪೀಠದ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

'ಸಮಾಜ ಹಾಗೂ ಪೀಠದ ಆಗ್ರಹದ ಮೇರೆಗೆ ರಾಜ್ಯ ಸರ್ಕಾರ ಕುಲಶಾಸ್ತ್ರೀಯ ಅಧ್ಯಯನಕ್ಕೆ ಆದೇಶಿಸಿದೆ. ಹಿಂದುಳಿದ ವರ್ಗಗಳ ಆಯೋಗ ಕುಲಶಾಸ್ತ್ರೀಯ ಅಧ್ಯಯನ ನಡೆಸುತ್ತಿದೆ. ಸಮಿತಿ ವರದಿ ಸಲ್ಲಿಸುವ ಮುಂಚೆಯೇ ಸರ್ಕಾರಕ್ಕೆ ಗಡುವು ವಿಧಿಸುವುದು ಸಲ್ಲ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ವಚನಾನಂದ ಸ್ವಾಮೀಜಿ

'ಚುನಾವಣೆಗೆ ಸ್ಪರ್ಧೆ ಇನ್ನೂ ಆಲೋಚಿಸಿಲ್ಲ'

ಶ್ರೀರಂಗಪಟ್ಟಣ (ಮಂಡ್ಯ): 'ಮುಂಬರುವ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಕುರಿತು ಇನ್ನೂ ಆಲೋಚನೆ ಮಾಡಿಲ್ಲ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ತಾಲ್ಲೂಕಿನ ಟಿ.ಎಂ.ಹೊಸೂರು ಮತ್ತು ಕಾಳೇನಹಳ್ಳಿಯಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಹಮ್ಮಿಕೊಂಡಿದ್ದ, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸದೆ ವಜಾ ಆಗುತ್ತಿರುವ ಅರ್ಜಿಗಳು

ದಾಖಲೆಗಳು ಸಿಗದೆ ರೈತರಿಗೆ ತೊಂದರೆ

● ಡಿ.ಸುರೇಶ್

ಯಲಹಂಕ: ತಾಲ್ಲೂಕು ಕಚೇರಿಯ ಅಭಿಲೇಖಾಲಯ ಶಾಖೆಯಲ್ಲಿ (ದಾಖಲೆಗಳ ಕೊಠಡಿ) ಹಳೆಯ ಮೂಲದಾಖಲೆಗಳು ನಿಗದಿತ ಸಮಯಕ್ಕೆ ದೊರೆಯುತ್ತಿಲ್ಲ. ಹೀಗಾಗಿ ರೈತರು ಮತ್ತು ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸಬೇಕಾಗಿದೆ.

ಯಲಹಂಕ ತಾಲ್ಲೂಕಿನ ಜಾಲಾ, ಹೆಸರಘಟ್ಟ ಹಾಗೂ ಯಲಹಂಕ ಹೋಬಳಿಗಳ ವ್ಯಾಪ್ತಿಯ ಗ್ರಾಮಗಳ ಜನರು, ತಮ್ಮ ಜಮೀನುಗಳಿಗೆ ಸಂಬಂಧಪಟ್ಟಂತೆ ಕೈಬರಹದ ಹಳೆಯ ಪಹಣಿ, ಮ್ಯುಟೇಶನ್, ಸಾಗುವಳಿ ಚೀಟಿ, ಒಎಂ ಕಾಪಿ, ಎಲ್.ಆರ್.ಎಫ್, ಐ.ಎಲ್.ಆರ್.ಆರ್ ಮತ್ತಿತರ ಹಳೆಯ ದಾಖಲೆಗಳನ್ನು ಪಡೆಯಲು ಈ ಕಚೇರಿಗೆ ಬರುತ್ತಾರೆ. ಆದರೆ ಹಲವು ದಿನ ಅಲೆದಾಡಿದರೂ ಸಮಯಕ್ಕೆ ಸರಿಯಾಗಿ ದಾಖಲೆಗಳು ಸಿಗುತ್ತಿಲ್ಲ. ಲಂಚ ನೀಡುವ ಬಲಾಢ್ಯರು ಮತ್ತು ಭೂಗಳ್ಳರಿಗೆ ಮಾತ್ರ ದಾಖಲೆಗಳು ಬಹಳ ಬೇಗನೆ ದೊರೆಯುತ್ತವೆ ಎಂಬುದು ಸಾರ್ವಜನಿಕರ ಆರೋಪ.

ಕೆಲವೊಂದು ಭೂ-ವ್ಯಾಜ್ಯಗಳು ಮತ್ತು ವಿವಾದಗಳಿಗೆ ಸಂಬಂಧಪಟ್ಟಂತೆ ಜೆಎಂಎಫ್, ಸಿವಿಲ್, ಹೈಕೋರ್ಟ್, ಕೆಎಟಿ, ಭೂ-ನ್ಯಾಯಮಂಡಳಿ, ಡಿಸಿ, ಎಸಿ ಕಚೇರಿಗಳಿಗೆ ನ್ಯಾಯಾಲಯಗಳ ಆದೇಶದಂತೆ ನಿಗದಿತ ಸಮಯದೊಳಗೆ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ ದಾಖಲೆಗಳು ಸಿಗದೆ ವಿಳಂಬವಾಗುವುದರಿಂದ ಪ್ರಕರಣವನ್ನು 2-3 ಬಾರಿ ಮುಂದೂಡಲಾಗುತ್ತದೆ. ಇದರಿಂದ ರೈತರು ಕಚೇರಿಯಿಂದ ಕಚೇರಿಗೆ ಮತ್ತು ನ್ಯಾಯಾಲಯಗಳಿಗೆ ಸಾಕಷ್ಟು ಬಾರಿ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕೆಲವೊಂದು ಪ್ರಕರಣಗಳಲ್ಲಿ ದಾಖಲೆಗಳನ್ನು ಹಾಜರು ಪಡಿಸದ ಕಾರಣದಿಂದ ಅರ್ಜಿಗಳನ್ನು ವಜಾ ಮಾಡುವುದರಿಂದ ರೈತರಿಗೆ ಅನ್ಯಾಯವಾಗುತ್ತದೆ ಎಂದು ಬಾಗಲೂರು ಗ್ರಾಮದ ನಿವಾಸಿ ಬಿ.ಎಚ್. ಸುರೇಶ್ ದೂರಿದರು.

'ಸಾರ್ವಜನಿಕರಿಗೆ ಮತ್ತು ರೈತರಿಗೆ ದಾಖಲೆಗಳನ್ನು ನೀಡದ ಸಿಬ್ಬಂದಿ, ಕಡತಗಳನ್ನು ಮರೆಮಾಚಿ ಭೂಗಳ್ಳರಿಗೆ ಸಹರಿಸುವುದು ಇಲ್ಲಿ ಮೇಲ್ನೋಟಕ್ಕೆ ಕಾಣುತ್ತಿದೆ. ಕೆಲವು ಅಧಿಕಾರಿಗಳು ಭೂಮಾಫಿಯ ಮತ್ತು ಡೆವಲಪರ್‌ಗಳೊಂದಿಗೆ ಶಾಮೀಲಾಗಿ ಕಡತಗಳನ್ನು ನೀಡುತ್ತಿದ್ದು, ಈ ಬಗ್ಗೆ ತಹಶೀಲ್ದಾರ್‌ರವರಿಗೆ ದೂರು ನೀಡಿದ್ದರೂ ಸಿಬ್ಬಂದಿ ನಿರ್ಲಕ್ಷ್ಯ ವಹಿಸುತ್ತಿದ್ದಾರೆ' ಎಂದು ದೂರಿದ ಅವರು, 'ಕೆಲವು ಸಿಬ್ಬಂದಿ ಸುಮಾರು 8-10 ವರ್ಷಗಳಿಂದ ಸತತವಾಗಿ ಕಾರ್ಯನಿರ್ವಹಿಸುತ್ತಿದ್ದು, ಮೊದಲು ಅವರನ್ನು ಬದಲಿಸಿ, ಹೊಸ ಸಿಬ್ಬಂದಿಯನ್ನು ನೇಮಿಸಬೇಕು' ಎಂದು ಒತ್ತಾಯಿಸಿದರು.

ಸಾರ್ವಜನಿಕರು ಸಕಾಲದಲ್ಲಿ ಅರ್ಜಿಗಳನ್ನು ಸಲ್ಲಿಸಿ, ಅಭಿಲೇಖಾಲಯದಲ್ಲಿ ದಾಖಲೆಗಳನ್ನು ಪಡೆಯಲು ನಿತ್ಯ ಸಾಲುಗಟ್ಟಿ ನಿಂತಿರುತ್ತಾರೆ. ಸಂಜೆ 6 ಗಂಟೆವರೆಗೆ ಕಾಯಿಸಿ, ಕೊನೆಗೆ ನಾಳೆ ಬನ್ನಿ ಎಂದು ಸಿಬ್ಬಂದಿ ಉಡಾಫೆ ಉತ್ತರಗಳನ್ನು ನೀಡುತ್ತಾರೆ. ಅರ್ಜಿ ಸಲ್ಲಿಸಿ 30-40 ದಿನಗಳು ಕಳೆದರೂ ದಾಖಲೆಗಳನ್ನು ನೀಡುವುದಿಲ್ಲ. ಪ್ರಶ್ನಿಸಿದರೆ, ಜೆರಾಕ್ಸ್ ಮಷಿನ್ ಕೆಟ್ಟಿದೆ, ಕೇಸ್ ವರ್ಕರ್ ನ್ಯಾಯಾಲಯಕ್ಕೆ ಹೋಗಿದ್ದಾರೆ ಎಂದು ಸಬೂಬು ನೀಡುತ್ತಾರೆ ಎಂದು ಸಂಪಿಗೇಹಳ್ಳಿ ಗ್ರಾಮದ ನಿವಾಸಿ ಜಿ. ಅಜಯಕುಮಾರ್ ದೂರಿದರು.

ದಾಖಲೆಗಳನ್ನು ಪಡೆಯಲು ನಿಂತಿರುವ ಜನ

ಸಮಯಕ್ಕೆ ಸರಿಯಾಗಿ ದಾಖಲೆಗಳು ಸಿಗುತ್ತಿಲ್ಲ ಎಂದು ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬರುತ್ತಿವೆ. ಸಮಸ್ಯೆಯಾಗದಂತೆ ಸಮಯಕ್ಕೆ ಸರಿಯಾಗಿ ಅಗತ್ಯ ದಾಖಲೆಗಳನ್ನು ನೀಡಬೇಕು. ಇಲ್ಲದಿದ್ದರೆ ಹಿಂಬರಹ ನೀಡಬೇಕೆಂದು ಅಭಿಲೇಖಾಲಯದ ಸಿಬ್ಬಂದಿಗೆ ಈಗಾಗಲೆ ಎರಡು-ಮೂರು ಬಾರಿ ಎಚ್ಚರಿಕೆ ನೀಡಿ, ನೋಟಿಸ್ ಸಹ ನೀಡಲಾಗಿದೆ. ಹಂತ-ಹಂತವಾಗಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು.

ಅನಿಲ್ ಕುಮಾರ್
ಆರೋಲಿಕರ್. ತಹಶೀಲ್ದಾರ್, ಯಲಹಂಕ ತಾಲ್ಲೂಕು

ಮಂಗಳೂರು: ಟೋಲ್ ಗೇಟ್ ರದ್ದುಪಡಿಸಲು ಪಕ್ಷಾತೀತ ಹೋರಾಟ

ಸುರತ್ಕಲ್ ಟೋಲ್: ಧರಣಿ ಆರಂಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ಎನ್‌ಐಟಿಕೆ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಟೋಲ್ ಗೇಟ್ ರದ್ದುಪಡಿಸಬೇಕು ಎಂದು ಒತ್ತಾಯಿಸಿ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಹಾಗೂ ಸಮಾನ ಮನಸ್ಕ ಸಂಘಟನೆಗಳ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿಯನ್ನು ಎನ್‌ಐಟಿಕೆ ಪ್ರಾಂಗಣದ ಬಳಿ ಹೆದ್ದಾರಿ ಪಕ್ಕದಲ್ಲಿ ಶುಕ್ರವಾರ ಆರಂಭಿಸಲಾಯಿತು.

ಸುರತ್ಕಲ್ ಟೋಲ್ ಗೇಟ್ ರದ್ದಾಗುವ ವರೆಗೂ ಈ ಧರಣಿ ಹಗಲು–ರಾತ್ರಿ ಮುಂದುವರಿಯಲಿದೆ ಎಂದು ಹೋರಾಟ ಸಮಿತಿ ತಿಳಿಸಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪಕ್ಷಗಳು ಹಾಗೂ ಸಂಘ ಸಂಸ್ಥೆಗಳ ಪ್ರಮುಖರು ಧರಣಿಯಲ್ಲಿ ಭಾಗವಹಿಸುವ ಮೂಲಕ ಈ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಸುರತ್ಕಲ್ ಟೋಲ್‌ಗೇಟ್‌ನಲ್ಲಿ 2015ರ ಡಿಸೆಂಬರ್‌ನಿಂದ ಸುಂಕ ಸಂಗ್ರಹಿಸಲಾಗುತ್ತಿದೆ. ಹೆಜಮಾಡಿಯಿಂದ ತಲಪಾಡಿವರೆಗೆ ಕೇವಲ 42.8 ಕಿ.ಮೀ ವ್ಯಾಪ್ತಿಯಲ್ಲಿ ಹೆಜಮಾಡಿ, ಸುರತ್ಕಲ್ ಹಾಗೂ ತಲಪಾಡಿಯಲ್ಲಿ ಟೋಲ್‌ಗೇಟ್‌ಗಳಿವೆ. ಸುರತ್ಕಲ್ ಟೋಲ್ ಗೇಟ್ ರದ್ದುಪಡಿಸಬೇಕು ಎಂದು ಒತ್ತಾಯಿಸಿ ಆರು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಅ.18ರಂದು ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿದ್ದ ಪ್ರತಿಭಟನಾಕಾರರು ಕೆಲ ಕಾಲ ಸುಂಕ ಸಂಗ್ರಹಕ್ಕೆ ತಡೆ ಒಡ್ಡಿದ್ದರು. ಅವರನ್ನು ಬಂಧಿಸಿದ್ದ ಪೊಲೀಸರು ಬಳಿಕ ಬಿಡುಗಡೆ ಮಾಡಿದ್ದರು.

'ಈಗ ಆರಂಭಿಸಿರುವುದು ನಿರ್ಣಾಯಕ ಹೋರಾಟ. ಸಂಸದ ನಳಿನ್ ಕುಮಾರ್ ಕಟೀಲ್ ಹಾಗೂ ಅಧಿಕಾರಿಗಳ ಭರವಸೆಯ ಮಾತುಗಳಿಗೆ ಮಣಿದು ಧರಣಿ ಕೈಬಿಡುವ ಪ್ರಶ್ನೆಯೇ ಇಲ್ಲ' ಎಂದು ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ ತಿಳಿಸಿದರು.

ಮುಖ್ಯಾಂಶಗಳು

- ಸುರತ್ಕಲ್ ಎನ್‌ಐಟಿಕೆ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ಟೋಲ್ ಗೇಟ್
- ವಿವಿಧ ಪಕ್ಷಗಳು, ಸಂಘ ಸಂಸ್ಥೆಗಳ ಪ್ರಮುಖರಿಂದ ಧರಣಿಗೆ ಬೆಂಬಲ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦
ದುಡಿಮೆಗೆ ಗುರಿ ಇರಲಿ, ದುಡಿಯುವುದರಲ್ಲಿ ನಿಯಮವಿರಲಿ.
-ಸರ್ ಎಂ. ವಿಶ್ವೇಶ್ವರಯ್ಯ

ದ್ವೇಷ ಭಾಷಣ: ಕೋರ್ಟ್ ನಿರ್ದೇಶನ ಸ್ವಾಗತಾರ್ಹ, ಜನರಿಗೂ ಇದೆ ಹೊಣೆಗಾರಿಕೆ

ದ್ವೇಷ ಭಾಷಣ ಮಾಡುವ ಚಾಳಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಲೇ ಇದ್ದು, ಈ ಕುರಿತಂತೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳು ಈ ಹಿಂದೆ ವ್ಯಕ್ತಪಡಿಸಿದ್ದ ಕಳವಳದ ಮುಂದುವರಿದ ಭಾಗವೇ ಆಗಿವೆ. ದೇಶದಲ್ಲಿ ಈಗ ವ್ಯಾಪಕವಾಗಿರುವ ದ್ವೇಷ ರಾಜಕಾರಣದ ಪರಿಣಾಮವಾಗಿಯೇ ದ್ವೇಷ ಭಾಷಣವು ಇಷ್ಟೊಂದು ಹೆಚ್ಚಿದೆ. ನ್ಯಾಯಾಲಯವು ನೀಡಿರುವ ನಿರ್ದೇಶನಗಳು ನಿರ್ದಿಷ್ಟವಾಗಿ ಮೂರು ರಾಜ್ಯಗಳಿಗೆ- ಉತ್ತರಪ್ರದೇಶ, ಉತ್ತರಾಖಂಡ ಮತ್ತು ದೆಹಲಿ- ಸಂಬಂಧಿಸಿದ್ದಾಗಿವೆ. ಈ ಮೂರು ರಾಜ್ಯಗಳಲ್ಲಿ ದ್ವೇಷ ಭಾಷಣದ ಅತ್ಯಂತ ಕೆಟ್ಟದಾದ ಪ್ರಕರಣಗಳು ದಾಖಲಾಗಿವೆ. ನರಮೇಧಕ್ಕೆ ಕರೆ, ಮುಸ್ಲಿಮರ ಸಾಮಾಜಿಕ ಬಹಿಷ್ಕಾರಕ್ಕೆ ಕರೆಯಂತಹ ಪ್ರಕರಣಗಳು ಇಲ್ಲಿ ಕಂಡುಬಂದಿವೆ. ಮುಸ್ಲಿಮರು ರಾಕ್ಷಸರು ಎಂಬಂತೆ ಚಿತ್ರಿಸುವುದು, ಅವರ ಘನತೆಗೆ ಮಸಿ ಬಳಿಯುವ ಪ್ರಯತ್ನಗಳು ನಡೆದಿವೆ. ಅವರ ಕೈ ಕತ್ತರಿಸಿ, ತಲೆ ಕತ್ತರಿಸಿ ಎಂಬಂತಹ ಹೇಳಿಕೆಗಳನ್ನೂ ನೀಡಲಾಗಿದೆ. ಈ ಮೂರು ರಾಜ್ಯಗಳ ಪೈಕಿ ಎರಡು ರಾಜ್ಯಗಳಲ್ಲಿ ಬಿಜೆಪಿ ಆಳ್ವಿಕೆ ಇದೆ ಮತ್ತು ಒಂದು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಯ ಹೊಣೆಯು ಕೇಂದ್ರ ಸರ್ಕಾರದ ಕೈಯಲ್ಲಿದೆ. ದೇಶದಾದ್ಯಂತ ನಡೆಯುತ್ತಿರುವ ದ್ವೇಷಾಪರಾಧಗಳು ಮತ್ತು ದ್ವೇಷ ಭಾಷಣಗಳ ಕುರಿತು ಸ್ವತಂತ್ರ, ವಿಶ್ವಾಸಾರ್ಹ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಈ ನಿರ್ದೇಶನಗಳನ್ನು ನೀಡಿದೆ.



ದ್ವೇಷದ ಕ್ರಿಯೆಗಳ ವಿರುದ್ಧ ರಾಜಕೀಯ, ಸಾಮಾಜಿಕ ಮತ್ತು ಕಾನೂನು ಹೋರಾಟವನ್ನು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ನಡೆಸಬೇಕಾಗಿದೆ

ದೇಶದ ಜಾತ್ಯತೀತ ಸ್ವರೂಪವನ್ನು ಉಳಿಸಿಕೊಳ್ಳಬೇಕಿದ್ದರೆ ದ್ವೇಷ ಭಾಷಣ ಮಾಡುವವರ ಮೇಲೆ ಅವರು ಯಾವ ಧರ್ಮಕ್ಕೆ ಸೇರಿದವರು ಎಂಬುದರ ಪರಿಗಣನೆ ಇಲ್ಲದೆಯೇ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. ದೂರು ದಾಖಲಾಗುವವರೆಗೆ ಕಾಯದೆಯೇ ಸ್ವಯಂಪ್ರೇರಣೆಯಿಂದ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸರಿಗೆ ಕೋರ್ಟ್ ಸೂಚಿಸಿದೆ. ಹೀಗೆ ಕ್ರಮ ಕೈಗೊಳ್ಳುವಲ್ಲಿ ಪೊಲೀಸರು ವಿಫಲರಾದರೆ ಅವರು ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ಒಳಗಾಗಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಲಾಗಿದೆ. ಈ ವಿಚಾರದಲ್ಲಿ ನ್ಯಾಯಾಲಯಕ್ಕೆ ಅಗಾಧವಾದ ಶ್ರದ್ಧೆ ಇದೆ ಎಂಬುದನ್ನು ಈ ಕ್ರಮಗಳು ಸೂಚಿಸುತ್ತವೆ. ದ್ವೇಷ ಭಾಷಣದ ವಿಚಾರವನ್ನು ನ್ಯಾಯಾಲಯವು ಅತ್ಯಂತ ಗಂಭೀರವಾಗಿಯೇ ಪರಿಗಣಿಸಿದೆ. ದೇಶವು ಜಾತ್ಯತೀತವಾಗಿರಬೇಕು ಮತ್ತು ಪೌರರ ನಡುವೆ ಸಹೋದರ ಭಾವ ಇರಬೇಕು ಎಂಬುದು ಸಂವಿಧಾನದ ಆಶಯವಾಗಿದೆ ಎಂದು ಕೋರ್ಟ್ ಹೇಳಿದೆ. 'ಮೂಲಭೂತ ಹಕ್ಕುಗಳನ್ನು ರಕ್ಷಿಸುವುದು, ಸಂವಿಧಾನದ ಆಶಯಗಳನ್ನು ಕಾಯುವುದು, ಕಾನೂನಿಗೆ ಅನುಗುಣವಾದ ಆಳ್ವಿಕೆ ಇರುವಂತೆ ನೋಡಿಕೊಂಡು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಕೆಲಸ ಮಾಡುವುದು' ನ್ಯಾಯಾಲಯದ ಕರ್ತವ್ಯವಾಗಿದೆ ಎಂದು ಕೋರ್ಟ್ ಹೇಳಿದೆ. ದ್ವೇಷ ಭಾಷಣ ಪ್ರಕರಣಗಳ ಕುರಿತಂತೆ ಯಾವ ಕ್ರಮ ಕೈಗೊಳ್ಳಲಾಗಿದೆ, ಬಾಕಿ ಇರುವ ಪ್ರಕರಣಗಳ ಸ್ಥಿತಿಗತಿ ಏನು ಎಂಬುದರ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆಯೂ ಈ ಮೂರು ರಾಜ್ಯಗಳಿಗೆ ಕೋರ್ಟ್ ಸೂಚಿಸಿದೆ.

ನ್ಯಾಯಾಲಯವು ನೀಡಿದ ನಿರ್ದೇಶನಗಳು ಸ್ವಾಗತಾರ್ಹವಾದುದಾಗಿವೆ. ಆದರೆ ಸಮಸ್ಯೆ ಎಂದರೆ, ದ್ವೇಷ ಭಾಷಣವು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಚಾರ ಮಾತ್ರ ಅಲ್ಲ, ಅದು ರಾಜಕೀಯ ವಿಚಾರ ಕೂಡ ಹೌದು. ಕಾನೂನಿನ ಮೂಲಕ ಮಾತ್ರ ಇದನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಕಾನೂನು ಮತ್ತು ಅದರ ಪ್ರಕ್ರಿಯೆಗಳಿಂದ ತಪ್ಪಿಸಿಕೊಳ್ಳುವ ಅಥವಾ ಕಾನೂನು ಪ್ರಕ್ರಿಯೆಯನ್ನೇ ತಲೆಕೆಳಗು ಮಾಡುವ ದಾರಿಗಳು ಸದಾ ಇದ್ದೇ ಇರುತ್ತವೆ. ದ್ವೇಷವನ್ನು ಹರಡುವವರೇ ಈ ಕಾನೂನಿನ ಅನುಕೂಲ ಪಡೆದುಕೊಂಡು ತಾವೇ ಸಂತ್ರಸ್ತರೆಂದು ಹೇಳಿಕೊಳ್ಳುವ ವಿರೋಧಾಭಾಸಕರ ಸ್ಥಿತಿಯೂ ಇದೆ. ದೇಶದಲ್ಲಿ ಈಗ ಕಾಣಿಸುತ್ತಿರುವ ದ್ವೇಷದ ಸ್ಥಿತಿಗೆ ದ್ವೇಷ ಭಾಷಣಗಳು ಮಾತ್ರವಲ್ಲ, ದ್ವೇಷದ ಕ್ರಿಯೆಗಳು ಕೂಡ ಕಾರಣವಾಗಿವೆ. ಇದರ ವಿರುದ್ಧ ರಾಜಕೀಯ, ಸಾಮಾಜಿಕ ಮತ್ತು ಕಾನೂನು ಹೋರಾಟವನ್ನು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ನಡೆಸಬೇಕಾಗಿದೆ. ಜನರ ಧೋರಣೆಗಳನ್ನು ಬದಲು ಮಾಡಬೇಕಾಗಿದೆ. ನ್ಯಾಯಾಲಯವು ತಾನು ಕೈಗೊಂಡಿರುವ ಕ್ರಮವನ್ನು ಮುಂದುವರಿಸಿಕೊಂಡು ಹೋಗುವ ಭರವಸೆ ಇದೆ. ಆದರೆ, ದ್ವೇಷ ಭಾಷಣ ಚಾಳಿಯನ್ನು ತಡೆಯುವ ಹೊಣೆಗಾರಿಕೆಯು ಪೌರರು ಮತ್ತು ಸಮಾಜದ ಮೇಲೆಯೂ ಇದೆ.

ಲಿಜ್ ಎಡವಿದ್ದು ಎಲ್ಲಿ? ಅವರ ಮಿನಿ ಬಜೆಟ್‌ಗೆ ಯಾಕಿಷ್ಟು ವಿರೋಧ?

ಟ್ರಸ್ ನಿಭಾಯಿಸಲಾರದ್ದನ್ನು ರಿಷಿ ನಿಭಾಯಿಸಬೇಕಿದೆ

ವಿಶ್ಲೇಷಣೆ
ಟಿ.ಎಸ್. ವೇಣುಗೋಪಾಲ್

ರಿಷಿ ಸುನಕ್ ಕೊನೆಗೂ ಬ್ರಿಟನ್ನಿನ ಪ್ರಧಾನಿಯಾಗಿದ್ದಾರೆ. ಅವರು, ಇನ್ಫೊಸಿಸ್ ಸಂಸ್ಥಾಪಕರಲ್ಲಿ ಒಬ್ಬರಾದ ನಾರಾಯಣ ಮೂರ್ತಿಯವರ ಅಳಿಯ. ಬಿಳಿಯನಲ್ಲದ ಮೊದಲ ಪ್ರಧಾನಿ. ಬೋರಿಸ್ ಜಾನ್ಸನ್ ಅವರು ಹಗರಣಗಳಿಂದ ಪದಚ್ಯುತಿಗೊಂಡ ನಂತರ ಸ್ಪರ್ಧೆಯಲ್ಲಿ ಉಳಿದವರು ರಿಷಿ ಮತ್ತು ಲಿಜ್ ಟ್ರಸ್. ಜಾನ್ಸನ್ ನೇತೃತ್ವದ ಸಂಪುಟದಲ್ಲಿ ರಿಷಿ ಹಣಕಾಸು ಸಚಿವರಾಗಿದ್ದರು. ಜಾನ್ಸನ್ ರಾಜೀನಾಮೆ ನಂತರ ಪ್ರಧಾನಿ ಪಟ್ಟಕ್ಕೆ ನಡೆದ ಸ್ಪರ್ಧೆಯಲ್ಲಿ ರಿಷಿ ಅವರನ್ನು ಕನ್ಸರ್ವೇಟಿವ್ ಪಕ್ಷ ಆಗ ಒಪ್ಪಿಕೊಂಡಿರಲಿಲ್ಲ. ಲಿಜ್ ಟ್ರಸ್ ಪ್ರಧಾನಿಯಾದರು. ಆದರೆ ತುಂಬಾ ದಿನ ಬಾಳಲಿಲ್ಲ. ಆಕೆಯ ಮಿನಿ ಬಜೆಟ್ಟನ್ನು ಜನ ಒಪ್ಪಲಿಲ್ಲ. 44 ದಿನಕ್ಕೇ ಅಧಿಕಾರದಿಂದ ಇಳಿಯಬೇಕಾಯಿತು.

ಪರಿಣಾಮವಾಗಿ ರಿಷಿಗೆ ಹಾದಿ ಸುಗಮವಾಯಿತು. ಮೊದಲಿನಿಂದಲೂ ಲಿಜ್ ಟ್ರಸ್ ಅವರ ಆರ್ಥಿಕ ನೀತಿಯ ಬಗ್ಗೆ ರಿಷಿ ಎಚ್ಚರಿಸುತ್ತಲೇ ಇದ್ದರು. ಈಗ 'ನಾನು ಆಗಲೇ ಹೇಳಿರಲಿಲ್ಲವಾ?' ಅಂತ ಧೈರ್ಯದಿಂದ ಹೇಳಿಕೊಳ್ಳಬಹುದು.

ಟ್ರಸ್ ಎಡವಿದ್ದು ಎಲ್ಲಿ? ಆಕೆಯ ಮಿನಿ ಬಜೆಟ್ಟಿಗೆ ಯಾಕಿಷ್ಟು ವಿರೋಧ? ಬ್ರಿಟನ್ನಿನ ಆರ್ಥಿಕತೆ ಒಳ್ಳೆಯ ಸ್ಥಿತಿಯಲ್ಲೇನೂ ಇಲ್ಲ. ಹಣದುಬ್ಬರ, ನಿರುದ್ಯೋಗ ತೀವ್ರವಾಗಿಯೇ ಇವೆ. ಇಂಧನದ ಬೆಲೆ ವಿಪರೀತವಾಗಿ ಜನ ತತ್ತರಿಸಿಹೋಗಿದ್ದಾರೆ. ಅವರಿಗೆ ಸರ್ಕಾರದ ಬೆಂಬಲ ಬೇಕಿದೆ. ತೆರಿಗೆ ಕಡಿತ ಮಾಡ್ತೀನಿ, ಆರ್ಥಿಕ ಪ್ರಗತಿ ತನ್ನ ಆದ್ಯತೆ ಅಂತ ಲಿಜ್ ಟ್ರಸ್ ಮೊದಲೇ ಹೇಳಿಕೊಂಡಿದ್ದರು. ಸೆಪ್ಟೆಂಬರ್ 23ರಂದು ತಮ್ಮ ಮಿನಿ ಬಜೆಟ್ಟಿನಲ್ಲಿ ಅವರು ಮಾಡಿದ್ದು ಇದನ್ನೇ. ಆದರೆ ಎಲ್ಲರ ನಿರೀಕ್ಷೆ ಮೀರಿ ಉದಾರವಾಗಿ ಶ್ರೀಮಂತರ ಆದಾಯಕ್ಕೆ ಶೇ 45ರಷ್ಟು ತೆರಿಗೆ ಕಡಿತ ಘೋಷಿಸಿದ್ದರು. ಜೊತೆಗೆ ಇಂಧನ ಕೈಗೆಟುಕುವ ದರದಲ್ಲಿ ಸಿಗುವಂತೆ ಮಾಡುವುದಕ್ಕೆ 6,000 ಕೋಟಿ ಪೌಂಡ್ ನೆರವು ಪ್ರಕಟಿಸಿದ್ದರು. ಆದರೆ ಇದನ್ನು ಬಜೆಟ್ ಪರಿಶೀಲನಾ ಸಮಿತಿಯ ಮುಂದಿಡುವ ಗೋಜಿಗೂ ಹೋಗಿರಲಿಲ್ಲ.

ಬಜೆಟ್ ಮಂಡಿಸಿದ ಕೆಲವೇ ಕ್ಷಣಗಳಲ್ಲಿ ವಿರೋಧ ವ್ಯಕ್ತವಾಯಿತು. ಕೊಟ್ಟ ಸಮಜಾಯಿಷಿ ವಿಶ್ವಾಸ ಮೂಡಿಸಲಿಲ್ಲ. ಹಣಕಾಸಿನ ಮಾರುಕಟ್ಟೆ ಅಸ್ತವ್ಯಸ್ತಗೊಂಡಿತು. ಪೌಂಡ್ ಮೌಲ್ಯ ಕುಸಿಯಿತು. ಬಾಂಡುಗಳ ಬೆಲೆ ಕುಸಿಯಿತು. ಎಲ್ಲರೂ ಬಾಂಡ್ ಮಾರುವುದಕ್ಕೆ ಪ್ರಾರಂಭಿಸಿದರು. ಗೊಂದಲವನ್ನು ತಪ್ಪಿಸುವುದಕ್ಕೆ ಅಲ್ಲಿನ ಕೇಂದ್ರೀಯ ಬ್ಯಾಂಕ್ ತಕ್ಷಣ ಮಧ್ಯಪ್ರವೇಶಿಸಬೇಕಾಯಿತು. ಆದರೂ ಅತೃಪ್ತಿ, ವಿರೋಧ ಜೋರಾಗುತ್ತಲೇ ಹೋಯಿತು. ಹಣಕಾಸು ಸಚಿವರು ರಾಜೀನಾಮೆ ನೀಡಿದರೂ ಸಮಾಧಾನವಾಗಲಿಲ್ಲ. ಕೊನೆಗೆ ಪ್ರಧಾನಿಯವರೇ ರಾಜೀನಾಮೆ ಕೊಡಬೇಕಾಯಿತು.

ಯಾಕೆ ಹೀಗಾಯಿತು? ಅದು ನಿಭಾಯಿಸಲಾಗದಷ್ಟು ದೊಡ್ಡ ಮೊತ್ತವೇ? ಒಂದು ಅಂದಾಜಿನ ಪ್ರಕಾರ, ಇದರಿಂದ 5 ವರ್ಷಕ್ಕೆ ಸರ್ಕಾರದ ಬೊಕ್ಕಸಕ್ಕೆ 14,600 ಕೋಟಿ ಪೌಂಡ್ ಹೊರೆಯಾಗುತ್ತದೆ. ಅದು ಬ್ರಿಟನ್ನಿನ ಜಿಡಿಪಿಯ ಶೇಕಡ 1ರಷ್ಟು. ಕಡಿಮೆಯೇನಲ್ಲ. ಆದರೆ ತುಂಬಾ ಜಾಸ್ತಿಯೂ ಅಲ್ಲ. ಬ್ರಿಟನ್ ಶ್ರೀಮಂತ ದೇಶ. ಅದಕ್ಕೆ ಇದನ್ನು ಸರಿದೂಗಿಸಿಕೊಳ್ಳುವುದು ದೊಡ್ಡ ವಿಷಯವಾಗಿರಲಿಲ್ಲ.

ಆದರೂ ಮಾರುಕಟ್ಟೆ ವಿರೋಧಿಸಿತು. ಇಂಧನದ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿ ಇರುವವರಿಗೆ ನೆರವು ನೀಡುವುದಕ್ಕಾಗಲಿ, ಸಾರ್ವಜನಿಕ ಸೇವೆಗಳಿಗೆ ಖರ್ಚು ಮಾಡುವುದಕ್ಕಾಗಲಿ ಮಾರುಕಟ್ಟೆಗೆ ತಕರಾರು ಇರಲಿಲ್ಲ. ಮಾರುಕಟ್ಟೆಗೆ ತಕರಾರು ಇದ್ದುದು ಸರ್ಕಾರದ ನೀತಿ ಹೆಚ್ಚು ಪಾರದರ್ಶಕವಾಗಿಲ್ಲ, ವಿಶ್ವಾಸಾರ್ಹವಾಗಿಲ್ಲ ಹಾಗೂ ಅದು ಬಾಳಿಕೆಯ ನೀತಿಯಾಗಿರಲಿಲ್ಲ ಅನ್ನುವ ಕಾರಣಕ್ಕೆ. ಹೊಸ ನೀತಿಯಿಂದ ಹೆಚ್ಚುವರಿಯಾಗಿ ಭರಿಸಬೇಕಾದ ಹಣವನ್ನು ಕ್ರೋಡೀಕರಿಸುವ ಕ್ರಮದ ಬಗ್ಗೆ ಎಲ್ಲೂ ಉಲ್ಲೇಖವಿರಲಿಲ್ಲ. ಅದನ್ನು ಸರಿದೂಗಿಸುವುದಕ್ಕೆ ಸರ್ಕಾರದ ಖರ್ಚಿನಲ್ಲಿ ಕಡಿತ ಮಾಡುವ ಯೋಚನೆಯಿದ್ದರೆ ಯಾವೆಲ್ಲಾ ಖರ್ಚುಗಳನ್ನು ಕಡಿತ ಮಾಡಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿರಲಿಲ್ಲ. ಜೊತೆಗೆ ಸರ್ಕಾರದ ವೆಚ್ಚ ಈಗಾಗಲೇ ಅಷ್ಟೊಂದು ಕಡಿಮೆ ಇರುವಾಗ ಇನ್ನೂ ಖರ್ಚು ಕಡಿಮೆ ಮಾಡುವುದಕ್ಕೆ ಸಾಧ್ಯವೇ ಎಂಬ ಅನುಮಾನವೂ ಇತ್ತು. ಇವೆಲ್ಲ ಆರ್ಥಿಕ ಅನಿಶ್ಚಿತತೆಯನ್ನು ಮೂಡಿಸಿದ್ದವು. ಹಾಗಾಗಿ ಜನ ಹಾಗೂ ಮಾರುಕಟ್ಟೆಯು ಸರ್ಕಾರದ ಬಗ್ಗೆ ನಂಬಿಕೆ ಕಳೆದುಕೊಂಡಿದ್ದವು. ಮಾರುಕಟ್ಟೆ ನಿಜವಾಗಿ ಪ್ರತಿಕ್ರಿಯಿಸಿದ್ದು ಬಜೆಟ್ ಮೂಡಿಸಿದ ಈ ಅನಿಶ್ಚಿತತೆಗೆ.

ಎರಡನೆಯದಾಗಿ, ಶ್ರೀಮಂತರ ಮೇಲಿನ ತೆರಿಗೆ ಕಡಿಮೆ ಮಾಡಿಬಿಟ್ಟರೆ, ಅವರು ಹೂಡಿಕೆಯನ್ನು ಹೆಚ್ಚಿಸಿ ಆರ್ಥಿಕ ಪ್ರಗತಿಯನ್ನು ತ್ವರಿತಗೊಳಿಸುತ್ತಾರೆ ಅನ್ನುವ ನಂಬಿಕೆಗೆ ಆಧಾರವಿಲ್ಲ. ಶ್ರೀಮಂತರ ಮೇಲಿನ ತೆರಿಗೆ ಕಡಿಮೆ ಮಾಡಿ ಆರ್ಥಿಕ ಪ್ರಗತಿ ಸಾಧಿಸಿರುವುದಕ್ಕೆ ಎಲ್ಲೂ ಪುರಾವೆಗಳಿಲ್ಲ. ರೇಗನ್ ಕಾಲದಲ್ಲಿ ಅಮೆರಿಕದಲ್ಲಿ ಆಗಿತ್ತು ಅನ್ನುವುದನ್ನೂ ಕ್ರುಗ್ಮನ್ ಅಂತಹವರು ಮಿಥ್ಯೆ ಎಂದು ತೋರಿಸಿದ್ದಾರೆ. ಹಾಗಾಗಿ ಟ್ರಸ್ ನಿಂತ ನೆಲವೇ ಭದ್ರವಿರಲಿಲ್ಲ.

ಜೊತೆಗೆ ಇದು ಅಂತಹ ಆರ್ಥಿಕ ಕಾರ್ಯಕ್ರಮಕ್ಕೆ ಸಮಯವೂ ಅಲ್ಲ. ಇದು ಯುದ್ಧದ ಸಮಯ. ದೇಶ ಆರ್ಥಿಕ ಸಂಕಷ್ಟದಲ್ಲಿದೆ. ಅದರಲ್ಲೂ ಸಾಮಾನ್ಯಜನ ಜೀವನ ನಡೆಸುವುದಕ್ಕೂ ಆಗದ ಸ್ಥಿತಿಯಲ್ಲಿದ್ದಾರೆ. ಬಿಕ್ಕಟ್ಟಿನ ಸಮಯದಲ್ಲಿ ಹೇರಳ ಲಾಭ ಮಾಡಿಕೊಂಡವರ ಮೇಲೆ ತೆರಿಗೆ ಹಾಕಿ ಸಂಕಷ್ಟದಲ್ಲಿದ್ದವರಿಗೆ ನೆರವು ನೀಡಬೇಕಾದ ಸಮಯ. ಇಂತಹ ಸಮಯದಲ್ಲಿ ಶ್ರೀಮಂತರ ಮೇಲಿನ ತೆರಿಗೆಯಲ್ಲಿ ಕಡಿತ ಮಾಡಿದರೆ ಜನರಿಗೆ ಸರ್ಕಾರದ ಮೇಲೆ ವಿಶ್ವಾಸ ಮೂಡುವುದಾದರೂ ಹೇಗೆ? ಶಿಕ್ಷಣ, ಆರೋಗ್ಯ, ಉದ್ಯೋಗ ಎಲ್ಲವೂ ಕೈಗೆಟುಕದೇ ಹೋಗುತ್ತಿರುವಾಗ ಆತಂಕ ಸಹಜವೇ. ನಾಯಕತ್ವಕ್ಕೆ ಇದನ್ನು ಅರ್ಥಮಾಡಿಕೊಳ್ಳುವ ಸಂವೇದನೆ ಸಾಧ್ಯವಾಗಬೇಕು.

ಪಿಂಚಣಿ ನಿಧಿಯ ಮಾರುಕಟ್ಟೆಯಲ್ಲಿ ಕಾಣಿಸಿಕೊಂಡ ಆತಂಕ ತೀವ್ರವಾಗಿತ್ತು. ಬ್ರಿಟನ್ನಿನ ಪಿಂಚಣಿ ನಿಧಿ ಒಂದು ಸಂಕೀರ್ಣವಾದ ವ್ಯವಸ್ಥೆ. ನಿರ್ದಿಷ್ಟ ದಿನದಂದು ನಿವೃತ್ತಿದಾರರಿಗೆ ಪೂರ್ವನಿರ್ಧರಿತ ಮೊತ್ತವನ್ನು ಕೊಡುವ ವ್ಯವಸ್ಥೆ. ಇಲ್ಲಿ ನಿಧಿಯ ಸುರಕ್ಷತೆ ಮುಖ್ಯ. ಹಾಗಾಗಿ ಹೆಚ್ಚು ಸುರಕ್ಷಿತವಾದ ಬ್ರಿಟಿಷ್ ಸರ್ಕಾರದ ಬಾಂಡುಗಳಲ್ಲಿ ಹಣವನ್ನು ತೊಡಗಿಸಲಾಗಿರುತ್ತದೆ. ಬ್ರಿಟನ್ನಿನಲ್ಲಿ ಇದು ಜನಪ್ರಿಯವಾದ ಒಂದು ಬೃಹತ್ ವ್ಯವಸ್ಥೆ. ಬಡ್ಡಿ ದರಕ್ಕೂ ಬಾಂಡಿನ ಬೆಲೆಗೂ ಪ್ರತಿಲೋಮ ಸಂಬಂಧವಿರುತ್ತದೆ. ಬ್ಯಾಂಕಿನ ಬಡ್ಡಿ ದರ ಹೆಚ್ಚಿದರೆ, ಬಾಂಡಿನ ಬೆಲೆ ಕುಸಿಯುತ್ತದೆ. ಬಾಂಡಿನ ಬೆಲೆ ಕುಸಿದರೆ ಪಿಂಚಣಿಯ ಸ್ವತ್ತಿನ ಮೌಲ್ಯ ಅಂದರೆ ಪಿಂಚಣಿದಾರರಿಗೆ ಭವಿಷ್ಯದಲ್ಲಿ ಕೊಡುವುದಕ್ಕಾಗಿ ಇಟ್ಟಿರುವ ಹಣದ ಮೊತ್ತ ಕಡಿಮೆಯಾಗುತ್ತದೆ. ಕಿರು ಬಜೆಟ್ಟಿನಿಂದಾಗಿ ಬಡ್ಡಿ ದರ ದಿಢೀರನೆ ಏರಿದಾಗ ಹಣವನ್ನು ಕ್ರೋಡೀಕರಿಸಲಾಗದೆ ಬಾಂಡುಗಳನ್ನು ಮಾರಬೇಕಾಯಿತು. ಎಲ್ಲರೂ ಮಾರುವವರೇ ಆಗಿಬಿಟ್ಟದ್ದರಿಂದ ಕೊಳ್ಳುವವರಿಲ್ಲದೆ ಬಿಕ್ಕಟ್ಟು ಪ್ರಾರಂಭವಾಗಿತ್ತು. ಬ್ರಿಟನ್ನಿನ ಕೇಂದ್ರೀಯ ಬ್ಯಾಂಕು ಮಧ್ಯಪ್ರವೇಶಿಸಬೇಕಾಯಿತು. ಸರ್ಕಾರದ ಬಾಂಡುಗಳನ್ನು ಕೊಳ್ಳಲು ಮುಂದಾಯಿತು. ಪರಿಣಾಮವಾಗಿ ಮಾರುಕಟ್ಟೆಯ ಬಿಕ್ಕಟ್ಟು ಸ್ವಲ್ಪಮಟ್ಟಿಗೆ ಸುಧಾರಿಸಿತು.

ಲಿಜ್ ಟ್ರಸ್ ಅವರಿಗೆ ಬಂದ ವಿರೋಧಕ್ಕೆ ಆಕೆಯ ಚಿಂತನೆಯ ಕ್ರಮವೂ ಕಾರಣವಿರಬಹುದು. ಆಕೆ ತೆಗೆದುಕೊಂಡ ಆರ್ಥಿಕ ನಿಲುವು ತೀರಾ ಸಾಂಪ್ರದಾಯಿಕವಾದದ್ದು. ರಾಜೀನಾಮೆ ಕೊಡುವ ಸಮಯದಲ್ಲಿ 'ಬ್ರೆಕ್ಸಿಟ್ ದೊರಕಿಸಿಕೊಟ್ಟ ಸ್ವಾತಂತ್ರ್ಯವನ್ನು ಬಳಸಿಕೊಂಡು ತೆರಿಗೆ ಕಡಿಮೆ ಮಾಡಿ, ಹೆಚ್ಚಿನ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದಕ್ಕೆ ಇನ್ನು ಸಾಧ್ಯವಾಗುವುದೇ ಇಲ್ಲವಲ್ಲ' ಎಂದು ಬೇಸರಿಸಿಕೊಂಡಿದ್ದರು. ತೆರಿಗೆ ಕಡಿತ, ಸರ್ಕಾರಿ ವೆಚ್ಚದ ಕಡಿತ... ಇವೆಲ್ಲಾ ಆರ್ಥಿಕವಾಗಿ ಬಲಪಂಥೀಯವಾದ ನಿಲುವು. ಆದರೆ ಆಕೆಯ ಸಾಮಾಜಿಕ ನಿಲುವು ಎಡಪಂಥೀಯವಾದುದು. ಆಕೆ ವಲಸೆಯನ್ನು ವಿರೋಧಿಸಲಿಲ್ಲ. ತಮ್ಮ ನೇತೃತ್ವದ ಸರ್ಕಾರದಲ್ಲಿ ಗೃಹ ಸಚಿವೆಯಾಗಿದ್ದ ಸ್ಯುಯೆಲ್ಲಾ ಬ್ರೇವರ್ಮನ್ ಅವರು ವಲಸೆಗಾರರ ಸಂಖ್ಯೆಯನ್ನು ಕಡಿಮೆ ಮಾಡಲಿಲ್ಲ ಎಂದು ಟೀಕಿಸಿದಾಗ 'ಬ್ರಿಟನ್ನಿನ ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕೆ ವಲಸೆಗಾರರು ಅವಶ್ಯಕ' ಎಂದು ವಾದಿಸಿದ್ದರು.

ಕ್ರುಗ್ಮನ್ ಹೇಳುವಂತೆ, ಉದಾರ ಸಾಮಾಜಿಕ ನೀತಿಯನ್ನು ಬೆಂಬಲಿಸುತ್ತಲೇ, ಸಾಂಪ್ರದಾಯಿಕ ಆರ್ಥಿಕ ನೀತಿಯನ್ನೂ ಬೆಂಬಲಿಸುವ ಜನರ ಸಂಖ್ಯೆ ತುಂಬಾ ಕಡಿಮೆ. ಬಹುಪಾಲು ಜನರಿಗೆ ಸರ್ಕಾರದ ಸೌಲಭ್ಯ ಬೇಕು. ಅದು ತಮ್ಮವರಲ್ಲದವರಿಗೆ ಹೋಗಿಬಿಡುತ್ತದೆ ಎಂದು ಭಾವಿಸುವ ಕೆಲವರು ಮಾತ್ರ ಅದನ್ನು ವಿರೋಧಿಸುತ್ತಾರೆ. ಬಹುಶಃ ಅದರಿಂದಲೂ ಟ್ರಸ್ ರಾಜಕೀಯವಾಗಿ ಒಂಟಿಯಾಗಿಬಿಟ್ಟರೋ ಏನೊ.

ಒಟ್ಟಿನಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ದೇಶದಲ್ಲಿ ಸ್ಥಿರತೆ ತಂದು ಜನರಲ್ಲಿ ವಿಶ್ವಾಸ ಮೂಡಿಸುವ, ಬಿಕ್ಕಟ್ಟಿನಿಂದ ಬ್ರಿಟನ್ನನ್ನು ಪಾರು ಮಾಡುವ ಜವಾಬ್ದಾರಿ ಹಾಗೂ ಹೊರೆ ರಿಷಿ ಸುನಕ್ ಅವರ ಮೇಲಿದೆ.

ಚುರುಮುರಿ



ಹಿಟ್ನಾಳ್ ಹಿಟ್

• ಸಿ.ಎನ್.ರಾಜು

'ಆರ್ಥಿಕ ದುಃಸ್ಥಿತಿ ಸುಧಾರಣೆಗೆ ದೇವರೇ ದಿಕ್ಕು. ಕರೆನ್ಸಿ ನೋಟುಗಳಲ್ಲಿ ದೇವರ ಚಿತ್ರ ಮುದ್ರಿಸಿದರೆ ದೇಶದ ಆರ್ಥಿಕ ಬಿಕ್ಕಟ್ಟು ನಿವಾರಣೆ ಆಗುತ್ತೆ ಅಂತ ಕೇಜ್ರಿವಾಲ್ ಹೇಳಿದ್ದಾರೆ ಕಣ್ರೀ...' ಅಂದಳು ಅನು.

'ಹೌದು, ಪ್ರಯತ್ನ ನಮ್ಮದಾದರೂ ಫಲ ಪರಮಾತ್ಮನದು. ಆರ್ಥಿಕ ವ್ಯವಸ್ಥೆ ಮಾತ್ರವಲ್ಲ, ರಾಜಕೀಯ ವ್ಯವಸ್ಥೆಯೂ ಹದಗೆಟ್ಟಿದೆಯಂತೆ. ಎಲೆಕ್ಷನ್ ಟೈಮ್‌ನಲ್ಲಿ ರಾಜಕಾರಣಿಗಳನ್ನು ಕಂಟ್ರೋಲ್ ಮಾಡೋದು ಕಷ್ಟ ಆಗಿದೆಯಂತೆ' ಅಂದ ಗಿರಿ.

'ಹೌದಂತೆ. ತಮ್ಮ ನಾಯಕರ ವಿರುದ್ಧವೇ ಪದೇಪದೇ ಬ್ಯಾಟ್ ಬೀಸುತ್ತಿರುವ ಹಿಟ್ನಾಳರನ್ನೂ ಕಂಟ್ರೋಲ್ ಮಾಡುವಂತಹ ಸಮರ್ಥ ಬೌಲರ್‌ಗಳು ಶಿಸ್ತಿನ ಪಕ್ಷದಲ್ಲಿ ಇಲ್ಲ ಅಂತ ಕಾಂಗ್ರೆಸ್‌ನವರು ಕಾಲೆಳೆಯುತ್ತಿದ್ದಾರೆ'.

'ನೋ ಬಾಲ್, ವೈಡ್ ಎಸೆದು ಬ್ಯಾಟರ್‌ನ ಕಂಟ್ರೋಲ್ ಮಾಡಲಾಗುತ್ತಾ? ಬೋಲ್ಡ್ ಆಗದ, ಕ್ಯಾಚಾಗದ ಫ್ರೀ ಹಿಟ್ ಕೊಟ್ಟರೆ ಬೌಂಡರಿ, ಸಿಕ್ಸರ್ ಬಾರಿಸದೆ ಬಿಡ್ತಾರಾ?'

'ಹಿಟ್ನಾಳ ಬ್ಯಾಟಿಂಗ್ ಶಕ್ತಿ ಹಿಂದೆ ಕಿಲಾಡಿ ಕೋಚ್ ಇದ್ದಾರಂತೆ. ತಮ್ಮನ್ನು ಔಟ್ ಮಾಡಿ ಪೆವಿಲಿಯನ್‌ಗೆ ಕಳಿಸುವ ಪ್ರಯತ್ನ ಮಾಡಿದ್ರೆ ನಿಜವಾದ ಹಾವು ಬಿಡಬೇಕಾಗುತ್ತದೆ ಎಂದು ಹಿಟ್ನಾಳರು ಬುಟ್ಟಿಯ ಭಯ ತೋರಿಸಿದ್ದಾರಂತೆ'.

'ಬುಟ್ಟಿಯಲ್ಲಿರುವುದು ಸಿ.ಡಿ ಹಾವೇ, ಭ್ರಷ್ಟಾಚಾರದ ಹಾವೇ ಎಂಬ ಕುತೂಹಲದಿಂದ ಕೈ ನಾಯಕರು ಬುಟ್ಟಿಗೆ ಕೈ ಹಾಕುತ್ತಿದ್ದಾರಂತೆ'.

'ಬಿಜೆಪಿಯ ಬುಟ್ಟಿ ವಿಚಾರ ಕಾಂಗ್ರೆಸ್‌ನವರಿಗೆ ಯಾಕಂತೆ?'

'ಬಿಜೆಪಿಯವರು ಕಾಂಗ್ರೆಸಿನ ಕಿಟಕಿ ಇಣುಕುತ್ತಾರಂತೆ, ಇವರು ಅವರ ಬುಟ್ಟಿ ಇಣುಕಿದರೆ ಏನು ತಪ್ಪು?'

'ಬುಟ್ಟಿಯಲ್ಲಿ ಹೆಡೆ ಎತ್ತುವ, ತೊಡೆ ತಟ್ಟುವ ಹಾವಿದೆ. ಕಾಂಗ್ರೆಸ್‌ನವರು ಪುಂಗಿ ಊದಿ ಹಾವನ್ನು ಕೆಣಕಿ ಕೆರಳಿಸುತ್ತಿದ್ದಾರೆ. ಅದು ಹೊರ ಬಂದರೆ ಯಾರ್‍ಯಾರಿಗೆ ಕಚ್ಚುವುದೋ ಗೊತ್ತಿಲ್ಲ, ಎಲೆಕ್ಷನ್ ಮುಗಿಯೋವರೆಗೂ ಹಾವಿನ ತಂಟೆಗೆ ಹೋಗ್ಬೇಡಿ ಅಂತ ಕಮಲಪತಿಗಳು ತಮ್ಮವರಿಗೆ ಎಚ್ಚರಿಕೆ ನೀಡಿದ್ದಾರಂತೆ...' ಅಂದಳು ಅನು.

ದಿನದ ಟ್ವೀಟ್

ರಾಜಕೀಯ ತಂತ್ರ?

ಎಎಪಿ ಅತಿಬುದ್ಧಿವಂತಿಕೆಯ ನಡೆಯನ್ನು ಪ್ರದರ್ಶಿಸಿದೆ: ಕರೆನ್ಸಿ ನೋಟುಗಳ ಮೇಲೆ ಲಕ್ಷ್ಮಿ- ಗಣೇಶನ ಚಿತ್ರಗಳನ್ನು ಮುದ್ರಿಸುವಂತೆ ಕೇಳುವ ಮೂಲಕ ಹಿಂದುತ್ವ ಪರವಾದ ಮತದಾರರನ್ನು ಒಲೈಸಬಹುದು ಎಂದು ಅದು ಭಾವಿಸಿದೆ. ಬಿಜೆಪಿಯು ಇಂತಹ ನಡೆ ಅನುಸರಿಸುವ ಸಾಧ್ಯತೆ ಇದೆ ಎಂದು ತಾನು ಮೊದಲೇ ಗ್ರಹಿಸಿದ್ದಾಗಿ ಪಿಸುಗುಟ್ಟುವ ಮೂಲಕ ಅದು ಬಿಜೆಪಿ ವಿರೋಧಿ ಜಾತ್ಯತೀತ ಮತದಾರರನ್ನೂ ತನ್ನದಾಗಿಸಿಕೊಳ್ಳಬಹುದು ಎಂದು ಭಾವಿಸಿದೆ.

ಚಾರ್ಮಿ ಹರಿಕೃಷ್ಣನ್

ಕಿಡಿನುಡಿ



ಬಿಜೆಪಿ ನೇತೃತ್ವದ ಸರ್ಕಾರವು ಕರ್ನಾಟಕ ಪೊಲೀಸ್ ವ್ಯವಸ್ಥೆಯ ನೈತಿಕಸ್ಥೈರ್ಯ ಕುಗ್ಗಿಸಿದೆ. ಬಿಜೆಪಿ ಹೈಕಮಾಂಡ್ ಏಜೆಂಟರಂತೆ ವರ್ತಿಸುತ್ತಿರುವ ಉತ್ತರ ಭಾರತದ ಹಿಂದಿ ಭಾಷಿಕ ಕೆಲ ಹಿರಿಯ ಪೊಲೀಸ್ ಅಧಿಕಾರಿಗಳು, ಕನ್ನಡದ ಅಧಿಕಾರಿಗಳನ್ನು ಗುಲಾಮರಂತೆ ನೋಡುತ್ತಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 29-10-1997

• **16 ಸದಸ್ಯರ ಪಾರಿಖ್ ಸಂಪುಟ ಅಸ್ತಿತ್ವಕ್ಕೆ**

ಗಾಂಧಿನಗರ, ಅಕ್ಟೋಬರ್ 28- ರಾಷ್ಟ್ರೀಯ ಜನತಾ ಪಕ್ಷದ ದಿಲೀಪ್ ಪಾರಿಖ್ ಅವರು ಇಂದು ಗುಜರಾತಿನ 13ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಇದರೊಂದಿಗೆ ರಾಜ್ಯದಲ್ಲಿ 11 ದಿನಗಳಿಂದ ಉದ್ಭವಿಸಿದ್ದ ರಾಜಕೀಯ ಬಿಕ್ಕಟ್ಟು ಕೊನೆಗೊಂಡಿದೆ.

ಮಧ್ಯರಾತ್ರಿ ವೇಳೆಗೆ ದೆಹಲಿಯಿಂದ ಬಂದ ವರದಿಯಂತೆ, ಪಾರಿಖ್ ಸಂಪುಟವನ್ನು ಕಾಂಗ್ರೆಸ್ ಕೂಡ ಸೇರುವ ಸಂಭವ ಇದೆ. ಈ ಕುರಿತು ಪಕ್ಷಕ್ಕೆ ತೆರೆದ ಮನಸ್ಸು ಇದೆ ಎಂದು ಕಾಂಗ್ರೆಸ್ ಪಕ್ಷದ ವಕ್ತಾರ ಅಜಿತ್ ಜೋಗಿ ತಿಳಿಸಿದ್ದಾರೆ.

• **ವೀಣೆ ದೊರೆಸ್ವಾಮಿ ಅಯ್ಯಂಗಾರ್ ನಿಧನ**

ಬೆಂಗಳೂರು, ಅಕ್ಟೋಬರ್ 28- 'ವೀಣಾ ಗಾರುಡಿಗ' ಎಂದೇ ಖ್ಯಾತರಾಗಿದ್ದ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ವಿದ್ವಾಂಸ ವೀಣೆ ದೊರೆಸ್ವಾಮಿ ಅಯ್ಯಂಗಾರ್ ಅವರು (77) ಇಂದು ಮಧ್ಯಾಹ್ನ 1.40ಕ್ಕೆ ಇಲ್ಲಿನ ಸ್ವಗೃಹದಲ್ಲಿ ನಿಧನರಾದರು.

ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಪತ್ನಿ ಶಾರದಮ್ಮ, ಮೂವರು ಪುತ್ರರು ಹಾಗೂ ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

ಅವರ ಪುತ್ರ ಡಿ. ಬಾಲಕೃಷ್ಣ ವೀಣಾ ವಿದ್ವಾಂಸರಾಗುವ ಮೂಲಕ ಮನೆತನದ ಸಂಗೀತ ಪರಂಪರೆಯನ್ನು ಮುಂದುವರಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 29-10-1972

• **ಹೊಸ ಕೈಗಾರಿಕಾ ಸಂಬಂಧ: ಕೇಂದ್ರದಿಂದ ಅಧ್ಯಯನ**

ಬೆಂಗಳೂರು, ಅಕ್ಟೋಬರ್ 28- ರಾಷ್ಟ್ರದ ಕೈಗಾರಿಕಾ ಕ್ಷೇತ್ರವನ್ನು ಸತ್ವಯುತವಾಗಿ ಮಾಡಬಲ್ಲ, ಕಾರ್ಮಿಕರ 'ಅರ್ಥಪೂರ್ಣ ಸಹಭಾಗಿತ್ವ'ವುಳ್ಳ ಹೊಸ ಕೈಗಾರಿಕಾ ಸಂಬಂಧ ವ್ಯವಸ್ಥೆಯೊಂದರ ನಿರೂಪಣೆಗೆ ಕೇಂದ್ರ ಸರ್ಕಾರ ಅಧ್ಯಯನ ಆರಂಭಿಸಿದೆ.

ಕಾರ್ಮಿಕ ಸಾಮರ್ಥ್ಯವು ಅನವಶ್ಯಕ ದಾರಿಗಳಲ್ಲಿ ಅಪವ್ಯಯವಾಗುತ್ತಿದೆ. ಇದನ್ನು ತಪ್ಪಿಸುವುದರ ಜತೆಗೆ, ಈ ಕ್ಷೇತ್ರದಲ್ಲಿ ಏಳುತ್ತಿರುವ ಅಶಾಂತಿಗೆ ಪರಿಹಾರ ಹುಡುಕಬೇಕಾಗಿದೆ. ಕಾರ್ಮಿಕರು ತಮ್ಮ ಹೊಣೆಯರಿತು ವರ್ತಿಸಬೇಕು ಎಂದು ಕೇಂದ್ರ ಕೈಗಾರಿಕಾಭಿವೃದ್ಧಿ ಮಂತ್ರಿ ಸಿ. ಸುಬ್ರಹ್ಮಣ್ಯಂ ಅವರು ಇಂದು ಇಲ್ಲಿ ಹೇಳಿದರು.

• **ಸಿ. ಸುಬ್ರಹ್ಮಣ್ಯಂ ಮೊದಲ ಗಿರಾಕಿ!**

ಬೆಂಗಳೂರು, ಅಕ್ಟೋಬರ್ 28- ಎಚ್.ಎಂ.ಟಿಯು ದೇಶದಲ್ಲಿ ಪ್ರಥಮ ಬಾರಿಗೆ ತಯಾರಿಸಿರುವ ದಿನ ಮತ್ತು ದಿನಾಂಕಗಳುಳ್ಳ ಕೈಗಡಿಯಾರದ ಮೊದಲನೇ ಗಿರಾಕಿ ಕೇಂದ್ರ ಕೈಗಾರಿಕಾಭಿವೃದ್ಧಿ ಮಂತ್ರಿ ಸಿ. ಸುಬ್ರಹ್ಮಣ್ಯಂ. ಎರಡನೆಯವರು ರಾಜ್ಯಪಾಲ ಮೋಹನ್‌ಲಾಲ್ ಸುಖಾಡಿಯಾ.

ಕೈಗಡಿಯಾರಗಳನ್ನು ಬಿಡುಗಡೆ ಮಾಡಿದ ರಾಜ್ಯ ಕೈಗಾರಿಕಾ ಮಂತ್ರಿ ಎಸ್.ಎಂ. ಕೃಷ್ಣ ಅವರು, ಇಬ್ಬರಿಗೂ, ವೇದಿಕೆ ಮೇಲಿದ್ದ ಇತರರಿಗೂ ಕೈಗಡಿಯಾರಗಳನ್ನು ಹಂಚಿದರು. ತಕ್ಷಣ ಏನೋ ಹೊಳೆದಂತೆ ಎದ್ದು ನಿಂತ ಸುಬ್ರಹ್ಮಣ್ಯಂ ಅವರು, 'ಇವುಗಳನ್ನು ಬಹುಮಾನವಾಗಿ ನಮಗೆ ಕೊಟ್ಟಿದ್ದಾರೆ. ಆದರೆ ನಾವು ಅದನ್ನು ಕೊಳ್ಳಲಿದ್ದೇವೆ. ನಾವು ಪ್ರತಿಯೊಬ್ಬರೂ ಹಣ ಕೊಡುತ್ತೇವೆ' ಎಂದರು.

ಸಂಗತ

ಸಿದ್ಧಾಂತ ಮತ್ತು ಸಾಹಿತ್ಯ ಕೃಷಿ

ಕನ್ನಡ ಬೆಳೆಸುವ ಕಾಯಕಕ್ಕೆ ಎಡ ಮತ್ತು ಬಲ ಎರಡೂ ಕೈಗಳು ಬೇಕು

• ಡಾ. ಜ್ಯೋತಿ

ಕರ್ನಾಟಕ ರಾಜ್ಯೋತ್ಸವ ಸಮಾರಂಭಗಳು ಇನ್ನೇನು ಬಹಳ ಸಂಭ್ರಮದಿಂದ ನಡೆಯಲಿವೆ. ಈ ಸಂದರ್ಭದಲ್ಲಿ, ಕನ್ನಡ ಭಾಷೆಯ ಉಳಿವಿನ ಕುರಿತಂತೆ ನಾವು ವಿಶ್ಲೇಷಿಸಬೇಕಾದ ಹಲವಾರು ಆಯಾಮಗಳಾದ ಕಲಿಕಾ ಮಾಧ್ಯಮ, ಆಡಳಿತದಲ್ಲಿ ಬಳಕೆ, ಅಂತರ್ಜಾಲದಲ್ಲಿ ಲಭ್ಯತೆಯಂತಹ ಸಂಗತಿಗಳ ನಡುವೆ ಬಹಳ ಮುಖ್ಯವೆನಿಸುವುದು ಸಾಹಿತ್ಯ ಕೃಷಿ. ಯಾಕೆಂದರೆ, ಕನ್ನಡವೂ ಸೇರಿದಂತೆ ಯಾವುದೇ ಭಾಷೆಯನ್ನು ಜೀವಂತವಾಗಿ ಇಡುವುದು ಮತ್ತು ಅದನ್ನು ಮುಂದಿನ ಪೀಳಿಗೆಗೆ ದಾಟಿಸುವುದು ಅದರಲ್ಲಿರುವ ಸತ್ವಭರಿತ ಸಾಹಿತ್ಯ.

ಆಯಾ ಕಾಲದ ಸಾಹಿತಿಗಳು ತಮ್ಮ ವಿಶಿಷ್ಟ ಸಾಹಿತ್ಯ ಕೃತಿಗಳ ಮೂಲಕ ಭಾಷಾ ಬಳಕೆಯ ಸೌಂದರ್ಯ ಹೆಚ್ಚಿಸುತ್ತಾರೆ ಮತ್ತು ಪ್ರಸ್ತುತವಾಗಿಸುತ್ತಾರೆ. ಹಾಗೆಯೇ, ಒಂದು ಭಾಷೆಯ ಸಾಹಿತ್ಯಕ್ಕೆ ಜೀವ ತುಂಬುವಲ್ಲಿ, ಬೇರೆ ಭಾಷೆಗಳ ಸಾಹಿತ್ಯದ ಭಾಷಾಂತರ ಕೃತಿಗಳು ಮಹತ್ತರ ಪಾತ್ರ ವಹಿಸುತ್ತವೆ. ಉದಾಹರಣೆಗೆ, ಬಿ.ಎಂ.ಶ್ರೀಕಂಠಯ್ಯ ಅವರ 'ಇಂಗ್ಲಿಷ್ ಗೀತೆಗಳು' ಕನ್ನಡ ಸಾಹಿತ್ಯಕ್ಕೆ ಹೊಸ ಜೀವ ತುಂಬಿದ ಹಾಗೆ, ಬೇರೆ ಭಾಷೆಗಳ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ನಡೆಯುತ್ತಿರುವ ಹೊಸ ಪ್ರಯೋಗಗಳನ್ನು ಅರಿತುಕೊಂಡು, ವಿಭಿನ್ನವಾಗಿ ಚಿಂತಿಸುವುದನ್ನು ಮತ್ತು ಬರೆಯುವುದನ್ನು ಅಭ್ಯಸಿಸುವುದು ಬಹಳ ಮುಖ್ಯವಾಗುತ್ತದೆ. ಇದರೊಂದಿಗೆ, ಆಯಾ ಭಾಷೆಯ ಇತಿಹಾಸದಲ್ಲಿ ಲಭ್ಯವಿರುವ, ಸಾರ್ವಕಾಲಿಕವಾಗಿ ಪ್ರಸ್ತುತವೆನಿಸುವ ವಿಶಿಷ್ಟ ಸಾಹಿತ್ಯ ಕೃತಿಗಳು ಮತ್ತು ಚಿಂತನೆಗಳ ಮರುಓದು ಕೂಡ ಅಷ್ಟೇ ಮುಖ್ಯ.

ಇವುಗಳ ನಡುವೆ ವರ್ತಮಾನ ಕಾಲದಲ್ಲಿ ಸಾಹಿತಿಗಳಿಗೆ ಮತ್ತು ಸಾಹಿತ್ಯಾಸಕ್ತರಿಗೆ ಬಹಳ ಮುಖ್ಯವೆನಿಸುವ ಪ್ರಶ್ನೆಗಳೆಂದರೆ, ಪ್ರಸಕ್ತ ಚಾಲನೆಯಲ್ಲಿರುವ ಸಿದ್ಧಾಂತಗಳಿಗೆ ಹೇಗೆ ಸ್ಪಂದಿಸಬೇಕು? ಇವು ಸಾಹಿತ್ಯವನ್ನು ಮುನ್ನಡೆಸಲು ಪೂರಕವೇ ಅಥವಾ ಮಾರಕವೇ? ಒಂದು ಸಿದ್ಧಾಂತದಲ್ಲಿ ಗುರುತಿಸಿಕೊಂಡವರಿಗೆ, ಅನ್ಯ ಸಿದ್ಧಾಂತದವರು ಅಸ್ಪೃಶ್ಯರಾಗಬೇಕಾದ ಅಗತ್ಯವಿದೆಯೇ? ಓದುಗರು, ತಾವು ನೆಚ್ಚಿಕೊಂಡ ಸಿದ್ಧಾಂತಗಳ ಕನ್ನಡಕ ಹಾಕದೆ, ಅಭಿರುಚಿಗಾಗಿ ಮಾತ್ರ ಸಾಹಿತ್ಯ ಕೃತಿಗಳನ್ನು ಓದಲು ಅಥವಾ ಮೆಚ್ಚಲು ಸಾಧ್ಯವಿದೆಯೇ? ಈ ಪ್ರಶ್ನೆಗಳಿಗೆ ನಮ್ಮಲ್ಲಿ ಸಿದ್ಧ ಉತ್ತರವಿರಬಹುದು. ಆದರೂ, ಈ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೈಗೆತ್ತಿಕೊಳ್ಳುವುದು ಮತ್ತು ಚರ್ಚಿಸುವುದು, ಸಾಹಿತ್ಯದ ಭವಿಷ್ಯದ ದೃಷ್ಟಿಯಿಂದ ಒಂದು ಆರೋಗ್ಯಕರ ಬೆಳವಣಿಗೆಯಾಗಬಹುದು.

ಇತಿಹಾಸದ ಕಾಲಚಕ್ರದಲ್ಲಿ ವಿವಿಧ ಸಿದ್ಧಾಂತಗಳು ತಮ್ಮ ಪ್ರಾಬಲ್ಯ ಮತ್ತು ಹಿನ್ನಡೆ ಅನುಭವಿಸಿವೆ. ತಮ್ಮ ಸಿದ್ಧಾಂತದಲ್ಲಿ ಅಚಲ ವಿಶ್ವಾಸವಿಟ್ಟ ತತ್ತ್ವಶಾಸ್ತ್ರಜ್ಞರು, ಆವಿಷ್ಕಾರಿಗಳು ಮತ್ತು ಸಾಹಿತಿಗಳು ವಿರೋಧಿಗಳ ಆಕ್ರೋಶಗಳಿಗೆ ಬಲಿಯಾಗಿರುವುದು ಕೂಡ ನಡೆಯುತ್ತಾ ಬಂದಿದೆ. ಗ್ರೀಕ್ ತತ್ವಶಾಸ್ತ್ರಜ್ಞ ಸಾಕ್ರಟೀಸ್ ತಾನು ಕಂಡುಕೊಂಡ ಜೀವನತತ್ವಗಳನ್ನು ಯುವಜನತೆಗೆ ಮುಟ್ಟಿಸುವ ಪ್ರಯತ್ನಗಳನ್ನು ವಿರೋಧಿಸಿದ ಅಲ್ಲಿನ ರಾಜಕೀಯ ವ್ಯವಸ್ಥೆಯು ವಿಷ ಸೇವನೆಯ ಶಿಕ್ಷೆ ನೀಡಿದರೂ, ಅವನು ಧೈರ್ಯವಾಗಿ ಸ್ವೀಕರಿಸಿ ಪ್ರಾಣತ್ಯಾಗ ಮಾಡಿರುವುದು ಒಂದು ಧೀಮಂತ ಉದಾಹರಣೆ. ಇದರಿಂದ ಜಾಗೃತಗೊಂಡ ಅವನ ಮುಂದಿನ ಪೀಳಿಗೆಯ ಶಿಷ್ಯಂದಿರಾದ ಪ್ಲೇಟೊ ಮತ್ತು ಅರಿಸ್ಟಾಟಲ್ ಈ ಬಿಕ್ಕಟ್ಟನ್ನು ಬಹಳ ಎಚ್ಚರದಿಂದ ನಿಭಾಯಿಸಿದ್ದನ್ನು ಕಾಣುತ್ತೇವೆ.

ಜಗತ್ತಿನ ಶ್ರೇಷ್ಠ ನಾಟಕಕಾರನೆಂದು ಗುರುತಿಸಿಕೊಂಡ ಷೇಕ್ಸ್‌ಪಿಯರ್ ಕೂಡ ಧಾರ್ಮಿಕ ಸಂಘರ್ಷದ ಬಿಗಿ ವಾತಾವರಣದಲ್ಲೇ ಶ್ರೇಷ್ಠ ಸಾಹಿತ್ಯ ರಚಿಸಿದ ಎನ್ನುವುದು ಕೂಡ ವಿಸ್ಮಯ. ವ್ಯವಸ್ಥೆಯ ಪಾಲಕರು ಹಸ್ತಪ್ರತಿಯ ಮೇಲೆ ಕಣ್ಣಾಡಿಸಿ, ಅದರಲ್ಲಿ ವ್ಯವಸ್ಥೆಗೆ ಪ್ರತಿಕೂಲ ಹೇಳಿಕೆಗಳೇನಾದರೂ ಇವೆಯೇ ಎನ್ನುವುದನ್ನು ಕೂಲಂಕಷವಾಗಿ ಪರಿಶೀಲಿಸಿ ಒಪ್ಪಿಗೆ ಕೊಟ್ಟ ನಂತರವೇ ನಾಟಕಗಳ ಪ್ರದರ್ಶನಕ್ಕೆ ಅನುಮತಿ ನೀಡಲಾಗುತ್ತಿತ್ತು. ಕೊನೆಯ ನಾಟಕ 'ದಿ ಟೆಂಪೆಸ್ಟ್'ನಲ್ಲಿ ಮಾತ್ರ ರಾಜ ಜೇಮ್ಸ್‌ಗೆ ಸಹಿಷ್ಣುತೆಯ ರಾಜಧರ್ಮವನ್ನು ಬೋಧಿಸುತ್ತಾನೆ. ಉಳಿದೆಲ್ಲಾ ಕೃತಿಗಳಲ್ಲಿ, ಅವನು ಹೇಳಬೇಕಾದುದನ್ನು ಬಹಳ ಸೂಚ್ಯವಾಗಿ ಹೇಳಿದ್ದ. ಹೀಗಾಗಿ, 15-16ನೇ ಶತಮಾನದಲ್ಲಿ ಬದುಕಿದ ಷೇಕ್ಸ್‌ಪಿಯರ್‌ನ ಶ್ರೇಷ್ಠ ಸಾಹಿತ್ಯವನ್ನು ಬದಿಗಿರಿಸಿ, ಅವನು ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿದ್ದ ಎಂದು ದೂಷಿಸಬಹುದೇ?

ವರ್ತಮಾನ ಕಾಲದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಕಾನೂನಿನ ಚೌಕಟ್ಟಿನೊಳಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆಯೆನಿಸಿದರೂ ಹೆಚ್ಚಿನ ಸಂದರ್ಭಗಳಲ್ಲಿ ಅಧಿಕಾರಸ್ಥರ ಸಿದ್ಧಾಂತಕ್ಕೆ ಅನುಗುಣವಾಗಿ ಸಹಿಷ್ಣುತೆ ಅಥವಾ ಅಸಹಿಷ್ಣುತೆಯ ವಾತಾವರಣ ಇರುವುದನ್ನು ಸಾಹಿತಿಗಳು ಕಂಡುಕೊಳ್ಳುತ್ತಾರೆ.

ಮೂಲತಃ, ಯಾವುದೇ ಶ್ರೇಷ್ಠ ಸಾಹಿತ್ಯವು ಆಯಾ ಕಾಲದ ಪ್ರಜ್ಞೆ ಮತ್ತು ಆತ್ಮಸಾಕ್ಷಿಯನ್ನು ಸೃಷ್ಟಿಸುವ ಕೆಲಸ ಮಾಡುತ್ತದೆ. ಮನುಷ್ಯನಿಗೆ ತನ್ನನ್ನು ತಾನು ಅರ್ಥ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಸಾಹಿತ್ಯವು ಬಹುತ್ವಕ್ಕೆ ಸ್ಥಾನ ಕಲ್ಪಿಸಿಕೊಡಬೇಕೇ ವಿನಾ ಏಕಮುಖ ಅಭಿಪ್ರಾಯಗಳನ್ನಷ್ಟೇ ಪೋಷಿಸಬಾರದು. ವಿಭಿನ್ನ ಚಿಂತನೆಗಳ ಸಂಯಮದ ಮುಖಾಮುಖಿ ಮತ್ತು ಚರ್ಚೆಯಿಂದ ಸಾಹಿತ್ಯ ಹರಿಯುವ ನದಿಯಾಗುತ್ತದೆ. ಅಣೆಕಟ್ಟುಗಳನ್ನು ಕಟ್ಟಿ, ಪರಸ್ಪರ ನಿಷೇಧ ಹೇರಿದರೆ, ನಿಂತ ನೀರಂತೆ ಸೊರಗುತ್ತದೆ. ಅಂತಿಮವಾಗಿ, ಇದು ನಾವೆಲ್ಲಾ ಪ್ರೀತಿಸುವ ಕನ್ನಡ ಭಾಷೆಗಾಗುವ ನಷ್ಟ.

ಕನ್ನಡ ಬೆಳೆಸುವ ಕಾಯಕಕ್ಕೆ ಎಡ ಮತ್ತು ಬಲ ಎರಡೂ ಕೈಗಳು ಬೇಕು. ಫ್ರೆಂಚ್ ತತ್ವಜ್ಞಾನಿ ವೋಲ್ಟೇರ್ ಹೇಳಿದಂತೆ, 'ನಿನ್ನ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ, ಆದರೆ ಅದನ್ನು ಹೇಳುವ ನಿನ್ನ ಹಕ್ಕನ್ನು ನಾನು ಪ್ರಬಲವಾಗಿ ಸಮರ್ಥಿಸುತ್ತೇನೆ' ಎನ್ನುವ ಮಾತು ಈಗ ಅತ್ಯಂತ ಪ್ರಸಕ್ತವಾಗಿದೆ.

ವಾಚಕರ ವಾಣಿ

ಕನ್ನಡ ಮಾಧ್ಯಮ ಖಾಸಗಿ ಶಾಲೆ ಉಳಿಸಿ

ಕನ್ನಡ ಮಾಧ್ಯಮದಲ್ಲಿ ಬೋಧಿಸುತ್ತಿರುವ ಖಾಸಗಿ ಶಾಲೆಗಳ ಬಗ್ಗೆ ಸರ್ಕಾರವು ನಿರ್ಲಕ್ಷ್ಯ ಧೋರಣೆ ತಳೆಯುತ್ತಾ ಬಂದಿದೆ. ಈ ಸಂಬಂಧ ನಡೆದ ಬಹಳಷ್ಟು ಹೋರಾಟಗಳ ಸಂದರ್ಭದಲ್ಲಿ ಬಂದು ಮನವಿ ಸ್ವೀಕರಿಸಿ, ಕಾಲಮಿತಿಯೊಳಗೆ ಬೇಡಿಕೆಗಳನ್ನು ಈಡೇರಿಸಿಕೊಡುವುದಾಗಿ ಭರವಸೆ ನೀಡಿದ ಸಂಬಂಧಿಸಿದ ಸಚಿವರು ಈಗ ಚಕಾರವೆತ್ತುತ್ತಿಲ್ಲ. ಸರ್ಕಾರದ ಕೆಲವು ನಿರ್ಧಾರಗಳಿಂದ ಈ ಶಾಲೆಗಳು ತೀವ್ರ ಸಂಕಷ್ಟದ ಸ್ಥಿತಿಯಲ್ಲಿವೆ. ಭಾಷೆ, ನಾಡು, ನುಡಿಯ ಮೇಲಿನ ಅಭಿಮಾನದಿಂದ ಕನ್ನಡ ಮಾಧ್ಯಮ ಶಾಲೆಗಳನ್ನು ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಕೆಲವು ಖಾಸಗಿ ಸಂಸ್ಥೆಗಳು, ಮಠಗಳು ನಡೆಸಿಕೊಂಡು ಬರುತ್ತಿವೆ.

ಆದರೆ 1995ರ ನಂತರದ ಖಾಸಗಿ ಕನ್ನಡ ಶಾಲೆಗಳು ಈಗ ಮುಚ್ಚುವ ಹಂತಕ್ಕೆ ಬಂದಿವೆ. ಈಗ ಯಾವುದೇ ಸಂಸ್ಥೆಯವರು ಹೊಸದಾಗಿ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುತ್ತಿಲ್ಲ. ಕನ್ನಡ ಮಾಧ್ಯಮ ಖಾಸಗಿ ಶಾಲೆಗಳಿಗೆ ಅನುದಾನ ಕಲ್ಪಿಸಲು ಸರ್ಕಾರವು 2006ರವರೆಗೆ ಅನುವು ಮಾಡುತ್ತಿತ್ತು. ಆನಂತರ ಅದಕ್ಕೆ ಕತ್ತರಿ ಬಿತ್ತು. ಸರ್ಕಾರ ಈ ಹಿಂದಿನಂತೆ ಅನುದಾನ ಕೊಡಲು ಕ್ರಮ ಕೈಗೊಳ್ಳಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ನೋಟುಗಳಿಗೆ ಬೇಕು ತೀರುವಳಿ ದಿನಾಂಕ

ದೇಶದ ಆರ್ಥಿಕತೆಯು ಉತ್ತಮ ಸ್ಥಿತಿಯಲ್ಲಿಲ್ಲ, ಹೀಗಾಗಿ ಕರೆನ್ಸಿ ನೋಟುಗಳ ಮೇಲೆ ಮಹಾತ್ಮ ಗಾಂಧಿ ಭಾವಚಿತ್ರದ ಜೊತೆಗೆ ಲಕ್ಷ್ಮಿದೇವಿ, ಗಣೇಶನ ಚಿತ್ರಗಳನ್ನು ಹಾಕಬೇಕೆಂಬ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಹೇಳಿಕೆ ರಾಜಕೀಯ ವಲಯದಲ್ಲಿ ಪರ- ವಿರೋಧದ ಚರ್ಚೆಗೆ ವಸ್ತುವಾಗಿದೆ. ದೇವತೆಗಳ ಚಿತ್ರ ಹಾಕುವುದೋ ಬಿಡುವುದೋ ಎಂಬ ವಿಚಾರ ಒತ್ತಟ್ಟಿಗಿರಲಿ. ಆದರೆ, ಇನ್ನು ಮುಂದೆ ಅಚ್ಚಾಗುವ ಎಲ್ಲ ನೋಟುಗಳಲ್ಲೂ ಆ ನೋಟಿನ ತೀರುವಳಿ ದಿನಾಂಕ (ಎಕ್ಸ್‌ಪೈರಿ ಡೇಟ್) ಮುದ್ರಣಗೊಳ್ಳಲಿ. ಆಗ ಭಾರಿ ನೋಟುಗಳ ಅನವಶ್ಯಕ ಸಂಗ್ರಹ ನಿಲ್ಲುತ್ತದೆ. ಜೊತೆಗೆ ಲಂಚ ಪಡೆದ ಹಣ ಕೂಡಿಟ್ಟು ಕೊಳೆಯುವುದೂ ತಪ್ಪುತ್ತದೆ. ಕಪ್ಪುಹಣದ ಪ್ರಮಾಣ ಗಣನೀಯವಾಗಿ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ನಗದು ಚಲಾವಣೆಯೂ ನಿಂತು ಡಿಜಿಟಲ್ ವಹಿವಾಟು ಉತ್ತಮಗೊಳ್ಳುತ್ತದೆ. ಆರ್‌ಬಿಐ ಮತ್ತು ಕೇಂದ್ರ ಸರ್ಕಾರ ಈ ಕುರಿತು ಚಿಂತಿಸಿ ಜಾರಿಗೆ ತರಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಪುಸ್ತಕಕ್ಕೆ ಪ್ರತಿಭಟನೆ: ಅರಿವಿಲ್ಲದವರ ಅತಿರೇಕ

ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಕುರಿತು ಎಸ್.ಬಿ.ಸುಧಾಕರ್ ಅವರು ಬರೆದಿರುವ ಪುಸ್ತಕ ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನ ಕಲಾಗ್ರಾಮದ ಆವರಣದಲ್ಲಿ ಗುರುವಾರ ನಿಗದಿಯಾಗಿತ್ತಷ್ಟೆ. ಆದರೆ, ಹಿಂದೂ ಜನಜಾಗೃತಿ ಸಮಿತಿಯವರೆಂದು ಹೇಳಿಕೊಂಡ ಕೆಲವರು ತಕರಾರು ತೆಗೆದು, ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟು, ಕೊನೆಗೆ ಕಲಾಗ್ರಾಮದಲ್ಲಿ ಕಾರ್ಯಕ್ರಮಕ್ಕೆ ನಿರ್ಬಂಧ ಹೇರಿದ್ದರಿಂದ ಲೇಖಕರು ತಮ್ಮ ಮನೆಯಲ್ಲೇ ಪುಸ್ತಕ ಬಿಡುಗಡೆ ಮಾಡಿದ ಸುದ್ದಿ (ಪ್ರ.ವಾ., ಅ. 28) ಓದಿ ವಿಷಾದವಾಯಿತು. ಜೊತೆಗೆ, ಪ್ರತಿಭಟನೆ ಮಾಡಿದವರ ಬಗ್ಗೆ ಹೇವರಿಕೆಯೂ ಹುಟ್ಟಿತು. ಏಕೆಂದರೆ, ಹೀಗೆ ಗಲಾಟೆ ಮಾಡಿದವರ್‍ಯಾರೂ ಈ ಪುಸ್ತಕವನ್ನು ಓದಿದವರಲ್ಲ. ಕೇವಲ 'ಇಮ್ರಾನ್ ಖಾನ್' ಎನ್ನುವ ಶೀರ್ಷಿಕೆಯನ್ನು ನೋಡಿಯೇ ಇವರೆಲ್ಲ ಹೀಗೆ ಕುಪಿತರಾಗಿ ವರ್ತಿಸಿರುವುದು ಯಾರಿಗೇ ಆದರೂ ಗೊತ್ತಾಗುತ್ತದೆ. ಸಂಘಟನೆಗಳು ತಮ್ಮ ಕಾರ್ಯಕರ್ತರಿಗೆ ಸರಿಯಾದ ಬೌದ್ಧಿಕ ತರಬೇತಿ ಕೊಡದೆ ಇರುವುದರ ದುಷ್ಪರಿಣಾಮವಿದು. ಜೊತೆಗೆ, ಎಲ್ಲ ಸಂಘಟನೆಗಳೂ ತಮ್ಮೊಳಗೊಂದು 'ಪೊಲಿಟಿಕಲ್ ಅಜೆಂಡಾ'ವನ್ನು ಸಲಹುತ್ತಿರುವ ಪ್ರವೃತ್ತಿಯನ್ನು ಇದು ತೋರಿಸುತ್ತದೆ.

ಆದರೆ, ಹಿಂದೂ ಧರ್ಮವು ಸಂವಾದ ಮತ್ತು ವಾಗ್ವಾದಗಳಲ್ಲಿ ನಂಬಿಕೆ ಇಟ್ಟುಕೊಂಡಿರುವ ಉದಾರ ಧರ್ಮವೇ ವಿನಾ ಸಂಕುಚಿತ ಮನೋಧರ್ಮ ಇಲ್ಲಿಲ್ಲ. ಇಂತಹ ಪ್ರತಿಭಟನೆಗಳು ಒಮ್ಮುಖ ವಿಚಾರಗಳಿಗೆ ಆತುಕೊಂಡಿರುವವರಲ್ಲಿ ಇರುವ ಐಬು. ಇಂತಹ ಅವಲಕ್ಷಣವು ಈಗ ಹಿಂದೂ ಧರ್ಮಕ್ಕೂ ಬರುತ್ತಿರುವುದು ಒಳ್ಳೆಯದಲ್ಲ. ಹಿಂದೂ ಜನಜಾಗೃತಿ ಸಮಿತಿಯವರು ಇದನ್ನು ಅರಿಯಬೇಕು. ಇದನ್ನು ಬಿಟ್ಟು ಒಬ್ಬ ಲೇಖಕನಲ್ಲಿ ಆತಂಕವನ್ನು ಸೃಷ್ಟಿಸುವುದು ಖಂಡನೀಯ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

ಕೈ ಹಾಕಿದರೆ ಸಾಕು...!

ನಾಡಪ್ರಭು ಕೆಂಪೇಗೌಡರ ಕಂಚಿನ
ಪ್ರತಿಮೆ ಅನಾವರಣ ಸಂಬಂಧ
ಮೃತ್ತಿಕೆ ಸಂಗ್ರಹಿಸಲು
ಬೇರೆಲ್ಲೆಡೆ ಹಾರೆ, ಗುದ್ದಲಿ ಬೇಕು
ಬೆಂಗಳೂರಿನಲ್ಲಿ ಮಾತ್ರ
ರಸ್ತೆಯಲ್ಲಿನ ಗುಂಡಿಗಳಿಗೆ
ಬರಿ ಕೈ ಹಾಕಿದರೆ ಸಾಕು!

ಜೆ.ಬಿ.ಮಂಜುನಾಥ, ಪಾಂಡವಪುರ

ಭೂ ಮೋಜಣಿ: ಮಾಹಿತಿ ಯಾಕಿಲ್ಲ?

ರಾಜ್ಯದಲ್ಲಿ ಭೂಮಾಪನ ತರಬೇತಿ ಕೇಂದ್ರಗಳು ಇರುವ ಬಗ್ಗೆ ಹಲವಾರು ಜನರಿಗೆ ತಿಳಿವಳಿಕೆ ಇಲ್ಲ. ಈ ಕೇಂದ್ರಗಳ ಸಿಬ್ಬಂದಿಯು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ, ತಮ್ಮ ಕೇಂದ್ರದಲ್ಲಿ ಲಭ್ಯವಿರುವ ತರಬೇತಿಗಳ ಬಗ್ಗೆ ಮಾಹಿತಿ ನೀಡಿದ ಉದಾಹರಣೆ ಇಲ್ಲ. ಕೊನೆಯಪಕ್ಷ ಕರಪತ್ರ, ಪೋಸ್ಟರ್ ಮೂಲಕವಾದರೂ ತಮ್ಮ ಭಾಗದ ಯುವಕರನ್ನು ಸೆಳೆದು ತರಬೇತಿ ನೀಡಬಹುದು. ಆ ಮೂಲಕ ಅವರನ್ನು ಭೂ ಮೋಜಣಿ ಕಾರ್ಯಗಳಿಗೆ ಬಳಸಿಕೊಳ್ಳಬಹುದು.

ರೈತರ ಜಮೀನುಗಳ ಭೂ ಮೋಜಣಿಗೆ ಬಹಳ ಅವಶ್ಯವಾದ ಈ ಕಾರ್ಯದ ಬಗ್ಗೆ ಕೆಲವೇ ಕೆಲವು ಮಂದಿ ತಿಳಿದುಕೊಂಡಿದ್ದಾರೆ. ಹೀಗಾಗಿ, ಅವರ ಸಂಖ್ಯೆಯು ಮೋಜಣಿಗಳ ಬೇಡಿಕೆಗಳ ಈಡೇರಿಕೆಗೆ ಸಾಲದಾಗಿದೆ. ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿದವರಿಗೆ ಈ ವಿಷಯದಲ್ಲಿ ಒಂದು ಸರ್ಟಿಫಿಕೇಟ್ ಕೋರ್ಸ್ ಮಾಡಿದರೆ ಒಳ್ಳೆಯದು. ಇದರಿಂದ ನಿರುದ್ಯೋಗದ ಪ್ರಮಾಣವನ್ನು ಕಡಿಮೆ ಮಾಡಬಹುದು, ಜೀವನೋಪಾಯಕ್ಕೆ ಬೇಕಾದ ಹಣವನ್ನು ಕೂಡ ಗಳಿಸಬಹುದು.

ಎಸ್.ಆರ್.ಬಿರಾದಾರ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸದಾ ಮಿನುಗುವ ತಾರೆ

• ಅಭಿಲಾಷ್ ಪಿ.ಎಸ್.

ತಾನೇ ಉರಿದು ಮನೆಗೆ ಬೆಳಕು ಕೊಟ್ಟ ದೀಪವಿಂದು ನಂದಾದೀಪವಾಗಿ, ಗಗನದಲ್ಲಿರುವ ತಾರೆಯಂತೆ ಮಿನುಗುತ್ತಿದೆ... ಅದರ ಕಾಂತಿ ಕುಂದಿಲ್ಲ; ಕುಂದುವುದೂ ಇಲ್ಲ. ಅಭಿಮಾನಿಗಳ ನೆಚ್ಚಿನ 'ಅಪ್ಪು', ಚಂದನವನದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಗಲಿ ವರ್ಷ ಉರುಳಿದೆ. ಆದರೆ, ಅವರ ನೆನಪು ಇನ್ನೂ ಹಸಿರು.

ಪುನೀತ್ ರಾಜ್‌ಕುಮಾರ್ ಮೊದಲ ಪುಣ್ಯಸ್ಮರಣೆ ಇಂದು

'ಪವರ್ ಸ್ಟಾರ್' ಬಿರುದಿದ್ದರೂ ಅಭಿಮಾನಿಗಳ ನಡುವೆ ಈ ಪಟ್ಟವನ್ನು ಕೆಳಗಿಟ್ಟು 'ನಾನೂ ನಿಮ್ಮಲ್ಲೊಬ್ಬ' ಎಂಬಂತಿದ್ದ 'ರಾಜಕುಮಾರ' ಕಳೆದೊಂದು ವರ್ಷದಲ್ಲಿ ನಟನಾಗಿ ಅಷ್ಟೇ ಉಳಿದಿಲ್ಲ. ಕ್ಷಣಕ್ಷಣವೂ ಅವರನ್ನು ಜೀವಂತವಾಗಿರಿಸುವ ಹೆಜ್ಜೆಯನ್ನು ಇಟ್ಟವರು ಅಭಿಮಾನಿಗಳು. ಹಲವರಿಗೆ 'ಅಪ್ಪು' ದೇವರಾದರು, ಅವರಿಟ್ಟಿದ್ದ ಪುನೀತ ಹೆಜ್ಜೆ ಸಮಾಜಸೇವೆಗೆ ಮಾರ್ಗದರ್ಶನವಾಯಿತು, ಅದೆಷ್ಟೋ ಕಣ್ಣುಗಳು ಬೆಳಕು ಕಂಡವು, ಸಮಾಧಿಯ ಸುತ್ತ ಅದೆಷ್ಟೋ ಜೀವಗಳು ಬದುಕು ಕಟ್ಟಿಕೊಂಡವು! ಹೀಗೊಮ್ಮೆ ಹಿಂದಿರುಗಿ ನೋಡಿದರೆ ಈ ಅವಧಿಯಲ್ಲಿ ಭೌತಿಕವಾಗಿ ಪುನೀತ್ ಅವರನ್ನು ಕಾಣಲು ಅಸಾಧ್ಯವಾಗಿದ್ದರೂ, ಪ್ರತಿಯೊಬ್ಬರೂ ಪ್ರತಿ ಹೆಜ್ಜೆಯಲ್ಲೂ 'ಪರಮಾತ್ಮ'ನನ್ನು ಕಂಡರು, ಅನುಭವಿಸಿದರು.

ಅರಗಿಸಿಕೊಳ್ಳಲಾಗದ ನೋವಿನ ನಡುವೆಯೇ ಪುನೀತ್ ಅವರನ್ನು ಅಭಿಮಾನಿಗಳು, ಅಷ್ಟೇ ಯಾಕೆ ಸಾಮಾನ್ಯರೂ ಸಂಭ್ರಮಿಸಿದ್ದಾರೆ. ಹೀಗೆನ್ನುವಾಗ, ಬಸ್ ಮೇಲಿನ ಜಾಹೀರಾತಿನಲ್ಲಿದ್ದ ಪುನೀತ್ ಅವರ ಭಾವಚಿತ್ರವನ್ನು ಸ್ವಚ್ಛಗೊಳಿಸಿ, ಮುತ್ತಿಕ್ಕುವ ಕೊಪ್ಪಳದ ಅಜ್ಜಿ ನೆನಪಾಗುತ್ತಾಳೆ. ಅದು ಪುನೀತ್ ಅವರ ಮುಗ್ಧತೆ, ಸರಳತೆಗೆ ಪುರಾವೆ. ಹೀಗೆ ಅಭಿಮಾನಿಗಳ ಕಣ್ಣಹನಿಗಳು ನೂರು ಕಥೆಗಳನ್ನು ಹೇಳುತ್ತಿವೆ. ರಾಜ್‌ಕುಮಾರ್ ಅವರ ಮಡಿಲಲ್ಲೇ ಮಲಗಿರುವ ರಾಜರತ್ನನ ಸಮಾಧಿಗೆ ನಮಿಸಲು ಇಂದಿಗೂ ಪ್ರತಿನಿತ್ಯ ಸಾವಿರಾರು ಮಂದಿ ಕಂಠೀರವ ಸ್ಟುಡಿಯೊಕ್ಕೆ ಹೋಗುತ್ತಿದ್ದಾರೆ. ವರ್ಷ ಉರುಳಿದರೂ, ಈ ಸಂಖ್ಯೆ ಕಡಿಮೆಯಾಗಿಲ್ಲ. ಪ್ರತಿದಿನ ಸುಮಾರು ಐದರಿಂದ ಹತ್ತುಸಾವಿರ ಜನರು ಪುನೀತ್ ಸಮಾಧಿಗೆ ಭೇಟಿ ನೀಡುತ್ತಿದ್ದಾರೆ. ಪುನೀತ್ ಜನ್ಮದಿನದಂದು ಈ ಸಂಖ್ಯೆ ಐದಾರು ಪಟ್ಟು ಹೆಚ್ಚಿತ್ತು. ಸಮಾಧಿ ಸುತ್ತ ಸದಾ ಪುನೀತ ಧ್ಯಾನ. ಟಿ-ಶರ್ಟ್ ಮೇಲೆ, ಮೊಬೈಲ್ ಕವರ್‌ಗಳಲ್ಲಿ ಹೀಗೆ ಎಲ್ಲೆಲ್ಲೂ 'ದೊಡ್ಮನೆ ಹುಡ್ಗ'ನದ್ದೇ ದರ್ಬಾರು! ನೆಚ್ಚಿನ ನಟ ಸದಾ ಎದೆಯ ಬಳಿಯೇ ಇರಬೇಕು ಎನ್ನುವುದು ಅಭಿಮಾನಿಗಳ 'ಅಭಿ'ಲಾಷೆ!

ಇಂದು ಪ್ರತೀ ಕನ್ನಡ ಚಲನಚಿತ್ರವೂ ಪುನೀತ್ ಭಾವಚಿತ್ರದೊಂದಿಗೇ ತೆರೆದುಕೊಳ್ಳುತ್ತಿದೆ. ಚಿತ್ರರಂಗದ ಕಾರ್ಯಕ್ರಮಗಳಲ್ಲಿ 'ಅಪ್ಪು'ವಿನ ಸ್ಮರಣೆ ಮುಂದುವರಿದಿದೆ. ಪುನೀತ್ ಅಗಲಿದ್ದಾರೆ ಎನ್ನುವುದು ಮನಸ್ಸಿಗೆ ತಿಳಿದಿದ್ದರೂ, ಆ ನೋವು ಎದೆಗೆ ತಾಕದಂತೆ ಅಭಿಮಾನಿಗಳು 'ಅಪ್ಪು'ವನ್ನು ಸಂಭ್ರಮಿಸುತ್ತಿದ್ದಾರೆ. ಸಿನಿಪಯಣದ ಕೊನೆಯಲ್ಲಿ ಕಾಡು ಮೇಡೆಲ್ಲಾ ಸುತ್ತಿ ಪುನೀತ್ 'ಗಂಧದಗುಡಿ' ಸೇರಿದ್ದಾರೆ. ಆ ಗಂಧ ತೇದಷ್ಟೂ ಪರಿಮಳ ನೀಡುತ್ತಿದೆ. ಪುನೀತ್ ಅವರನ್ನು ಬೆಳ್ಳಿತೆರೆಯ ಮೇಲೆ ಸಂಭ್ರಮಿಸಲು ಇನ್ನು ಯಾವುದೇ ಹೊಸ ಚಿತ್ರಗಳಿಲ್ಲ. ಹೀಗಿದ್ದರೂ, ಯಾವುದಾದರೂ ಒಂದು ನೆಪವನ್ನಿಟ್ಟುಕೊಂಡು ಪುನೀತ್ ಅವರನ್ನು ನೆನಪಿಸಿಕೊಳ್ಳುವುದು, ಸಂಭ್ರಮಿಸುವುದು ಮುಂದುವರಿದಿದೆ. ಜೊತೆಗಿರದ ಅಪ್ಪು ಇಂದಿಗೂ ಜೀವಂತ!

'ಅಪ್ಪು'ಗೆ ಗೌರವ ಡಾಕ್ಟರೇಟ್

ಮೈಸೂರು ವಿಶ್ವವಿದ್ಯಾಲಯವು 102ನೇ ಘಟಿಕೋತ್ಸವದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ಪದವಿಯನ್ನು ಕಳೆದ ಮಾರ್ಚ್‌ನಲ್ಲಿ ನೀಡಿತು. 1976ರಲ್ಲಿ ವರನಟ ಡಾ.ರಾಜ್‌ಕುಮಾರ್ ಅವರಿಗೆ ಇದೇ ವಿ.ವಿ ಗೌರವ ಡಾಕ್ಟರೇಟ್ ನೀಡಿತ್ತು. ಅದನ್ನು ಸ್ವೀಕರಿಸುವಾಗ ರಾಜ್‌ಕುಮಾರ್ ಅವರಿಗೆ 47 ವರ್ಷ. ಪುನೀತ್ ಅವರಿಗೂ ಈ ಗೌರವ ದೊರಕಿದಾಗ 47 ವರ್ಷ!

'ಯುವರತ್ನ'ನಿಗೆ ಕರ್ನಾಟಕರತ್ನ ಗರಿ

ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ನ. 1ರಂದು 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಪ್ರದಾನ ಮಾಡಲಿದೆ. ಇಲ್ಲಿಯವರೆಗೆ ಎಂಟು ಜನರು ಈ ಪ್ರಶಸ್ತಿಗೆ ಭಾಜನರಾಗಿದ್ದು, 2009ರ ನಂತರ ಯಾರಿಗೂ ಇದನ್ನು ನೀಡಲಾಗಿರಲಿಲ್ಲ. ಕನ್ನಡ ಚಿತ್ರರಂಗ, ಭಾಷೆ, ಸಂಸ್ಕೃತಿಗೆ ಪುನೀತ್ ರಾಜ್‌ಕುಮಾರ್ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಸರ್ಕಾರ ಈ ಪ್ರಶಸ್ತಿ ನೀಡಲಿದೆ.



ಅಪ್ಪು ಆಂಬುಲೆನ್ಸ್

ಕಂಡರಿಯದ ಸಂಭ್ರಮ!

ಪುನೀತ್ ರಾಜ್‌ಕುಮಾರ್ ಅವರನ್ನು ಕರುನಾಡು ಸಂಭ್ರಮಿಸಿದ್ದು 'ಪುನೀತ ನಮನ' ಹಾಗೂ 'ಪುನೀತಪರ್ವ'ದಲ್ಲಿ. ಪುನೀತ ನಮನ ಕಾರ್ಯಕ್ರಮ ಖಾಸಗಿಯಾಗಿ ನಡೆದರೆ, 'ಗಂಧದಗುಡಿ' ಪ್ರಿ-ರಿಲೀಸ್ ನೆಪದಲ್ಲಿ ನಡೆದ ಪುನೀತಪರ್ವದಲ್ಲಿ ಲಕ್ಷಕ್ಕೂ ಅಧಿಕ ಅಭಿಮಾನಿಗಳು ಒಂದೆಡೆ ಸೇರಿ ಅಪ್ಪುವನ್ನು ನೆನೆದರು. ಚಿತ್ರರಂಗದ ಕಲಾವಿದರೂ ಪುನೀತ್ ಅವರ ಜೊತೆಗಿನ ಒಡನಾಟವನ್ನು ನೆನಪಿಸಿಕೊಳ್ಳಲು ಇದು ವೇದಿಕೆಯಾಯಿತು.

ಅಪ್ಪು ಎಕ್ಸ್‌ಪ್ರೆಸ್ ಆಂಬುಲೆನ್ಸ್: ನಟ ಪ್ರಕಾಶ್ ರಾಜ್ ಅವರು ತಮ್ಮ ಫೌಂಡೇಷನ್ ವತಿಯಿಂದ ಮೈಸೂರಿನಲ್ಲಿ 'ಅಪ್ಪು ಎಕ್ಸ್‌ಪ್ರೆಸ್' ಹೆಸರಿನಲ್ಲಿ ಆಂಬುಲೆನ್ಸ್ ಒಂದನ್ನು ಆಗಸ್ಟ್‌ನಲ್ಲಿ ಸೇವೆಗೆ ನೀಡಿದರು. ಈ ಕನಸನ್ನು ಪುನೀತಪರ್ವ ಕಾರ್ಯಕ್ರಮದಲ್ಲಿ ಪ್ರಕಾಶ್ ರಾಜ್ ಬಿಚ್ಚಿಟ್ಟಾಗ, ತಮಿಳು ನಟ ಸೂರ್ಯ, ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್, ತೆಲುಗು ನಟ ಚಿರಂಜೀವಿ ಅವರೂ ಇದಕ್ಕೆ ಕೈಜೋಡಿಸುವುದಾಗಿ ಹೇಳಿದರು. ರಾಜ್ಯದ ಎಲ್ಲ ಜಿಲ್ಲೆಗಳಿಗೆ ಈ ಅಪ್ಪು ಎಕ್ಸ್‌ಪ್ರೆಸ್ ಆಂಬುಲೆನ್ಸ್ ನೀಡಲು ಬೇಕಾಗುವ ಧನಸಹಾಯವನ್ನು ಯಶೋಮಾರ್ಗ ಫೌಂಡೇಷನ್ ಮೂಲಕ ನೀಡುವುದಾಗಿ ನಟ ಯಶ್ ಕೂಡಾ ಘೋಷಿಸಿದರು.

ಮತ್ತೆ ಉಸಿರಾಡಿದ 'ಅಪ್ಪು'

2021ರ ಅ.29ರಂದು ಪುನೀತ್ ಅವರ ಅಕಾಲಿಕ ನಿಧನ ಇಡೀ ಕನ್ನಡ ಚಿತ್ರರಂಗವನ್ನು ಆಘಾತಕ್ಕೆ ದೂಡಿತ್ತು. ಈ ಆಘಾತದಿಂದ ಹೊರಕ್ಕೆ ಬರಲು ತಿಂಗಳುಗಳೇ ಬೇಕಾದವು. ಈ ಸಂದರ್ಭದಲ್ಲಿ ಪುನೀತ್ ಅವರ ಮೂರು ಪ್ರಾಜೆಕ್ಟ್‌ಗಳು ಅಂತಿಮ ಹಂತದಲ್ಲಿದ್ದವು. ಅವರು ಹೀರೊ ಆಗಿ ಕಾಣಿಸಿಕೊಂಡ ಕೊನೆಯ ಕಮರ್ಷಿಯಲ್ ಸಿನಿಮಾ, ಚೇತನ್ ಕುಮಾರ್ ನಿರ್ದೇಶನದ 'ಜೇಮ್ಸ್' 2022ರಲ್ಲಿ ಪುನೀತ್ ಅವರ ಜನ್ಮದಿನದಂದು (ಮಾರ್ಚ್ 17) ತೆರೆಕಂಡಿತ್ತು. ಕರ್ನಾಟಕ ಸೇರಿದಂತೆ ವಿಶ್ವವ್ಯಾಪಿ ಒಟ್ಟು 4 ಸಾವಿರಕ್ಕೂ ಅಧಿಕ ತೆರೆಗಳಲ್ಲಿ ಸಿನಿಮಾ ಪ್ರದರ್ಶನ ಕಂಡಿದ್ದು ದಾಖಲೆ. ಬಾಕ್ಸ್ ಆಫೀಸ್‌ನಲ್ಲೂ ಸಿನಿಮಾ ₹100 ಕೋಟಿ ಕ್ಲಬ್ ಸೇರಿತ್ತು. ಡಬ್ಬಿಂಗ್ ಪೂರ್ಣಗೊಳ್ಳುವ ಮೊದಲೇ ಪುನೀತ್ ಅವರು ನಿಧನರಾದ ಕಾರಣ ನಟ ಶಿವರಾಜ್‌ಕುಮಾರ್ ಅವರು ಪುನೀತ್ ಅವರ ಪಾತ್ರಕ್ಕೆ ಧ್ವನಿ ನೀಡಿದ್ದರು. ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ಪುನೀತ್ ಅವರ ಧ್ವನಿಯನ್ನೇ ಪುನರ್‌ರೂಪಿಸಿ, ಏಪ್ರಿಲ್‌ನಲ್ಲಿ ಈ ಸಿನಿಮಾ ರಿ-ರಿಲೀಸ್ ಕಂಡಿತು.

ಇದಾದ ಬಳಿಕ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿದ 'ಲಕ್ಕಿಮ್ಯಾನ್' ಸಿನಿಮಾ ತೆರೆಕಂಡಿತು. ಇದರಲ್ಲಿ ದೇವರ ಪಾತ್ರದಲ್ಲೇ ಪುನೀತ್ ಅವರು ಕಾಣಿಸಿಕೊಂಡಿದ್ದು ಕಾಕತಾಳೀಯ! ಅಪ್ಪುವಿನಲ್ಲಿ ದೇವರನ್ನು ಕಂಡಿದ್ದ ಅಭಿಮಾನಿಗಳು ಈ ಚಿತ್ರವನ್ನು ದೇವರೇ ಎದುರಿಗೆ ಬಂದಂತೆ ಸ್ವೀಕರಿಸಿದರು.

ಪುನೀತ್ ಅವರ ನೈಜ ಬದುಕೇ ತೆರೆ ಮೇಲೆ ಕಂಡಿದ್ದು 'ಗಂಧದಗುಡಿ'ಯ ಮೂಲಕ. ಅಮೋಘವರ್ಷ ನಿರ್ದೇಶನದ ಈ ಡಾಕ್ಯೂಫಿಲಂ ವೀಕ್ಷಕರ ಕಣ್ಣನ್ನು ತೇವಗೊಳಿಸಿದೆ. ಕರುನಾಡಿನ ಸೌಂದರ್ಯದ ಜೊತೆಗೆ ಪುನೀತ್ ಅವರ ವ್ಯಕ್ತಿತ್ವದ ಸೌಂದರ್ಯವೂ ಇಲ್ಲಿ ತಂಗಾಳಿಯಂತೆ ಸೂಸಿದೆ.

ಸದಾ ಹರಿಯುವ ನೀರಿನಂತೆ ಕಂಠೀರವ ಸ್ಟುಡಿಯೊಗೆ ಭೇಟಿ ನೀಡುತ್ತಲೇ ಇದ್ದಾರೆ ಅಭಿಮಾನಿಗಳು

ಪ್ರಜಾವಾಣಿ ಚಿತ್ರಗಳು: ಎಂ.ಎಸ್. ಮಂಜುನಾಥ್



ಶಿವನ ಸಮಾಧಾನಿಸಿದ ನಾರದ

ನಾರದನ ಅವಸ್ಥೆ ನೋಡಿ ವಿಷ್ಣು, ಬ್ರಹ್ಮ, ಇಂದ್ರ ಮೊದಲಾದವರು ಏನಾಯಿತು ಎಂದು ಪ್ರಶ್ನಿಸಿದರು. ವಿವಾಹಮಂಟಪದಲ್ಲಿ ನಮ್ಮೆಲ್ಲರ ಪ್ರತಿಮೆಯನ್ನು ವಿಶ್ವಕರ್ಮ ನಿರ್ಮಿಸಿದ್ದಾನೆ. ಅವೆಲ್ಲಾ ಜೀವಂತವಿರುವಂತೆ ಕಾಣುತ್ತದೆ. ಅದನ್ನು ನೋಡಿ ನಾನು ನಿಜವೆಂದು ಭ್ರಮಿಸಿದ್ದೆ. ಅದರಲ್ಲೂ ವಿಶೇಷವಾಗಿ ದೇವತೆಗಳನ್ನು ಮೋಹಗೊಳಿಸುವುದಕ್ಕಾಗಿ ಚಿತ್ರರೂಪದ ಮಾಯೆಯನ್ನು ವಿಶ್ವಕರ್ಮ ನಿರ್ಮಿಸಿದ್ದಾನೆ – ಎಂದಾಗ ದೇವೇಂದ್ರ ಭಯಭೀತನಾದ.

ಹರಿಯ ಬಳಿ ಬಂದ ಇಂದ್ರ, 'ಓ ಲಕ್ಷ್ಮೀಪತಿಯೇ, ವಿಶ್ವಕರ್ಮ ನನ್ನನ್ನು ಹಿಂಸಿಸಬೇಕೆಂದು ಉದ್ದೇಶಿಸಿರುವಂತಿದೆ. ಏಕೆಂದರೆ, ಅವನ ಪುತ್ರನನ್ನು ನಾನು ಈ ಹಿಂದೆ ಸಂಹರಿಸಿದ್ದೆ. ಆ ಪುತ್ರಶೋಕದಿಂದ ದುಃಖಿತನಾದ ವಿಶ್ವಕರ್ಮ ಈಗ ಶಿಲ್ಪವ್ಯಾಜದಿಂದ ನನ್ನನ್ನು ಹಿಂಸಿಸಲು ಯೋಜಿಸಿದ್ದಾನೆ' ಎಂದು ಅಳಲುತೋಡಿಕೊಂಡ.

ಇಂದ್ರನ ಮಾತನ್ನು ಕೇಳಿ ಜನಾರ್ದನ ನಗುತ್ತಾ, 'ಇಂದ್ರ, ನಿನ್ನ ಹಿಂದಿನ ಶತ್ರುಗಳಾದ ನಿವಾತಕವಚ ಎಂಬ ದೈತ್ಯರು ಸಹ ತಮ್ಮ ಮಾಯಾಬಲದಿಂದ ನಿನ್ನನ್ನು ಮೋಹಗೊಳಿಸಿದ್ದರು. ಪರ್ವತರಾಜನಾದ ಈ ಹಿಮವಂತನ ಮತ್ತು ಮಿಕ್ಕ ಎಲ್ಲಾ ಪರ್ವತಗಳ ರೆಕ್ಕೆಯನ್ನೂ ನೀನು ನನ್ನ ಮಾತಿನಂತೆ ಹಿಂದೆ ಕತ್ತರಿಸಿದ್ದೆ. ಆ ಗಿರಿಗಳೆಲ್ಲವೂ ಈಗ ಹಿಂದಿನ ನಿನ್ನ ಕೃತ್ಯವನ್ನು ನೆನೆದು ನಿನ್ನ ಮೇಲೆ ದಾಳಿ ಮಾಡಬಹುದೆಂದು ನೀನು ಹೆದರಬೇಕಾಗಿಲ್ಲ. ಭಕ್ತವತ್ಸಲನಾದ ಪರಮೇಶ್ವರ ನಮ್ಮ ಜೊತೆಗಿದ್ದಾನೆ, ನಿಶ್ಚಿಂತನಾಗಿರು' ಎಂದು ಧೈರ್ಯ ತುಂಬಿದ.

ಹೀಗೆ ಹರಿ ಮತ್ತು ಇಂದ್ರ ಪರಸ್ಪರ ಮಾತನಾಡುತ್ತಿರುವುದನ್ನು ನೋಡಿದ ಶಿವನಿಗೆ ಏನೋ ತಪ್ಪಾಗಿದೆ ಅನ್ನೋ ಸಂದೇಹ ಉಂಟಾಗಿ, 'ಎಲೈ ಹರಿ, ಎಲೈ ದೇವೇಂದ್ರ, ನೀವೀರ್ವರೂ ಪರಸ್ಪರ ಏನು ಮಾತಾಡಿಕೊಳ್ಳುತ್ತಿದ್ದೀರಿ? ಎಲೈ ನಾರದ ಹಿಮವಂತನ ಅರಮನೆಯಲ್ಲಿ ಏನು ನಡೆಯಿತು? ಯಾವುದನ್ನೂ ಮರೆಮಾಚಬೇಡ. ಗಿರಿರಾಜ ತನ್ನ ಮಗಳನ್ನು ಕೊಡಬೇಕೆಂದಿರುವನೋ, ಇಲ್ಲವೋ? ಅದನ್ನು ಬೇಗನೆ ಹೇಳು' ಎಂದ. ಹೀಗೆ ಪರಮೇಶ್ವರ ಆತುರದಿಂದ ಕೇಳಿದಾಗ, ನಾರದ ಸಾವಧಾನದಿಂದ ಹಿಮವಂತನ ಅರಮನೆಯಲ್ಲಿ ತಾನು ನೋಡಿ ಅನುಭವಿಸಿದ ಎಲ್ಲಾ ಘಟನೆಗಳನ್ನು ವಿವರಿಸಿ, 'ನಿನ್ನ ಮದುವೆಗೆ ಯಾವ ತೊಂದರೆಯೂ ಇಲ್ಲ. ವಿಶ್ವಕರ್ಮನು ದೇವತೆಗಳನ್ನು ಮೋಹಗೊಳಿಸಲು ಮಹಾಮಾಯೆಯನ್ನು ಕುತೂಹಲಕ್ಕಾಗಿ ರಚಿಸಿದ್ದಾನಷ್ಟೆ. ಅದನ್ನು ನೋಡಿ ನಾನೂ ಆ ಮಾಯೆಯಿಂದ ಮೋಹಿತನಾಗಿ ಆಶ್ಚರ್ಯಗೊಂಡೆ' ಎಂದ.

ನಾರದನ ಮಾತು ಕೇಳಿ ಶಂಕರ ನಗುತ್ತಾ, 'ಪರ್ವತರಾಜ ನನಗೆ ತನ್ನ ಪುತ್ರಿಯನ್ನು ಮದುವೆ ಮಾಡಿಕೊಡುವವನಾದರೆ ಮಾಯೆಯಿಂದ ನನಗೇನು ಆಗಬೇಕು? ವಿಷ್ಣು, ಬ್ರಹ್ಮ, ಇಂದ್ರ, ಮುನಿಗಳೇ ನಿಜಾಂಶವನ್ನು ಹೇಳಿರಿ. ನೀವೆಲ್ಲರೂ ನಮ್ಮ ಕಾರ್ಯವನ್ನು ಸಾಧಿಸಲು ಜಾಗ್ರತೆಯಾಗಿ ಮುಂದೆ ತೆರಳಿರಿ' ಎಂದ.

ಶಂಕರನ ಅಪ್ಪಣೆಯಂತೆ ಹರಿ, ಬ್ರಹ್ಮ ಮೊದಲಾದ ದೇವತೆಗಳು, ಮಹಾತ್ಮರಾದ ಋಷಿಗಳೂ ಹಿಮವಂತನ ಸಂಬಂಧಿಕರಾದ ಪರ್ವತೋತ್ತಮರನ್ನು ಮುಂದುಮಾಡಿಕೊಂಡು ಮಹಾ ಅದ್ಭುತವಾದ ಹಿಮವಂತನ ಅರಮನೆಗೆ ಹೊರಟರು. ಶಿವ ತನ್ನ ಪರಿವಾರದವರೊಡನೆ ಹಿಮವಂತನ ರಾಜಧಾನಿಯ ಸಮೀಪಕ್ಕೆ ಬಂದ.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಎರಡನೆಯದಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

ನಟಸಾರ್ವಭೌಮ ಹೀಗೆ 'ಅಮರ'

- ಶಕ್ತಿಧಾಮದ ಪ್ರತಿ ಚಟುವಟಿಕೆಯಲ್ಲೂ ಪುನೀತ್ ಸಾನ್ನಿಧ್ಯ ಕಾಣುತ್ತಿದೆ. ಪುನೀತ್ ಕನಸುಗಳನ್ನು ನಟ ಶಿವರಾಜ್‌ಕುಮಾರ್ ದಂಪತಿ ಈಡೇರಿಸುತ್ತಿದ್ದಾರೆ. ತಮಿಳು ನಟ ವಿಶಾಲ್ ಕೂಡಾ ಇಲ್ಲಿನ ಯೋಜನೆಗಳಿಗೆ ಕೈಜೋಡಿಸಲು ಉತ್ಸುಕರಾಗಿ, ಶಕ್ತಿಧಾಮಕ್ಕೂ ಭೇಟಿ ನೀಡಿದ್ದಾರೆ.
- ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಡಾ.ರಾಜ್, ಪುನೀತ್ ರಾಜ್‌ಕುಮಾರ್ ಪರಿಕಲ್ಪನೆ ಆಧಾರಿತ ಫಲಪುಷ್ಪ ಪ್ರದರ್ಶನ ಕಳೆದ ಆಗಸ್ಟ್‌ನಲ್ಲಿ ನಡೆಯಿತು. ಈ ಬಾರಿಯ ದಸರಾ ಹಬ್ಬ ಹಾಗೂ ಯುವ ದಸರಾಗೂ ಪುನೀತ್ ಅವರ ಸ್ಪರ್ಶವಿತ್ತು.
- ಕಳೆದ ನವೆಂಬರ್‌ನಿಂದ ಇತ್ತೀಚಿನವರೆಗೆ ಬಿಡುಗಡೆಯಾದ ಎಲ್ಲ ಕನ್ನಡ ಸಿನಿಮಾಗಳಲ್ಲಿ (ಅಂದಾಜು 200) ಪುನೀತ್ ಅವರನ್ನು ಚಿತ್ರತಂಡವು ನೆನಪಿಸಿಕೊಂಡಿದೆ. ಪುನೀತ್ ಅವರ ಭಾವಚಿತ್ರದೊಂದಿಗೇ ಪ್ರತಿ ಸಿನಿಮಾ ಆರಂಭಗೊಂಡಿದೆ. ರಾಜ್‌ಕುಮಾರ್ ಅವರು ನಿಧನರಾದ ಸಂದರ್ಭದಲ್ಲೂ ಈ ರೀತಿ ಚಿತ್ರರಂಗವು ಹಲವು ತಿಂಗಳು ನೆನಪಿಸಿಕೊಂಡಿತ್ತು. ಆದರೆ ವರ್ಷ ಉರುಳಿದರೂ, ಪುನೀತ್ ಅವರನ್ನು ಚಿತ್ರರಂಗ ಕಿಂಚಿತ್ತೂ ಮರೆತಿಲ್ಲ.
- ನಿರ್ದೇಶಕರಾದ ಯೋಗರಾಜ್ ಭಟ್ ಹಾಗೂ ಪವನ್ ಒಡೆಯರ್ ಅವರು ಪುನೀತ್ ನಿಧನರಾದ ಬಳಿಕ ನಿರ್ಮಾಣ ಮಾಡಿ, ಪುನೀತ್ ಅವರಿಗೆ ಅರ್ಪಿಸಿದ್ದ ಹಾಡುಗಳು ಇಂದೂ ಹಸಿರಾಗಿವೆ.
- ಪುನೀತ್ ಅವರ ನೆಚ್ಚಿನ ತಾಣ ಹೊಸಪೇಟೆಯಲ್ಲಿ ರಾರಾಜಿಸುತ್ತಿದೆ ಪುನೀತ್ ಅವರ 7.4 ಅಡಿ ಎತ್ತರದ ಕಂಚಿನ ಪುತ್ಥಳಿ.
- ಪವನ್ ಕುಮಾರ್ ನಿರ್ದೇಶನದ 'ದ್ವಿತ್ವ' ಸಿನಿಮಾದಲ್ಲಿ ಪುನೀತ್ ನಟಿಸಬೇಕಿತ್ತು. ಇದು ನನಸಾಗಲಿಲ್ಲ. ಹೀಗಿದ್ದರೂ, ಅಭಿಮಾನಿಗಳು ತಮ್ಮದೇ ಕಲ್ಪನೆಯಲ್ಲಿ ದ್ವಿತ್ವ ಸಿನಿಮಾದಲ್ಲಿ ಪುನೀತ್ ಅವರ ಪಾತ್ರವನ್ನು ಸೃಷ್ಟಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಬೇರೆಯವರ ನಟನೆಯಲ್ಲಿ ಈ ಸಿನಿಮಾವನ್ನು ಚಿತ್ರೀಕರಿಸಲು ಪವನ್ ಅವರಿಗೂ ಇಷ್ಟವಿಲ್ಲ. ಪುನೀತ್ ಅವರ ವೈಬ್ ಇರುವ ಬೇರೊಬ್ಬ ನಟ ಸಿಗುವುದಿಲ್ಲ ಎನ್ನುವುದು ಅವರ ಅಂಬೋಣ. ಹೀಗಾಗಿ ಸದ್ಯಕ್ಕೆ ಈ ಪ್ರಾಜೆಕ್ಟ್ ಅನ್ನು ಅವರು ಪಕ್ಕಕ್ಕಿಟ್ಟಿದ್ದಾರೆ.

ಪದಬಂಧ 5122

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಸ್ತವ್ಯಸ್ತವಾಗಿರುವ ಜಾಗದಲ್ಲೇ ಮೊಕ್ಕಾಂ! (3)
4.ಭಾಜಿಸುವ ಸಂಖ್ಯೆ (3)
6.ರಾಜ್ಯದ ಚುನಾಯಿತ ಶಾಸಕರ ಮಂಡಲಿ (5)
8.ಕೆಲಸಲ ಮಾತ್ರ ಕಾಣಿಸುವ ಗಂಡಾನೆ (3)
9.ನವಜೀವನವಿದು (5)
12.ಇದು ನಿಜವಲ್ಲ!ಸ್ವಪ್ನ! (3)
13.ಈತ ಕಾನನವನ್ನು ಕಾಪಾಡುವವನು (5)
15.ಅರಿವನ್ನುಂಟುಮಾಡುವ ಮಸ್ತಿಷ್ಕ (3)
16.ಕರುಣಾಜನಕ ಸ್ಥಿತಿಯಲ್ಲಿರುವ ತಂದೆ (3)

ಮೇಲಿಂದ ಕೆಳಕ್ಕೆ
1.ಕಲ್ಪನೆಯಲ್ಲ ನಿಜವಾಗಿ ಇರುವಂಥದ್ದು (4)
2.ವ್ಯವಸಾಯಗಾರನ ಅಳಲು! (3)
3.ಪಾತ್ರೆ ಗಲಬರಿಸುವಾಗ ನಡೆದ ಗಲಾಟೆ (3)
5.ನಗರದಲ್ಲಿ ನಡೆದಿರುವ ಉತ್ಸವ (3)
7.ಮಾಸದ ಕೊನೆಯಲ್ಲಿ ಒಂದಾಗಿ ಸೇರಿಸಿದುದು (3)
8.ಸರಕ್ಕನೆ ಹೋಗಿತಂದಿರುವ ಸಾಮಾನು (3)
9.ಹೊಲದ ಸುತ್ತಲಿರುವ ಗಲೀಜು (3)
10.ಸ್ವೀಕರಿಸಲು ಹಿತವಲ್ಲದ ದಾನ (3)
11.ಯಾವುದೇ ಕಳಂಕ ಇಲ್ಲದಿರುವುದು (4)
12.ಕಡಿತವಾದ ಮೇಲೆ ಈ ನ್ಯೂನತೆ (3)
13.ಹಲ್ಲುಗಳಿಗೆ ಆಧಾರವಾದ ಮಾಂಸಖಂಡ (3)
14.ಪಾದರಸ ಇಲ್ಲಿದೆ (3)



5121ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಗಾವುದ 4.ದಡಿಯ
5.ವೀರಗಾಥೆ 6.ಕಡವರ
7.ಕಲೆ 10.ಪ್ರತಿಬಂಧಕ
12.ಕ್ಷಯ
14.ಬೋಣಿಮಾಡು
17.ಅಮಾಯಕಿ 18.ರಥಿಕ
19.ಆರಂಬ

ಮೇಲಿಂದ ಕೆಳಕ್ಕೆ:
1.ಅಂದಣ 2.ಗಾಯಕ
3.ಅಂಗಾರಕ
5.ವೀರಯೋಧ 8.ಲೆಪ್ಪ
9.ಅಕ್ಷ 11.ತಿರುಬೋಕಿ
13.ಯಜಮಾನಿ
15.ಡುರಬ 16.ಬಕರ

ಸುಡೊಕು 5508

5			8		1	9		2
							3	
3		1	2		9		5	6
	1	7			8	3		
				2				4
8		3	9				6	
1			7		2	4		3
		8		4			1	
	3		1		5		7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5507 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಅಕ್ಟೋಬರ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ಥಿ ಗಂ. 08-14, ಪಂಚಮಿ ಗಂ. 29-50 ನಕ್ಷತ್ರ: ಜ್ಯೇಷ್ಠ ಗಂ. 09-06 ಯೋಗ: ಅತಿಗಂಡ, ಗಂ. 22-22, ಕರಣ: ವಿಷ್ಟಿ ಗಂ. 08-14, ತುಲಾ ಮಾಸದ 11 ನೇ ದಿನ. ರಾಹುಕಾಲ: ಬೆಳಿಗ್ಗೆ 09-00– 10:30 ಸೂರ್ಯೋದಯ: 06-27 ಸೂರ್ಯಾಸ್ತ: 06-01
ಮುಸ್ಲಿಂ ದಿನಾಂಕ: 02 ರಬಿಯುಸ್ಸಾನಿ
ದಿನ ವಿಶೇಷ: ಜ್ಞಾನ ಪಂಚಮಿ (ಜೈನ್)
ಅದೃಷ್ಟ ಸಂಖ್ಯೆ: 3, 8

ಮೇಷ: ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಬದುಕಿನಲ್ಲಿ ಮುಂದಿನ ಹೆಜ್ಜೆ ಇಡುವುದು ಉತ್ತಮ. ಛಾಯಾಗ್ರಾಹಕರಿಗೆ ಪ್ರಶಸ್ತಿ ಪಡೆಯುವಂತಹ ಹೆಚ್ಚಿನ ಅವಕಾಶಗಳು ಸಿಗಲಿವೆ.

ವೃಷಭ: ಕೆಲಸದ ನಿಮಿತ್ತ ವಿದೇಶ ಪ್ರಯಾಣ ಮಾಡಬೇಕಾಗಬಹುದು. ಗಣ್ಯ ವ್ಯಕ್ತಿಗಳ ಪರಿಚಯ ನಿಮ್ಮ ಸ್ವಂತ ಕೆಲಸವೊಂದಕ್ಕೆ ಸಹಾಯವಾಗುವುದು. ಮನೆಯಲ್ಲಿ ನಿಂತಿದ್ದ ಕಾರ್ಯಗಳನ್ನು ಪುನಃ ಆರಂಭಿಸುವ ಬಗ್ಗೆ ಯೋಚಿಸಿ.

ಮಿಥುನ: ಆಫೀಸಿನಲ್ಲಿ ನಿಮ್ಮ ಕೆಲಸಕ್ಕೆ ಸಿಬ್ಬಂದಿಗಳಿಂದ ಅಡೆತಡೆಗಳು ಎದುರಾಗಬಹುದು. ಷೇರುಗಳನ್ನು ಕೊಳ್ಳುವಲ್ಲಿ ನಿಮ್ಮ ಲೆಕ್ಕಾಚಾರ ವ್ಯತ್ಯಾಸವಾಗಲಿದೆ, ಗಮನವಿರಲಿ. ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಅನಿವಾರ್ಯವಾಗಲಿದೆ.

ಕರ್ಕಾಟಕ: ನಿಮಗೆ ಎದುರಾಗುವ ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ, ಇನ್ನಷ್ಟು ಮನೋಬಲವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನದಲ್ಲಿರಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಉಂಟಾಗುತ್ತದೆ.

ಸಿಂಹ: ಗೊಂದಲದ ಸಮಯದಲ್ಲಿ ಯಾವ ಹಾದಿಯನ್ನು ಆಯ್ದುಕೊಳ್ಳಬೇಕೆಂದು ಖಚಿತವಿಲ್ಲದಿದ್ದರೂ ನೀವು ಮತ್ತೊಂದು ಅವಕಾಶವನ್ನು ಪರ್ಯಾಯವಾಗಿಟ್ಟುಕೊಳ್ಳುವ ಜಾಣ್ಮೆಯನ್ನು ಪ್ರದರ್ಶಿಸಿ. ಪ್ರವಾಸಿ ಏಜೆಂಟರಿಗೆ ಆದಾಯ.

ಕನ್ಯಾ: ಮನೆಯ ನವೀಕರಣಗೊಳಿಸಲು ಮುಂದಾದ ವ್ಯಕ್ತಿಗಳು ವಾಸ್ತುಶಾಸ್ತ್ರದ ಬಗ್ಗೆ ಗಮನಹರಿಸಿ. ರಫ್ತು ವ್ಯಾಪಾರದ ಒಪ್ಪಂದವೊಂದು ಧನಲಾಭ ತರಲಿದೆ. ಆಹಾರ ಧಾನ್ಯಗಳ ಬೆಳೆಗಾರರಿಗೆ ಹೆಚ್ಚಿನ ಲಾಭವಿರುವುದು.

ತುಲಾ: ಸ್ವಲ್ಪ ಪರಿಶ್ರಮ ಕೂಡ ಈ ದಿನ ಕಾರ್ಯಸಾಧನೆಯಲ್ಲಿ ಹೆಚ್ಚಿನ ಫಲ ನೀಡಲಿದೆ. ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಪ್ರದರ್ಶಿಸಿ. ನಂತರದಲ್ಲಿ ನಿಮ್ಮ ಜೀವನದಲ್ಲಿ ಹೊಸದೊಂದು ಅಧ್ಯಾಯ ಶುರುವಾಗಲಿದೆ.

ವೃಶ್ಚಿಕ: ಕೆಲವರು ನಿಮ್ಮನ್ನು ಅಪಹಾಸ್ಯ ಮಾಡುವ ಅಥವಾ ಕೆಣಕುವಂತಹ ಪ್ರಯತ್ನಕ್ಕೆ ಹೋಗುವರು. ಅವರನ್ನು ಸಮಾಧಾನದಿಂದ ಎದುರಿಸುವುದು ನಿಮ್ಮ ಬುದ್ಧಿವಂತಿಕೆಯ ಗುಣ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು.

ಧನು: ವಕೀಲರು ತಮ್ಮ ಕಾರ್ಯಗಳಲ್ಲಿ ಯಶಸ್ಸು ಕಾಣುವರು. ಕಟ್ಟಡ ಕಾರ್ಮಿಕರಿಗೆ ಈ ದಿನ ಉಡುಗೊರೆಸಹಿತವಾಗಿ ಹೆಚ್ಚಿನ ಸಂಪಾದನೆ ಇರುವುದು. ನಿರುದ್ಯೋಗಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಉತ್ತಮ ಉದ್ಯೋಗ ದೊರೆಯಲಿದೆ.

ಮಕರ: ಮಹಿಳೆಯರಿಗೆ ಆದರ, ಮನ್ನಣೆ ಹೆಚ್ಚಲಿದ್ದು ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ. ವಿವಾಹ ಸಂಬಂಧದ ಮಾತುಕತೆಗಳು ಫಲ ಕಾರಿಯಾಗುವುದು.

ಕುಂಭ: ನೀವು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವಿರಿ ಹಾಗೂ ನೀವಿಟ್ಟ ಸಣ್ಣ ಹೆಜ್ಜೆಯೂ ಮಹತ್ವದ ವಿಷಯವಾಗುವುದು. ನಿಮ್ಮ ಅಚ್ಚುಕಟ್ಟಾದ ಕೆಲಸಗಳಿಂದ ಬೇರೆ ಜನರರಿಗೆ ನಿಮ್ಮ ಮೇಲಿನ ಅಭಿಪ್ರಾಯಗಳು ಬದಲಾಗುವುವು.

ಮೀನ: ಕಲಾವಿದರಿಗೆ ಉತ್ತಮ ಅವಕಾಶವಿದ್ದರೂ ಅದನ್ನು ಸದುಪಯೋಗಪಡಿಸಿಕೊಳ್ಳುವುದು ಅನಾರೋಗ್ಯದಿಂದಾಗಿ ಕಷ್ಟಕರವಾಗಲಿದೆ. ಜವಳಿ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಹೆಚ್ಚು ಲಾಭ ಪಡೆಯಬಹುದು.

ಕೋಟಿ ಕೊರಳುಗಳಲ್ಲಿ ಮಾರ್ದನಿಸಿದ ಗೀತಗಾಯನ

67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ರಾಜ್ಯದ ವಿವಿಧೆಡೆ ಶುಕ್ರವಾರ ಏಕಕಾಲದಲ್ಲಿ ಕನ್ನಡದ ಹಿರಿಮೆಯನ್ನು ಸಾರುವ ಗೀತೆಗಳಿಗೆ ಕೋಟಿ ಕಂಠಗಳು ದನಿಗೂಡಿಸಿದವು. ವಿವಿಧ ಕಡೆ ನಡೆದ ಕಾರ್ಯಕ್ರಮದ ಚಿತ್ರನೋಟ ಇಲ್ಲಿದೆ...

ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಚಾಲುಕ್ಯರ ಮೇಣಬಸದಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಅಧಿಕಾರಿಗಳು ಪಾಲ್ಗೊಂಡಿದ್ದರು. (ಎಡಚಿತ್ರ), ಕಲಬುರಗಿಯ ಶರಣಬಸವೇಶ್ವರ ವಿದ್ಯಾರ್ಧಕ ಸಂಘದ ಆವರಣದಲ್ಲಿ ನಡೆದ ಕಾರ್ಯಕ್ರಮದ ವಿಹಂಗಮ ನೋಟ

–ಪ್ರಜಾವಾಣಿ ಚಿತ್ರಗಳು

ಹುಬ್ಬಳ್ಳಿಯ ಕಿಮ್ಸ್ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು

ನಾಡೆಲ್ಲ ಕೋಟಿ ಕಂಠದ 'ಡಿಂಡಿಮ'

ಒಂದನೇ ಪುಟದಿಂದ...

ವಿಮಾನದಲ್ಲೂ ಪ್ರಯಾಣಿಕರು ಕನ್ನಡ ಗೀತೆ ಗಳನ್ನು ಹಾಡಿ ಆಗಸದಲ್ಲೂ ಕನ್ನಡದ ಕಲರವ ಹರಡಿ ದರು.

ಬೆಂಗಳೂರಿನಿಂದ ಗ್ವಾಲಿಯರ್‌ಗೆ ತೆರಳಿದ ಸ್ಪೈಸ್ ಜೆಟ್ ವಿಮಾನವೊಂದರಲ್ಲಿ ರಾಜ್‌ಕುಮಾರ್ ಹಾಡಿರುವ 'ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು' ಹಾಡನ್ನು ಮೈಕ್‌ನಲ್ಲಿ ಹಾಡಲಾಯಿತು. ಇದಕ್ಕೆ ಪ್ರಯಾಣಿಕರೂ ಧ್ವನಿಗೂಡಿಸಿದರು.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳು, ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲೂ ಕನ್ನಡದ ಹಾಡುಗಳು ಮೊಳಗಿ ದವು.

ಬೆಳಗಾವಿಯ ಸುವರ್ಣಸೌಧದ ಮೆಟ್ಟಿಲುಗಳ ಮೇಲೂ ಸಾವಿರಾರು ವಿದ್ಯಾರ್ಥಿಗಳು ಕನ್ನಡದ ಡಿಂಡಿಮ ಬಾರಿಸಿದರು.

ವಿಜಯಪುರದ ಗೋಲಗುಮ್ಮಟ, ಹಂಪಿಯ ವಿರೂಪಾಕ್ಷ ದೇಗುಲದ ಆವರಣ, ಮೈಸೂರಿನ ಅರಮನೆ, ಮಡಿಕೇರಿಯ ರಾಜಾಸೀಟು, ಬಾದಾಮಿಯ ಮೇಣ ಬಸದಿ, ಶೃಂಗೇರಿಯ ಶಾರದಾ ದೇಗುಲ ಮಾತ್ರವಲ್ಲದೇ, ರಾಜ್ಯದ ಎಲ್ಲಾ ಕಾರಾಗೃಹಗಳ ಆವರಣದಲ್ಲೂ ಕನ್ನಡ ಕಂಠಗಳು ಒಂದಾಗಿ ಮೊಳಗಿದವು.

ಜಯ ಭಾರತ ಜನನಿಯ ತನುಜಾತೆ, ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು, ಬಾರಿಸು ಕನ್ನಡ ಡಿಂಡಿಮವ, ಹಚ್ಚೇವು ಕನ್ನಡದ ದೀಪ, ವಿಶ್ವ ವಿನೂತನ ವಿದ್ಯಾಚೇತನ, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಹಾಡುಗಳನ್ನು ಹಾಡಲಾಯಿತು.

'1.35 ಕೋಟಿಗೂ ಹೆಚ್ಚು ಕನ್ನಡದ ಮನಸ್ಸುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿವೆ. 50 ದೇಶಗಳಲ್ಲಿ, 27 ರಾಜ್ಯಗಳಲ್ಲಿ, 30 ಸಾವಿರಕ್ಕೂ ಹೆಚ್ಚು ಸಂಘ–ಸಂಸ್ಥೆಗಳು 10 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಏಕಕಾಲಕ್ಕೆ ಕನ್ನಡದ ಗೀತೆಗಳನ್ನು ಹಾಡುವ ಮೂಲಕ ಕನ್ನಡ ಪ್ರೇಮ ಮೆರೆದಿದ್ದಾರೆ' ಎಂದು ವಿ. ಸುನಿಲ್‌ಕುಮಾರ್ ತಿಳಿಸಿದ್ದಾರೆ.

ಚಿಕ್ಕಮಗಳೂರಿನ ಜಿಲ್ಲಾ ಆಟದ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ (ಎಡಚಿತ್ರ) ಮಂಗಳೂರಿನ ಬೋಳೂರು ಸುಲ್ತಾನ್ ಬತ್ತೇರಿ ಸಮೀಪದ ಸಮುದ್ರದಲ್ಲಿ ನಡೆದ ಕೋಟಿ ಕಂಠ ಗಾಯನ ಕಾರ್ಯಕ್ರಮದ ನೋಟ –ಪ್ರಜಾವಾಣಿ ಚಿತ್ರ

ಪುನೀತ್ ರಾಜ್‌ಕುಮಾರ್ ಅವರಿಂದ ಪ್ರೇರಣೆ ಪಡೆದ ಜನರು

ದಾಖಲೆ ಸಂಖ್ಯೆಯಲ್ಲಿ ಅಂಗಾಂಗ ದಾನ

● ವರುಣ ಹೆಗಡೆ



ಬೆಂಗಳೂರು: ರಾಜ್ಯದಲ್ಲಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿದ್ದು, ಈ ವರ್ಷ ಈಗಾಗಲೇ 122 ಮಂದಿ ಅಂಗಾಂಗಗಳನ್ನು ದಾನ ಮಾಡಿದ್ದಾರೆ. ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯಡಿ (ಸೊಟ್ಟೊ) ಈವರೆಗೆ ಅಂಗಾಂಗ ದಾನ ಮಾಡಿದವರ ಗರಿಷ್ಠ ಸಂಖ್ಯೆ ಇದಾಗಿದೆ.

2021ರ ಅ.29ರಂದು ಮೃತಪಟ್ಟ ನಟ ಪುನೀತ್ ರಾಜ್‌ಕುಮಾರ್, ತಮ್ಮ ಕಣ್ಣುಗಳನ್ನು ದಾನ ನೀಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಕಂಡಿದ್ದರು. ನಾರಾಯಣ ನೇತ್ರಾಲಯದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು, ಪುನೀತ್ ಕಣ್ಣುಗಳಿಂದ ನಾಲ್ವರಿಗೆ ದೃಷ್ಟಿ ಒದಗಿಸಲಾಗಿತ್ತು. ಕಳೆದ ವರ್ಷ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ನಟ ಸಂಚಾರಿ ವಿಜಯ್ ಅವರ ಅಂಗಾಂಗಗಳನ್ನು ಕುಟುಂಬದ ಸದಸ್ಯರು ದಾನ ಮಾಡಿದ್ದರು. ಪುನೀತ್ ಹಾಗೂ ಸಂಚಾರಿ ವಿಜಯ್ ಅವರ ಪ್ರೇರಣೆಯಿಂದ ಹಲವರು ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಪ್ರಜಾವಾಣಿ ವಿಶೇಷ

ಈ ಮೊದಲು ಜೀವ ಸಾರ್ಥಕತೆ ಹೆಸರಿನಿಂದ ನೋಂದಾಯಿಸಲಾಗಿದ್ದ ಸೊಟ್ಟೊ, ಅಂಗಾಂಗ ದಾನಕ್ಕೆ ಉತ್ತೇಜನ ನೀಡುವುದು ಹಾಗೂ ಮೃತ ದಾನಿಗಳಿಂದ ಅಂಗಾಂಗ ಒದಗಿಸುವ ಕಾರ್ಯವನ್ನು ಮಾಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ. 2019ರಲ್ಲಿ 105 ಮಂದಿಯಿಂದ ಅಂಗಾಂಗಗಳನ್ನು ಸಂಗ್ರಹಿಸಲಾಗಿತ್ತು. ಈವರೆಗೆ ಇದೇ ಗರಿಷ್ಠ ಸಂಖ್ಯೆಯಾಗಿತ್ತು. ಕೋವಿಡ್‌ನಿಂದಾಗಿ 2020ರಲ್ಲಿ 35 ಹಾಗೂ 2021ರಲ್ಲಿ 70 ಮಂದಿ ಮಾತ್ರ ಅಂಗಾಂಗ ದಾನ ಮಾಡಿದ್ದರು.

ಹಲವರಿಗೆ ನೆರವು: 'ಅಂಗಾಂಗ ದಾನಕ್ಕೆ ವಯಸ್ಸಿನ ಮಿತಿಯಿಲ್ಲ. ಒಬ್ಬ ದಾನಿಯು 8 ಜೀವಗಳನ್ನು ಉಳಿಸಬಹುದು. ಪುನೀತ್ ಅವರು ಅಂಗಾಂಗ ದಾನ ಮಾಡಿದ್ದರಿಂದ ಜನರಲ್ಲಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಹೆಚ್ಚಿದೆ. ಇದರಿಂದಾಗಿ ಈ ವರ್ಷ ಗರಿಷ್ಠ ಸಂಖ್ಯೆಯಲ್ಲಿ ಅಂಗಾಂಗ ದಾನ ನಡೆದಿದೆ' ಎಂದು ಸೊಟ್ಟೊ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮೂತ್ರಪಿಂಡಕ್ಕೆ ಬೇಡಿಕೆ

ಅಂತಿಮ ಹಂತದ ಅಂಗಾಂಗ ವೈಫಲ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಸೊಟ್ಟೊ ಸಂಸ್ಥೆ ನೆರವಾಗುತ್ತಿದೆ. ಸಂಸ್ಥೆಯಡಿ ಮೂತ್ರಪಿಂಡಕ್ಕಾಗಿ 4,601 ಮಂದಿ, ಯಕೃತ್ತಿಗಾಗಿ 1,267 ಮಂದಿ, ಹೃದಯಕ್ಕಾಗಿ 114 ಮಂದಿ ಹಾಗೂ ಶ್ವಾಸಕೋಶಕ್ಕಾಗಿ 46 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದ್ಯತೆ ಅನುಸಾರ ಸಂಸ್ಥೆಯು ಅಂಗಾಂಗಗಳನ್ನು ಒದಗಿಸುತ್ತಿದೆ.

85 ಸಾವಿರ ಜನ ಪ್ರತಿಜ್ಞೆ

ನೇತ್ರದಾನದ ಹೆಸರು ನೋಂದಣಿಗೆಂದೇ ರಾಜ್‌ಕುಮಾರ್ ನೇತ್ರ ಬ್ಯಾಂಕ್ ಮತ್ತು ನಾರಾಯಣ ನೇತ್ರಾಲಯವು ಆನ್‌ಲೈನ್‌ನಲ್ಲೇ ನೇತ್ರದಾನದ ಪ್ರತಿಜ್ಞೆ ತೆಗೆದುಕೊಳ್ಳುವ ಅವಕಾಶವನ್ನು ನೀಡಿತ್ತು. ಇದರಿಂದಾಗಿ ಕಳೆದೊಂದು ವರ್ಷದಲ್ಲೇ ಸುಮಾರು 85 ಸಾವಿರ ಜನರು ಈ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ.

'ಪುನೀತ್ ನಿಧನದ ಒಂದು ತಿಂಗಳ ಅವಧಿಯಲ್ಲಿ ಸುಮಾರು 20 ಸಾವಿರ ಜನರು ನೇತ್ರದಾನದ ಪ್ರತಿಜ್ಞೆ ಮಾಡಿದ್ದರು. ಕಳೆದೊಂದು ವರ್ಷದಲ್ಲಿ ಸುಮಾರು 2 ಸಾವಿರ ನೇತ್ರಗಳನ್ನು ದಾನವಾಗಿ ಸ್ವೀಕರಿಸಲಾಗಿದೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ಭುಜಂಗ ಶೆಟ್ಟಿ ತಿಳಿಸಿದರು.

ಮೂವರು ಮಹಿಳೆಯರ ವಿಚಾರಣೆ?

ರಾಮನಗರ: ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಮೂವರು ಮಹಿಳೆಯರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಶ್ರೀಗಳ ಕೊಠಡಿ ಸೇರಿದಂತೆ ಸುತ್ತಲಿನ ಸಿ.ಸಿ.ಟಿ.ವಿ ದೃಶ್ಯಾವಳಿಗಳು ಪೊಲೀಸರ ಕೈಸೇರಿವೆ. ಆತ್ಮಹತ್ಯೆ ಹಿಂದಿನ ದಿನ ಶ್ರೀಗಳ ಜೊತೆ ಸಂಪರ್ಕದಲ್ಲಿದ್ದವರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ.

ಶ್ರೀಗಳು ಎರಡು ಮೊಬೈಲ್ ಫೋನ್ ಬಳಸುತ್ತಿದ್ದರು. ಒಳ ಬಂದಿರುವ, ಹೊರಹೋದ ಕರೆಗಳನ್ನು ಆಧರಿಸಿ ವಿಚಾರಣೆ ನಡೆದಿದೆ. ಡೆತ್‌ನೋಟ್‌ನ ಕೈಬರಹ ಖಾತರಿ ಕುರಿತ ಎಫ್‌ಎಸ್‌ಎಲ್ ವರದಿ ಇನ್ನಷ್ಟೇ ಬರಬೇಕಿದೆ.

ಶ್ರೀಗಳ ಮರಣೋತ್ತರ ಪರೀಕ್ಷೆ ವರದಿ ಬಂದಿದೆ. ಸ್ನಾಯು ಸೆಳೆತದಿಂದ ಉಸಿರುಗಟ್ಟಿ ಶ್ರೀಗಳು ಸಾವನ್ನಪ್ಪಿದ್ದು, ಮೈಮೇಲೆ ಗಾಯದ ಗುರುತು ಇಲ್ಲ ಎಂದು ವರದಿ ಉಲ್ಲೇಖಿಸಿದೆ.

ಪೋಕ್ಸೊ: ಮದುವೆಯ ಷರತ್ತು ವಿಧಿಸಿ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂತ್ರಸ್ತೆಯು ಪ್ರಾಪ್ತ ವಯಸ್ಸಿಗೆ ಬಂದ ಕೂಡಲೇ ಆಕೆಯನ್ನು ಮದುವೆಯಾಗುತ್ತೇನೆ' ಎಂಬ ಪೋಕ್ಸೊ ಪ್ರಕರಣದ ಆರೋಪಿಯ ಮನವಿಯನ್ನು ಮಾನ್ಯ ಮಾಡಿರುವ ಹೈಕೋರ್ಟ್ ಆರೋಪಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ 22 ವರ್ಷದ ಯುವಕ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ಕೆ. ನಾಗೇಶ್ವರಪ್ಪ, 'ಆರೋಪಿಯು ಸಂತ್ರಸ್ತೆಯನ್ನು ವಿವಾಹವಾಗಬೇಕು ಎಂಬ ಷರತ್ತು ವಿಧಿಸಬೇಕು. ಇದು ಇಬ್ಬರು ವಿವಾಹ ಬಂಧನಕ್ಕೆ ಒಳಗಾಗುವುದನ್ನು ಕಡ್ಡಾಯಗೊಳಿಸಲಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಸಂತ್ರಸ್ತೆ ಬಾಲಕಿಯಾಗಿದ್ದು ಆರೋಪಿಯ ಜೊತೆ ಸ್ವಇಚ್ಛೆಯಿಂದ ದೈಹಿಕ ಸಂಬಂಧ ಬೆಳೆಸಿರುವುದಾಗಿ ತಿಳಿಸಿದ್ದಾಳೆ. 17 ವರ್ಷದ ಆಕೆಗೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿದೆ. ಅಂತೆಯೇ, ಆರೋಪಿಯು, ಸಂತ್ರಸ್ತೆ ಪ್ರಾಪ್ತ ವಯಸ್ಸಿಗೆ ಬಂದ ಕೂಡಲೇ ಆಕೆಯನ್ನು ಮದುವೆಯಾಗುವುದಾಗಿ ಹೇಳಿದ್ದಾನೆ' ಎಂಬ ಅಂಶವನ್ನು ಉಲ್ಲೇಖಿಸಿ, 'ಸಂತ್ರಸ್ತೆಯು ಪ್ರಾಪ್ತ ವಯಸ್ಸಿಗೆ ಬಂದ ತಕ್ಷಣ ಆಕೆಯನ್ನು ವಿವಾಹವಾಗಬೇಕು. ವಿವಾಹ ನೋಂದಣಿ ಮಾಡಿಸಿ, ನೋಂದಣಿ ದಾಖಲೆಯನ್ನು ವಿಚಾರಣಾಧೀನ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂಬ ಷರತ್ತು ವಿಧಿಸಿ ಜಾಮೀನು ನೀಡಿದೆ.

ಪ್ರಕರಣವೇನು?: ಸಂತ್ರಸ್ತೆ 17 ವರ್ಷ ವಯಸ್ಸಿನ ವಿದ್ಯಾರ್ಥಿನಿಯಾಗಿದ್ದು, ಆರೋಪಿಯ ಸಂಬಂಧಿ. ಕುಟುಂಬದ ಸಮಾರಂಭವೊಂದರಲ್ಲಿ ಇಬ್ಬರೂ ಭೇಟಿಯಾಗಿದ್ದರು. ಅದೊಂದು ದಿನ, 'ಮನೆಯಲ್ಲಿ ಯಾರೂ ಇಲ್ಲ' ಎಂದು ಆರೋಪಿಯು ಸಂತ್ರಸ್ತೆಯನ್ನು ತನ್ನ ಮನೆಗೆ ಕರೆಸಿಕೊಂಡಿದ್ದ. ಮದುವೆಯಾಗುವ ಭರವಸೆಯ ಮೇಲೆ ಆರೋಪಿ ಹಾಗೂ ಸಂತ್ರಸ್ತೆ ದೈಹಿಕ ಸಂಬಂಧ ಬೆಳೆಸಿದ್ದರು. ಬಾಲಕಿ ಗರ್ಭಿಣಿಯಾಗಿದ್ದರಿಂದ ಆಕೆಯ ತಂದೆ ದೂರು ದಾಖಲಿಸಿದ್ದರು.

'ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಲಯವು ಸಂಧಾನಕ್ಕೆ ಸಲಹೆ ಕೊಡುವುದು ಮಹಿಳೆಯ ಘನತೆಗೆ ಕುಂದುಂಟು ಮಾಡುತ್ತದೆ' ಎಂದು ಸುಪ್ರೀಂ ಕೋರ್ಟ್ 2015ರಲ್ಲಿ ಹೇಳಿತ್ತು. 'ಅತ್ಯಾಚಾರ ಪ್ರಕರಣವೊಂದರಲ್ಲಿ ಸಂಧಾನವೇ ಉತ್ತಮ' ಎಂದು ಹೇಳಿದ್ದ ಮದ್ರಾಸ್ ಹೈಕೋರ್ಟ್‌ನ ಆದೇಶ ಸರಿ ಅಲ್ಲವೆಂದು ಹೇಳಿತ್ತು.

ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅಭಿಮತ

'ಅಧಿಕಾರಕ್ಕೆ ಬರುವುದನ್ನು ತಪ್ಪಿಸುವುದು ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023 ರಲ್ಲಿ ಕರ್ನಾಟಕದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದೇ ಬರುತ್ತದೆ. ಇದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶುಕ್ರವಾರ ರಾಷ್ಟ್ರೀಯ ಪರಿಷತ್ ಸಭೆಯಲ್ಲಿ ಅವರು ಮಾತನಾಡಿ, 'ಕೆಲವರು ಜೆಡಿಎಸ್‌ಗೆ 20 ರಿಂದ 25 ಸೀಟುಗಳು ಬರುತ್ತವೆ ಎಂದು ಹೇಳುತ್ತಿದ್ದಾರೆ. ಅದನ್ನೆಲ್ಲ ನಂಬಬೇಡಿ. ನನ್ನ ಜೊತೆ ನೀವು ಕೈ ಜೋಡಿಸಿ, ಜನರ ಮುಂದೆ ನಮ್ಮ ಯೋಜನೆಗಳ ಬಗ್ಗೆ ತಿಳಿಸಿ' ಎಂದರು.

'ನೀವು ಎಷ್ಟು ಜನರ ಮುಂದೆ ಹೋದರೆ ನಮ್ಮ ಪಕ್ಷಕ್ಕೆ ಒಳ್ಳೆಯ ಫಲಿತಾಂಶ ಬರುತ್ತದೆ. ರಾಜ್ಯದಲ್ಲಿ ನಾವು ಸ್ವತಂತ್ರವಾಗಿ ಅಧಿಕಾರಕ್ಕೆ ಬರುತ್ತೇವೆ. ಈ ಬಗ್ಗೆ ಯಾರಿಗೂ ಸಂಶಯ ಬೇಡ' ಎಂದರು.

'ಜೆಡಿಎಸ್‌ಗೆ ಲಕ್ಷಾಂತರ ಕಾರ್ಯಕರ್ತರು ಇದ್ದು, ಅವರೇ ಬೆನ್ನೆಲುಬಾಗಿದ್ದಾರೆ. ಕಾಂಗ್ರೆಸ್– ಬಿಜೆಪಿ ಬಗ್ಗೆ ಚರ್ಚೆ ಮಾಡುವುದು ಬೇಡ. ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಬೇಕು. ಎಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನ ರಥ ಯಾತ್ರೆ ಕಾರ್ಯಕ್ರಮ ಮಾಡುತ್ತಿದ್ದಾರೆ. ಇದಕ್ಕೂ ಮುನ್ನ ಜನತಾ ಜಲಧಾರೆ ಮಾಡಿದ್ದರು. ಇವೆಲ್ಲವೂ ಜನರ ಅಭಿವೃದ್ಧಿ ಕಾರ್ಯಕ್ರಮಗಳು' ಎಂದು ಹೇಳಿದರು.

ಮೀಸಲಾತಿ ಚರ್ಚೆಗೆ ಸಿದ್ಧ: ಎಚ್‌.ಡಿ.ಕುಮಾರಸ್ವಾಮಿ ಸವಾಲು

'ಮೀಸಲಾತಿ ವಿಚಾರದಲ್ಲಿ ಕೆಲವರು ರಾಜಕೀಯ ಮಾಡುತ್ತಿದ್ದಾರೆ. ಎಸ್.ಟಿ ಸಮುದಾಯಕ್ಕೆ ಎಚ್.ಡಿ.ದೇವೇಗೌಡರು ಕೊಟ್ಟಿರುವ ಮೀಸಲಾತಿ ಕುರಿತು ಸಾರ್ವಜನಿಕ ವೇದಿಕೆಯಲ್ಲಿ ಚರ್ಚೆಗೆ ಸಿದ್ಧನಿದ್ದೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಮತ್ತು ರಾಷ್ಟ್ರೀಯ ಪರಿಷತ್ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಳಮಟ್ಟದ ಮತ್ತು ದುರ್ಬಲ ಸಮುದಾಯಗಳನ್ನು ಗುರುತಿಸಿ ಅವರಿಗೆ ಶಕ್ತಿ ತುಂಬುವ ಕೆಲಸವನ್ನು ದೇವೇಗೌಡರು ಮಾಡಿದರು. ಮೀಸಲು ಸೌಲಭ್ಯ ಕೊಟ್ಟು ಮೇಲೆತ್ತುವ ಕಾರ್ಯ ಮಾಡಿದರು. ಈ ಬಗ್ಗೆ ಚರ್ಚೆ ನಡೆಯಲು ಕೆಲವರು ಬಿಡುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಎಲ್ಲೆಡೆ ಜೆಡಿಎಸ್ ಶಾಸಕರು ಇರಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ನಮ್ಮ ಕಾರ್ಯಕರ್ತರು ಇದ್ದಾರೆ. ಇದೇ ರೀತಿ ಪ್ರತಿ ರಾಜ್ಯದಲ್ಲಿಯೂ ಪಕ್ಷದ ಶಾಸಕರು ಇರಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಬೇಕು' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ಶುಕ್ರವಾರ ನಡೆದ ಪಕ್ಷದ ರಾಷ್ಟ್ರೀಯ ಪರಿಷತ್ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಅಧ್ಯಕ್ಷರಾಗಿ ಮರು ಆಯ್ಕೆ ಮಾಡಿದ್ದಕ್ಕೆ ಕಾರ್ಯಕಾರಿಣಿ ಸಮಿತಿಗೆ ಧನ್ಯವಾದ ಹೇಳಿದರು.

'ಕರ್ನಾಟಕದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ಖಚಿತ. ಇದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಲಕ್ಷಾಂತರ ಕಾರ್ಯಕರ್ತರೇ ಈ ಪಕ್ಷದ ಬೆನ್ನೆಲುಬು. ಕಾಂಗ್ರೆಸ್, ಬಿಜೆಪಿ ಬಗ್ಗೆ ಚರ್ಚೆ ಬೇಡ. ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಬೇಕು' ಎಂದರು.

'ನಾವೆಲ್ಲರೂ ಪಕ್ಷ ಕಟ್ಟುವ ಕೆಲಸ ಮಾಡೋಣ. ಕುಮಾರಸ್ವಾಮಿ ಅವರು ಪಂಚರತ್ನ ಕಾರ್ಯಕ್ರಮ ರಥಯಾತ್ರೆ ಮಾಡುತ್ತಿದ್ದಾರೆ. ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು' ಎಂದು ಹೇಳಿದರು.

'ಸರ್ಕಾರಿ ವೈದ್ಯರಿಗೆ ಜಿಯೋ ಟ್ಯಾಗ್ ಅಳವಡಿಕೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕರ್ತವ್ಯದ ವೇಳೆ ಖಾಸಗಿ ಆಸ್ಪತ್ರೆ– ಕ್ಲಿನಿಕ್‌ಗಳಲ್ಲಿ ಕೆಲಸ ಮಾಡುವ ಸರ್ಕಾರಿ ವೈದ್ಯ ಕಾಲೇಜುಗಳ ವೈದ್ಯರ ವಿರುದ್ಧ ಕಠಿಣಕ್ರಮ ಜರುಗಿಸಲಾಗುವುದು. ವೈದ್ಯರಿಗೆ ಜಿಯೊ ಟ್ಯಾಗ್ ಅಳವಡಿಸುವ ಚಿಂತನೆಯೂ ಸರ್ಕಾರದ ಮುಂದಿದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

'ವೈದ್ಯರಿಗೆ ಬಯೊಮೆಟ್ರಿಕ್ ಹಾಜರಾತಿ ಕಡ್ಡಾಯಗೊಳಿಸಲಾಗುವುದು' ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

'ವೈದ್ಯರ ಕೊರತೆ ನೀಗಿಸಲಾಗಿದೆ. ಶೇಕಡ 10ರಷ್ಟು ತಜ್ಞರ ನೇಮಕ ಆಗಬೇಕಿದೆ. ಲ್ಯಾಬ್ ಟೆಕ್ನಿಷಿಯನ್ಸ್, ಫಾರ್ಮಸಿಸ್ಟ್ ಹಾಗೂ 'ಡಿ' ಗ್ರೂಪ್ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದರು.

'2030ರೊಳಗೆ ಭಾರತವನ್ನು ಕ್ಷಯ ಮುಕ್ತಗೊಳಿಸಬೇಕೆಂಬ ಪ್ರಧಾನಿ ಮೋದಿಯವರ ಆಶಯಕ್ಕೆ ಪೂರಕವಾಗಿ, ರಾಜ್ಯದಲ್ಲಿ 2025ರೊಳಗೆ ಕ್ಷಯ ನಿರ್ಮೂಲನೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

438 'ನಮ್ಮ ಕ್ಲಿನಿಕ್' ಆರಂಭ: 'ನವೆಂಬರ್ 8ರೊಳಗೆ ರಾಜ್ಯದ ಪಾಲಿಕೆ, ನಗರಸಭೆ ವ್ಯಾಪ್ತಿಯ ಕೊಳಗೇರಿಗಳಲ್ಲಿ 438 'ನಮ್ಮ ಕ್ಲಿನಿಕ್' ಆರಂಭಿಸಲಾಗುವುದು. 128 'ಮಹಿಳಾ ಸ್ವಾಸ್ಥ್ಯ ಕ್ಲಿನಿಕ್'ಗಳನ್ನು ಆರಂಭಿಲಾಗುತ್ತಿದೆ' ಎಂದರು.

'4.80 ಕೋಟಿ ಆಯುಷ್ಮಾನ್ ಭಾರತ್ ಕಾರ್ಡ್‌ಗಳನ್ನು ಡಿಸೆಂಬರ್ ಒಳಗೆ ವಿತರಿಸುವ ಗುರಿ ಇದೆ. ಅನೀಮಿಯಾ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಶಾಲೆಗಳಲ್ಲಿ ಚಿಕಿತ್ಸಾ ಅಭಿಯಾನ ಆರಂಭಿಸಲಾಗಿದೆ' ಎಂದು ಹೇಳಿದರು.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

'ಅಬ್ಬರವಿಲ್ಲದ, ಪ್ರಬುದ್ಧತೆಯ ನಿರ್ವಹಣೆ'

'ಪ್ರಜಾವಾಣಿ'ಗೆ ಅಮೃತಮಹೋತ್ಸವ ಸಂದರ್ಭದಲ್ಲಿ ಅಭಿನಂದನೆಗಳು. ಅಧ್ಯಯನ ಮಾಡುವವರಿಗೆ ಮತ್ತು ಸಾಹಿತ್ಯ, ಸಂಸ್ಕೃತಿ ಚಿಂತಕರಿಗೆ ಪತ್ರಿಕೆಯು ಅತ್ಯುತ್ತಮ ಆಕರವಾಗಿದೆ ಎಂದರೆ ತಪ್ಪಾಗಲಾರದು. ಮೌಲ್ಯಾಧರಿತ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಾಗ ಪತ್ರಿಕೆಯು ವಹಿಸುವ ಎಚ್ಚರ, ವಿಧಾನ, ಮತ್ತು ಅದನ್ನು ಅನಾವರಣಗೊಳಿಸುವ ಅದ್ಭುತ ಹಾಗೂ ಕಲಾತ್ಮಕವಾದ ಶೈಲಿ ಗಮನಾರ್ಹ. ಪ್ರಮುಖ ಬೆಳವಣಿಗೆಗಳ ಸಂದರ್ಭದಲ್ಲಿ ಜನಸಮುದಾಯದ ಮೇಲೆ ಅಭಿಪ್ರಾಯಗಳನ್ನು ಹೇರಲು, ತುದಿಗಾಲಿನಲ್ಲಿ ನಿಂತಿರುವ ಸಮೂಹ ಮಾಧ್ಯಮಗಳ ನಡುವೆ, ಪ್ರಜಾವಾಣಿ ಪತ್ರಿಕೆಯು ಆತುರವನ್ನು ತೋರದೆ, ಅಬ್ಬರವಿಲ್ಲದೆ, ಪ್ರಬುದ್ಧತೆಯಿಂದ 'ಅಕ್ಷರ ಲೋಕ'ವನ್ನು ನಿರ್ವಹಿಸುವ ರೀತಿ ಈ ದಿನಗಳ ಅಚ್ಚರಿ. 'ಪ್ರಜಾವಾಣಿ' ಕನ್ನಡ ಪತ್ರಿಕಾಲೋಕದ 'ಧ್ರುವತಾರೆ' ಎಂದರೆ ಅತಿಶಯೋಕ್ತಿಯೇನಲ್ಲ.

ಡಾ.ಎಂ.ರವೀಂದ್ರ, ನಿವೃತ್ತ ಹಿರಿಯ ವಿಜ್ಞಾನಿ, ಯು.ಆರ್‌ರಾವ್ ಉಪಗ್ರಹ ಕೇಂದ್ರ, ಬೆಂಗಳೂರು.

'ಸಮಾಜದ ಸ್ವಾಸ್ಥ್ಯ ರಕ್ಷಣೆಯ ಬದ್ಧತೆ'

'ಪ್ರಜಾವಾಣಿ' ಇಂದು ಆರೋಗ್ಯಪೂರ್ಣವಾಗಿ ಬೆಳೆದು, ಪ್ರಬುದ್ಧತೆ ಮೆರೆಯುತ್ತ ರಾಜ್ಯ, ರಾಷ್ಟ್ರಗಳ ಗಡಿ ಮೀರಿ ಕನ್ನಡಿಗರೆಲ್ಲರ ಕಣ್ಮಣಿಯಾಗಿದೆ. ವೈವಿಧ್ಯ ಬರಹ, ಸಂಚಿಕೆ ವಿನ್ಯಾಸದಲ್ಲಿನ ಅಚ್ಚುಕಟ್ಟುತನದಿಂದ ಎಲ್ಲರ ಜ್ಞಾನ ಶಿಸ್ತುಗಳಿಗೆ ದನಿಯಾಗುತ್ತ, ಎಲ್ಲ ಸ್ತರದ ಓದುಗರ ಆಸಕ್ತಿ, ಪ್ರೀತಿ, ನಂಬಿಕೆಗಳಿಗೆ ಪಾತ್ರವಾಗಿದೆ. ಸಮಾಜದ ಸುಸ್ಥಿರ ಅಭಿವೃದ್ಧಿ, ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಬದ್ಧತೆ, ಉತ್ತರದಾಯಿತ್ವ ಪ್ರದರ್ಶಿಸುತ್ತಿದೆ. ಪತ್ರಿಕಾಧರ್ಮದ ಪರಿಪಾಲನೆ ಮೂಲಕ ಪತ್ರಿಕೆಯು ತನ್ನ ತೂಕ, ಘನತೆ ಹೆಚ್ಚಿಸಿಕೊಂಡಿದೆ. 'ಪ್ರಜಾವಾಣಿ'ಯ ಮಾಲೀಕರು ಸೇರಿ ಪತ್ರಿಕೆಯ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಅಭಿನಂದನೆಗಳು. ನಮ್ಮೆಲ್ಲರ 'ಪ್ರಜಾವಾಣಿ' ಚಿರಾಯುವಾಗಲಿ.

ಕವಿತಾರಾವ್ ಕೃಷ್ಣಾಪುರದೊಡ್ಡಿ, ಕಾರ್ಯದರ್ಶಿ, ದಾರಿದೀಪ ವೃದ್ಧಾಶ್ರಮ, ರಾಮನಗರ

'ಗುಣಮೌಲ್ಯಕ್ಕೆ ಅಧಿಕ ಒತ್ತು'

ನನಗೂ 'ಪ್ರಜಾವಾಣಿ'ಗೂ ಹಳೆಯ ನಂಟು. 60ರ ದಶಕದಲ್ಲಿ ಮುಂಬೈನಲ್ಲಿ ನೌಕರಿ ಮಾಡುತ್ತಿದ್ದಾಗಲೇ ನನ್ನ ಲೇಖನಗಳು ಪ್ರಜಾವಾಣಿಯಲ್ಲಿ ಪ್ರಕಟವಾಗಿದ್ದವು. 'ಪ್ರಜಾವಾಣಿ'ಯ ವಿಶೇಷವೆಂದರೆ ಯಾರು ಬರೆದಿದ್ದಾರೆ ಎಂಬುದಕ್ಕಿಂತ ಲೇಖನಗಳ ಗುಣಮೌಲ್ಯಕ್ಕೆ ಅಧಿಕ ಒತ್ತು. ಈಗಲೂ ಪಾಲನೆಯಾಗುತ್ತಿದೆ. ಆ ನಂತರ ಹಲವು ದಿನಪತ್ರಿಕೆಗಳು ಹುಟ್ಟಿಕೊಂಡರೂ, 'ಪ್ರಜಾವಾಣಿ'ಗೆ ತನ್ನದೇ ಆದ ಸ್ಥಾನವಿದೆ. ಓದುಗರಿದ್ದಾರೆ. ದೀಪಾವಳಿ ಸಂಚಿಕೆಗಳಂತೂ ಇಂದಿಗೂ ನಂಬರ್ 1; ಸಂಗ್ರಹಯೋಗ್ಯವಾದವು. 'ಪ್ರಜಾವಾಣಿ' ನೂರರ ಗಡಿದಾಟಿ ಮುನ್ನುಗ್ಗಲಿ ಎಂದು ಹಾರೈಸುವೆ

ಕೃಷ್ಣ ಕೊಲ್ಹಾರ ಕುಲಕರ್ಣಿ, ಸಾಹಿತಿ, ವಿಜಯಪುರ

'ಸುದೀರ್ಘ ಸಾಂಗತ್ಯ, ಬಾಂಧವ್ಯ'

ಇದು ಎಪ್ಪತ್ತರ ದಶಕದ ಮಾತು. ವಡ್ಡು ಗ್ರಾಮದಲ್ಲಿ ನಮ್ಮದು ದೊಡ್ಡ ಕೂಡು ಕುಟುಂಬ. ಇಡೀ ಊರಿನಲ್ಲಿ ಮೂರ್ನಾಲ್ಕು ಮನೆಗಳಿಗೆ ಮಾತ್ರ 'ಪ್ರಜಾವಾಣಿ' ದಿನಪತ್ರಿಕೆ ಬರುತ್ತಿತ್ತು. ಓದುವವರ ಸಂಖ್ಯೆ ಕಡಿಮೆಯಿರಲಿಲ್ಲ. ಕೆಂಪು ಬಸ್ಸಿನಲ್ಲಿ ಬಂದಿಳಿಯುತ್ತಿದ್ದ ಪತ್ರಿಕೆ ದಾರಿಯುದ್ದಕ್ಕೂ ಕಟ್ಟೆಗಳ ಮೇಲೆ ಕಾದು ಕುಳಿತ ಆಸಕ್ತ ಓದುಗರ ಕೈಗಳಲ್ಲಿ ಓಡಾಡಿ ಮಾಲೀಕರ ಮನೆ ಸೇರುವಷ್ಟರಲ್ಲಿ ಹೊತ್ತು ಮುಳುಗುತ್ತಿತ್ತು.

ನಾನು ಕಾಲೇಜು ಸೇರುವ ಹಂತದಲ್ಲಿ 'ವಾಚಕರ ವಾಣಿ' ಲೇಖಕನಾಗಿ ಪ್ರಸಿದ್ಧನಾಗಿದ್ದೆ. 'ವಿಜಯನಗರ ಉಕ್ಕು ನಮ್ಮೆಲ್ಲರ ಹಕ್ಕು' ಶೀರ್ಷಿಕೆ/ಅರ್ಥದ ಪತ್ರಗಳು ಕಾರ್ಖಾನೆಯ ಹೋರಾಟಕ್ಕೆ ಕುಮ್ಮಕ್ಕು ಕೊಡುತ್ತಿದ್ದವು. ಮುಂದೆ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದು ಬಳ್ಳಾರಿ ಮೂಲದವರೇ ಆದ ಕೆ.ಎನ್.ಗುರುಸ್ವಾಮಿ ಅವರ ದಸ್ಕತ್ತಿನ ಪತ್ರ, ಚೆಕ್ ತಲುಪಿದಾಗ ಪುಳಕಗೊಂಡಿದ್ದೆ. ನನ್ನ ಓದು, ಬರವಣಿಗೆಯ ಬದುಕಿನುದ್ದಕ್ಕೂ ಸುಧಾ, ಪ್ರಜಾವಾಣಿ, ಮಯೂರ ಪತ್ರಿಕೆಗಳ ಸಾಂಗತ್ಯವಿದೆ. ಅಮೃತ ಮಹೋತ್ಸವದಲ್ಲಿ ನಾನೂ ಸಹ ಭಾಗಿ.

ಚಂದ್ರಕಾಂತ ವಡ್ಡು, ಸಂಪಾದಕ, ಸಮಾಜಮುಖಿ ಮಾಸಿಕ

'ಬದುಕಿನ ಅವಿಭಾಜ್ಯ ಅಂಗ'

ನಮ್ಮೆಲ್ಲರ ಮೆಚ್ಚಿನ 'ಪ್ರಜಾವಾಣಿ'ಗೆ ಅಮೃತ ಮಹೋತ್ಸವದ ಸಂಭ್ರಮ. ಚಿಕ್ಕಂದಿನಿಂದಲೂ ನನ್ನ ಬದುಕಿನ ಅವಿಭಾಜ್ಯ ಅಂಗವಾಗಿರುವ ಪ್ರಜಾವಾಣಿಯು ಮೊದಲಿನಿಂದಲೂ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿದೆ. ನನ್ನ ಬೆಳಗಿನ ಸಂಗಾತಿ ಎಂದರೆ ಪ್ರಜಾವಾಣಿ. ತನ್ನ ವೃತ್ತಿಧರ್ಮ ಹಾಗೂ ಜನ ಸಮುದಾಯದ ಕಲ್ಯಾಣಕ್ಕೆ ಬದ್ಧ ಆಗಿರುವ ಪ್ರಜಾವಾಣಿಯ ಸಂಪಾದಕೀಯ ಓದುವುದನ್ನು ನಾನೆಂದು ತಪ್ಪಿಸಿಕೊಂಡಿಲ್ಲ. ಪ್ರಾರಂಭದಿಂದಲೂ ವಿಶ್ವಾಸಾರ್ಹತೆಯನ್ನು ಕಾಪಾಡಿಕೊಂಡು ಬಂದಿರುವ ಪ್ರಜಾವಾಣಿ ಪ್ರಜೆಗಳ ಬದುಕನ್ನು ಹಸನುಗೊಳಿಸುವ ದಿಸೆಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ. ಸಾಪ್ತಾಹಿಕ ಹಾಗೂ ಸಕಾಲಿಕ ಲೇಖನಗಳು ವಿಚಾರ ಪ್ರಚೋದಕ. ಪಕ್ಷಾತೀತ ಮತ್ತು ವಸ್ತುನಿಷ್ಠ ಸುದ್ದಿ ನೀಡುವ ಪ್ರಜಾವಾಣಿ ಪತ್ರಿಕೆಯ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಅಭಿನಂದನೆಗಳು.

ಡಾ.ಸಿ. ಸೋಮಶೇಖರ, ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕುಲಾಂತರಿ ಸಾಸಿವೆಗೆ ಎಸ್‌ಜೆಎಂ ವಿರೋಧ

ನವದೆಹಲಿ (ಪಿಟಿಐ): ದೇಶಿಯವಾಗಿ ಅಭಿವೃದ್ಧಿಪಡಿಸಿರುವ ಕುಲಾಂತರಿ (ಜಿಎಂ) ಹೈಬ್ರಿಡ್ ಸಾಸಿವೆ ಬೆಳೆಯಲು ಪರಿಸರ ಸಚಿವಾಲಯ ಅನುಮತಿ ನೀಡಿರುವುದಕ್ಕೆ ಆರೆಸ್ಸೆಸ್ ಅಂಗಸಂಸ್ಥೆ ಸ್ವದೇಶಿ ಜಾಗರಣ್ ಮಂಚ್ (ಎಸ್‌ಜೆಎಂ) ಶುಕ್ರವಾರ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಪರಿಸರ ಸಚಿವಾಲಯದ ಕುಲಾಂತರಿ ನಿಯಂತ್ರಕ ಜೆನೆಟಿಕ್ ಎಂಜಿನಿಯರಿಂಗ್ ಮೌಲ್ಯಮಾಪನ ಸಮಿತಿ (ಜಿಇಎಸಿ) ಅನುಮತಿಗೆ ಆಸ್ಪದ ನೀಡಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಕುಲಾಂತರಿ ಸಾಸಿವೆಗೆ ಸದ್ಯಕ್ಕಲ್ಲ, ಮುಂದೆಂದೂ ಅನುಮತಿ ನೀಡುವುದಿಲ್ಲವೆಂದು ಖಾತ್ರಿಪಡಿಸುವಂತೆ ಕೇಂದ್ರವನ್ನು ಎಸ್‌ಜೆಎಂ ಒತ್ತಾಯಿಸಿದೆ.

ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರಿಗೆ ಬರೆದಿರುವ ಪತ್ರದಲ್ಲಿ 'ಕುಲಾಂತರಿ ಹೈಬ್ರಿಡ್ ಸಾಸಿವೆ ದೇಶಿಯವಾಗಿ ಅಭಿವೃದ್ಧಿಪಡಿಸಿರುವುದು ಶುದ್ಧ ಸುಳ್ಳು. ಇದು ಆಧಾರರಹಿತ ಮತ್ತು ದಿಕ್ಕುತಪ್ಪಿಸುವ ಯೋಜನೆ. ಇಂತಹ ಕುಲಾಂತರಿ ಸಾಸಿವೆ ಬೆಂಬಲಿಸುವ ಮೂಲಕ ಜಿಇಎಸಿ ಬೇಜವಾಬ್ದಾರಿ ತೋರಿದೆ' ಎಂದು ಎಸ್‌ಜೆಎಂ ಆರೋಪಿಸಿದೆ.

'ಸಾರ್ವಜನಿಕ ವಲಯಕ್ಕೆ ಹಿಂಬಾಗಿಲಿನಿಂದ ಪ್ರವೇಶಿಸಲು ಕುಲಾಂತರಿ ಸಾಸಿವೆಗೆ ಅನುಮತಿಸಿರುವುದು ಸರಿಯಲ್ಲ. ಈ ಹಿಂದೆ ಕುಲಾಂತರಿ ಸಾಸಿವೆ ಬೆಳೆ ಪರವಾಗಿ ಜಿಇಎಸಿ ಶಿಫಾರಸು ಮಾಡಿದಾಗ ಕಳವಳ ವ್ಯಕ್ತಪಡಿಸಿ, ನಿರ್ಧಾರ ಮರುಪರಿಶೀಲನೆಗೂ ಒತ್ತಾಯಿಸಲಾಗಿತ್ತು. ಹೀಗಾಗಿ ಆಗ ಅನುಮತಿ ನೀಡಿರಲಿಲ್ಲ. ಆದರೆ, ಈಗ ಕುಲಾಂತರಿ ಬೆಳೆ ಸಂಶೋಧಕರ ಜತೆಗೆ ಜಿಇಎಸಿ ಕೈಜೋಡಿಸಿದೆ. ಆಡಳಿತದಲ್ಲಿ ರಾಜಿಯಾಗಿದೆ. ಕುಲಾಂತರಿ ಸಾಸಿವೆ ವಿಚಾರದಲ್ಲೂ ಇಂತಹದೇ ಬೆಳವಣಿಗೆ ಆಗಿದೆ' ಎಂದು ಎಸ್‌ಜೆಎಂ ಸಹ ಸಂಚಾಲಕ ಅಶ್ವಾನಿ ಮಹಾಜನ್ ಅವರು ಪತ್ರದಲ್ಲಿ ಆರೋಪಿಸಿದ್ದಾರೆ.

ಕುಲಾಂತರಿ ಸಾಸಿವೆ ಬೆಳೆಗೆ ಜಿಇಎಸಿಯಿಂದ ಅನುಮತಿ ಪಡೆದಿರುವ ತಳಿ ವಿಜ್ಞಾನಿ ದೀಪಕ್ ಪೆಂಟಲ್ ಅವರ ಹೆಸರನ್ನು ಉಲ್ಲೇಖಿಸಿರುವ ಮಹಾಜನ್, 'ಪೆಂಟಲ್ ಮತ್ತು ಅವರ ತಂಡ ಪ್ರಚುರಪಡಿಸುತ್ತಿರುವ ಡಿಎಂಎಚ್-11 ರೀತಿಯದ್ದೇ ಆದ ಕುಲಾಂತರಿ ಹೈಬ್ರಿಡ್ ಸಾಸಿವೆಗೆ ವಾಣಿಜ್ಯ ಅನುಮತಿಗಾಗಿ ಪ್ರೊಆಗ್ರೊ ಸೀಡ್ಸ್ ಕಂಪನಿ (ಬೇಯರ್ ಸಬ್ಸಿಡಿ ಪಡೆಯುವ ಕಂಪನಿ) 2002ರಲ್ಲಿ ಅರ್ಜಿ ಸಲ್ಲಿಸಿತ್ತು. ಕುಲಾಂತರಿ ಹೈಬ್ರಿಡ್ ಸಾಸಿವೆ ಕ್ಷೇತ್ರ ಪ್ರಯೋಗದಲ್ಲಿ ಹೆಚ್ಚಿನ ಇಳುವರಿ ನೀಡದಿದ್ದಾಗ ಕಂಪನಿಯ ಪರವಾನಗಿ ಅರ್ಜಿಯನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿಯು (ಐಸಿಎಆರ್) ತಿರಸ್ಕರಿಸಿತ್ತು' ಎಂದು ಪತ್ರದಲ್ಲಿ ನೆನಪಿಸಿದ್ದಾರೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿ ವಿರುದ್ಧ ಭಾರತ ಟೀಕೆ

ಮುಂಬೈ: ರಾಜಕೀಯ ಕಾರಣಗಳಿಂದ ಕೆಲವು ಪ್ರಕರಣಗಳಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಶುಕ್ರವಾರ ಟೀಕಿಸಿದ್ದಾರೆ.

ಇಲ್ಲಿನ ತಾಜ್‌ಮಹಲ್ ಪ್ಯಾಲೆಸ್‌ನಲ್ಲಿ ಹಮ್ಮಿಕೊಂಡಿದ್ದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಯೋತ್ಪಾದನೆ ನಿಗ್ರಹ ಸಮಾವೇಶದಲ್ಲಿ ಮಾತನಾಡಿದ ಅವರು, ಮುಂಬೈ ಭಯೋತ್ಪಾದಕ ದಾಳಿಯ ಸಂಚುಕೋರರ ಕುರಿತು ನೆರೆಯ ಪಾಕಿಸ್ತಾನ ಮತ್ತು ಚೀನಾ ತಳೆದಿರುವ ನಿಲುವುಗಳನ್ನು ಉಲ್ಲೇಖಿಸಿ ಈ ಹೇಳಿಕೆ ನೀಡಿದ್ದಾರೆ.

'ಇನ್ನೊಂದು ತಿಂಗಳಲ್ಲಿ ಮುಂಬೈ ದಾಳಿಗೆ 14 ವರ್ಷಗಳು ತುಂಬಲಿವೆ. ಆದರೆ ಈ ದಾಳಿಯ ಹಿಂದಿನ ಪ್ರಮುಖ ಸಂಚುಕೋರರು ಈಗಲೂ ಸುರಕ್ಷಿತರಾಗಿದ್ದಾರೆ ಮತ್ತು ಶಿಕ್ಷೆಗೆ ಒಳಗಾಗಿಲ್ಲ' ಎಂದೂ ಅವರು ಹೇಳಿದ್ದಾರೆ.

ಪಾಕಿಸ್ತಾನದ ಭಯೋತ್ಪಾದಕ ಗುಂಪುಗಳ ಮುಖ್ಯಸ್ಥರ ವಿರುದ್ಧ ನಿರ್ಬಂಧ ಹೇರುವ ಪ್ರಯತ್ನಕ್ಕೆ ಚೀನಾವು ತಡೆಯೊಡ್ಡುತ್ತಿರುವ ಹಿನ್ನೆಲೆಯಲ್ಲಿ ಜೈಶಂಕರ್ ಅವರ ಈ ಹೇಳಿಕೆಯು ಮಹತ್ವ ಪಡೆದುಕೊಂಡಿದೆ.

ಹಣಕಾಸಿನ ನೆರವು ತಡೆಗೆ ಕ್ರಮ ಅಗತ್ಯ: ಅಂತರರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದಕ ಸಂಘಟನೆಗಳಿಗೆ ಹಣಕಾಸಿನ ನೆರವು ಹರಿದು ಬರುವುದನ್ನು ತಡೆಯಲು ವರ್ಚುವಲ್ ಕರೆನ್ಸಿ ವ್ಯವಹಾರಗಳ ಮೇಲೆ ನಿಗಾ ಇಡಬೇಕು, ಮಾದಕ ವಸ್ತು ಮತ್ತು ಅಕ್ರಮ ಶಸ್ತ್ರಾಸ್ತ್ರ ಸಾಗಣೆ ದಂಧೆಗಳಿಗೆ ಕಡಿವಾಣ ಹಾಕಬೇಕು ಎಂದೂ ಸಮಾವೇಶದಲ್ಲಿ ಭಾರತವು ಪ್ರತಿಪಾದಿಸಿದೆ.

ದಾಳಿ ಪ್ರಕರಣ: ಮುಂಬೈ ಹೋಟೆಲ್‌ನ ಮೇಲೆ 26/11ರಂದು ದಾಳಿ ನಡೆದಿತ್ತು. ಆ ದಾಳಿ ನಡೆದಿದ್ದು ಮುಂಬೈ ಮೇಲಷ್ಟೇ ಅಲ್ಲ, ಅಂತರರಾಷ್ಟ್ರೀಯ ಸಮುದಾಯದ ಮೇಲೆ. ಗಡಿ ದಾಟಿ ಬಂದಿದ್ದ ಉಗ್ರರು ಅಂದು ಇಡೀ ಮುಂಬೈ ಅನ್ನು ಒತ್ತೆ ಇರಿಸಿಕೊಂಡಿದ್ದರು ಎಂದು ಪಾಕಿಸ್ತಾನದ ಹೆಸರು ಉಲ್ಲೇಖಿಸದೇ ಜೈಶಂಕರ್ ಹೇಳಿದರು.

ಆಜಂಖಾನ್ ಶಾಸಕ ಸ್ಥಾನ ರದ್ದು



ಲಖನೌ (ಪಿಟಿಐ): ದ್ವೇಷ ಭಾಷಣ ಪ್ರಕರಣದಲ್ಲಿ ನ್ಯಾಯಾಲಯ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿದ ಬೆನ್ನಲ್ಲೇ ಉತ್ತರ ಪ್ರದೇಶ ವಿಧಾನಸಭೆಯ ಸದಸ್ಯತ್ವದಿಂದ ಸಮಾಜವಾದಿ ಪಕ್ಷದ ನಾಯಕ ಆಜಂಖಾನ್ ಅವರನ್ನು ಅನರ್ಹಗೊಳಿಸಿರುವುದಾಗಿ ಶುಕ್ರವಾರ ಪ್ರಕಟಿಸಿದೆ.

ನ್ಯಾಯಾಲಯ ತೀರ್ಪಿನ ಹಿನ್ನೆಲೆಯಲ್ಲಿ ಖಾನ್ ಪ್ರತಿನಿಧಿಸುತ್ತಿದ್ದ ರಾಂಪುರ ಸದರ್ ವಿಧಾನಸಭಾ ಕ್ಷೇತ್ರ ತೆರವುಗೊಂಡಿರುವುದಾಗಿ ಘೋಷಿ ಸಲಾಗಿದೆ ಎಂದು ವಿಧಾನಸಭೆಯ ಪ್ರಧಾನ ಕಾರ್ಯದರ್ಶಿ ಪ್ರದೀಪ್ ದುಬೆ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಬೆಂ.ಘ.ತ್ಯಾ.ನಿ.ನಿ) 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560 052.

ಸಂಖ್ಯೆ: ಕಾಪಾಅ/ಬೆಂ.ಘ.ತ್ಯಾ.ನಿ.ನಿ/ಟೆಂಡರ್/07/2022–23 ದಿನಾಂಕ: 27.10.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿಲಕೋಟೆ ಟೆಂಡರ್)

ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂ.ಘ.ತ್ಯಾ.ನಿ.ನಿ, ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಇವರ ಪರವಾಗಿ ಅರ್ಹ ಟೆಂಡರುದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

Sl No.	ಕಾಮಗಾರಿಯ ಹೆಸರು	ಇಎಂಡಿ	ಅಂದಾಜು ಮೊತ್ತ (₹.ಲಕ್ಷಗಳಲ್ಲಿ)
1.	ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕಿನ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ಹಾಗೂ ಜೈವಿಕ ಉತ್ಪನ್ನ ಪರಿಹಾರ/ಕಿಣ್ವಗಳನ್ನು ಸಿಂಪಡಿಸುವುದು ಒಳಗೊಂಡಂತೆ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. [ಪ್ಯಾಕೇಜ್ ಎಸ್–1]	ರೂ. 1,00,000/– ಗಳನ್ನು ಆನ್‌ಲೈನ್/ಎನ್ ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 7,85,000/– ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	1000.00
2.	ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕಿನ ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ಹಾಗೂ ಜೈವಿಕ ಉತ್ಪನ್ನ ಪರಿಹಾರ/ಕಿಣ್ವಗಳನ್ನು ಸಿಂಪಡಿಸುವುದು ಒಳಗೊಂಡಂತೆ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. [ಪ್ಯಾಕೇಜ್ ಎಸ್–2]	ರೂ. 1,00,000/– ಗಳನ್ನು ಆನ್‌ಲೈನ್/ಎನ್ ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 7,85,000/– ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	1000.00
3.	ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಬೆಟ್ಟದಾಸನಪುರ & ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಕೋನಪ್ಪನ ಅಗ್ರಹಾರ ಕೆರೆಯಲ್ಲಿ ಸುಧಾರಣೆಗಳನ್ನು ಮಾಡುವುದು. [ಪ್ಯಾಕೇಜ್ ಎಸ್–3]	ರೂ. 1,00,000/– ಗಳನ್ನು ಆನ್‌ಲೈನ್/ಎನ್ ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 3,45,000/– ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	500.00
4.	ಲೀಚೆಟ್ ಚರಂಡಿ ಮತ್ತು ಬೃಹತ್ ನೀರು ಕಾಲುವೆ ಒಳಗೊಂಡಂತೆ ಮಿಟ್ಟಗಾನಹಳ್ಳಿ ಸರ್ವೆ ಸಂಖ್ಯೆ–2 ಮತ್ತು ಬೆಲ್ಲಹಳ್ಳಿ ಸರ್ವೆ ಸಂಖ್ಯೆ–13ರ ಲ್ಯಾಂಡ್‌ಫಿಲ್ ಸೈಟ್‌ನಲ್ಲಿ ಬಾಕಿ ಉಳಿಕೆ ಭಾಗಕ್ಕೆ ವೈಜ್ಞಾನಿಕ ಅಂತಿಮಸ್ಪರ್ಶ ನೀಡುವುದು.	ರೂ. 1,00,000/– ಗಳನ್ನು ಆನ್‌ಲೈನ್/ಎನ್ ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 28,50,000/– ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	3500.00
5.	ಮಿಟ್ಟಗಾನಹಳ್ಳಿ ಸರ್ವೆ ಸಂಖ್ಯೆ–2ರಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ ಬಾಕಿ ಉಳಿಕೆ ಗುಂಡಿಗಳು ಮತ್ತು ಅದರ ಒಂದು ಬಾರಿಯ ಅಭಿವೃದ್ಧಿಯೊಂದಿಗೆ ಹೊಸ ವೈಜ್ಞಾನಿಕ ಲ್ಯಾಂಡ್‌ಫಿಲ್ ಸ್ಥಾಪಿಸುವುದು.	ರೂ. 1,00,000/– ಗಳನ್ನು ಆನ್‌ಲೈನ್/ಎನ್ ಇಎಫ್‌ಟಿ/ಓಟಿಸಿಯ ಮೂಲಕ ಇ–ಪಾವತಿ ಮತ್ತು ಉಳಿಕೆ ರೂ. 32,50,000/– ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.	4000.00

(1) ಆಸಕ್ತ ಅರ್ಹ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಹಾಗೂ ಪೂರ್ವಾರ್ಹತೆ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ದಿನಾಂಕ **10.11.2022** ಸಂಜೆ **4:00** ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಪೂರ್ವಾರ್ಹತೆ ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಮಾತ್ರ ಸಲ್ಲಿಸತಕ್ಕದ್ದು. ಇತರೆ ಯಾವುದೇ ವಿಧಾನಗಳ ಮೂಲಕ ಪೂರ್ವಾರ್ಹತೆ ಟೆಂಡರ್ ಸಲ್ಲಿಸಿದ್ದಲ್ಲಿ ಪುರಸ್ಕರಿಸುವುದಿಲ್ಲ. ಟೆಂಡರ್‌ದಾರರು 3ನೇ ಹಂತದ ಡಿಜಿಟಲ್ ಸಹಿಯನ್ನು ನಿಯೋಜಿತ ಸಂಸ್ಥೆಗಳಿಂದ ಹೊಂದಿರತಕ್ಕದ್ದು (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರೆಯುತ್ತದೆ) ನಂತರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ನೋಂದಾಯಿಸಿಕೊಳ್ಳುವುದು ಮತ್ತು ಟೆಂಡರ್‌ಗಳನ್ನು ಅವರವರ ಬಳಕೆದಾರರ ಐಡಿ ಮತ್ತು ಡಿಜಿಟಲ್ ಸಹಿ ಬಳಸಿಕೊಂಡು ಟೆಂಡರ್‌ಗಳನ್ನು ಸಲ್ಲಿಸುವುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **04.11.2022**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಸಿಜಿಎಂ [ತಾಂತ್ರಿಕ], ಬೆಂ.ಘ.ತ್ಯಾ.ನಿ.ನಿ, 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560052 ಇಲ್ಲಿ ನಡೆಸಲಾಗುವುದು. (3) ತಾಂತ್ರಿಕ ದಾಖಲೆಗಳನ್ನು ಅವಶ್ಯಕ ಮಾಹಿತಿ/ದಾಖಲೆಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಟೆಂಡರ್ ದಾಖಲೆಗಳಂತೆ ದಿನಾಂಕ: **10.11.2022**ರ ಸಂಜೆ **4:00** ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸುವುದು ಹಾಗೂ ಮೊದಲ ಫೋಲ್ಡರ್‌ನಲ್ಲಿರುವ ತಾಂತ್ರಿಕ ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **13.11.2022**ರ ಸಂಜೆ **4:30** ಗಂಟೆಯ ನಂತರ ನಿಗದಿತ ಸ್ಥಳದಲ್ಲಿ ಇಚ್ಛಿಸುವ ಟೆಂಡರ್‌ದಾರರು ಅಥವಾ ಹಾಜರಿರುವ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕದಂದು ಕಚೇರಿ ರಜೆಯಿದ್ದಲ್ಲಿ ಮುಂದಿನ ದಿನಾಂಕದಂದು ಈಗಾಗಲೇ ನಿಗದಿಪಡಿಸಿರುವ ಸ್ಥಳ ಮತ್ತು ಸಮಯದಲ್ಲಿ ತೆರೆಯಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂ.ಘ.ತ್ಯಾ.ನಿ.ನಿ

ಸಂಕ್ಷಿಪ್ತ ಸುದ್ದಿ

ಪತ್ರಕರ್ತೆಯರಿಗೆ ಟ್ರೋಲ್: ಸಂಪಾದಕರ ಕೂಟ ಕಳವಳ

ಬೆಂಗಳೂರು: ಪತ್ರಕರ್ತೆಯರನ್ನು ಆನ್‌ಲೈನ್‌ನಲ್ಲಿ ಟ್ರೋಲ್ ಮಾಡುವುದು ಗಂಭೀರ ಸಮಸ್ಯೆಯಾಗಿದೆ. ಉತ್ತಮವಾದ ಸುರಕ್ಷಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಿದೆ. ದೂರು ಸಲ್ಲಿಕೆ ಮತ್ತು ಪರಿಹಾರಕ್ಕೆ ಪ್ರಬಲವಾದ ವ್ಯವಸ್ಥೆಯೂ ಬೇಕು ಎಂದು ಭಾರತೀಯ ಸಂಪಾದಕರ ಕೂಟವು ಹೇಳಿದೆ.

ಪತ್ರಕರ್ತೆಯರನ್ನು ಗುರಿ ಮಾಡಿ ಆನ್‌ಲೈನ್‌ನಲ್ಲಿ ಕಿರುಕುಳ ನೀಡಲಾಗುತ್ತಿದೆ ಎಂದು ಕೂಟವು 2022ರ ಜನವರಿ 11ರಂದೇ ಕಳವಳ ವ್ಯಕ್ತಪಡಿಸಿತ್ತು.

ತನಿಖಾ ಪತ್ರಿಕೋದ್ಯಮದ ವಿಚಾರದಲ್ಲಿ ಹೆಚ್ಚಿನ ಎಚ್ಚರ ವಹಿಸಬೇಕು. ಸೂಕ್ಷ್ಮ ವಿಚಾರಗಳ ಕುರಿತ ವರದಿಗಳನ್ನು ಆತುರವಾಗಿ ಪ್ರಕಟಿಸುವ ಪ್ರಲೋಭನೆಯನ್ನು ಬಿಡಬೇಕು. ಆತುರ ತೋರದೆ ಹೆಚ್ಚು ವೃತ್ತಿಪರವಾಗಿ ವರ್ತಿಸಬೇಕು ಎಂದು ಕೂಟವು ಕಿವಿಮಾತು ಹೇಳಿದೆ.

ದಿ ವೈರ್ ಪೋರ್ಟಲ್‌ನಲ್ಲಿ ಮೆಟಾ ಸಂಸ್ಥೆಯ ಕುರಿತು ಲೇಖನ ಪ್ರಕಟವಾದದ್ದು ಮತ್ತು ಅದನ್ನು ಆಂತರಿಕ ಪರಾಮರ್ಶೆ ಸಮಿತಿಯ ಸಲಹೆಯಂತೆ ವಾಪಸ್ ಪಡೆದ ವಿದ್ಯಮಾನವನ್ನು ಕೂಟವು ಉಲ್ಲೇಖಿಸಿದೆ.

ಬಿಆರ್‌ಎಸ್ ವಿರುದ್ಧ ಬಿಜೆಪಿ ವಾಗ್ದಾಳಿ

ಹೈದರಾಬಾದ್: ಬಿಆರ್‌ಎಸ್ ಶಾಸಕರ ಖರೀದಿ ಆರೋಪ ಪ್ರಕರಣದಲ್ಲಿ ಬಂಧಿಸಿದ್ದ ಮೂವರು ಆರೋಪಿಗಳನ್ನು ರಿಮ್ಯಾಂಡ್‌ಗೆ ನೀಡಬೇಕು ಎನ್ನುವ ಮನವಿಯನ್ನು ಇಲ್ಲಿನ ವಿಶೇಷ ನ್ಯಾಯಾಲಯವು ತಿರಸ್ಕರಿಸಿದ ಬೆನ್ನಲ್ಲೇ ಬಿಆರ್‌ಎಸ್ ವಿರುದ್ಧ ಬಿಜೆಪಿ ವಾಗ್ದಾಳಿ ಆರಂಭಿಸಿದೆ.

ಬಿಆರ್‌ಎಸ್ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಕೃತಿಯನ್ನು ದಹಿಸಿದ್ದಕ್ಕೆ ಪ್ರತಿಯಾಗಿ ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರ ಪ್ರತಿಕೃತಿಗೆ ಬೆಂಕಿ ಹಚ್ಚಿದರು.

ಶುಕ್ರವಾರ ಮುನುಗೋಡು ಉಪಚುನಾವಣೆ ಪ್ರಚಾರದಿಂದ ವಿರಾಮ ಪಡೆದ ರಾಜ್ಯ ಘಟಕದ ಮುಖ್ಯಸ್ಥ ಬಂಡಿ ಸಂಜಯ್ ಅವರು, ಪ್ರಸಿದ್ಧ ಯಾದಾದ್ರಿ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಗರ್ಭಗುಡಿಯ ಎದುರು ನಿಂತು, ಶಾಸಕರ ಖರೀದಿ ಆರೋಪ ಪ್ರಕರಣದಲ್ಲಿ ಬಿಜೆಪಿಯ ಕೈವಾಡವಿಲ್ಲ ಎಂದು ಪ್ರತಿಜ್ಞೆ ಮಾಡಿದರು.

'ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರೇ ಶಾಸಕರ ಖರೀದಿ ಸಂಚಿನ ಮುಖ್ಯ ರೂವಾರಿ. ಹೀಗಾಗಿಯೇ ಅವರು ದೇಗುಲದಲ್ಲಿ ಪ್ರತಿಜ್ಞೆ ಮಾಡಲು ಬಂದಿಲ್ಲ. ತಪ್ಪೆಸಗಿಲ್ಲ ಎಂದರೆ ಇಲ್ಲಿ ಬಂದು ಪ್ರಮಾಣ ಮಾಡಲು ಹಿಂದೇಟು ಹಾಕುತ್ತಿರುವುದೇಕೆ?, ಪ್ರಕರಣದ ನ್ಯಾಯಯುತ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಹೈಕೋರ್ಟ್‌ಗೆ ಮನವಿ ಮಾಡುತ್ತೇವೆ. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿ ಎಂದು ಹೇಳಲು ಕೆಸಿಆರ್ ಅವರಿಗೆ ಧೈರ್ಯವಿದೆಯೇ 'ಎಂದು ಅವರು ಪ್ರಶ್ನಿಸಿದರು. ಇದೇ ವೇಳೆ 'ಶಾಸಕರ ಖರೀದಿ ಸಂಬಂಧ ಬಿಡುಗಡೆಯಾಗಿರುವ ಆಡಿಯೊ ನಕಲಿ, ಅತ್ಯಂತ ಕೆಟ್ಟ ಸಿನಿಮಾದ ಐಟಂ ಸಾಂಗ್' ಎಂದು ಹೇಳಿದ್ದಾರೆ.

ಫಿಲಿಪ್ಪೀನ್ಸ್‌ನಲ್ಲಿ ಭೂಕುಸಿತ: 42 ಮಂದಿ ಸಾವು

ಕೊಟಬಾಟೊ, ಫಿಲಿಪ್ಪೀನ್ಸ್ (ಎಪಿ): ಧಾರಾಕಾರ ಮಳೆಯಿಂದ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದಿಂದಾಗಿ ದಕ್ಷಿಣ ಫಿಲಿಪ್ಪೀನ್ಸ್ ಪ್ರಾಂತ್ಯದಲ್ಲಿ 42 ಮಂದಿ ಸಾವೀಗೀಡಾಗಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

'ಮಗಿಂದನಾವೊ ಪ್ರಾಂತ್ಯದ ಮೂರು ನಗರಗಳಲ್ಲಿ ಸಂತ್ರಸ್ತರು ಪ್ರವಾಹದ ನೀರಿನಲ್ಲಿ ಹಾಗೂ ಮಣ್ಣಿನ ಕುಸಿತದಿಂದ ಕೊಚ್ಚಿ ಹೋಗಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆರೆಗಳು – ದಾಸರಹಳ್ಳಿ ವಿಭಾಗ, 3ನೇ ಮಹಡಿ, ರೂಂ ನಂ. 309, ಅನೆಕ್ಸರ್–3 ಬಿಲ್ಡಿಂಗ್, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ/ಕೆರೆಗಳು–ದಾಸರಹಳ್ಳಿ/ಟೆಂಡರ್/07/2022–23 ದಿನಾಂಕ: 28–10–2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆರೆಗಳು – ದಾಸರಹಳ್ಳಿ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	"ಪ್ಯಾಕೇಜ್–19: (ಎ) – ಕರಿಹೋಬನಹಳ್ಳಿ (ನರಸಪ್ಪನಹಳ್ಳಿ ಕೆರೆ) ಲೇಕ್‌ನ ಸಮಗ್ರ ಅಭಿವೃದ್ಧಿ, (ಬಿ) – ದೊಡ್ಡಬಿದರಕಲ್ಲು ಲೇಕ್‌ನ ಸಮಗ್ರ ಅಭಿವೃದ್ಧಿ, (ಸಿ) – ಲಕ್ಷ್ಮೀಪುರ ಲೇಕ್‌ನ ಸಮಗ್ರ ಅಭಿವೃದ್ಧಿ.	1500.00	15.00

__ಟೆಂಡರ್ ವೇಳಾಪಟ್ಟಿ:__ 1) ಬಿಡ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **04–11–2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಬಿಡ್ ಪೂರ್ವಭಾವಿ ಸಭೆ ದಿನಾಂಕ: **07–11–2022 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆರೆಗಳು – ದಾಸರಹಳ್ಳಿ, ಬಿಬಿಎಂಪಿ ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **14–11–2022ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **15–11–2022ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆರೆಗಳು – ದಾಸರಹಳ್ಳಿ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆರೆಗಳು–ದಾಸರಹಳ್ಳಿ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

16–ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560 052.

Ph.No.: 22202211 E-Mail: kranthiveerarayanna@gmail.com

ಕ್ರ.ಸಂ: ಆಯುಕ್ತರು/ಕಾವೀಸಂರಾಸೈ ಶಾ/2022–23 ದಿನಾಂಕ: 28.10.2022

ಅರ್ಜಿ ಆಹ್ವಾನ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಗೆ ಈ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Sl.No	Name of the Post	No of Post
1	TGT-English	1
2	TGT-Social Studies	1
3	PGT-Computer Science	1

ಈ ಮೇಲ್ಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿಯನ್ನು ಸಲ್ಲಿಸಲು 19.11.2022 ರಂದು ಕೊನೆಯ ದಿನಾಂಕ ನಿಗದಿಪಡಿಸಲಾಗಿದ್ದು ಸದರಿ ಹುದ್ದೆಗೆ ಬೇಕಾದ ಅನುಭವ ಮತ್ತು ಅರ್ಜಿಸಲ್ಲಿಸುವ ವಿಧಾನವನ್ನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ವೆಬ್‌ಸೈಟ್ www.kvsrsainikschool.org ನಲ್ಲಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಆಯುಕ್ತರು

ವಾ.ಸಾ.ಸಂ.ಇ/ವಾಪ್ರ/2813/ಆಕಾರ್/22–23 ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಬೆಳಗಾವಿ ಮಹಾನಗರ ಪಾಲಿಕೆ

ಸಂಖ್ಯೆ: ಸಿ.ಸಿ.ಬಿ.ಲೋ.ವಿ/ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ–14/2022–23 ದಿನಾಂಕ: 21–10–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ಪ್ರಕಾರ ಆ್ಯಕ್ಟ 2000 ನಿಯಮದಂತೆ Standard Bid Documents ನಿಯಮಗಳನ್ವಯ ಕಾಮಗಾರಿಗಳಿಗೆ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಪ್ರೋತ್ಸಾಹ ಧನ ಅನುದಾನದಡಿಯಲ್ಲಿ ಮಂಜೂರಾದ ಒಟ್ಟು 01 ಪ್ಯಾಕೇಜ್ ಕಾಮಗಾರಿಗಳ ಕುರಿತು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 05–11–2022 ರಂದು ಇರುತ್ತದೆ. ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ವೆಬ್‌ಸೈಟ್ https://www.eproc.karnataka.gov.in ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು
ಮಹಾನಗರ, ಪಾಲಿಕೆ, ಬೆಳಗಾವಿ

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸಂಘ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ
ಆವರಣ, ಬಳ್ಳಾರಿ ಜಿಲ್ಲೆ. ದೂರವಾಣಿ: 08392 – 274033
ಇ–ಮೇಲ್ ವಿಳಾಸ: dhwcballari@gmail.com.

NO/DSU/CPHC/UHC/HWC/37/2022-23 Date:27.10.2022.

ಪ್ರಕಟಣೆ

ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ, ಎಲ್ಲಾ ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸಂಘ, ಆನ್‌ಲೈನ್ ಮೂಲಕ 15 ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಬಿ.ಎಸ್ ಸಿ ಮತ್ತು ಪೋಸ್ಟ್ ಬಿ.ಎಸ್ ಸಿ ವಿದ್ಯಾರ್ಹತೆ ಹೊಂದಿರುವ ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಮಾಸಿಕ ಸಂಭಾವನೆ: ರೂ. 24,200/– ಹೆಚ್ಚಿನ ಆದ್ಯತೆವುಳ್ಳ ಜಿಲ್ಲೆಗಳು ಹಾಗು ರೂ.22000 ಆದ್ಯತೆ ಹೊರತುಪಡಿಸಿದ ಇತರೆ ಜಿಲ್ಲೆಗಳಲ್ಲಿ ನೇಮಕಾತಿ ಬಯಸುವವರಿಗೆ ನೀಡಲಾಗುವುದು. ಜೊತೆಗೆ ಹೆಚ್ಚುವರಿಯಾಗಿ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನರೂ. 8000/–ವರೆಗೆ ನೀಡಲಾಗುವುದು.

ವಯೋಮಿತಿ: ಸಾಮಾನ್ಯ ಅಭ್ಯರ್ಥಿ : 35 ವರ್ಷ; ಎಸ್.ಸಿ/ಎಸ್.ಟಿ/ ಪ್ರ.ವರ್ಗ 1 / ಮಾಜಿ ಸೈನಿಕ 40 ವರ್ಷ; 2ಎ/2ಬಿ/3ಎ/3ಬಿ ಹಾಗೂ ಇತರೆ ಹಿಂದುಳಿದ ವರ್ಗ (ರಾಜ್ಯ) 38ವರ್ಷ, ಅಧಿಸೂಚನೆ ಹೊರಡಿಸಿರುವ ದಿನಾಂಕ ಒಳಗಾಗಿ (ವಿ.ಸೂ: 6ನೇ ನೇಮಕಾತಿ ಪ್ರಕಟಣೆಯಾದ್ದರಿಂದ ಕಲ್ಯಾಣ ಕರ್ನಾಟಕ (HK) ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ರೋಸ್ಟರ್ ನಿಯಮಾನುಸಾರ ಇತರೆ (Non HK) ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.)

ಒಟ್ಟು ಹುದ್ದೆಗಳು: 15 ಹುದ್ದೆಗಳು (371 (ಜೆ) ಅನ್ವಯ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾಗಿರುತ್ತವೆ.)

ಅರ್ಜಿಯನ್ನು ಕೇವಲ ಆನ್‌ಲೈನ್ ಮುಖಾಂತರ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹಾಗೂ ಪರೀಕ್ಷೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುವುದು (ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಸಂಪರ್ಕಿಸಬಹುದು).

1.ಆನ್‌ಲೈನ್‌ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ 27/10/2022. 2.ಆನ್ ಲೈನ್‌ಅರ್ಜಿ ಸಲ್ಲಿಸಲುಕೊನೆಯ ದಿನಾಂಕ 08/11/2022 (ಸಾಯಂಕಾಲ 5.00 ಗಂಟೆವರೆಗೆ). 3.ಆನ್ ಲೈನ್ ಪರೀಕ್ಷೆ ದಿನಾಂಕ 19/11/2022

ಹೆಚ್ಚಿನ ಮಾಹಿತಿಗಾಗಿ: http://karunadu.karnataka.gov.in/hfw ಸಂಪರ್ಕಿಸಬಹುದು.

ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು. ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/588/ಎಂಸಿಎ/2022–23

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ
ಆವರಣ ಬಿ.ಡಿ. ರಸ್ತೆ, ಚಿತ್ರದುರ್ಗ ಜಿಲ್ಲೆ.
ದೂ: ಸಂ: 08194–235464 ಇ–ಮೇಲ್: dhochitradurga@gmail.com

ಸಂ:ಡಿ.ಪಿ.ಎಂ.ಯು/ಎನ್.ಹೆಚ್.ಎಂ/ಸಿ.ಟಿ.ಎ/ಸಿ.ಹೆಚ್.ಓ/01–2022–23 ದಿ:25.10.2022

ಪ್ರಕಟಣೆ

ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ, ಚಿತ್ರದುರ್ಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಆನ್‌ಲೈನ್ ಮೂಲಕ 03 ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಬಿ.ಎಸ್ ಸಿ ಮತ್ತು ಪೋಸ್ಟ್ ಬಿ.ಎಸ್ ಸಿ ವಿದ್ಯಾರ್ಹತೆ ಹೊಂದಿರುವ ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.
ಮಾಸಿಕ ಸಂಭಾವನೆ: ರೂ.22000/–(ಆದ್ಯತೆ ಹೊರತುಪಡಿಸಿದ ಇತರೆ ಜಿಲ್ಲೆಗಳಲ್ಲಿ) ನೇಮಕಾತಿ ಬಯಸುವವರಿಗೆ ನೀಡಲಾಗುವುದು. ಜೊತೆಗೆ ಹೆಚ್ಚುವರಿಯಾಗಿ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ರೂ. 8000/–ವರೆಗೆ ನೀಡಲಾಗುವುದು. ಅರ್ಜಿಯನ್ನು ಕೇವಲ ಆನ್‌ಲೈನ್ ಮುಖಾಂತರ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹಾಗೂ ಪರೀಕ್ಷೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುವುದು(ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ ಸಂಪರ್ಕಿಸಬಹುದು). (1) ಆನ್‌ಲೈನ್‌ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ 27/10/2022 (2) ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 08/11/2022 (ಸಾಯಂಕಾಲ 5.00 ಗಂಟೆವರೆಗೆ) (3) ಆನ್ ಲೈನ್ ಪರೀಕ್ಷೆ ದಿನಾಂಕ 19/11/2022 ಹೆಚ್ಚಿನ ಮಾಹಿತಿಗಾಗಿ: http://karunadu.karnataka.gov.in/hfw ಸಂಪರ್ಕಿಸಬಹುದು. ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

DIPR/CTA/MCA/649/2022-23

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.

ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಎಇ–1/ಟೆಂಡರ್/2022–23 ದಿನಾಂಕ: 20.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–22/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ – ಏಕ ಲಕೋಟೆ ಮತ್ತು ದ್ವಿಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–1 KW–2 & KW–3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಸಪೋರ್ಟ್‌ಗಾಗಿ 1/1, ಸನ್ ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್ ಫೋರ್ಡ್ ಟೌನ್, ಬೆಂಗಳೂರು–560025, ದೂರವಾಣಿ: 080–22485867, 080–22485927) ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ 2022–23ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಯೋಜನೆಯಡಿಯ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ದ್ವಿಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **20.10.2022** ರಿಂದ **03.11.2022** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/630/MCA/2022-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿ(ನಿ),
ಮು.ಏ.ನೀ ವಿಭಾಗ ನಂ–1, ಮಟ್ಟಿಹಾಳ ತಾ॥ ಕೋಲ್ಹಾರ ಜಿ॥ ವಿಜಯಪುರ

ಸಂ:ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2022–23/1074
ದಿನಾಂಕ:28.10.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ದ್ವಿ–ಲಕೋಟೆ ಪದ್ಧತಿಯಲ್ಲಿ 04 ಕಾಮಗಾರಿಳ ಇಂಡೆಂಟ್ ಸಂಖ್ಯೆ: 23066 ಮತ್ತು 22674 ಟೆಂಡರ ಕರೆಯಲಾಗಿದ್ದು, **ಕಾಮಗಾರಿಯ ಟೆಂಡರಿಗಿಟ್ಟ ಮೊತ್ತರೂ. 28.99 ರಿಂದ 9.80 ಲಕ್ಷಗಳು ಇರುತ್ತವೆ.** ಗುತ್ತಿಗೆದಾರರು ನಿಗದಿಪಡಿಸಿದ ಇ.ಎಮ್.ಡಿಘೋಷಣಾ ಅನುಬಂಧ/ ಗುತ್ತಿಗೆದಾರರ ದರ್ಜೆ/ ಟೆಂಡರ್ ನಿಯಮ/ ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://eproc.karnataka.gov.in/ ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: 14.11.2022ಸಮಯ ಸಾಯಂಕಾಲ05.00 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126.ಸದರಿ ಟೆಂಡರುದಾರರು ದ್ವಿ–ಪ್ರತಿಯಲ್ಲಿ (ತಾಂತ್ರಿಕ ಮತ್ತುಆರ್ಥಿಕ ಬಿಡ್) ಅಪಲೋಡ್ ಮಾಡುವುದು.

__**ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.**__

1.1 ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು **ದಿನಾಂಕ: 31.10.2022** ರಿಂದ **14.11.2022** ರವರೆಗೆ ಸಮಯ **ಸಾಯಂಕಾಲ 5.00** ಘಂಟೆಯವರೆಗೆ ಸಲ್ಲಿಸುವುದು.

1.2 ಲಕೋಟೆ–1 (ತಾಂತ್ರಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ದಿನಾಂಕ **16.11.2022** ಸಮಯ **ಬೆಳಗ್ಗೆ 11.00ಘಂಟೆಗೆ** ತೆರೆಯಲಾಗುವುದು.

1.3 ಲಕೋಟೆ–2 (ಆರ್ಥಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ: **21.11.2022** ಸಮಯ ಬೆಳಿಗ್ಗೆ **11.00** ಗಂಟೆಗೆ ಅಥವಾ ತಾಂತ್ರಿಕ ಬಿಡ್‌ಅನುಮೋದನೆ ನಂತರ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ–1, ಮಟ್ಟಿಹಾಳ

ವಾಸಾಸಂಇ/ವಿಜಯಪುರ/491/ಎಂಸಿಎ/2022–23

SAINIK SCHOOL BIJAPUR - 586 108

(KARNATAKA)
(Joint venture of Ministry of Defence and Govt of Karnataka)

RECRUITMENT OF STAFF ON REGULAR / ON CONTRACTUAL BASIS

1. Applications are invited for the post mentioned below on Regular / Contractual basis as mentioned against each :-

Sl.	Name of Post	No of Post & Cat	Age	Qualifications	Pay
(a)	**Band Master (On Contractual)**	UR-01 (One)	Should be between 18 and 50 years as on 01 Nov 2022	Potential Band Master / Band Major / Drum Major course at the Army Education Corps Training College and Centre, Pachmarhi or equivalent Naval / Air Force courses. **__Desirable.__** Candidates having higher qualifications, teaching experience in English medium Public School proficiency in English, attainments in co and extra-curricular activities will be given preference. The candidates should be physically fit. **Preference will be given to Ex-servicemen.**	Consolidated salary Rs 25,000/- per month
(b)	**Counselor (Female only) (On Contractual)**	UR-01 (One)	Should be between 21 and 35 years as on 01 Nov 2022	Graduate / Post Graduate in Psychology or Post Graduate in Child Development or Graduate with diploma in Career Guidance and Counseling. **__Experience.__** (i) Experience in providing career /educational counseling to students in a reputed school. (ii) Registration with Rehabilitation counselor of India as vocational counselor. (iii) Interested in other extracurricular activities and aptitude for residential school life style. (iv) The candidate should be physically fit.	Consolidated Salary will be paid based on the qualification and experience.
(c)	**Accountant (Regular) (Reserved for SC Category only)**	SC-01 (One	Should be between 18 and 50 years as on 01 Nov 2022	(i) B.Com. (ii) Adequate knowledge of Double Entry system of accounting (or) should have work as an Accountant for at least 10 years in Government and Private organization and must be fully conversant with maintenance of accounts in double entry system. **__Desirable :-__** (i) Minimum 2nd Division / Class Commerce Graduate from a recognized university. (ii) Knowledge of double entry system of accounting. (iii) Fully conversant with Tally and modern Accounting Practices preferably in a fully automated accounting environment. (iv) Must be conversant with maintenance of School accounts, ability to handle Bank Reconciliation, Pay Bills, Trial Balance, BalanceSheets,PFStatements,Calculation of Pay Fixation & Pension, TDS and New Pension Scheme etc. (v) Ability to correspond in English and Kannada independently.	Level-6, Rs 35400 -112400 (Pre-revised PB-2, Rs 9300-34800 +GP Rs 4200/-)

Note. Candidates applied for the posts of "Band Master" & "Counselor" earlier (as the advertisement published in Employment Newspaper 27 Aug to 02 Sep 2022) no need to apply again.

2. **Pay and Perks for Ser No 1(c).** Rent free accommodation, Pay band, Grade pay, Transport Allowance with DA and Medical Allowance as per Sainik Schools Society Rules & Regulations. Subsidized education for two children, LTC, Bonus, New Pension etc as per Sainik Schools Society Rules & Regulations.
3. **Other Conditions.** (i) Employment conditions / Service Rules are in consonance with Sainik Schools Society Rules & Regulations. (ii) Job is transferable within All India liability. (iii) Selected candidate should be ready to take responsibilities usual to a residential school.
4. **How to Apply.** (i) Apply on application form downloaded from School website **www.sssbj.in** (notification-vacancy link). (ii) Duly filled applications alongwith attested copies of documents and one self addressed envelope with postage stamp of Rs 40/- (for communicating through Speed Post) affixed must reach **Principal Sainik School Bijapur - 586108 (Karnataka).** (iii) **Last date for receipt of Applications in Sainik School Bijapur will be 21 days from the date of first publication of the advertisement.** (iv) Applications should be accompanied by one A/C payee Demand Draft of **Rs. 500/-** (non- refundable) in favour of **Principal, Sainik School Bijapur** payable on State Bank of India Sainik School Campus Bijapur Branch (Code 3163). (v) Applications received after the due date or without the supporting documents or prescribed application fee or not in the prescribed format will be rejected without any intimation.
5. The school will not be responsible for any postal delay or missing of envelope and no claim will be entertained in this regard. **Only short listed Candidates will be called for Written Test / Practical Test/ Interview.** No TA/DA for attending the selection test/interview or for joining the post is admissible as per rules of the school.
6. Candidates are to enclose the following documents alongwith the application: -
   (a) Demand Draft for Rs 500/-.
   (b) Affix Passport size photograph at the space provided in the application form.
   (c) Self addressed envelope with stamps worth Rs 40/-.
   (d) Copies of educational and experience certificates.
   (e) In case, the Applicant is SC/ST/OBC category, the Applicant is to attach a copy of Caste / Category Certificate issued by the concerned authority.
7. The school administration reserves the right to cancel the vacancy due to administrative / policy reasons. For more information you can contact on Telephone No **08352 - 270638.**

Sd/- PRINCIPAL
SAINIK SCHOOL BIJAPUR

ರಾಜಸ್ಥಾನ: ಶಿವ ಪ್ರತಿಮೆ ಅನಾವರಣ ಇಂದು

ಜೈಪುರ (ಪಿಟಿಐ): ರಾಜಸ್ಥಾನದ ರಾಜ್ ಸಮಂದ್ ಜಿಲ್ಲೆಯ ನಾಥದ್ವಾರದಲ್ಲಿ ನಿರ್ಮಾಣಗೊಂಡಿರುವ 369 ಅಡಿ ಎತ್ತರದ 'ವಿಶ್ವ ಸ್ವರೂಪಂ' ಶಿವ ಪ್ರತಿಮೆಯನ್ನು ಶನಿವಾರ ಅನಾವರಣಗೊಳಿಸಲಾಗುತ್ತದೆ.

ಇದು ವಿಶ್ವದ ಅತೀ ಎತ್ತರದ ಪ್ರತಿಮೆ ಎಂದು ಹೇಳಲಾಗಿದೆ. ಆಧ್ಯಾತ್ಮಿಕ ನಾಯಕ ಮೊರಾರಿ ಬಾಪು, ಸಿ.ಎಂ ಅಶೋಕ್ ಗೆಹಲೋತ್ ಮತ್ತು ಸ್ಪೀಕರ್ ಸಿ.ಪಿ.ಜೋಶಿ ಸಮ್ಮುಖದಲ್ಲಿ ಪ್ರತಿಮೆ ಅನಾವರಣಗೊಳ್ಳಲಿದೆ.

ಸಾಮಾಜಿಕ ಜಾಲತಾಣ ಮೇಲ್ಮನವಿ ಸಮಿತಿ ರಚನೆ ಶೀಘ್ರ

ನವದೆಹಲಿ: ಸಾಮಾಜಿಕ ಜಾಲತಾಣಗಳ ಬಳಕೆದಾರರ ದೂರುಗಳ ನಿರ್ವಹಣೆಗೆ ಮೂರು ತಿಂಗಳಲ್ಲಿ ಮೇಲ್ಮನವಿ ಸಮಿತಿಯನ್ನು ರಚಿಸಲಾಗುವುದು ಎಂದು ಕೇಂದ್ರ ಸರ್ಕಾರವು ಹೇಳಿದೆ.

ಕೇಂದ್ರ ಸರ್ಕಾರವು, ಮಾಹಿತಿ ತಂತ್ರಜ್ಞಾನ (ಮಧ್ಯಸ್ಥ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ತಿದ್ದುಪಡಿ ನಿಯಮಗಳು–2022 ಅಡಿಯಲ್ಲಿ ಈ ಸಮಿತಿಗಳನ್ನು ರಚಿಸಲಿದೆ. ಇಂತಹ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಮಿತಿಗಳನ್ನು ರಚಿಸಬಹುದು.

ಈ ಸಮಿತಿಯಲ್ಲಿ ಒಬ್ಬ ಮುಖ್ಯಸ್ಥ ಮತ್ತು ಇಬ್ಬರು ಸದಸ್ಯರು ಇರಲಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಇರುವ ಪೋಸ್ಟ್/ಚಿತ್ರ/ವಿಡಿಯೊಗಳನ್ನು ತೆಗೆದುಹಾಕುವಂತೆ ಆಯಾ ಸಾಮಾಜಿಕ ಜಾಲತಾಣ ಕಂಪನಿಗೆ ನಿರ್ದೇಶನ ನೀಡುವ ಅಧಿಕಾರ ಈ ಸಮಿತಿಗಳಿಗೆ ಇದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023. ದೂರವಾಣಿ : 080–2955 7023
ಇಮೇಲ್ : cekhsdrp@gmail.com, cekhsdrp-hfws@karnataka.gov.in
ಸಂಖ್ಯೆ : ಆಕುಕಇ/ಇಂಘ/ಮುಇಂ/ತಾಸ–1, 2 & 3/ಸಇಂ–1–9/ಟಿಎನ್‌ಡಿ/ಇಸಿಆರ್‌ಪಿ–II/ 2022–23/1869, 1870, 1871, 1872, ದಿನಾಂಕ : 28–10–2022

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿನ ತಾಲ್ಲೂಕು ಮಟ್ಟದ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 12 ಮತ್ತು 6 ಹಾಸಿಗೆ ಸಾಮರ್ಥ್ಯದ ಐಸೋಲೇಷನ್ ವಾರ್ಡ್‌ಗಳನ್ನು ನಿರ್ಮಿಸುವ ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದ 10 ಪ್ಯಾಕೇಜ್ ಕಾಮಗಾರಿಗಳು, ಮೈಸೂರು ವಿಭಾಗಕ್ಕೆ ಸಂಬಂಧಿಸಿದ 14 ಪ್ಯಾಕೇಜ್ ಕಾಮಗಾರಿಗಳು, ಧಾರವಾಡ ವಿಭಾಗಕ್ಕೆ ಸಂಬಂಧಿಸಿದ 4 ಪ್ಯಾಕೇಜ್ ಕಾಮಗಾರಿಗಳು ಮತ್ತು ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದ 6 ಪ್ಯಾಕೇಜ್ ಕಾಮಗಾರಿಗಳಿಗಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (ಇ–ಪೋರ್ಟಲ್) ಮೂಲಕ ದ್ವಿಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಕಾಲಾವಧಿ 03 ತಿಂಗಳುಗಳು ಮಳೆಗಾಲ ಸೇರಿದಂತೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಅನ್ನು ಪರಿಶೀಲಿಸುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು :

1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 14–11–2022 ರಂದು 16.00 ಗಂಟೆಯವರೆಗೆ.

2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 15–11–2022 ರಂದು 16.00 ಗಂಟೆಗೆ.

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–
ಮುಖ್ಯ ಇಂಜಿನಿಯರ್,
ಆ&ಕು.ಕ.ಇ., ಇಂಜಿನಿಯರಿಂಗ್ ಘಟಕ, ಬೆಂಗಳೂರು.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಗುಜರಾತ್‌ನಲ್ಲಿ ಸಿ–295 ವಿಮಾನ ತಯಾರಿಕೆ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಗೆ ಸಿ–295 ಸರಕು ಸಾಗಣೆ ವಿಮಾನ ತಯಾರಿಕಾ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನ ವಡೋದರಾದಲ್ಲಿ ಭಾನುವಾರ (ಅ.30) ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

'ಯುರೋಪ್‌ನ ಏರ್‌ಬಸ್ ಸಂಸ್ಥೆ ಹಾಗೂ ಭಾರತದ ಟಾಟಾ ಸಂಸ್ಥೆಯ ಪಾಲುದಾರಿಕೆಯಲ್ಲಿ ವಿಮಾನವನ್ನು ತಯಾರಿಸಲಾಗುವುದು' ಎಂದು ರಕ್ಷಣಾ ಕಾರ್ಯದರ್ಶಿ ಅಜಯ್ ಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಘಟಕದ ನಿರ್ಮಾಣಕ್ಕಾಗಿ ಏರ್‌ಬಸ್‌ನೊಂದಿಗೆ ₹21,935 ಕೋಟಿ ಮೊತ್ತದ ಒಪ್ಪಂದವನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಮಾಡಿಕೊಳ್ಳಲಾಗಿತ್ತು. ಯೋಜನೆ ಅಡಿ ಒಟ್ಟು 56 ವಿಮಾನಗಳನ್ನು ತಯಾರಿಸಲಾಗುವುದು ಎಂದು ಮಾಹಿತಿ ನೀಡಿದರು.

₹21,935 ಕೋಟಿ ಯೋಜನಾ ವೆಚ್ಚ

ಸಿ295 ಚಿತ್ರ:ಏರ್‌ಬಸ್ ವೆಬ್‌ಸೈಟ್

670 ಮೀಟರ್ ಟೇಕ್‌ಆಫ್ ಆಗಲು ಅಗತ್ಯ ಇರುವ ರನ್‌ವೇ ಉದ್ದ

320 ಮೀಟರ್ ಲ್ಯಾಂಡ್ ಆಗಲು ಅಗತ್ಯ ಇರುವ ರನ್‌ವೇ ಉದ್ದ

ಮಾಹಿತಿ: ಏರ್‌ಬಸ್ ವೆಬ್‌ಸೈಟ್

2025ರ ವೇಳೆಗೆ ಹಾರಾಟಕ್ಕೆ ಸಿದ್ಧ

- 2025 ಆಗಸ್ಟ್ ಒಳಗಾಗಿ ಹಾರಾಟಕ್ಕೆ ಸಿದ್ಧವಿರುವ 16 ವಿಮಾನಗಳನ್ನು ಏರ್‌ಬಸ್ ಪೂರೈಸಲಿದೆ
  - ಭಾರತದಲ್ಲೇ ಸಂಪೂರ್ಣ ನಿರ್ಮಾಣವಾಗುವ ಮೊದಲ ವಿಮಾನವು 2026ರ ಸೆಪ್ಟೆಂಬರ್ ಹೊತ್ತಿಗೆ ಸಿದ್ಧ
  - ಸ್ಪೇನ್‌ನಲ್ಲಿರುವ ಏರ್‌ಬಸ್ ಸಂಸ್ಥೆಯ ತಯಾರಿಕಾ ಘಟಕದಲ್ಲಿ ಭಾರತದ 240 ಎಂಜಿನಿಯರ್‌ಗಳಿಗೆ ತರಬೇತಿ
- ಅವ್ರೋ ವಿಮಾನದ ಬದಲಾಗಿ ಸಿ–295 ವಿಮಾನವನ್ನು ತಯಾರಿಸಲಾಗುತ್ತಿದೆ
- ಬಿಡಿಭಾಗಗಳ ಪೂರೈಕೆಗೆ ದೇಶದ ಏಳು ರಾಜ್ಯಗಳ ಒಟ್ಟು 125 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಟಾಟಾ ಸಂಸ್ಥೆ ಗುರುತಿಸಿದೆ

ಉದ್ಯೋಗ ಸೃಷ್ಟಿ

ವಿಮಾನಯಾನ ಕ್ಷೇತ್ರದ ಉದ್ಯೋಗ ಸೃಷ್ಟಿಯಲ್ಲಿ ಈ ಘಟಕವು ವೇಗವರ್ಧಕದಂತೆ ಕೆಲಸ ಮಾಡಲಿದೆ. 600ಕ್ಕೂ ಹೆಚ್ಚು ನುರಿತ ನೇರ ಉದ್ಯೋಗ, 3,000 ಪರೋಕ್ಷ ಉದ್ಯೋಗ ಹಾಗೂ 3,000 ಮಧ್ಯಮ ನುರಿತ ಉದ್ಯೋಗ ಅವಕಾಶಗಳನ್ನು ಘಟಕ ಸೃಷ್ಟಿಸಲಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ವಿಮಾನದ ವೈಶಿಷ್ಟ್ಯ

- ಕನಿಷ್ಠ ತಾಪಮಾನ ಮತ್ತು ಗರಿಷ್ಠ ಉಷ್ಣಾಂಶದಲ್ಲೂ ಕೆಲಸ ಮಾಡುವ ಕ್ಷಮತೆ
- ಆಗಸದಲ್ಲಿಯೇ ಬೇರೆ ವಿಮಾನಗಳಿಗೆ ಇಂಧನ ಭರ್ತಿ ಮಾಡುತ್ತದೆ. 6,000 ಲೀಟರ್ ಇಂಧನ ಹೊತ್ತೊಯ್ಯುವ ಸಾಮರ್ಥ್ಯ
- ರನ್‌ವೇ ಇಲ್ಲದ ಸ್ಥಳದಿಂದಲೂ ಹಾರಾಟ ನಡೆಸುವ ಮತ್ತು ಇಳಿಯುವ ಸಾಮರ್ಥ್ಯ
- 40–45 ಶಸ್ತ್ರಸಜ್ಜಿತ ಸೈನಿಕರು ಅಥವಾ ಸುಮಾರು 70 ಪ್ರಯಾಣಿಕರನ್ನು ಹೊತ್ತೊಯ್ಯುವ ಸಾಮರ್ಥ್ಯ
- 56 ವಿಮಾನಗಳಲ್ಲೂ ದೇಶೀಯವಾಗಿ ಅಭಿವೃದ್ಧಿಪಡಿಸಿದ ವಿದ್ಯುನ್ಮಾನ ರಕ್ಷಣಾ ಮತ್ತು ದಾಳಿ ವ್ಯವಸ್ಥೆ ಇರಲಿದೆ. ಈ ವ್ಯವಸ್ಥೆಯನ್ನು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಹಾಗೂ ಭಾರತ್ ಡೈನಮಿಕ್ಸ್ ಲಿ. ಅಭಿವೃದ್ಧಿಪಡಿಸಿದೆ
- 5ರಿಂದ 9 ಟನ್ ಭಾರ ಹೊರುವ ಸಾಮರ್ಥ್ಯ
- ಸೈನಿಕರನ್ನು, ಸರಕುಗಳನ್ನು ಸುಲಭವಾಗಿ ಮತ್ತು ಕ್ಷಿಪ್ರವಾಗಿ ಏರ್‌ಡ್ರಾಪ್ ಮಾಡುವಂಥ ರ್‍ಯಾಂಪ್ ವ್ಯವಸ್ಥೆ

'ಉಚಿತ ಕೊಡುಗೆಗೆ ಕಡಿವಾಣ ಆಯೋಗಕ್ಕೆ ಅಧಿಕಾರವಿಲ್ಲ'

ನವದೆಹಲಿ (ಪಿಟಿಐ): ಉಚಿತ ಕೊಡುಗೆಗಳ ವಿಷಯಗಳನ್ನು ನಿಯಂತ್ರಿಸಲು ಚುನಾವಣಾ ಆಯೋಗಕ್ಕೆ ಅಧಿಕಾರವಿಲ್ಲ ಎಂದು ಹೇಳಿರುವ ಕಾಂಗ್ರೆಸ್, ಚುನಾವಣಾ ಕಾನೂನಿನ ಸರಿಯಾದ ಅನುಷ್ಠಾನದ ಮೂಲಕ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಗಮನಹರಿಸಬೇಕು ಎಂದು ಹೇಳಿದೆ.

ಅ. 4ರಂದು ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ತಮ್ಮ ಚುನಾವಣಾ ಭರವಸೆಗಳ ಆರ್ಥಿಕ ಕಾರ್ಯಸಾಧ್ಯತೆ ಬಗ್ಗೆ ಮತದಾರರಿಗೆ ಅಧಿಕೃತ ಮಾಹಿತಿ ನೀಡುವಂತೆ ಸೂಚಿಸಲು ಮಾದರಿ ನೀತಿ ಸಂಹಿತೆಗೆ ತಿದ್ದುಪಡಿ ಮಾಡುವ ಬಗ್ಗೆ ಅಭಿಪ್ರಾಯಗಳನ್ನು ತಿಳಿಸುವಂತೆ ಸೂಚಿಸಿತ್ತು.

'ಇಂತಹ ಸಮಸ್ಯೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಆರೋಗ್ಯಪೂರ್ಣ ಭಾಗವಾಗಿದೆ ಹಾಗೂ ಬುದ್ಧಿವಂತಿಕೆ, ವಿವೇಚನೆ ಮತ್ತು ಮತದಾರರ ವಿಶ್ಲೇಷಣೆಯ ಮೇಲೆ ಅವಲಂಬಿತವಾಗಿದೆ' ಎಂದು ಕಾಂಗ್ರೆಸ್ ಹೇಳಿದೆ.

'ಇದು ಚುನಾವಣೆ ಪೂರ್ವ ಅಥವಾ ನಂತರ ನಿರ್ಧರಿಸಬೇಕಾದ ವಿಷಯ. ಅದು ಚುನಾವಣಾ ಶಿಕ್ಷೆ ಅಥವಾ ಚುನಾವಣಾ ಸ್ವೀಕಾರದ ಮೂಲಕ ಆಗಿರಬಹುದು. ಚುನಾವಣಾ ಆಯೋಗವಾಗಲಿ, ಸರ್ಕಾರವಾಗಲಿ ಅಥವಾ ನ್ಯಾಯಾಲಯಗಳಾಗಲಿ, ಅಂತಹ ಸಮಸ್ಯೆಗಳನ್ನು ನಿಯಂತ್ರಿಸಲು ಅಧಿಕಾರವಿಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಚುನಾವಣಾ ಆಯೋಗಕ್ಕೆ (ಇ.ಸಿ) ಪತ್ರ ಬರೆದಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೋಟಿನಲ್ಲಿ ಲಕ್ಷ್ಮೀ, ಗಣೇಶ ಚಿತ್ರ: ಕೇಜ್ರಿವಾಲ್ ಪತ್ರ

ನವದೆಹಲಿ (ಪಿಟಿಐ): ಕರೆನ್ಸಿ ನೋಟುಗಳ ಮೇಲೆ ಲಕ್ಷ್ಮೀ ಮತ್ತು ಗಣೇಶನ ಚಿತ್ರ ಮುದ್ರಿಸುವಂತೆ ಒತ್ತಾಯಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.

'ಭಾರತೀಯ ಕರೆನ್ಸಿಯ ಒಂದು ಬದಿಯಲ್ಲಿ ಗಾಂಧೀಜಿ ಮತ್ತು ಇನ್ನೊಂದು ಬದಿಯಲ್ಲಿ ಗಣೇಶ ಮತ್ತು ಲಕ್ಷ್ಮೀ ಚಿತ್ರ ಇರಬೇಕು ಎಂದು ದೇಶದ 130 ಕೋಟಿ ಜನರು ಬಯಸುತ್ತಾರೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಅರವಿಂದ ಕೇಜ್ರಿವಾಲ್ ಅವರ ಬೇಡಿಕೆಗೆ ಬಿಜೆಪಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಮುಂಬರುವ ಗುಜರಾತ್ ಮತ್ತು ಹಿಮಾಚಲ ಪ್ರದೇಶ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎಎಪಿಯ 'ಕೊಳಕು ಹಿಂದೂ ವಿರೋಧಿ ಮುಖ'ವನ್ನು ಮರೆ ಮಾಚುವ ವಿಫಲ ಪ್ರಯತ್ನ ಎಂದು ಟೀಕಿಸಿದೆ.

'ಉಚಿತ ವಿದ್ಯುತ್' ಭರವಸೆ: ಅಪರಾಧ ಎಂದು ಪರಿಗಣಿಸಲು ಮನವಿ

ನವದೆಹಲಿ: ಚುನಾವಣೆ ವೇಳೆ ರಾಜಕೀಯ ಪಕ್ಷಗಳು ಉಚಿತ ವಿದ್ಯುತ್ ನೀಡುತ್ತೇವೆ ಎಂದು ಭರವಸೆ ನೀಡಿದರೆ, ಅಂಥ ಭರವಸೆಗಳನ್ನು ಅಸಿಂಧು ಗೊಳಿಸಬೇಕು ಎಂದು ನೀತಿ ಆಯೋಗದ ಮಾಜಿ ಉಪಾಧ್ಯಕ್ಷ ರಾಜೀವ್ ಕುಮಾರ್ ಅವರ 'ಪಹಲೆ ಇಂಡಿಯಾ ಫೌಂಡೇಷನ್' ಸಂಸ್ಥೆಯು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಜನ ಪ್ರಾತಿನಿಧ್ಯ ಕಾಯ್ದೆ ಅನ್ವಯ ಇಂಥ ಭರವಸೆಗಳನ್ನು ಅಪರಾಧ ಎಂದು ಪರಿಗಣಿಸಬೇಕು ಎಂದು ಮನವಿ ಮಾಡಿದೆ.

ಹೀಗೆ ನೀಡುವ 'ಉಚಿತ' ಭರವಸೆಗಳು ಮತದಾರರಿಗೆ ಲಾಭ ಮಾಡಿಕೊಡುತ್ತವೆ ಎನ್ನುವುದು ತಪ್ಪು ಕಲ್ಪನೆ ಮತ್ತು ಜನರನ್ನು ಹಾದಿತಪ್ಪಿಸುವ ಕೆಲಸ ಎಂದು ಸಂಸ್ಥೆ ತನ್ನ ಅರ್ಜಿಯಲ್ಲಿ ಹೇಳಿದೆ.

'ಇಂಥ ಭರವಸೆಗಳು ರಾಜ್ಯದ ಆರ್ಥಿಕ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಚುನಾವಣಾ ಆಯೋಗದ ಒಪ್ಪಿಗೆ ಪಡೆಯದೆ ಯಾವುದೇ ರಾಜಕೀಯ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡುವಂತೆ ಶಾಶ್ವತ ನಿಯಮವೊಂದನ್ನು ರೂಪಿಸಬೇಕು' ಎಂದಿದೆ.

ಗುಜರಾತ್: ಮಹೇಂದ್ರ ಸಿಂಹ ವಘೇಲಾ ಕಾಂಗ್ರೆಸ್‌ಗೆ ಸೇರ್ಪಡೆ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವ ಮೊದಲೇ ಮಾಜಿ ಮುಖ್ಯಮಂತ್ರಿ ಶಂಕರಸಿಂಹ ವಘೇಲಾ ಅವರ ಪುತ್ರ ಮಹೇಂದ್ರಸಿಂಹ ವಘೇಲಾ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ಕಾಂಗ್ರೆಸ್‌ನ ಗುಜರಾತ್ ಘಟಕದ ಅಧ್ಯಕ್ಷ ಜಗದೀಶ್ ಠಾಕೂರ್ ಅವರು ಪಕ್ಷದ ಕೇಂದ್ರ ಕಚೇರಿಯಲ್ಲಿ ಮಾಜಿ ಶಾಸಕ ಮಹೇಂದ್ರಸಿಂಹ ಅವರನ್ನು ಪಕ್ಷಕ್ಕೆ ಸ್ವಾಗತಿಸಿದರು. ಉತ್ತರ ಗುಜರಾತ್‌ನ ಬಾಯಡ್ ಕ್ಷೇತ್ರದಿಂದ 2012ರಲ್ಲಿ ಕಾಂಗ್ರೆಸ್ ಶಾಸಕರಾಗಿ ಅವರು ಆಯ್ಕೆಯಾಗಿದ್ದರು. ಬಳಿಕ ಅವರು 2017ರ ಆಗಸ್ಟ್‌ನಲ್ಲಿ ಬಿಜೆಪಿ ಸೇರಿದ್ದರು.

ದೈನಿಕ ಪಕ್ಷ ಬಯಸಿದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವೆ ಎಂದು ಮಹೇಂದ್ರ ಸಿಂಹ ಅವರು ಪ್ರತಿಕ್ರಿಯಿಸಿದ್ದಾರೆ.

ಏಳನೇ ಪಟ್ಟಿ ಬಿಡುಗಡೆ ಮಾಡಿದ ಎಎಪಿ

ಗುಜರಾತ್‌ನ ಮುಂಬರುವ ವಿಧಾನಸಭಾ ಚುನಾವಣೆಗೆ ಆಮ್ ಆದ್ಮಿ ಪಕ್ಷವು (ಎಎಪಿ) ತನ್ನ ಪಕ್ಷದ 13 ಅಭ್ಯರ್ಥಿಗಳ ಏಳನೇ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ಎಎಪಿಯು ಇದುವರೆಗೆ ಒಟ್ಟು 86 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಗೋಪಾಲ್ ಇಟಾಲಿಯಾ ಅವರು 'ಎಎಪಿಯ ಅಭ್ಯರ್ಥಿಗಳ ಪಟ್ಟಿಯಲ್ಲಿ ವೈದ್ಯರು, ನಿವೃತ್ತ ಸರ್ಕಾರಿ ಅಧಿಕಾರಿಗಳು, ವಕೀಲರು, ಉದ್ಯಮಿಗಳು ಇದ್ದಾರೆ' ಎಂದು ಮಾಹಿತಿ ನೀಡಿದ್ದಾರೆ. ಒಟ್ಟು 182 ಸದಸ್ಯ ಬಲದ ಗುಜರಾತ್ ವಿಧಾನಸಭೆಗೆ ಇದೇ ವರ್ಷಾಂತ್ಯಕ್ಕೆ ಚುನಾವಣೆ ನಡೆಯಲಿದೆ.

ಜನತಂತ್ರದ ಹಬ್ಬ 2022

'ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಕಾಂಗ್ರೆಸ್ ಸೇರ್ಪಡೆಯಾಗಿ...'

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ.
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಐಬಿಸಿ ವಿಭಾಗ, ಸಂ–1 ಕೆಂಭಾವಿ, ತಾ: ಸುರಪುರ, ಜಿ: ಯಾದಗಿರಿ
Phone: 08443-278674 Email: ee_ibcdiv1kembhavi@yahoo.com
ಸಂ: ಕೃಭಾಜನಿನಿ/ಐಬಿಸಿ ವಿ–1/ಶಿಪಿ/ಟೆಂಡರ /2022–23/623 ದಿನಾಂಕ:25–10–2022

ಸಂಕ್ಷಿಪ್ತ ಟೆಂಡರ ಪ್ರಕಟಣೆ Call-3
(ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ:– 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ: 2021–22/ 1006 ದಿನಾಂಕ: 31–12–2021
2) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ Call–2: 2022–23/ 241 ದಿನಾಂಕ: 12– 07–2022

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂ.1 ಕೆಂಭಾವಿ ಇವರು ಕರ್ನಾಟಕ ಸರಕಾರದ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ Roads and bridges ಅಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ Construction of road to hill top colony from Hunagunda state highway to Division office at Kembhavi./ Call-3 (I.N.21535) ಸಂ: 67.99 ಲಕ್ಷಗಳು ಇ.ಎಂ.ಡಿ ಮೊತ್ತ:1.36 ಲಕ್ಷಗಳು percentage basis from valid Copy of registration certificate as class-I and above contractors registered in KPWD. ಗುತ್ತಿಗೆದಾರರಿಂದ ಟೆಂಡರನ್ನು ದ್ವಿ ಮಾತ್ರ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್ ಸೈಟ್ http://eproc.karnataka.gov.in/eportal/index.seam link ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

1) ಇ–ಪ್ರಾಕ್ಯೂರ್‌ಮೆಂಟ್ http://eproc.karnataka.gov.in/eportal/index.seam link ವೆಬ್ ಸೈಟ್ ನಿಂದ ಖಾಲಿ ಟೆಂಡರ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 29–10–2022 ರಿಂದ 10–11–2022 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವುದು. 2) ಭತಿಗೊಳಿಸಿದ ಇ–ಟೆಂಡರ ಮಸ್ತಕವನ್ನು ಸಲ್ಲಿಸಲು ಕೊನೆ ದಿನಾಂಕ: 10–11–2022 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವುದು. 3) ಕವರ–I(technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ: ಯಾದಗಿರಿ ಕಛೇರಿಯಲ್ಲಿ ದಿನಾಂಕ: 15–11–2022 ರ ಬೆಳಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 4)ಕವರ–II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯಲ್ಲಿ ದಿನಾಂಕ: 17–11–2022 ರ ಬೆಳಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. 5) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. 6) ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ ಸಂ 1 ಕೆಂಭಾವಿ–585216
ವಾ.ಸಾ.ಸಂ.ಇ/ಯಾದಗಿರಿ/293/ಎಂ.ಸಿ.ಎ/2022–23

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ:ಕವಿನಿಆ/1/ಬಿ.ಎನ್/2022–23/910/1114/ಬೆಂಗಳೂರು ದಿನಾಂಕ: 28–10–2022

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು – ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಹಸಿರು ಇಂಧನಕ್ಕಾಗಿ ಮುಕ್ತ ಅವಕಾಶಕ್ಕೆ ನಿಬಂಧನೆ ಮತ್ತು ಷರತ್ತುಗಳು) ವಿನಿಯಮಗಳು, 2022.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ವಿನಿಯಮಗಳ ಕರಡು ಪ್ರತಿಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 18–08–2022 ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: www.kerc.karnataka.gov.in ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು ಸದರಿ ವಿಷಯದ ಬಗ್ಗೆ, ದಿನಾಂಕ: 24–11–2022ರಂದು ಗುರುವಾರ ಬೆಳಗ್ಗೆ 11.00 ಘಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾ.ಸಾ.ಸಂ.ಇ/ಬಿ/2811/2022–23

M.P. HOUSING & INFRASTRUCTURE DEVELOPMENT BOARD
NOTICE INVITING BID
Tender No. 2022_MPHID_229634 Date : 28.10.2022

Request for Proposal for Selection of Developer for "Selection of developer for Construction and development of various government facilities at Jabalpur under Re-Densification Scheme of GoMP"

Government of Madhya Pradesh (GoMP) through MP Housing & Infrastructure Development Board (MPHIDB) intends to carry out "**Construction and development of various government facilities at Jabalpur under Re-Densification Scheme of GoMP**" ("The Project/Government Facilities"). MPHIDB intends to appoint a Developer for Construction and Development of these Government Facilities.

The selected Developer will be provided "Land-Ownership Rights" on Compensatory Land Parcel (CLP) admeasuring **35850 Sqm** belonging to GoMP at Civil Line, Jabalpur (Previously Burn Standard Company Land). The prospective bidders have to quote the Premium for "Land-Ownership Rights" on the CLP. The Bidder quoting Highest Premium will be selected as Developer for the Project. The selected Developer has to pay the quoted Premium partly in monetary terms and partly in kind in the form of cost of construction of the Government Facilities as per provisions of the RFP Document. The MPHIDB invites bids from reputed & experienced entities for Selection of a Developer for the Project, through transparent online bidding process. RFP documents can be downloaded and purchased from GoMP online e-tender portal **https://mptenders.gov.in.**

RFP Document Cost	Rs. 0.50 Lacs + GST
Online sale of RFP Document	07.11.2022 to 23.12.2022
Bid Security	Rs 86.09 Lacs
Estimated Cost of Government Facilities	Rs. 140.94 Cr.
Reserve Price of CLP	Rs. 172.18 Cr.
Pre-bid meeting	28.11.2022 at 14:00 hrs.

Complete bids can be submitted online by 23.12.2022 up to 17.30 Hrs. through the online e-tender portal **https://mptenders.gov.in.**

/mphidb DY. HOUSING COMMISSIONER
MPM/107061/2022 /mphidb Circle –Jabalpur

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಇ–ಮೇಲ್: dhobangalorerural@gmail.com ದೂರವಾಣಿ: 080-29787452
ಸಂಖ್ಯೆ: DHO/CHO/RECRUIT/01/2022-23 ದಿನಾಂಕ: 27/10/2022

ಪ್ರಕಟಣೆ

ಗುತ್ತಿಗೆ ಆಧಾರದ ಮೇಲೆ ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ
ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಆನ್‌ಲೈನ್ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆ ಸಮುದಾಯ ಆರೋಗ್ಯ ಅಧಿಕಾರಿ (ಸಿ.ಹೆಚ್.ಓ) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ, ಬಿ.ಎಸ್‌ಸಿ ಮತ್ತು ಪೋಸ್ಟ್ ಬಿ.ಎಸ್‌ಸಿ ವಿದ್ಯಾರ್ಹತೆ ಹೊಂದಿರುವ ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.
ಮಾಸಿಕ ಸಂಭಾವನೆ: ರೂ. 22000/– (ಪ್ರತಿ ತಿಂಗಳಿಗೆ) ಜೊತೆಗೆ ಹೆಚ್ಚುವರಿಯಾಗಿ ಕಾರ್ಯಕ್ಷಮತೆ ಆಧಾರಿತ ಪ್ರೋತ್ಸಾಹ ಧನ ರೂ. 8000/– ವರೆಗೆ ನೀಡಲಾಗುವುದು.
ವಯೋಮಿತಿ: ಸಾಮಾನ್ಯ ಅಭ್ಯರ್ಥಿ: 35 ವರ್ಷ; ಎಸ್.ಸಿ/ಎಸ್.ಟಿ/ ಪ್ರವರ್ಗ 1/ ಮಾಜಿ ಸೈನಿಕ 40 ವರ್ಷ; 2ಎ/2ಬಿ/3ಎ/3ಬಿ ಹಾಗೂ ಇತರೆ ಹಿಂದುಳಿದ ವರ್ಗ (ರಾಜ್ಯ) 38 ವರ್ಷ, ಅಧಿಸೂಚನೆ ಹೊರಡಿಸಿರುವ ದಿನಾಂಕ ಒಳಗಾಗಿ

ಸಮುದಾಯ ಆರೋಗ್ಯಾಧಿಕಾರಿ (ಸಿ.ಹೆಚ್.ಓ) ಒಟ್ಟು ಹುದ್ದೆಗಳು

	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಮಾಜಿ ಸೈನಿಕ	ಯೋಜನಾ ನಿರಾಶ್ರಿತ	ಕನ್ನಡ ಮಾಧ್ಯಮ	ಸಾಮಾನ್ಯ ಅಭ್ಯರ್ಥಿ	ಒಟ್ಟು
ಪ.ಜಾತಿ	0	0	0	0	0	0	0	0
ಪ.ಪಂ	0	0	0	1	0	0	0	1
I	0	0	0	0	0	0	0	0
IIa	1	0	0	0	0	0	1	2
IIb	0	0	0	0	0	0	0	0
IIIa	0	1	0	0	0	0	0	1
IIIb	0	0	0	0	0	0	1	1
ಸಾಮಾನ್ಯ	1	1	0	1	0	0	1	4
ಒಟ್ಟು	2	2	0	2	0	0	3	9

ಅರ್ಜಿಯನ್ನು ಕೇವಲ ಆನ್‌ಲೈನ್ ಮುಖಾಂತರ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹಾಗೂ ಪರೀಕ್ಷೆಯನ್ನು ರಾಜ್ಯದಿಂದ ಆನ್‌ಲೈನ್ ಮುಖಾಂತರ ನಡೆಸಲಾಗುವುದು (ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ನೋಡಬಹುದು).
ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ 27/10/2022. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 08/11/2022 (ಸಾಯಂಕಾಲ 5.00 ಗಂಟೆವರೆಗೆ) ಆನ್‌ಲೈನ್ ಪರೀಕ್ಷೆ ದಿನಾಂಕ 19/11/2022
ಹೆಚ್ಚಿನ ಮಾಹಿತಿಗಾಗಿ: http://karunadu.karnataka.gov.in/hfw ಸಂಪರ್ಕಿಸಬಹುದು.
ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ
DIPR/CP/VCPL/2815/2022-23

ಸಂಕ್ಷಿಪ್ತ ಸುದ್ದಿ

'ವಾಹಿನಿಗಳ ಉಪಗ್ರಹ ಸಂಪರ್ಕ ಸೇವೆ: ಶೀಘ್ರವೇ ನಿಬಂಧ ಸಡಿಲ'

ನವದೆಹಲಿ (ಪಿಟಿಐ): ಟಿ.ವಿ ವಾಹಿನಿಗಳಿಗೆ ಉಪಗ್ರಹ ಸಂಪರ್ಕ ಕಲ್ಪಿಸಲು ಸದ್ಯ ಭಾರತದಲ್ಲಿ ಇರುವ ನಿರ್ಬಂಧಗಳನ್ನು ಕೇಂದ್ರ ಸರ್ಕಾರವು ಶೀಘ್ರದಲ್ಲಿಯೇ ಸಡಿಲಿಸಲಿದೆ.

ಶುಕ್ರವಾರ ಇಲ್ಲಿ ನಡೆದ 'ಭಾರತ ಬಾಹ್ಯಾಕಾಶ ಸಮಾವೇಶ'ದಲ್ಲಿ ಮಾತನಾಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಈ ಮಾಹಿತಿ ನೀಡಿದರು. ಪ್ರಸ್ತುತ, ಭಾರತದಲ್ಲಿ 898 ಟಿ.ವಿ.ವಾಹಿನಿಗಳು ಇದ್ದು, 532 ವಾಹಿನಿಗಳು ತಮ್ಮ ಕಾರ್ಯಕ್ರಮಗಳ ಪ್ರಸಾರಕ್ಕಾಗಿ ವಿದೇಶಿ ಉಪಗ್ರಹಗಳನ್ನು ಅವಲಂಬಿಸಿವೆ.

ಭಾರತದ ಉಪಗ್ರಹ ಸಂಪರ್ಕ ಕೇಂದ್ರವಾಗಬೇಕು ಎಂಬ ಹಿನ್ನೆಲೆಯಲ್ಲಿ ಈ ನಿರ್ಬಂಧ ಸಡಿಲಿಸಲು ನಿರ್ಧರಿಸಲಾಗಿದೆ. ಉಪಗ್ರಹ ಸಂಪರ್ಕ ಕುರಿತ ಮಾರ್ಗದರ್ಶಿ ಸೂತ್ರಗಳನ್ನು 2011ರಲ್ಲಿ ನೀಡಲಾಗಿತ್ತು. ಈಗ ಅದನ್ನು ತಿಂಗಳೊಳಗೆ ಪರಿಷ್ಕರಿಸಲಾಗುವುದು. ಪ್ರಸ್ತುತ ನೆರೆಯ ನೇಪಾಳ, ಶ್ರೀಲಂಕಾ, ಭೂತಾನ್‌ನ ವಾಹಿನಿಗಳು ಭಾರತದಿಂದ ತಮ್ಮ ಕಾರ್ಯಕ್ರಮಗಳನ್ನು ಉಪಗ್ರಹಕ್ಕೆ ಸಂಪರ್ಕ ಕಲ್ಪಿಸುತ್ತಿವೆ ಎಂದರು.

'ಎಜು–ಟೆಕ್ ಕಂಪನಿಗಳ ಆನ್‌ಲೈನ್ ಪಿಎಚ್.ಡಿಗೆ ಮಾನ್ಯತೆ ಇಲ್ಲ'

ನವದೆಹಲಿ: 'ವಿದೇಶಿ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಎಜು–ಟೆಕ್ ಕಂಪನಿಗಳು ನಡೆಸುವ ಆನ್‌ಲೈನ್ ಪಿಎಚ್.ಡಿ ಕೋರ್ಸ್‌ಗಳು ಯಾವುದೇ ಮಾನ್ಯತೆ ಹೊಂದಿರುವುದಿಲ್ಲ' ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಶುಕ್ರವಾರ ಹೇಳಿವೆ.

ಈ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಯುಜಿಸಿ ಮತ್ತು ಎಐಸಿಟಿಇ ಎರಡನೇ ಬಾರಿಗೆ ಈ ರೀತಿಯ ಎಚ್ಚರಿಕೆ ನೀಡಿವೆ.

ಈ ವರ್ಷದ ಆರಂಭದಲ್ಲಿ, ಯುಜಿಸಿ ಮತ್ತು ಎಐಸಿಟಿಇ ತಮ್ಮ ಅಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳಿಗೆ ಎಜು–ಟೆಕ್ ಕಂಪನಿಗಳ ಸಹಯೋಗದೊಂದಿಗೆ ದೂರಶಿಕ್ಷಣ ಮತ್ತು ಆನ್‌ಲೈನ್ ಮೂಲಕ ಪದವಿ ಕೋರ್ಸ್‌ಗಳ ಬಗ್ಗೆ ಎಚ್ಚರಿಕೆ ನೀಡಿದ್ದವು. ನಿಯಮಗಳ ಪ್ರಕಾರ ಯಾವುದೇ 'ಫ್ರಾಂಚೈಸ್' ಒಪ್ಪಂದಕ್ಕೆ ಅನುಮತಿ ನೀಡಲಾಗುವುದಿಲ್ಲ ಎಂದೂ ತಿಳಿಸಿದ್ದವು.

'ಪಿಎಚ್.ಡಿ ಪದವಿಗಳನ್ನು ನೀಡುವ ಮಾನದಂಡಗಳನ್ನು ನಿರ್ವಹಿಸುವ ಸಲುವಾಗಿಯೇ ಯುಜಿಸಿ ನಿಯಮಾವಳಿ–2016 ಅನ್ನು ರೂಪಿಸಲಾಗಿದೆ. ಯುಜಿಸಿ ಮತ್ತು ಎಐಸಿಟಿಇ ಹೊರಡಿಸಿರುವ ಜಂಟಿ ಆದೇಶದ ಪ್ರಕಾರ, ಪಿಎಚ್.ಡಿ ಪದವಿಗಳನ್ನು ನೀಡಲು ಯುಜಿಸಿಯ ಈ ನಿಯಮಗಳು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಕಡ್ಡಾಯವಾಗಿದೆ.

ಟ್ವಿಟರ್ ಇನ್ನುಂದ ವಿರೋಧದ ಧ್ವನಿಯನ್ನು ಹತ್ತಿಕ್ಕುವುದಿಲ್ಲ ಎಂದು ಭಾವಿಸುವೆ: ರಾಹುಲ್

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣ ಟ್ವಿಟರ್ ಇನ್ನು ಮುಂದಾದರೂ ದ್ವೇಷ ಭಾಷಣದ ವಿರುದ್ಧ ಕಾರ್ಯನಿರ್ವಹಿಸಲಿದೆ, ಸತ್ಯಾಸತ್ಯತೆಯನ್ನು ಪರಿಶೀಲಿಸಲಿದೆ ಮತ್ತು ಭಾರತದಲ್ಲಿ ವಿರೋಧದ ಧ್ವನಿಯನ್ನು ಹತ್ತಿಕ್ಕುವುದಿಲ್ಲ ಎಂದು ಭಾವಿಸುತ್ತೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ.

ಎಲಾನ್ ಮಸ್ಕ್ ಟ್ವಿಟರ್ ಅನ್ನು ವಶಕ್ಕೆ ಪಡೆದ ಬೆನ್ನಲ್ಲೇ ರಾಹುಲ್ ಗಾಂಧಿ ಈ ರೀತಿ ಹೇಳಿದ್ದಾರೆ.

'ಎಲಾನ್ ಮಸ್ಕ್ ಅವರಿಗೆ ಅಭಿನಂದನೆ. ಟ್ವಿಟರ್ ಇನ್ನುಂದೆ ದ್ವೇಷ ಭಾಷಣದ ವಿರುದ್ಧ ಕಾರ್ಯನಿರ್ವಹಿಸಲಿದೆ, ಸತ್ಯಾಸತ್ಯತೆಯನ್ನು ಪರಿಶೀಲಿಸಲಿದೆ ಮತ್ತು ವಿರೋಧದ ಧ್ವನಿಯನ್ನು ಹತ್ತಿಕ್ಕುವುದಿಲ್ಲ ಎಂದು ಭಾವಿಸುತ್ತೇನೆ' ಎಂದು ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ರೋಜ್‌ಗಾರ್ ಮೇಳ: ಆಯೋಗಕ್ಕೆ ಠಾಕ್ರೆ ನೇತೃತ್ವದ ಶಿವಸೇನಾ ದೂರು

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರ 'ರೋಜ್‌ಗಾರ್ ಮೇಳ'ಕ್ಕೆ (ಉದ್ಯೋಗ ಮೇಳ) ಚಾಲನೆ ನೀಡಿ 75,000 ಜನರಿಗೆ ನೇಮಕಾತಿ ಪ್ರಮಾಣ ಪತ್ರ ಹಸ್ತಾಂತರಿಸಿದ ಬೆನ್ನಲ್ಲೇ, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಭಾರತೀಯ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಇದು ರಾಜಕೀಯ ಉದ್ದೇಶದ ನಡೆಯಾಗಿದ್ದು, ನಾಗರಿಕ ಸೇವಾ ನಿಯಮಗಳನ್ನು ಉಲ್ಲಂಘಿಸುತ್ತದೆ ಎಂದು ಅದು ಹೇಳಿದೆ.

'ರೋಜ್‌ಗಾರ್ ಮೇಳಗಳ ಮೂಲಕ ಅಖಿಲ ಭಾರತ ಸೇವಾ ನಿಯಮಗಳನ್ನು ಉಲ್ಲಂಘಿಸುತ್ತಿವೆ. ನಾಗರಿಕ ಸೇವಾ ನಿಯಮಗಳ ಪ್ರಕಾರ ಸರ್ಕಾರದ ನೀತಿ ವಿಚಾರಗಳ ಮುಖ್ಯಸ್ಥರು ಯಾವುದೇ ನೇಮಕಾತಿ ಪತ್ರ ವಿತರಣೆ ಮಾಡಬಾರದು. ಆದರೆ, ಸಚಿವರು ಅಥವಾ ರಾಜಕೀಯ ನಾಯಕರು ಸಂಬಂಧ ಹೊಂದಿರುವ ವ್ಯಕ್ತಿಗಳು ಹೇಗೆ ನೇಮಕಾತಿ ಪತ್ರ ನೀಡಬಹುದು' ಎಂದು ಶಿವಸೇನಾ ವಕ್ತಾರ ಕಿಶೋರ್ ತಿವಾರಿ ಪ್ರಶ್ನಿಸಿದ್ದಾರೆ.

ಇನ್ನು ಅಮ್ಮನಾಗೊ ಆಯ್ಕೆ ಅವಳದೆ...

ಬೆಂಬಲಕ್ಕಿದೆ ಕಾನೂನು ಬಾಕಿ ಇದೆ ಸಂಕಟವಿನ್ನೂ

ಗರ್ಭಪಾತ ಅವಳ ಹಕ್ಕು ಎಂದು ಕೋರ್ಟ್ ತೀರ್ಪು ನೀಡಿದೆ. ಇದು ತಮ್ಮ ಪಾಲಿನ ಬಹುದೊಡ್ಡ ಸಂಭ್ರಮ ಎಂದು ಭ್ರಮಿಸಿದ ವರ್ಗ ಒಂದೆಡೆ ಇದ್ದರೆ, ತಮ್ಮ ಸೋಲಿನ ಪರಮಾವಧಿ ಎಂದು ಗ್ರಹಿಸಿರುವ ವರ್ಗ ಇನ್ನೊಂದು ಕಡೆ. ಆದರೆ, ಕಾನೂನಿನ ಬೆಂಬಲದ ತರುವಾಯವೂ ಗರ್ಭಪಾತದ ಸುತ್ತ ಉಳಿದುಕೊಂಡಿರುವ ಪ್ರಶ್ನೆಗಳೇನು? ಹೆಣ್ಣನ್ನು ದಿಗಿಲಿನಲ್ಲಿ ಉಳಿಸಿರುವ ಮನೋ–ಸಾಮಾಜಿಕ ಸಂಕಟಗಳೇನು? ಈ ಚರ್ಚೆ ಇಂದಿನ ಜರೂರು.

ಸುಶೀಲಾ ಡೋಣೂರ

ಗರ್ಭಪಾತ ಈಗ ಅವಳ ಕಾನೂನುಬದ್ಧ ಹಕ್ಕು. ಇತ್ತೀಚೆಗಷ್ಟೆ ಸುಪ್ರೀಂ ಕೋರ್ಟ್ ಗರ್ಭಪಾತಕ್ಕೆ ಸಂಬಂಧಿಸಿದಂತೆ ಮಹಿಳಾಪರ ನಿಲುವು ಪ್ರಕಟಿಸಿದೆ. ‘ಗರ್ಭಪಾತ ಸಂಪೂರ್ಣ ಅವಳದೆ ಆಯ್ಕೆ. ವಿವಾಹಿತಳೊ–ಅವಿವಾಹಿತಳೊ ಎನ್ನುವುದನ್ನು ನೋಡುವಂತಿಲ್ಲ. ಅವಳಿಗೆ ಬೇಕಿದ್ದರೆ ಬೇಕು, ಬೇಡವಾಗಿದ್ದರೆ ಬೇಡ ಎಂಬರ್ಥದ ತೀರ್ಮಾನ ಹೊರಬಿದ್ದಿದೆ.

ಇಲ್ಲಿಗೇ ಗರ್ಭಪಾತದ ಸಮಸ್ಯೆ–ಸವಾಲುಗಳು ಇತ್ಯರ್ಥವಾದವು ಎಂದರ್ಥವಲ್ಲ. ಇದು ಒಂದು ಮಟ್ಟಿಗಿನ ನಿರಾಳತೆಯನ್ನು ನೀಡಿದೆ. ಆದರೆ, ಬೇರೆ ಬೇರೆ ಸ್ವರೂಪದಲ್ಲಿ, ಬೇರೆಬೇರೆ ನೆಲೆಗಟ್ಟಿನಲ್ಲಿ ಗರ್ಭಪಾತದ ಸವಾಲುಗಳನ್ನು ಅವಲೋಕಿಸಬೇಕಿದೆ.

ಕಾರಣ ಏನೇ ಇರಲಿ, ಯಾರೇ ಆಗಲಿ, ಗರ್ಭಧಾರಣೆಯ ವಿಷಯ ಬಂದಾಗ ಇವತ್ತಿಗೂ ಮಹಿಳೆಯೇ ಅವಮಾನ ಎದುರಿಸಬೇಕಾಗುತ್ತದೆ, ಅವಳೆ ತಪ್ಪಿತಸ್ಥೆಯಾಗಿ ನಿಲ್ಲುತ್ತಾಳೆ. ಅದರಲ್ಲೂ ಬೇಡದ ಗರ್ಭಧಾರಣೆಯಾಗಿದ್ದರೆ, ಎದುರಾಗುವ ಮನೋ–ಸಾಮಾಜಿಕ ಸವಾಲುಗಳು ದಿಗಿಲು ಹುಟ್ಟಿಸುತ್ತವೆ. ಇವುಗಳನ್ನೆಲ್ಲಾ ನಿಭಾಯಿಸಲು ಕಾನೂನಿನ ನೆರವು ಬೇಕೇಬೇಕು. ಇದರ ಜೊತೆಗೆ ಅವಳಿಗೆ ಅಗತ್ಯವಾಗಿ ಬೇಕಾದ್ದು ನೈತಿಕ ಬೆಂಬಲ. ಇದಕ್ಕೆ ಅವಳ ಕುಟುಂಬ ಹಾಗೂ ಸಮಾಜ ತನ್ನ ನಿಲುವು ಮತ್ತು ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕಾದುದೂ ಸಹ ಅಷ್ಟೇ ಅಗತ್ಯ.

ಗರ್ಭಪಾತದ ನಂತರ ಎದುರಾಗುವ ಆರೋಗ್ಯ ಸಮಸ್ಯೆಗಳು, ಮಾನಸಿಕ –ಕೌಟುಂಬಿಕ ವಿರೋಧ, ಸಮಾಜದ ಮೂದಲಿಕೆ, ತನ್ನನ್ನೇ ಕಾಡುವ ತನ್ನದೇ ಪಾಪಪ್ರಜ್ಞೆ... ಈ ಎಲ್ಲಾ ಸಂಗತಿಗಳನ್ನು ಅವಳು ಹೇಗೆ ನಿಭಾಯಿಸುತ್ತಾಳೆ, ಹೇಗೆ ನಿರ್ಧಾರ ಕೈಗೊಳ್ಳುತ್ತಾಳೆ ಅನ್ನುವುದನ್ನೂ ಇಲ್ಲಿ ಪರಿಗಣಿಸಬೇಕಾಗುತ್ತದೆ. ವಿವಾಹಿತಳೇ ಇರಲಿ, ಅವಿವಾಹಿತಳೇ ಇರಲಿ, ಆ ಗರ್ಭ ಯೋಜಿತವೇ ಆಗಲಿ, ಆಕಸ್ಮಿಕವೇ ಆಗಿರಲಿ ಅಥವಾ ಬೇಕಾಗಿದ್ದೇ ಇರಲಿ, ಬೇಡವಾಗಿದ್ದೇ ಇರಲಿ– ಅದು ತನಗೆ ಬೇಕೆ? ಬೇಡವೇ? ಎನ್ನುವ ನಿರ್ಧಾರ ಕ್ಷಣಾರ್ಧದಲ್ಲಿ ಮಾಡಿ ಮುಗಿಸುವಂಥದ್ದಲ್ಲ. ಬೇಡ ಎಂದು ನಿರ್ಧರಿಸಿದ ನಂತರವೂ ಮನದ ಮೂಲೆಯಲ್ಲಿ ಉಳಿದುಕೊಳ್ಳುವ ದ್ವಂದ್ವ, ತಲ್ಲಣ, ಒಡಲ ಸಂಕಟಕ್ಕೆ ಉತ್ತರವೆಲ್ಲಿದೆ?

ಕಾನೂನು ಮಹಿಳಾಪರ ನಿಲುವು ಪ್ರಕಟಿಸಿದೆ ಎಂದರೆ ಇನ್ನು ಮುಂದೆ ಯಾರು ಬೇಕಾದರೂ, ಯಾವಾಗ ಬೇಕಾದಾಗ, ಗಂಡನ ಅಥವಾ ಸಂಗಾತಿಯ ಗಮನಕ್ಕೆ ಬಾರದಂತೆ ಆಸ್ಪತ್ರೆ, ಕ್ಲಿನಿಕ್ಕುಗಳಿಗೆ ಹೋಗಿ, ಹಣ ಬಿಸಾಕಿ ಒಡಲಲ್ಲಿ ಮೂಡುತ್ತಿರುವ ಕೂಸನ್ನು ತೆಗೆಸಿಕೊಂಡು ಬಂದು ಬಿಡಬಹುದು ಎನ್ನುವಷ್ಟರ ಮಟ್ಟಿಗೆ ಈ ವಿಚಾರ ಸುಲಭವಾದುದಲ್ಲ.

‘ಕಾನೂನಿನ ನೆರವು ಒಂದು ಅಂಶವಷ್ಟೆ. ಒಂದೆಡೆ ಅನಿವಾರ್ಯ ಅಥವಾ ಅಸಹಾಯಕ ಪರಿಸ್ಥಿತಿಗಳು, ಇನ್ನೊಂದೆಡೆ ಕಾನೂನಿನ ಅಡೆತಡೆ, ಇದರಿಂದಾಗಿ ಹೆಣ್ಮಕ್ಕಳು ಅಸುರಕ್ಷಿತ ಗರ್ಭಪಾತಕ್ಕೆ ಹೋಗಿ ಆರೋಗ್ಯವನ್ನೊ, ಪ್ರಾಣವನ್ನೊ ಪಣಕ್ಕಿಡುವಂತಾಗಬಾರದು. ಈ ದೃಷ್ಟಿಯಿಂದ ಮಾಡಿರುವ ಸಣ್ಣ ಬದಲಾವಣೆ ಇದು. ಆದರೆ, ಮಹಿಳೆಯ ಜೀವನದಲ್ಲಿ ಇದೊಂದು ಬಹು ದೊಡ್ಡ ನಿರ್ಣಾಯಕ ಘಟ್ಟವಾಗಿ ಪರಿಣಮಿಸಲಿದೆ’ ಎನ್ನುತ್ತಾರೆ ಹಿರಿಯ ವಕೀಲೆ ಅಂಜಲಿ ರಾಮಣ್ಣ.

ಈ ಕಾನೂನಿನಿಂದಾಗುವ ಸಕಾರಾತ್ಮಕ ಅಂಶಗಳನ್ನು ಅಂಜಲಿ ಅವರು ಹೀಗೆ ಪಟ್ಟಿ ಮಾಡುತ್ತಾರೆ; ಮೊದಲನೆಯದಾಗಿ, ಅಸುರಕ್ಷಿತ ಗರ್ಭಪಾತಗಳ ಪ್ರಮಾಣ ತಗ್ಗುತ್ತದೆ. ಇದರಿಂದ ಜೀವ ಕಳೆದುಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗುತ್ತದೆ. ಎರಡನೆಯದಾಗಿ, ಹೆಣ್ಣಿನ, ಮಾನಸಿಕ, ದೈಹಿಕ ಆರೋಗ್ಯ ಮತ್ತು ಸಮಾಜದ ಸುಸ್ಥಿತಿಗೆ ಈ ಕ್ರಮ ಪೂರಕವಾಗಿದೆ. ಬೇಡದ ಅಥವಾ ಒತ್ತಾಯಪೂರ್ವಕ ಗರ್ಭವನ್ನು ತೆಗೆದುಹಾಕುವ ಮೂಲಕ ಅವಳ ಮನಸ್ಸು ಮತ್ತು ಆರೋಗ್ಯದ ಮೇಲಿನ ಒತ್ತಡವನ್ನು ತಡೆಯಬಹುದು. ಮನಸ್ಸಿಲ್ಲದೆ ಅಥವಾ ಅನಿವಾರ್ಯ ಕಾರಣಕ್ಕೆ ಅಥವಾ ವೈದ್ಯಕೀಯ ಅಥವಾ ಕಾನೂನಿನ ತೊಡಕುಗಳಿಂದ ಗರ್ಭಪಾತ ಸಾಧ್ಯವಾಗದೆ, ಮಗುವನ್ನು ಹೆತ್ತು ದೇವಸ್ಥಾನ, ಅನಾಥಾಲಯಗಳಲ್ಲಿ ಬಿಟ್ಟು ಹೋಗುವಂತಹ ದುಃಸ್ಥಿತಿಯನ್ನು ತಪ್ಪಿಸಬಹುದು.

ಕಾನೂನು ಇದೆ, ಕೋರ್ಟ್ ಹೇಳಿದೆ ಎನ್ನುವುದಕ್ಕಿಂತ ಗರ್ಭಪಾತದ ಬಗ್ಗೆ ಜಾಗೃತಿ ಮೂಡಿಸುವುದೇ ಬಹಳ ಮುಖ್ಯ ಎನ್ನುವುದು ಸ್ತ್ರೀರೋಗ ತಜ್ಞೆ ಡಾ. ಚಂದ್ರಿಕಾ ಆನಂದ್ ಅವರ ಅಭಿಪ್ರಾಯ. ಅವರು ಈ ಕಾನೂನು–ಕಟ್ಟಳೆಗಳ ಜೊತೆಗೆ, ಆರೋಗ್ಯದ ದೃಷ್ಟಿಯಿಂದಲೂ ಈ ತೀರ್ಪಿನ ಸಾಧಕ, ಬಾಧಕವನ್ನು ವಿಶ್ಲೇಷಿಸುತ್ತಾರೆ. ‘ಕಾನೂನಿನ ಒಪ್ಪಿಗೆ ಸಿಕ್ಕಿದೆ, ಕಾಸು ಕೊಟ್ಟರೆ ವೈದ್ಯರು ಗರ್ಭಪಾತ ಮಾಡಿಸುತ್ತಾರೆ ಎನ್ನುವಲ್ಲಿಗೆ ಮುಗಿದು ಹೋಗುವ ಸಂಗತಿ ಇದಲ್ಲ’ ಎನ್ನುತ್ತಾರೆ ಅವರು.

‘ಹೆಣ್ಣಿನ ದೇಹ, ಮನಸ್ಸು, ಆರೋಗ್ಯ, ಗರ್ಭದ ಅವಧಿ, ಗರ್ಭಪಾತದ ಅನಿವಾರ್ಯತೆ ಇದೆಲ್ಲವನ್ನು ಪರಿಗಣಿಸಬೇಕಾಗುತ್ತದೆ. ಕಾನೂನಿನ, ಕುಟುಂಬದ ಸಮ್ಮತಿಗಿಂತ ಮುಖ್ಯವಾಗಿ ಗರ್ಭಪಾತದಿಂದ ಮನಸ್ಸು–ದೇಹದ ಮೇಲೆ ಉಂಟಾಗುವ ಪರಿಣಾಮಗಳನ್ನು ತುಲನೆ ಮಾಡಬೇಕಾಗುತ್ತದೆ’ ಎಂಬುದು ಚಂದ್ರಿಕಾ ಅವರ ಅಭಿಪ್ರಾಯ.

ಅತ್ಯಗತ್ಯ ಕ್ರಮ

ಇಂದಿನ ಈ ಬದಲಾದ ಕಾಲಘಟ್ಟಕ್ಕೆ ಇದೊಂದು ಅತ್ಯಂತ ಅನಿವಾರ್ಯ ಮತ್ತು ಅತ್ಯಗತ್ಯ ಕ್ರಮ. ಇದು ವ್ಯವಸ್ಥೆಯ ಜವಾಬ್ದಾರಿಯೂ ಹೌದು. ಗರ್ಭಪಾತದಂತಹ ಸಾಮಾಜಿಕ ಕಳಕಳಿಯ ಕಾನೂನುಗಳು ಕಾಲಕಾಲಕ್ಕೆ ಹೀಗೆ ಪರಿವರ್ತನೆಗೊಳಗಾಗಬೇಕು. ಪ್ರತಿಕ್ಷಣ ಮುಂದೆ ಹರಿಯುವ ಸಮಾಜದಲ್ಲಿ ಕಾನೂನುಗಳು ನಿಂತಲ್ಲೇ

ನಿಂತರೆ ವ್ಯವಸ್ಥೆ ಜಡವಾಗುತ್ತದೆ. ಹಾಗಾದರೆ ಇನ್ನು, ಈ ಕಾನೂನಿನ ಅಭಯದಿಂದಾಗಿ ಗರ್ಭಪಾತ ಬಹಳ ಸುಲಭ ಎನ್ನುವವರಿಗೂ ಕಾನೂನಿನಲ್ಲಿ ಉತ್ತರವಿದೆ. ಈ ಪ್ರಕ್ರಿಯೆಗೂ ಸಹ ಕಾನೂನಿನಲ್ಲಿ ಕೆಲವು ನಿರ್ದಿಷ್ಟ ಮಾನದಂಡಗಳಿವೆ;

1. ಗರ್ಭಪಾತಕ್ಕೂ ಮುನ್ನ ಆಪ್ತ ಸಮಾಲೋಚನೆಗೆ ಒಳಗಾಗಬೇಕು. ಯಾವಾಗಲೂ ಗರ್ಭಪಾತದ ಅನಿವಾರ್ಯತೆಯನ್ನು ಪರಿಗಣಿಸಲಾಗುತ್ತದೆ.
2. ಅವಳ ಪರಿಸ್ಥಿತಿ, ದೈಹಿಕ–ಮಾನಸಿಕ ಆರೋಗ್ಯವನ್ನು ಪರಿಶೀಲಿಸಲಾಗುತ್ತದೆ. ಅವಳ ಆರೋಗ್ಯಕ್ಕೆ ಮಾರಕವಾಗಬಲ್ಲ ಗರ್ಭಪಾತಕ್ಕೆ ಕಾನೂನಿನಲ್ಲಿ ಅವಕಾಶ ಇದ್ದೇ ಇದೆ.
3. ಸಂಗಾತಿಯೊಂದಿಗಿನ ಅವಳ ಸಂಬಂಧವನ್ನು, ಇಬ್ಬರ ನಡುವಿನ ಸಮಸ್ಯೆಯ ಗಂಭೀರತೆಯನ್ನು ತುಲನೆ ಮಾಡಿ ನೋಡಲಾಗುತ್ತದೆ.
4. 26 ವಾರಗಳ ಅವಧಿಯನ್ನು ಮೀರಿದಲ್ಲಿ, ಅಂತಹ ಗರ್ಭಪಾತಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

ಅಂಜಲಿ ರಾಮಣ್ಣ, ವಕೀಲೆ

ಮುನ್ನೆಚ್ಚರಿಕೆಯೇ ಮದ್ದು

ಗರ್ಭಪಾತವನ್ನು ಎರಡು ವಿಧಾನಗಳಲ್ಲಿ ಅನುಸರಿಸಲಾಗುತ್ತದೆ. ಮಾತ್ರೆಗಳ ಮೂಲಕ ಹಾಗೂ ವೈದ್ಯಕೀಯ ವಿಧಾನದ ಮೂಲಕ. ಈ ವಿಧಾನದಲ್ಲಿ ಸಾಕಷ್ಟು ಅಪಾಯಗಳು ಎದುರಾಗುವ ಸಾಧ್ಯತೆ ಇದ್ದೇ ಇರುತ್ತದೆ. ಶೇ 10ರಷ್ಟು ಅರಿವಳಿಕೆಯ ಅಪಾಯವಿರುತ್ತದೆ. ಇನ್ನೂ ಕೆಲ ಪ್ರಕರಣಗಳಲ್ಲಿ ರಕ್ತಸ್ರಾವ, ಗರ್ಭಕೋಶದ ಸೋಂಕು ಕಾಣಿಸಿಕೊಳ್ಳಬಹುದು. ಕೆಲವು ಅಪರೂಪದ ಪ್ರಕರಣಗಳಲ್ಲಿ ಗರ್ಭಕೋಶದಲ್ಲಿ ರಂಧ್ರ ಉಂಟಾಗಬಹುದು, ಅಕ್ಕಪಕ್ಕದ ಅಂಗಗಳಿಗೆ ಹಾನಿಯುಂಟಾಗಬಹುದು. ಪದೇಪದೇ ಈ ಕಾರ್ಯವಿಧಾನಕ್ಕೆ ಒಳಗಾಗುವುದರಿಂದ ಗರ್ಭಕೋಶದ ಸೋಂಕಿನ ಕಾರಣ ಟ್ಯೂಬ್ ಬ್ಲಾಕ್ ಆಗುವ ಅಪಾಯವೂ ಇದೆ. ಇದು ಮುಂದೆ ಮಕ್ಕಳಾಗುವ ಅವಕಾಶವನ್ನೇ ಕಿತ್ತುಕೊಳ್ಳಬಹುದು. ಈ ಅಪಾಯಗಳನ್ನು ತಪ್ಪಿಸಲು ಮುನ್ನೆಚ್ಚರಿಕೆ ಕ್ರಮಗಳೇ ಅತ್ಯುತ್ತಮ ಮಾರ್ಗ. ವೈದ್ಯಕೀಯ ವಲಯದಲ್ಲಿ ಸಾಕಷ್ಟು ಆಯ್ಕೆಗಳಿವೆ. ನಿಮಗೆ ಮಕ್ಕಳು ಬೇಡ ಅನಿಸಿದರೆ ಅಥವಾ ಒಂದು ಮಗುವಾದ ಮೇಲೆ ಅಂತರ ಬೇಕು ಎನ್ನಿಸಿದರೆ ಕುಟುಂಬ ಯೋಜನೆ ಆಯ್ಕೆಗೆ ಹೋಗಿ. ಇದರಲ್ಲಿ ಎರಡು ವಿಧಗಳಿವೆ. ಶಾಶ್ವತ ಹಾಗೂ ತಾತ್ಕಾಲಿಕ. ಒಂದು ಮಗು ಸಾಕು ಎನ್ನುವವರು ಅಥವಾ ಎರಡು ಮಕ್ಕಳಾದವರು ಶಾಶ್ವತ ಆಯ್ಕೆಗಳಿಗೆ ಹೋಗಬಹುದು. ಮುಂದೆ ಮಕ್ಕಳು ಬೇಕು ಎನ್ನುವವರು ತಾತ್ಕಾಲಿಕ ವಿಧಾನಗಳನ್ನು ಅನುಸರಿಸಬಹುದು.

ಡಾ. ಚಂದ್ರಿಕಾ ಆನಂದ್, ಸ್ತ್ರೀರೋಗ ತಜ್ಞೆ

ಸಾಂಪ್ರದಾಯಿಕ ಕೇಶವಿನ್ಯಾಸ

ವನಿತಾ ಜೈನ್

ಫ್ಯಾಷನ್

ಮೆಸ್ಸಿ ಸೈಡ್ ಬ್ರೈಡ್ ಹೇರ್‌ಸ್ಟೈಲ್‌ನಲ್ಲಿ ನಟಿ ಸಮಂತಾ

ಚಂದವಾಗಿ ಸೀರೆಯುಟ್ಟು, ಒಪ್ಪುವ ತೊಡುಗೆ ತೊಟ್ಟು, ತಕ್ಕಮಟ್ಟಿಗೆ ಮೇಕಪ್ ಮಾಡಿಕೊಂಡು, ಸೀರೆಗೆ, ಒಡವೆಗೆ, ಮೊಗಕ್ಕೆ ಒಗ್ಗುವ ಕೇಶ ವಿನ್ಯಾಸ ಮಾಡಿಕೊಂಡರೆ ಹೆಂಗಳೆಯರ ಅಂದ ದುಪ್ಪಟ್ಟಾಗುತ್ತೆ. ಮುಖ್ಯವಾಗಿ ಕೇಶ ವಿನ್ಯಾಸವು ನಮ್ಮ ಒಟ್ಟಾರೆ ನಿಲುವನ್ನು ಹೆಚ್ಚಿಸುತ್ತದೆ. ಅಂದ ಹೆಚ್ಚಿಸುವ ಅಂತಹ ಸಾಂಪ್ರದಾಯಿಕ ಶೈಲಿಯ ಕೆಲವು ಕೇಶ ವಿನ್ಯಾಸಗಳು ಇಲ್ಲಿವೆ.

ಮೆಸ್ಸಿ ಸೈಡ್ ಬ್ರೈಡ್ (Messy Side Braid)

ಇದು ಹಬ್ಬಕ್ಕೆ ಹೇಳಿ ಮಾಡಿಸಿದ ಕೇಶ ವಿನ್ಯಾಸ. ಜಡೆರೂಪದಲ್ಲಿರುವ ಇದು ಸಾಂಪ್ರದಾಯಿಕವಾಗಿಯೂ ಕಾಣುವುದರಿಂದ ಸೀರೆ, ಕುರ್ತಾ, ಚೂಡಿದಾರದಂತಹ ವಸ್ತ್ರಗಳಿಗೆ ಬೆಸ್ಟ್ ಲುಕ್ ನೀಡುತ್ತದೆ.

ಮೊದಲು ಸ್ವಲ್ಪ ಮುಂಗುರುಳು ಕೂದಲನ್ನು ಬಿಟ್ಟುಕೊಂಡು ನಿಮ್ಮ ಎಡ ಅಥವಾ ಬಲ ಭಾಗದಲ್ಲಿ ಬೈತಲೆ ತೆಗೆದುಕೊಂಡು ನಂತರ ನಿಮಗೆ ಬೇಕಾದ ಭಾಗದಲ್ಲಿ ಸಂಪೂರ್ಣ ಕೂದಲನ್ನು ತೆಗೆದುಕೊಳ್ಳಬೇಕು. ಒಟ್ಟಂದದ ಕೂದಲನ್ನು ನೀವು ಮೂರು ಕಾಲಿನ ಜಡೆ ಅಥವಾ ನಾಲ್ಕು ಕಾಲಿನ ಜಡೆಯನ್ನು ಸ್ವಲ್ಪ ಸಡಿಲವಾಗಿ ಹೆಣೆದುಕೊಳ್ಳಬೇಕು. ಮೂರು ಕಾಲಿನ ಜಡೆಗಿಂತ ನಾಲ್ಕು ಕಾಲಿನ ಜಡೆಯೂ ಈ ಕೇಶ ವಿನ್ಯಾಸಕ್ಕೆ ಸೂಕ್ತವಾಗುತ್ತದೆ. ಈ ಮೊದಲೇ ಬಿಟ್ಟುಕೊಂಡ ಮುಂಗುರುಳ ಕೂದಲನ್ನು ಕರ್ಲಿ ಮಾಡಿಕೊಳ್ಳಬೇಕು. ಜಡೆ ಪ್ರಾರಂಭಿಸುವ ಮೊದಲೇ ಕರ್ಲಿ ಮಾಡಿಕೊಂಡರೂ ಆಗುತ್ತದೆ.

ಸ್ಲೀಕ್ ಲೋ ಬನ್ (Sleek Low Bun)

ಕೇಶ ವಿನ್ಯಾಸ ತುರುಬಿನ ರೂಪದಲ್ಲಿದ್ದರೆ ಚಂದ ಇರುತ್ತದೆ ಎಂದುಕೊಳ್ಳುವವರಿಗೆ ಇದು ಸೂಕ್ತವಾದ ಕೇಶ ವಿನ್ಯಾಸ. ಈ ಸ್ಲೀಕ್ ಲೋ ಬನ್ ಗಿಂತ ಉತ್ತಮ ಆಯ್ಕೆ ಯಾವುದು ಇಲ್ಲ.

ಮೊದಲು ನಿಮ್ಮ ಕೂದಲನ್ನು ಯಾವುದೇ ಸಿಕ್ಕು ಇಲ್ಲದಂತೆ ನಯವಾಗಿ ಬಾಚಿಕೊಳ್ಳಿ. ಮುಂದೆ, ನಿಮ್ಮ ಕೂದಲನ್ನು ಮಧ್ಯ ಬೈತಲೆ ತೆಗೆದು ಎರಡು ಭಾಗಗಳಾಗಿ ಮಾಡಿ ಮತ್ತು ಅಗತ್ಯವಿದ್ದರೆ ಸ್ಟೈಲಿಂಗ್ ಜೆಲ್ ಬಳಸಿ ಹಾರುವ ಪುಡಿ ಕೂದಲು ಸೇರಿ ಎಲ್ಲಾ ಕೂದಲನ್ನು ಬಿಗಿಯಾದ ಪೋನಿಟೇಲ್ ಆಗಿ ಒಟ್ಟುಗೂಡಿಸಿ. ಈ ರೀತಿ ಮಾಡಿದ ನಂತರ, ಪೋನಿಟೇಲ್ ಅನ್ನು ಬನ್ ಅಥವಾ ತುರುಬಿನ ರೂಪದಲ್ಲಿ ತಿರುಗಿಸಿ. ಬಾಬಿ ಪಿನ್‌ಗಳನ್ನು ಸರಿಯಾಗಿ ನಿಲ್ಲುವಂತೆ ಮಾಡಿಕೊಳ್ಳಿ. ನಿಮಗೆ ಬೇಕಾದಲ್ಲಿ ನಿಮ್ಮ ಇಷ್ಟವಾದ ಹೂವನ್ನು ಬನ್ ಸುತ್ತ ಹಾಕಿಕೊಳ್ಳಬಹುದು.

ಸೈಡ್ ವೇವ್ (Side Wave)

ಈ ಕೇಶ ವಿನ್ಯಾಸ ಉದ್ದನೆಯ ಮತ್ತು ಚಿಕ್ಕದಾದ ಕೂದಲು ಇಬ್ಬರಿಗೂ ಹೊಂದಿಕೆಯಾಗುವಂತದ್ದು. ಅದರಲ್ಲೂ ಅಲೆ ರೂಪದ ಕೂದಲು ಇದ್ದವರಿಗೆ ಬಹಳ ಸೊಗಸಾಗಿ ಕಾಣುತ್ತದೆ. ನೇರ ಕೂದಲು ಇದ್ದವರು ಕರ್ಲಿಂಗ್ ಮಾಡುವ ಉಪಕರಣದಿಂದ ಕರ್ಲ್ ಮಾಡಿಕೊಂಡು ಕೇಶ ವಿನ್ಯಾಸ ಪ್ರಯತ್ನಿಸಬಹುದು.

ನಿಮಗೆ ಒಂದೇ ಭಾಗದಲ್ಲಿ ಎಲ್ಲಾ ಕೂದಲನ್ನು ಒಗ್ಗೂಡಿಸಿ ಮಾಡಿಕೊಳ್ಳಬಹುದು ಅಥವಾ ಎರಡು ಬದಿಯಲ್ಲೂ ಕೂದಲು ಬರುವಂತೆ ಮಧ್ಯಭಾಗದಲ್ಲಿ ಬೈತಲೆ ತೆಗೆದು ಮಾಡಿಕೊಳ್ಳಬಹುದು. ಬೇಕೆಂದಲ್ಲಿ ನೆತ್ತಿಯ ಎರಡು ಭಾಗದಲ್ಲಿ ಸಣ್ಣಗೆ ಜಡೆ ಹಾಕಿಕೊಂಡು ಅಲಂಕಾರಿಕ ಮಣಿಗಳನ್ನು ಬಳಸಿ ಮತ್ತಷ್ಟು ಸುಂದರವಾಗಿಸಬಹುದು. ಬೇಕಾದಲ್ಲಿ ಬೈತಲೆ ಬೊಟ್ಟು ಹಾಕಿಕೊಳ್ಳಬಹುದು.

ಜುಡ ಬನ್ (ಜಡೆ ತುರುಬು) (Juda Bun)

ಮೊದಲು ಕೂದಲನ್ನು ಸ್ವಲ್ಪವೂ ಸಿಕ್ಕು ಇಲ್ಲದಂತೆ ಬಾಚಿಕೊಳ್ಳಬೇಕು. ನಂತರ ಕೂದಲನ್ನು ನಾಲ್ಕು ಭಾಗಗಳಾಗಿ ಮಾಡಿಕೊಂಡು ನಾಲ್ಕು ಜಡೆಗಳನ್ನು ಸಡಿಲವಾಗಿ ಹೆಣೆದುಕೊಳ್ಳಬೇಕು. ಇದು ಮುಗಿದ ಬಳಿಕ ಮೂರನೇ ಜಡೆಯನ್ನು ಎರಡನೇ ಜಡೆಯ ಕೆಳಗಿನಿಂದ ವೃತ್ತಾಕಾರವಾಗಿ ಸುತ್ತಿಯೂ ಪಿನ್ ಸಹಾಯದಿಂದ ಕೂರಿಸಬೇಕು. ಆಮೇಲೆ ಎರಡನೇ ಜಡೆಯನ್ನು ಸುತ್ತಿದ ತುರುಬಿನ ಮೇಲೆ ವೃತ್ತಾಕಾರವಾಗಿ ಕೂರಿಸಬೇಕು. ಬಳಿಕ ನಾಲ್ಕನೇ ಜಡೆ ಮತ್ತು ಮೊದಲನೇ ಜಡೆಯದೇ ಈ ಹಿಂದೆ ಅನುಸರಿಸಿದಂತೆ ವೃತ್ತಾಕಾರವಾಗಿ ಸುತ್ತಿಯೂ ಪಿನ್ ಬಳಸಿ ಗಟ್ಟಿ ಮಾಡಬೇಕು. ನಿಮಗೆ ಬೇಕಾದಲ್ಲಿ ಸಣ್ಣ ಸಣ್ಣ ಜಡೆ ಅಲಂಕಾರಿಕ ವಸ್ತುಗಳಾದ ಮಣಿ, ಹೂಗಳನ್ನು ಬಳಸಿ ಬನ್ ಅನ್ನು ಅಂದಗೊಳಿಸಬಹುದು. ಇದು ಲೆಹೆಂಗಾ, ಸೀರೆಗಳಿಗೆ ಸುಂದರವಾಗಿ ಕಾಣುತ್ತದೆ.

ಸವಿ ರುಚಿಯ ಸಿಹಿ ಭಕ್ಷ್ಯಗಳು

ರಾಜೇಶ್ವರಿ ವಿಶ್ವನಾಥ್

ಕ್ಯಾರೆಟ್ ಖೀರ್

ಬೇಕಾಗುವ ಸಾಮಗ್ರಿಗಳು: ಒಂದು ಚಮಚ ತುಪ್ಪ, ಅರ್ಧ ಗೋಡಂಬಿಯ ಹತ್ತು ಚೂರುಗಳು, 2 ಚಮಚ ಒಣದ್ರಾಕ್ಷಿ, ಒಂದೂವರೆ ಕಪ್ ತುರಿದ ಕ್ಯಾರೆಟ್, ನಾಲ್ಕು ಕಪ್ ಹಾಲು, ಕಾಲು ಚಮಚದಷ್ಟು ಕೇಸರಿ, ಕಾಲು ಚಮಚ ಸಕ್ಕರೆ, ಏಲಕ್ಕಿ ಪುಡಿ, ಎರಡು ಚಮಚ ಪಿಸ್ತಾ. ಒಂದು ಚಮಚ ಬೆಣ್ಣೆ, ಕಾಲು ಕಪ್ ಹಾಲು, ಅರ್ಧ ಕಪ್ ಹಾಲಿನ ಪುಡಿ.

ಮಾಡುವ ವಿಧಾನ: ದೊಡ್ಡ ಕಡಾಯಿಯಲ್ಲಿ ತುಪ್ಪ ಬಿಸಿ ಮಾಡಿ, ಅದಕ್ಕೆ ಗೋಡಂಬಿ, ಒಣದ್ರಾಕ್ಷಿ ಹಾಕಿ. ಗೋಡಂಬಿ ಕಂದುಬಣ್ಣಕ್ಕೆ ಬಾಡಿಸಿದ ನಂತರ ಅದನ್ನು ತೆಗೆದಿಡಿ. ತುರಿದ ಕ್ಯಾರೆಟ್ ಅನ್ನು ಚೆನ್ನಾಗಿ ಅದೇ ಕಡಾಯಿಯಲ್ಲಿ ಬಾಡಿಸಿ. ಕ್ಯಾರೆಟ್ ಸುವಾಸನೆ ಬಿಡುವ ವರೆಗೂ ಬಾಡಿಸಿ. ಬಣ್ಣ ಗಾಢವಾಗಿ ಬದಲಾದ ಮೇಲೆ ಹಾಲು, ಕೇಸರಿ ಮಿಶ್ರಣ ಮಾಡಿ ಮಧ್ಯಮ ಉರಿಯಲ್ಲಿ ಕುದಿಸಿ. ಹಾಲು ದಪ್ಪವಾಗುವವರೆಗೆ ಕುದಿಸಿ.

ಇನ್ನೊಂದು ಪಾತ್ರೆಯಲ್ಲಿ ಬೆಣ್ಣೆಯನ್ನು ಬಿಸಿ ಮಾಡಿಕೊಳ್ಳಿ. ಅದಕ್ಕೆ ಹಾಲು ಸೇರಿಸಿ. ಹಾಲು ಬೆಣ್ಣೆ ಚೆನ್ನಾಗಿ ಮಿಳಿತಗೊಂಡ ಮೇಲೆ ಹಾಲಿನ ಪುಡಿ ಸೇರಿಸಿ. ಈ ಮಿಶ್ರಣ ದಪ್ಪವಾದ ಮೇಲೆ ಪಾತ್ರೆಯಿಂದ ಬೇರ್ಪಡುತ್ತದೆ. ಈ ಮಿಶ್ರಣವನ್ನು ಕುದ್ದ ಹಾಲಿನ ಪಾತ್ರೆಗೆ ಹಾಕಿ, ಏಲಕ್ಕಿ ಪುಡಿ ಸೇರಿಸಿ. ಹುರಿದ ಗೋಡಂಬಿ, ಒಣದ್ರಾಕ್ಷಿ, ಕೇಸರಿ ಸೇರಿಸಿ. ಕೊನೆಗೆ ಪಿಸ್ತಾ ಹಾಕಿ. ಈಗ ಬಿಸಿ ಬಿಸಿ ಕ್ಯಾರೆಟ್ ಖೀರ್ ಸಿದ್ಧ.

ಬಾರಾ ಸಿಹಿ

ನಳಪಾಕ

ಬೇಕಾಗುವ ಸಾಮಗ್ರಿ: ಉದ್ದಿನಬೇಳೆ ಒಂದು ಕಪ್, ಸೋಂಪು ಬೀಜ 1 ಚಮಚ, ಬೆಲ್ಲದ ಪುಡಿ ಅರ್ಧ ಕಪ್, ತುಪ್ಪ ಕರಿಯಲು.

ಮಾಡುವ ವಿಧಾನ: ಉದ್ದಿನಬೇಳೆಯನ್ನು ಎಂಟು ಗಂಟೆಗಳ ಕಾಲ ನೆನೆ ಹಾಕಿ. ಆ ನಂತರ ಗಟ್ಟಿಯಾಗಿ ರುಬ್ಬಿ ಕೊಳ್ಳಿ. ಸೋಂಪು ಬೀಜಗಳನ್ನು ಸಣ್ಣಗೆ ಅರೆದು ಮಿಶ್ರಮಾಡಿ. ಈಗ ಇದನ್ನು ಉಂಡೆ ಮಾಡಿ ಬಾರಾ ರೀತಿ, ಅಂದರೆ ವಡೆ ಮಾದರಿಯಲ್ಲಿ ತಟ್ಟಿಕೊಳ್ಳಿ. ಬಾಣಲೆಯಲ್ಲಿ ತುಪ್ಪ ಕಾಯಿಸಿ. ತಯಾರಿಸಿದ ಬಾರಾವನ್ನು ಬಾಣಲೆಯಲ್ಲಿ ಒಂದೊಂದೇ ಹಾಕಿ, ಕರಿಯಿರಿ.

ಇದಕ್ಕೂ ಮೊದಲು ಬೆಲ್ಲಕ್ಕೆ ಸ್ವಲ್ಪ ನೀರು ಹಾಕಿ ಗಟ್ಟಿ ಪಾಕ ಮಾಡಿಕೊಳ್ಳಿ. ಈಗ ಕರಿದ ಬಾರಾವನ್ನು ಅದ್ದಿ ತೆಗೆಯಿರಿ. ತಣ್ಣಗಾಗಲು ಬಿಡಿ. ಈಗ ಬಾರಾ ಸಿಹಿ ಸವಿಯಲು ಸಿದ್ಧ. ತಣ್ಣಗಾಗಿ, ಸ್ವಲ್ಪ ಗಟ್ಟಿಯಾದ ಮೇಲೆ ಈ ಬಾರಾ ಸಿಹಿ ಕಜ್ಜಾಯಕ್ಕಿಂತಲೂ ಹೆಚ್ಚು ರುಚಿಯಾಗಿಯೂ ಇರುತ್ತದೆ.

‘ಪಿನಾಕಾ' ಉಂಡೆ:

ಬೇಕಾಗುವ ಸಾಮಗ್ರಿಗಳು: ಕುಚ್ಚಲಕ್ಕಿ ಒಂದೂವರೆ ಕಪ್, ಕಾಯಿತುರಿ 1 ಕಪ್, ಬೆಲ್ಲ150 ಗ್ರಾಂ, ನೀರು ಸ್ವಲ್ಪ, ಏಲಕ್ಕಿ ಪುಡಿ ಚಿಕ್ಕ ಚಮಚದಷ್ಟು.

ಮಾಡುವ ವಿಧಾನ: ಅಕ್ಕಿಯನ್ನು ಬಾಣೆಲೆಯಲ್ಲಿ ಹುರಿಯಿರಿ. ಅದು ದೊಡ್ಡದಾಗಿ ಅರಳುತ್ತದೆ. ತಣ್ಣಗಾದ ಮೇಲೆ ಪುಡಿಮಾಡಿ. ಬೆಲ್ಲಕ್ಕೆ ಸ್ವಲ್ಪ ನೀರು ಹಾಕಿ ಒಲೆಯ ಮೇಲಿರಿಸಿ. ಬೆಲ್ಲಕರಗಿದಾಗ ಕಾಯಿತುರಿ ಹಾಕಿ. ಕೈ ಯಾಡಿಸಿ. ಸ್ವಲ್ಪ ಗಟ್ಟಿಯಾದ ಮೇಲೆ, ಕೆಳಗಿಳಿಸಿ. ತಣ್ಣಗಾದ ಮೇಲೆ ರುಬ್ಬಿ ಕೊಳ್ಳಿ. ಇದಕ್ಕೆ ಅಕ್ಕಿ ಹಿಟ್ಟು ಸೇರಿಸಿ. ಏಲಕ್ಕಿ ಪುಡಿ ಹಾಕಿ ಚನ್ನಾಗಿ ಕಲಸಿ. ನಿಂಬೆ ಗಾತ್ರ ಉಂಡೆ ಕಟ್ಟಿ, ಒಂದು ಗಂಟೆ ಕಾಲ ಒಣಗಲು ಬಿಡಿ. ಈಗ ಪಿನಾಕ ಉಂಡೆ ಸಿದ್ಧ. ತಯಾರಿಕೆ ಸರಳ ಹಾಗೂ ಸುಲಭ. ತಿನ್ನಲು ರುಚಿ. ಆರೋಗ್ಯಕ್ಕೂ ಉತ್ತಮ.

ಕುಳ್ಳಗಿದ್ದವರಿಗೆ ಸಿಸೇರಿಯನ್ ಹೆರಿಗೆ ಖಚಿತವಂತೆ, ಹೌದಾ?

ಸ್ಪಂದನ

ಡಾ. ವೀಣಾ ಎಸ್. ಭಟ್

1. ನನಗೆ 28 ವರ್ಷ. ನಾನೀಗ ಏಳು ತಿಂಗಳು ಗರ್ಭಿಣಿ. ನಿಯಮಿತ ತಪಾಸಣೆ ಮಾಡಿಸಿಕೊಳ್ಳುತ್ತಿದ್ದೇನೆ. 4 ಅಡಿ, 11 ಇಂಚು ಇದ್ದೇನೆ. ನನ್ನ ಅಕ್ಕಪಕ್ಕದವರು ಸ್ನೇಹಿತರು, ಎಲ್ಲರೂ ನೀನು ಕುಳ್ಳಗಿದ್ದೀಯ, ಗ್ಯಾರೆಂಟಿ ಸಿಸೇರಿಯನ್ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಇದು ಖಚಿತವೇ? ನನಗೆ ಭಯವಾಗುತ್ತಿದೆ. ನಾನು ಯಾವಾಗಲೂ ಈ ಆತಂಕದಲ್ಲಿ ಇರುತ್ತೇನೆ ಏನು ಮಾಡಲಿ?

ಜಯಲಕ್ಷ್ಮಿ, ಊರು ತಿಳಿಸಿಲ್ಲ.

ಜಯಲಕ್ಷ್ಮಿಅವರೇ ನೀವು ಸಿಸೇರಿಯನ್ ಬಗ್ಗೆ ಅನಗತ್ಯ ಭಯಪಡುವುದರಿಂದ ನಿಮಗೇ ನಷ್ಟ. ಗಿಡ್ಡವಿದ್ದವರಿಗೆಲ್ಲಾ ಸಿಸೇರಿಯನ್ ಹೆರಿಗೆ, ಉದ್ದವಿರುವವರಿಗೆ ಸಹಜ ಹೆರಿಗೆ ಎನ್ನುವ ನಿಯಮವೇನೂ ಇಲ್ಲ. ಸಿಸೇರಿಯನ್ ಹೆರಿಗೆ ಎಂಬುದು, ಸಹಜ ಹೆರಿಗೆಯಿಂದ ತಾಯ, ಮಗುವಿಗೆ ತೊಡಕಾಗಬಹುದು ಎಂಬ ಸೂಚನೆ ಸಿಕ್ಕಾಗ ಮಾಡುವಂತಹ ಅತಿಸಾಮಾನ್ಯ ಶಸ್ತ್ರಚಿಕಿತ್ಸೆ. ಈ ಪ್ರಕ್ರಿಯೆಯಲ್ಲಿ ತಜ್ಞರು ತಾಯಿಗೆ ಅರಿವಳಿಕೆಕೊಟ್ಟು, ವೈದ್ಯರು ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ, ಸೋಂಕುರಹಿತ ವಾತಾವರಣದಲ್ಲಿ ಆಧುನಿಕ ರೀತಿಯಲ್ಲಿ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ತಾಯಿ ಹಾಗೂ ಮಗುವನ್ನು ಅತ್ಯಂತ ಸುರಕ್ಷಿತವಾಗಿಡಲು ಎಲ್ಲ ವೈದ್ಯರು ಸೂಕ್ತ ಪ್ರಯತ್ನ ನಡೆಸುತ್ತಾರೆ.

ಮೊದಲನೆಯದಾಗಿ ನಿಮಗೆ ಸಿಸೇರಿಯನ್ ಹೆರಿಗೆಯೇ ಆಗುತ್ತದೆ, ಏನೋ ತೊಂದರೆ ಆಗುತ್ತದೆ ಎಂಬ ಭಯ, ಆತಂಕವನ್ನು ತಲೆಯಿಂದ ತೆಗೆದುಹಾಕಿ. ನೀವೀಗ ತಜ್ಞವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳುತ್ತಿದ್ದೀರಿ. ಅವರೇ ಈ ಬಗ್ಗೆ ನಿಮಗೆ ಸಲಹೆ ಸೂಚನೆ ನೀಡುತ್ತಾರೆ.

ಗರ್ಭಿಣಿಯ ಎತ್ತರ 4 ಅಡಿ 11 ಇಂಚಿಗಿಂತಲೂ ಕಡಿಮೆ ಇದ್ದಾಗ ಅವಳ ಕಟಿರಭಾಗವೂ (ಪೆಲ್ವಿಸ್) ಸಂಕುಚಿತವಾಗಿರುವ ಸಾಧ್ಯತೆ ಹೆಚ್ಚೆನ್ನಬಹುದಷ್ಟೇ. ಆದರೆ ಕೆಲವೊಮ್ಮೆ ಮಗುವಿನ ಗಾತ್ರ ಚಿಕ್ಕದಿದ್ದು ಕಟಿರ ಭಾಗದ ಅಳತೆಗಳು ಸರಿಯಾಗಿದ್ದರೆ ಸಹಜ ಹೆರಿಗೆ ಆಗಬಾರದು ಎಂಬ ನಿಯಮವೇನೂ ಇಲ್ಲ. ಕೆಲವೊಮ್ಮೆ 5 ಅಡಿ 6 ಇಂಚಿಂಗಿಂತ ಎತ್ತರವಿದ್ದ ಎಷ್ಟೋ ಗರ್ಭಿಣಿಯರಿಗೆ ತುರ್ತು ಸ್ಥಿತಿಯಲ್ಲಿ ಸಿಸೇರಿಯನ್ ಹೆರಿಗೆ ಆಗಬಹುದು.

ಪೂರ್ವಯೋಜಿತವಾಗಿ ಸಿಸೇರಿಯನ್ ಆಗಬಹುದಾದ ಸಂದರ್ಭಗಳು ಕೆಲವಿವೆ. ಅಂದರೆ, ಗರ್ಭಿಣಿ ಕುಳ್ಳಗಿದ್ದು- 145 ಸೆಂ.ಮೀಗಿಂತ ಕಡಿಮೆ ಉದ್ದವಿದ್ದು, ಜೊತೆಗೆ ಕಟಿರ ಭಾಗವೂ ಸಂಕುಚಿತಗೊಂಡಿದ್ದರೆ, ಮಗು ತುಂಬಾ ದೊಡ್ಡದಾಗಿಬೆಳೆದು ಕಟಿರ ಭಾಗವನ್ನು ಸಹಜವಾಗಿ ದಾಟಲು ಸಾಧ್ಯವಾಗದೇ ಇದ್ದಾಗ, ಗರ್ಭದಲ್ಲಿ ಮಗು ಅಡ್ಡವಾಗಿದ್ದರೆ, ಕಸ/ಮಾಸು ಕೆಳಗಿದ್ದರೆ ಮೊದಲ ಹೆರಿಗೆ ಕಷ್ಟವಾಗಿ ಮಗು ಸತ್ತು ಹೆರಿಗೆಯಾಗಿದ್ದರೆ– ಇಂಥ ಕೆಲವು ಸಂದರ್ಭಗಳಲ್ಲಿ ಮಾತ್ರ ಯೋಜಿತ ಸಿಸೇರಿಯನ್ ಹೆರಿಗೆ ಬಗ್ಗೆ ತಜ್ಞವೈದ್ಯರು ಸಂಬಂಧ ಪಟ್ಟವರಿಗೆ ತಿಳಿಸುತ್ತಾರೆ.

ಆದರೆ ಹೆಚ್ಚಿನ ಸಂದರ್ಭಗಳಲ್ಲಿ ತುರ್ತುಚಿಕಿತ್ಸೆಯಾಗಿ ಸಿಸೇರಿಯನ್ ಹೆರಿಗೆ ಮಾಡಬೇಕಾಗುತ್ತದೆ. ಇದನ್ನು ಮೊದಲೇ ಹೇಳಲು ಸಾಧ್ಯವಾಗುವುದಿಲ್ಲ. ಹೆರಿಗೆ ನೋವು ಆರಂಭವಾದ ಮೇಲೆ ತಾಯಿಮಗು ತುಂಬಾ ಸುಸ್ತಾದಾಗ, ಹೆರಿಗೆ ನೋವು ಚೆನ್ನಾಗಿದ್ದರೂ ಗರ್ಭಕಂಠ ಸರ್ಮಪಕವಾಗಿ ತೆಗೆದುಕೊಳ್ಳದಿದ್ದರೆ, ಹೆರಿಗೆ ವೇಳೆ ಹೊಕ್ಕಳಬಳ್ಳಿ ಮೊದಲೇ ಜಾರಿ ಹೊರಬಂದರೆ, ಹೆರಿಗೆಗೂ ಮುನ್ನ ಕಸ/ಮಾಸು ಬಿಚ್ಚಿಕೊಂಡರೆ.. ಹೀಗೆ ಸಮಯ ಸಂದರ್ಭಗಳನ್ನು ನೋಡಿ ವೈದ್ಯರು ಈ ಬಗ್ಗೆ ನಿರ್ಧಾರ ತೆಗೆದುಕೊಂಡು ಶಸ್ತ್ರಚಿಕಿತ್ಸೆ ಮಾಡುತ್ತಾರೆ.

ಹಾಗಾಗಿ ನೀವಷ್ಟೇ ಅಲ್ಲ, ಯಾರೇ ಗರ್ಭಿಣಿಯರಾಗಲಿ ಹೆರಿಗೆಗೂ ಮುನ್ನವೇ ನನಗೆ ಸಿಸೇರಿಯನ್ ಹೆರಿಗೆಯೇಗತಿ ಎಂಬ ಭಯಕ್ಕೊಳಗಾಗಬೇಡಿ. ಬದಲಿಗೆ, ನನಗೆ ಸಹಜ ಹೆರಿಗೆಯೇ ಆಗಬಹುದು ಎಂಬ ಸಕಾರಾತ್ಮಕ ಭಾವನೆಯಿಂದ ಧೈರ್ಯವಾಗಿರಿ. ಜೊತೆಗೆ ನಿಮ್ಮ ತಜ್ಞವೈದ್ಯರ ಸಲಹೆಗಳನ್ನು ಕಾಲ ಕಾಲಕ್ಕೆ ಸರಿಯಾಗಿ ಪಾಲಿಸಿ. ಹೀಗೆ ಮಾಡಿದರೆ,ಹೆಚ್ಚಿನವರಿಗೆ ಸಹಜ ಹೆರಿಗೆಯೇ ಆಗುತ್ತದೆ. ಕೇವಲ ನೀವು ಕುಳ್ಳರಿದ್ದೀರೆಂಬ ಕಾರಣಕ್ಕೆ ಭಯಪಡಬೇಡಿ. ಧೈರ್ಯದಿಂದಿರಿ.

2. ನನಗೆ 38 ವರ್ಷ. ಕಳೆದ ಕೆಲವು ತಿಂಗಳಿಂದ ನನಗೆ ಮುಟ್ಟಾದಾಗ ಒಂದೆರಡು ದಿನ ಮಾತ್ರ ಬಹಳ ಕಡಿಮೆ ರಕ್ತಸ್ರಾವವಾಗುತ್ತಿದೆ. ನನ್ನ ತೂಕವೂ ಏರುತ್ತಿದೆ. ಶರೀರವೇ ಒಂದು ರೀತಿ ಭಾರ ಅನಿಸುತ್ತಿದೆ. ಸದ್ಯಕ್ಕೆ ಎಲ್ಲೂ ಚಿಕಿತ್ಸೆ ಪಡೆಯುತ್ತಿಲ್ಲ. ಪರಿಹಾರ ನೀಡಿ.

ಲಲಿತಾ, ಚಿತ್ರದುರ್ಗ

ಲಲಿತಾ ಅವರೇ, ಕೆಲವೊಮ್ಮೆ ಥೈರಾಯಿಡ್ ಗ್ರಂಥಿಯ ಸ್ರಾವದ ಏರುಪೇರು ಆದಾಗ, ಹೀಗೆ ಮುಟ್ಟಿನ ಸಮಯದಲ್ಲಿ ಕಡಿಮೆ ರಕ್ತಸ್ರಾವವಾಗುವುದು, ತೂಕ ಏರಿಕೆಯಾಗುವುದು, ಶರೀರಭಾರ ಎನಿಸುವಂತೆ ಆಗುವ ಸಾಧ್ಯತೆಗಳಿವೆ. ಮಕ್ಕಳಾಗದ ಹಾಗೆ ಯಾವುದಾದರೂ ಹಾರ್ಮೋನು ಮಾತ್ರೆಗಳನ್ನು ಅಥವಾ ಇಂಜೆಕ್ಷನ್‌ಗಳನ್ನು ಅಥವಾ ಇಂಪ್ಲಾಂಟ್ ಅಳವಡಿಸಿಕೊಂಡಿದ್ದರೆ, ಅದರಿಂದಲೂ ಈ ರೀತಿಯಾಗಿ ಕಡಿಮೆ ಮುಟ್ಟಾಗುವ ಸಾಧ್ಯತೆ ಇದೆ. ಇಂಥ ವಿಷಯಗಳ ಬಗ್ಗೆ ನೀವು ಮಾಹಿತಿ ನೀಡಿಲ್ಲ. ಮತ್ತೊಂದು ಅಂಶವೆಂದರೆ; ಅತಿಯಾಗಿ ಉದ್ವೇಗ, ಭಯ ಇದ್ದಾಗ, ದೈನಂದಿನ ಚಟುವಟಿಕೆ ಅತಿಕಡಿಮೆಯಾದಾಗಲೂ ಈ ರೀತಿ ಕಡಿಮೆ ರಕ್ತಸ್ರಾವವಾಗಬಹುದು. ಹಾಗಾಗಿ ನೀವು ಹತ್ತಿರದ ತಜ್ಞವೈದ್ಯರನ್ನು ಭೇಟಿ ಮಾಡಿ. ಅವರು ನಿಮ್ಮನ್ನು ಪರೀಕ್ಷಿಸಿ ಅವಶ್ಯವಿದ್ದಲ್ಲಿ ಥೈರಾಯಿಡ್ ಪರೀಕ್ಷೆ, ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಸೇರಿಂದತೆ ಹಲವು ಪರೀಕ್ಷೆಗಳನ್ನು ಮಾಡಿಸಲು ಸೂಚಿಸಬಹುದು. ಒಂದು ನೆನಪಿಡಿ; ನಿಮ್ಮ ವಯಸ್ಸಿಗೆ ತಕ್ಕ ಹಾಗೆ ಸಮತೂಕ ಹೊಂದುವುದು ಬಹಳಮುಖ್ಯ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಷೇರುಪೇಟೆ ವಹಿವಾಟು

203



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,737
ಇಂದಿನ ಅಂತ್ಯ	17,787
▲	50
ದಿನದ ಗರಿಷ್ಠ	17,839

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹512

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹388-764

ದ್ವಿತಳಿ (ಬಿ.ವಿ) ₹479-825

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1340 (1355)
ಸೂರ್ಯಕಾಂತಿ (ರಿಫೈನ್ಡ್)	₹1580 (1570)
ಪಾಮೋಲಿನ್	₹985 (1000)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹147.50
ಆರ್‌ಎಸ್‌ಎಸ್-5	₹140
ಗುಡ್ ಲಾಟ್	₹134

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-14000

ಬಂಧನ್ ಬ್ಯಾಂಕ್‌ಗೆ ₹209 ಕೋಟಿ ಲಾಭ

ನವದೆಹಲಿ (ಪಿಟಿಐ): ಬಂಧನ್ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹209 ಕೋಟಿ ನಿವ್ವಳ ಲಾಭ ಗಳಿಸಿದೆ. ಸುಸ್ತಿ ಸಾಲದಲ್ಲಿ ಇಳಿಕೆ ಆಗಿರುವುದರಿಂದ ಲಾಭ ಗಳಿಸಲು ಸಾಧ್ಯವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹3,008 ಕೋಟಿ ನಷ್ಟ ಅನುಭವಿಸಿತ್ತು.

ಭಾರತದಲ್ಲಿ ಹಣಕಾಸು ಸೇವೆ ನಿಲ್ಲಿಸಿದ ಶಿಯೋಮಿ

ಬೆಂಗಳೂರು (ರಾಯಿಟರ್ಸ್): ಶಿಯೋಮಿ ಕಾರ್ಪೊರೇಷನ್ ಭಾರತದಲ್ಲಿ ತನ್ನ ಹಣಕಾಸು ಸೇವೆಗಳ ವಹಿವಾಟನ್ನು ನಿಲ್ಲಿಸಿದೆ ಎಂದು ಶಿಯೋಮಿ ಇಂಡಿಯಾದ ವಕ್ತಾರ ಶುಕ್ರವಾರ ತಿಳಿಸಿದ್ದಾರೆ.

ಮೂಲ ವಹಿವಾಟಿಗೆ ಗಮನ ಹರಿಸಲು ಮತ್ತು ಕಾರ್ಯಯೋಜನೆಯ ಭಾಗವಾಗಿ 2022ರ ಮಾರ್ಚ್‌ನಲ್ಲಿಯೇ ಹಣಕಾಸು ಸೇವೆಗಳನ್ನು ನಿಲ್ಲಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಬಿಲ್ ಪಾವತಿ ಮತ್ತು ಹಣ ವರ್ಗಾವಣೆಗೆ ಬಳಕೆಯಲ್ಲಿದ್ದ ಮಿ ಪೇ ಆ್ಯಪ್ ರಾಷ್ಟ್ರೀಯ ಪಾವತಿ ನಿಗಮದಲ್ಲಿ (ಎನ್‌ಪಿಸಿಐ) ಇರುವ ಯುಪಿಐ ಆ್ಯಪ್‌ಗಳ ಪಟ್ಟಿಯಲ್ಲಿ ಇಲ್ಲ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಆರ್‌ಬಿಐನ ಹಣಕಾಸು ನೀತಿ ಸಮಿತಿ ಸದಸ್ಯ ಶಶಾಂಕ್

ಹಣದುಬ್ಬರ ತಗ್ಗಿಸಲು ಹೊಂದಾಣಿಕೆ ನೀತಿ ಅಗತ್ಯ

ನವದೆಹಲಿ (ಪಿಟಿಐ): 'ಇಂಧನ ಮತ್ತು ಆಹಾರ ವಸ್ತುಗಳ ದರ ಹೆಚ್ಚಾಗಿರುವುದರ ಪರಿಣಾಮವಾಗಿ ಕಳೆದ ಮೂರು ತ್ರೈಮಾಸಿಕಗಳಿಂದ ಹಣದುಬ್ಬರ ದರವು ಗರಿಷ್ಠ ಮಟ್ಟದಲ್ಲಿಯೇ ಇದೆ. ಇದನ್ನು ನಿಯಂತ್ರಿಸಲು ಹೊಂದಾಣಿಕೆಯ ನೀತಿಯ ಅಗತ್ಯ ಇದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ (ಎಂಪಿಸಿ) ಸದಸ್ಯ ಶಶಾಂಕ್ ಭಿಡೆ ಹೇಳಿದ್ದಾರೆ.

'ಸದ್ಯ ಹಣದುಬ್ಬರದ ಒತ್ತಡವು ತೀವ್ರವಾಗಿರುವುದರಿಂದ ದೇಶದ ಹಣದುಬ್ಬರದ ಗುರಿ ನಿಗದಿಪಡಿಸುವುದಕ್ಕೆ ದೊಡ್ಡ ಪರೀಕ್ಷೆಯಾಗಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು 2022ರ ಜನವರಿಯಿಂದ ಈಚೆಗೆ ಶೇ 6 ಕ್ಕಿಂತಲೂ ಹೆಚ್ಚಿಗೆ ಇದೆ. ಸೆಪ್ಟೆಂಬರ್‌ನಲ್ಲಿ ಶೇ 7.41ರಷ್ಟು ಆಗಿದೆ. ಹಣಕಾಸು ನೀತಿಯಲ್ಲಿ ಬಡ್ಡಿದರದ ನಿರ್ಧಾರ ತೆಗೆದುಕೊಳ್ಳಲು ಆರ್‌ಬಿಐ ಚಿಲ್ಲರೆ ಹಣದುಬ್ಬರವನ್ನು ಪರಿಗಣಿಸುತ್ತದೆ. ಕೇಂದ್ರ ಸರ್ಕಾರ ನೀಡಿರುವ ಸೂಚನೆಯ ಪ್ರಕಾರ, ಆರ್‌ಬಿಐ ಚಿಲ್ಲರೆ ಹಣದುಬ್ಬರವನ್ನು ಶೇ 6ರ ಒಳಗೆ ನಿಯಂತ್ರಿಸಬೇಕಿದೆ.

'ಬೆಲೆ ಏರಿಕೆಯು ಆರ್ಥಿಕತೆಯ ಇತರ ವಲಯಗಳ ಮೇಲೆ ಪರಿಣಾಮ ಬೀರದಂತೆ ತಡೆಯುವುದು ಬಹಳ ಮುಖ್ಯ' ಎಂದು ಅವರು ಹೇಳಿದ್ದಾರೆ.

'ಹಣದುಬ್ಬರದ ಒತ್ತಡ ಮತ್ತು ಆರ್ಥಿಕ ಬೆಳವಣಿಗೆಗೆ ಸದ್ಯದ ಜಾಗತಿಕ ಆರ್ಥಿಕ ಪರಿಸ್ಥಿತಿಯು ಸವಾಲಾಗಿದೆ. ವೈವಿಧ್ಯಮಯ ಆರ್ಥಿಕ ತಳಹದಿ ಮತ್ತು ದೂರದೃಷ್ಟಿಯಿಂದ ಕೂಡಿದ ಹಣಕಾಸು ನೀತಿಗಳಿಂದಾಗಿ ಭಾರತವು ಈ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿದೆ.

'ಹಣದುಬ್ಬರವು ಗರಿಷ್ಠ ಮಟ್ಟದಲ್ಲಿ ಇದ್ದರೆ ಖರೀದಿ ಸಾಮರ್ಥ್ಯ ಮತ್ತು ಹೂಡಿಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ. ಹೀಗಾಗಿ ಹಣಕಾಸು ನೀತಿಯನ್ನು ಬಿಗಿಗೊಳಿಸುವ ಮೂಲಕ ಹಣದುಬ್ಬರದ ಒತ್ತಡವನ್ನು ಕಡಿಮೆ ಮಾಡಲು ಆರ್‌ಬಿಐ ಮುಂದಾಗಿದೆ' ಎಂದು ಅವರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಜಾಗತಿಕ ಅನಿಶ್ಚಿತ ಸ್ಥಿತಿಯಿಂದ ಭಾರತಕ್ಕೆ ಅಪಾಯ
- ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 7ರ ಸಮೀಪಕ್ಕೆ ಜಿಡಿಪಿ

ಸುಧಾ, ಮಯೂರ ಓದಿ

ಸುದ್ದಿ 2 ನಿಮಿಷ

ಮಾರುತಿ ಸುಜುಕಿ ನಿವ್ವಳ ಲಾಭ ₹2,112 ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹2,112 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ನಾಲ್ಕುಪಟ್ಟು ಹೆಚ್ಚಳ ಕಂಡುಬಂದಿದೆ.

ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 487 ಕೋಟಿ ನಿವ್ವಳ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನವು ₹20,550 ಕೋಟಿಯಿಂದ ₹29,942 ಕೋಟಿಗೆ ಶೇ 46ರಷ್ಟು ಏರಿಕೆ ಆಗಿದೆ. ಮಾರಾಟವು ದಾಖಲೆ ಪ್ರಮಾಣದಲ್ಲಿ ಹೆಚ್ಚಳ ಆಗಿರುವುದೇ ಇದಕ್ಕೆ ಕಾರಣ ಎಂದು ಕಂಪನಿ ತಿಳಿಸಿದೆ.

ತ್ರೈಮಾಸಿಕದಲ್ಲಿ ಕಂಪನಿಯ ಒಟ್ಟು 5.17 ಲಕ್ಷ ವಾಹನಗಳನ್ನು ಮಾರಾಟ ಮಾಡಿದ್ದು, ತ್ರೈಮಾಸಿಕವೊಂದರಲ್ಲೇ ಆಗಿರುವ ಗರಿಷ್ಠ ಮಾರಾಟ ಇದಾಗಿದೆ. ವಾಹನಗಳ ದೇಶಿ ಮಾರಾಟ 4.54 ಲಕ್ಷ, ರಫ್ತು 63,195ಕ್ಕೆ ತಲುಪಿದೆ ಎಂದು ಕಂಪನಿ ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕ ಮತ್ತು ಎಲೆಕ್ಟ್ರಾನಿಕ್ ಬಿಡಿಭಾಗಗಳ ಕೊರತೆಯು ಈ ಹಿಂದೆ ಬೆಳವಣಿಗೆಯ ಮೇಲೆ ಪರಿಣಾಮ ಉಂಟುಮಾಡಿತ್ತು. ಆದರೆ, ಈ ತ್ರೈಮಾಸಿಕದಲ್ಲಿ ಆ ಸಮಸ್ಯೆ ಇಲ್ಲದೇ ಇರುವುದರಿಂದ ಉತ್ತಮ ಬೆಳವಣಿಗೆ ಸಾಧ್ಯವಾಗಿದೆ ಎಂದು ಕಂಪನಿಯ ಅಧ್ಯಕ್ಷ ಆರ್.ಸಿ. ಭಾರ್ಗವ್ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಲಾಭ ಹೆಚ್ಚಾಗಿರುವುದರಿಂದ ಕಂಪನಿಯ ಷೇರು ಮೌಲ್ಯವು ಶೇ 6ರವರೆಗೆ ಏರಿಕೆ ಕಂಡಿತು. ಮಾರುಕಟ್ಟೆ ಮೌಲ್ಯವು ₹13,534 ಕೋಟಿಯಷ್ಟು ಹೆಚ್ಚಾಯಿತು.

ತಗ್ಗಿದ ವಿದೇಶಿ ವಿನಿಮಯ ಸಂಗ್ರಹ

ಮುಂಬೈ (ಪಿಟಿಐ): ವಿದೇಶಿ ವಿನಿಮಯ ಮೀಸಲು ಸಂಗ್ರಹವು ಅಕ್ಟೋಬರ್ 21ಕ್ಕೆ ಕೊನೆಗೊಂಡ ವಾರದಲ್ಲಿ ₹31,656 ಕೋಟಿಯಷ್ಟು ಕಡಿಮೆ ಆಗಿದ್ದು, ₹43.17 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳು ಹೆಚ್ಚಿನ ಪಾಲು ಹೊಂದಿವೆ. ಆದರೆ, ಅಕ್ಟೋಬರ್ 21ಕ್ಕೆ ಕೊನೆಗೊಂಡ ವಾರದಲ್ಲಿ ವಿದೇಶಿ ಕರೆನ್ಸಿಗಳ ಸಂಗ್ರಹವು ₹29,595 ಕೋಟಿಯಷ್ಟು ಕಡಿಮೆ ಆಗಿದೆ. ಹೀಗಾಗಿ ದೇಶದ ಒಟ್ಟಾರೆ ಮೀಸಲು ಸಂಗ್ರಹದಲ್ಲಿ ಇಳಿಕೆ ಕಂಡುಬಂದಿದೆ ಎಂದು ಅದು ಹೇಳಿದೆ.

ಚಿನ್ನದ ಮೀಸಲು ಸಂಗ್ರಹ ₹2,036 ಕೋಟಿ ಕಡಿಮೆ ಆಗಿ ₹3.06 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ (ಐಎಂಎಫ್) ಇರುವ ಭಾರತದ ಮೀಸಲು ಸಂಗ್ರಹವು ₹115 ಕೋಟಿಯಷ್ಟು ಕಡಿಮೆ ಆಗಿ ₹39,488 ಕೋಟಿಯಷ್ಟಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-56000
ಕುಮಟ	
ಚಿಪ್ಪು	23019-32899
ಕೋಕ	15089-30099
ಫ್ಯಾಕ್ಟರಿ	10169-20469
ಹೊಸಚಾಲಿ	37089-41099
ಪುತ್ತೂರು	
ಹೊಸತು	32000-38000

ಶಿವಮೊಗ್ಗ	
ಬೆಟ್ಟೆ	48899-52519
ಗೊರಬಲು	20000-36699
ಹೊಸತು	46011-48599
ರಾಶಿ	46299-49601
ಸರಕು	60599-79400
ಸಿದ್ದಾಪುರ	
ಬಿಳಿಗೋಟು	30316-33809
ಚಾಲಿ	37099-41309
ಕೋಕ	28099-33699
ಕೆಂಪುಗೋಟು	33019-33889
ರಾಶಿ	46899-49099
ತಟ್ಟಿಬೆಟ್ಟೆ	40699-47099

ಶಿರಸಿ	
ಬೆಟ್ಟೆ	25029-44699
ಬಿಳಿಗೋಟು	17211-36299
ಚಾಲಿ	38919-42399
ಫ್ಯಾಕ್ಟರಿ	38919-42399
ರಾಶಿ	41699-48169
ಯಲ್ಲಾಪುರ	
ಬಿಳಿಗೋಟು	26899-35469
ಚಾಲಿ	37019-42571
ಕೋಕ	18899-32899
ಕೆಂಪುಗೋಟು	26899-35469
ರಾಶಿ	47689-53969
ತಟ್ಟಿಬೆಟ್ಟೆ	38309-46839

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	14500	14400	178.85 ಸೆಂಟ್ಸ್
ಎಸಿ	8960	8000	7500	
ಆರ್‌ಪಿ	9000	9000	9000	ಲಂಡನ್
ಆರ್‌ಸಿ	4700	4050	4500	1908 ಡಾಲರ್ಸ್

ಬೊರೊಪ್ಲಸ್‌ಗೆ ಅಕ್ಷಯ್ ಕುಮಾರ್ ಬ್ರ್ಯಾಂಡ್ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಿವುಡ್ ನಟ ಅಕ್ಷಯ್ ಕುಮಾರ್ ಅವರು ಇಮಾಮಿ ಲಿಮಿಟೆಡ್ ಕಂಪನಿಯ ಬೊರೊಪ್ಲಸ್ ಆಯುರ್ವೇದಿಕ್ ಆ್ಯಂಟಿಸೆಪ್ಟಿಕ್ ಕ್ರೀಮ್‌ನ ಬ್ರ್ಯಾಂಡ್ ರಾಯಭಾರಿ ಆಗಿದ್ದಾರೆ.



ಅಕ್ಷಯ್ ಕುಮಾರ್

ಅಕ್ಷಯ್ ಕುಮಾರ್ ತಮ್ಮ ವೃತ್ತಿ ಜೀವನದಲ್ಲಿ ಹಲವು ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಹೀಗಾಗಿ ಬಹು ಉಪಯೋಗಿ ಆಗಿರುವ ಬೊರೊಪ್ಲಸ್ ಬ್ರ್ಯಾಂಡ್‌ಗೆ ಅವರು ಸೂಕ್ತ ವ್ಯಕ್ತಿ ಎಂದು ಕಂಪನಿಯ ನಿರ್ದೇಶಕಿ ಪ್ರೀತಿ ಎ. ಸುರೇಖಾ ತಿಳಿಸಿದ್ದಾರೆ.

ಗ್ರಾಹಕರ ನಂಬಿಕೆಗೆ ಪಾತ್ರವಾಗಿರುವ ಬ್ರ್ಯಾಂಡ್ ಜೊತೆ ಕೆಲಸ ಮಾಡಲು ಸಂತೋಷ ಆಗುತ್ತಿದೆ ಎಂದು ಅಕ್ಷಯ್ ಕುಮಾರ್ ಅವರು ಹೇಳಿದ್ದಾರೆ.

ಟ್ವಿಟರ್ ಮಾರಾಟ: ಸಾಮಾಜಿಕ ಜಾಲತಾಣಗಳಲ್ಲಿ ಮೀಮ್ಸ್

ನವದೆಹಲಿ (ಪಿಟಿಐ): ಇಲಾನ್ ಮಸ್ಕ್ ಟ್ವಿಟರ್ ಕಂಪನಿಯನ್ನು ಖರೀದಿಸಿರುವ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಬಗೆ ಬಗೆಯ ಮೀಮ್ಸ್‌ಗಳು ಹರಿದಾಡುತ್ತಿವೆ. ತಮಾಷೆಯ ವಿಡಿಯೊಗಳು ಮತ್ತು ಪೋಸ್ಟ್‌ಗಳು ಗಮನ ಸೆಳೆಯುತ್ತಿವೆ.

ಮಸ್ಕ್ ವೇಷ ತೊಟ್ಟ ವ್ಯಕ್ತಿಯೊಬ್ಬ ಕಾರಿನ ಕಿಟಕಿಯಿಂದ ತಲೆಯನ್ನು ಹೊರಗೆ ಹಾಕಿ ಮಾರಾಟಗಾರನಿಂದ ಹಕ್ಕಿಗಳನ್ನು ಖರೀದಿಸಿ ಒಂದೊಂದಾಗಿಯೇ ಹೊರಬಿಡುತ್ತಿರುವ ಮೀಮ್ಸ್ ಮಾಡಲಾಗಿದೆ.

ಮಸ್ಕ್ ಅವರು ಟ್ವಿಟರ್ ಖರೀದಿಸಿದ್ದು, ಆ ಬಳಿಕ ಉನ್ನತ ಹುದ್ದೆಯಲ್ಲಿದ್ದವರನ್ನು ವಜಾ ಮಾಡಿರುವುದನ್ನು ಬಾಲಿವುಡ್ ನಟ ಗೋವಿಂದ ಅವರ ಚಲನಚಿತ್ರದ ತುಣುಕೊಂದನ್ನು ಬಳಸಿಕೊಂಡು ಮೀಮ್ಸ್ ಮಾಡಲಾಗಿದೆ. ಚಿತ್ರದಲ್ಲಿ ಗೋವಿಂದ ಅವರು ಪ್ರತಿಯೊಂದು ಕ್ಯಾಬಿನ್‌ಗೂ ಹೋಗಿ ಅಲ್ಲಿದ್ದ ನೌಕರರನ್ನು ವಜಾ ಮಾಡುವ ಸನ್ನಿವೇಶ ಇದೆ.

ಪರಾಗ್ ಅವರು ಟ್ವಿಟರ್ ಮುಖ್ಯ ಕಚೇರಿಯ ಎದುರು 'ಅಗ್ರವಾಲ್ ಸ್ವೀಟ್ಸ್ ಶಾಪ್' ತೆಗೆದಿರುವ ಚಿತ್ರವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, '#ParagAgrawal is back with a bang in front of Twitter HQ' ಎನ್ನುವ ಶೀರ್ಷಿಕೆ ನೀಡಲಾಗಿದೆ.

> **ಟ್ವಿಟರ್ ಈಗ ದ್ವೇಷ ಭಾಷಣದ ವಿರುದ್ಧ ಕಾರ್ಯನಿರ್ವಹಿಸಲಿದ್ದು, ಭಾರತದಲ್ಲಿ ಪ್ರತಿಪಕ್ಷಗಳ ಧ್ವನಿಯನ್ನು ಹತ್ತಿಕ್ಕುವುದಿಲ್ಲ ಎನ್ನುವ ಭರವಸೆ ಮೂಡಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> **ಟ್ವಿಟರ್ ಈಗ ವಿವೇಕದ ಕೈಯಲ್ಲಿದೆ. ನಮ್ಮ ದೇಶವನ್ನು ದ್ವೇಷಿಸುವ ಅತಿಯಾದ ಎಡಪಂಥೀಯರು ಅದನ್ನು ನಡೆಸುವುದಿಲ್ಲ ಎನ್ನುವ ಸಂತೋಷವಿದೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಮಾಜಿ ಅಧ್ಯಕ್ಷ

ವೇದಾಂತ ಲಾಭ ಇಳಿಕೆ

ನವದೆಹಲಿ (ಪಿಟಿಐ): ವೇದಾಂತ ಲಿಮಿಟೆಡ್‌ನ ನಿವ್ವಳ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 61ರಷ್ಟು ಇಳಿಕೆ ಆಗಿದ್ದು ₹1,808 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಲಾಭ ₹4,615 ಕೋಟಿ ಆಗಿತ್ತು ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

28–10-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10350
ದಪ್ಪ ಗುಜರಾತ್(ಹೊಸ)	10750-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	1280 (1300)
ಪಾಮ್ ವಾರದ ಡೆಲಿವರಿ	983 (998)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,350 (50,500)

ಬೆಳ್ಳಿ ಕೆ.ಜಿ 57,450 (57,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಶಾಂಘೈ: 13 ಲಕ್ಷ ನಿವಾಸಿಗಳಿಗೆ ಲಾಕ್‌ಡೌನ್

ಬೀಜಿಂಗ್ (ಎಪಿ): ಶಾಂಘೈನ ಯಾಂಗ್‌ಪು ಜಿಲ್ಲೆಯಲ್ಲಿ ಶುಕ್ರವಾರ ಸಾಮೂಹಿಕ ಕೋವಿಡ್ ಪರೀಕ್ಷೆಗೆ ಆದೇಶಿಸಿದ್ದು, ಪರೀಕ್ಷೆಯ ಫಲಿತಾಂಶ ಬರುವವರೆಗೆ ಜಿಲ್ಲೆಯ 13 ಲಕ್ಷ ನಿವಾಸಿಗಳು ಮನೆಯಿಂದ ಹೊರಹೋಗದಂತೆ ನಿರ್ಬಂಧ ವಿಧಿಸಲಾಗಿದೆ.

ಶಾಂಘೈನ ಪೂರ್ವದಿಂದ ಟಿಬೆಟ್‌ವರೆಗೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಲಾಗಿದ್ದು, ಲಾಕ್‌ಡೌನ್ ಅನ್ನು ವಿರೋಧಿಸಿ ಕೆಲವೆಡೆ ಪ್ರತಿಭಟನೆಗಳು ನಡೆದ ವರದಿಯಾಗಿದ್ದು, ಅವುಗಳಲ್ಲಿ ಬಹುತೇಕವು ಲಕ್ಷಣರಹಿತವಾಗಿವೆ. ಯಾವುದೇ ಸಾವುಗಳೂ ವರದಿಯಾಗಿಲ್ಲ. ಶಾಂಘೈನಲ್ಲಿ 11 ಲಕ್ಷಣರಹಿತ ಪ್ರಕರಣಗಳು ವರದಿಯಾಗಿವೆ.

ರಶ್ದಿ ಮೇಲಿನ ದಾಳಿ: ಇರಾನ್ ಫೌಂಡೇಶನ್‌ಗೆ ದಂಡ

ವಾಷಿಂಗ್ಟನ್ (ಎಪಿ): ಕಳೆದ ಆಗಸ್ಟ್‌ನಲ್ಲಿ ಸಾಹಿತ್ಯ ಕಾರ್ಯಕ್ರಮವೊಂದರಲ್ಲಿ ಭಾರತೀಯ ಮೂಲದ ಬ್ರಿಟಿಷ್–ಅಮೆರಿಕನ್ ಲೇಖಕ ಸಲ್ಮಾನ್ ರಶ್ದಿ ಅವರ ಮೇಲಿನ ಹಿಂಸಾತ್ಮಕ ದಾಳಿಗೆ ನಿಧಿ ಸಂಗ್ರಹಿಸಿದ್ದ ಇರಾನ್ ಮೂಲದ ಸಂಘಟನೆಗೆ ಅಮೆರಿಕ ದಂಡ ವಿಧಿಸಿದೆ.

ಸಲ್ಮಾನ್ ರಶ್ದಿ ಅವರ ಹತ್ಯೆಗೆ ಬಹುಕೋಟಿ ಡಾಲರ್ ಇನಾಮು ಘೋಷಿಸಿದ್ದ 15 ಖೋರ್ಡಾಡ್ ಫೌಂಡೇಶನ್‌ಗೆ ಅಮೆರಿಕದ ಖಜಾನೆಯ ವಿದೇಶಿ ಸ್ವತ್ತುಗಳ ನಿಯಂತ್ರಣ ಕಚೇರಿ ದಂಡ ಹೇರಿದೆ.

ನ್ಯಾನ್ಸಿ ಪೆಲೋಸಿ ಪತಿಗೆ ಥಳಿತ, ಆರೋಪಿ ಬಂಧನ

ವಾಷಿಂಗ್ಟನ್ (ಎಪಿ): ಅಮೆರಿಕದ ಜನಪ್ರತಿನಿಧಿಗಳ ಸಭೆಯ (ಕೆಳಮನೆ) ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರ ಪತಿ ಪೌಲ್ ಅವರನ್ನು ಸುತ್ತಿಗೆಯಿಂದ ಥಳಿಸಿ, ಹಿಂಸಾತ್ಮಕ ದಾಳಿ ನಡೆಸಿದ ಘಟನೆ ಶುಕ್ರವಾರ ನಡೆದಿದೆ.

ಆಕ್ರಮಣಕಾರನು ಪೆಲೋಸಿ ಅವರ ಸ್ಯಾನ್‌ಫ್ರಾನ್ಸಿಸ್ಕೊ ನಿವಾಸಕ್ಕೆ ನುಗ್ಗಿ ದಾಳಿ ನಡೆಸಿದ್ದಾನೆ. ತಲೆ ಮತ್ತು ದೇಹದ ಮೇಲೆ ಏಟು ಬಿದ್ದು ತೀವ್ರ ಗಾಯಗೊಂಡ 82 ವರ್ಷದ ಪೌಲ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವಕ್ತಾರ ಡ್ರೀವ್ ಹಮ್ಮಿಲ್ ತಿಳಿಸಿದ್ದಾರೆ.

ಆಕ್ರಮಣಕಾರನನ್ನು ಬಂಧಿಸಲಾಗಿದ್ದು, ದಾಳಿಯ ಉದ್ದೇಶದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸ್ವತಂತ್ರ ವಿದೇಶಾಂಗ ನೀತಿ: ಮೋದಿಗೆ ಪುಟಿನ್ ಪ್ರಶಂಸೆ

ಮಾಸ್ಕೊ (ಪಿಟಿಐ): 'ಪ್ರಧಾನಿ ಮೋದಿ ಅವರು ತಮ್ಮ ದೇಶದ ಹಿತದೃಷ್ಟಿಯಿಂದ ಸ್ವತಂತ್ರ ವಿದೇಶಾಂಗ ನೀತಿ ಅನುಸರಿಸುತ್ತಿರುವ ವಿಶ್ವದ ಸಮರ್ಥ ನಾಯಕರಲ್ಲಿ ಒಬ್ಬರು. ಅವರು ನಿಜವಾದ ದೇಶಭಕ್ತ. ಅವರನ್ನು ತಡೆಯಲು ದೇಶದ ಜನರೂ ಪ್ರಯತ್ನಿಸಿಲ್ಲ. ಅವರ ನಾಯಕತ್ವದಲ್ಲಿ ಭಾರತದಲ್ಲಿ ಸಾಕಷ್ಟು ಮಹತ್ತರ ಕೆಲಸಗಳಾಗಿವೆ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಸ್ಕೊ ಮೂಲದ ಚಿಂತಕರ ಚಾವಡಿ 'ವಾಲ್ಡೈ ಅಂತರರಾಷ್ಟ್ರೀಯ ಚರ್ಚಾ ಕ್ಲಬ್'ನಲ್ಲಿ ಗುರುವಾರ ನಡೆದ ವಾರ್ಷಿಕ ಅಧಿವೇಶನದಲ್ಲಿ ಅವರು ಮಾತನಾಡಿದರು.

'ಮೋದಿ ಅವರ ಮೇಕ್ ಇನ್ ಇಂಡಿಯಾ ಕಲ್ಪನೆಯು ಆರ್ಥಿಕವಾಗಿ ಪ್ರಾಮುಖ್ಯತೆ ಪಡೆದಿದೆ. ಭಾರತದ ಬಗ್ಗೆ ಪ್ರತಿಯೊಬ್ಬರೂ ಹೆಮ್ಮೆ ಪಡುತ್ತಿದ್ದಾರೆ. ಜಾಗತಿಕ ವ್ಯವಹಾರಗಳಲ್ಲಿ ಅದರ ಪಾತ್ರ ಮಹತ್ವದ್ದಾಗಿದೆ. ಭಾರತಕ್ಕೆ ಉತ್ತಮ ಭವಿಷ್ಯವಿದೆ' ಎಂದು ಅವರು ಹೇಳಿದರು.

'ನಮಗೆ ಭಾರತದ ಜತೆ ವಿಶೇಷ ಸಂಬಂಧವಿದೆ. ಇದು ನಿಜವಾಗಿಯೂ ದಶಕಗಳಿಂದ ನಿಕಟ ಮೈತ್ರಿಯ ತಳಹದಿಯ ಮೇಲೆ ರೂಪುಗೊಂಡ ಬಾಂಧವ್ಯ. ಮಿಲಿಟರಿ, ತಾಂತ್ರಿಕ ಕ್ಷೇತ್ರದ ಸಹಕಾರ ಉಭಯತ್ರರ ನಡುವೆ ಮುಂದುವರಿದಿದೆ. ನಮ್ಮ ನಡುವೆ ಆರ್ಥಿಕ ಸಹಕಾರವೂ ಹೆಚ್ಚುತ್ತಿದೆ. ಭಾರತದ ಕೃಷಿಗೆ ಬಹಳ ಮುಖ್ಯವಾದ ರಸಗೊಬ್ಬರ ಪೂರೈಕೆ ಹೆಚ್ಚಿಸುವಂತೆ ಮೋದಿ ಕೇಳಿದ್ದರು. ರಸಗೊಬ್ಬರ ಪೂರೈಕೆ 7.6 ಪಟ್ಟು ಹೆಚ್ಚಿಸಿದ್ದೇವೆ. ಕೃಷಿ ಕ್ಷೇತ್ರದಲ್ಲೂ ವ್ಯಾಪಾರ ದ್ವಿಗುಣಗೊಂಡಿದೆ' ಎಂದು ಪುಟಿನ್ ಹೇಳಿದರು.

'ನಮಗೆ ಯಾವತ್ತೂ ಭಾರತದ ಜತೆಗೆ ಯಾವುದೇ ಕ್ಲಿಷ್ಟ ಸಮಸ್ಯೆಗಳು ಎದುರಾಗಿಲ್ಲ. ಸದಾ ಪರಸ್ಪರರು ಬೆಂಬಲಿಸಿದ್ದೇವೆ. ಭವಿಷ್ಯದಲ್ಲೂ ಈ ಸಂಬಂಧ ಉಳಿಯುವ ಖಾತ್ರಿ ನನಗಿದೆ. ಇದರಲ್ಲಿ ನಾನು ಸಕಾರಾತ್ಮಕವಾಗಿದ್ದೇನೆ' ಎಂದು ಪುಟಿನ್ ಹೇಳಿರುವುದನ್ನು ಉಲ್ಲೇಖಿಸಿ ರಷ್ಯಾದ ಸರ್ಕಾರಿ ಸುದ್ದಿಸಂಸ್ಥೆ 'ಆರ್‌ಟಿ' ವರದಿ ಮಾಡಿದೆ.

'ಬ್ರಿಟಿಷ್ ವಸಾಹತುಶಾಹಿಯಿಂದ ಈಗಿನ ಆಧುನಿಕ ರಾಷ್ಟ್ರವಾಗಿರುವ ಭಾರತ ತನ್ನ ಅಭಿವೃದ್ಧಿಯಲ್ಲಿ ಮಹತ್ತರ ಪ್ರಗತಿ ಸಾಧಿಸಿದೆ. ಇದು ದೇಶದ ಸುಮಾರು 150 ಕೋಟಿ ಜನ ಸಂಖ್ಯೆಯ ಮೇಲೆ ಗಮನಾರ್ಹ ಫಲಿತಾಂಶಗಳನ್ನು ಬೀರಿರುವುದು ಸ್ಪಷ್ಟ. ಭಾರತ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಮಾತ್ರವಲ್ಲ, ಅದರ ಬೆಳವಣಿಗೆಯ ದರ, ಪ್ರಗತಿ ಮತ್ತು ಅಭಿವೃದ್ಧಿ ಬಗ್ಗೆಯೂ ಹೆಮ್ಮೆ ಪಡಬೇಕು' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ.10,000-15,000. 8951315839, 9880545002

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಇತರೆ

Books & Periodicals

ಉಚಿತವಾಗಿ ಬೈಬಲ್ ನೀಡಲಾಗುತ್ತದೆ ನಿಮ್ಮ ಮನೆಯ ವಿಳಾಸಕ್ಕೆ ಸಂಪರ್ಕಿಸಿ: 8892501007/ 9606701007

EDUCATION CORNER

ಸ್ಪರ್ಧಾ ಮಿತ್ರ ACADEMY B'lore

IAS / KAS Prelims and Mains

PSI / PDO / PC

RRB / SSC / Bank- Exams

Monday & Tuesday FREE DEMO CLASSES

SC / ST ಹಾಗೂ ಉತ್ತರ ಕರ್ನಾಟಕದ ಬಡ ಅಭ್ಯರ್ಥಿಗಳಿಗೆ ಶುಲ್ಕ ರಿಯಾಯಿತಿ

Near Attigupppe Metro Station, opp. Maruti Medicals (338 Pillar) Vijayanagar, Bengaluru - 40.

9535111188 / 9535111199

ಪ್ರವಾಸ

Travel

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

16.11.2022 11.01.2023 15.02.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 06.11.2022 13.01.2023 08.02.2023 ದುಬೈ 5 ದಿನಗಳು. 10.11.2022 09.12.2022 17.01.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 27.11.2022 13.12.2022 12.01.2023 ಗುಜರಾತ್ 8 ದಿನಗಳು. 18.11.2022 04.12.2022 ರಾಜಸ್ಥಾನ್ 9 ದಿನಗಳು. 04.12.2022 ರ್‍ರಾಮೇಶ್ವರ ಕನ್ಯಾಕುಮಾರ,ಮಧುರೈ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.3 9448402248 7022547922

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5 ದಿನಗಳು. 30.11.2022 ನವಗ್ರಹ ದರ್ಶನ ತಿರುನಲ್ಲಾರು,ತಂಜಾವೂರು, ಕುಂಭಕೋಣಂ ವೇಲಾಂಗಣಿ, ಚಿದಂಬರಂ,ಶ್ರೀರಂಗಂ, ಪುಂಪುಹಾರ್ ಬೀಚ್ 18 ಕ್ಷೇತ್ರಗಳು 6500/. 9448390735 9449721678

05.11.2022ರಿಂದ 13ದಿನಗಳು ಎಸಿ.ಬಸ್ಸು, ಎಸಿ.ರೂಂನೊಂದಿಗೆ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ಅನ್ನಾವರಂ,ವಿಶಾಖಪಟ್ಟಣ,ವಾಸವಿಪೆನ್ನಗೊಂಡ ದ್ವಾರಕಾ,ತಿರುಮಲ`ಇತ್ಯಾದಿ. 27.11.2022ರಿಂದ 8ದಿನಗಳು ವಿಮಾನ, ಎಸಿ.ರೂಂ,`ಎಸಿ.ಬಸ್ಸುನೊಂದಿಗೆ`ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯ ಅಹಮದಾಬಾದ್` ಏಷ್ಯನ್`ಟ್ರಾವೆಲ್`ಲೈನ್ಸ್ #164/3`ಅರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: 8105657052/ 9480182865

ಎಸಿ ರೂಂ, ಊಟದೊಂದಿಗೆ ವಿಮಾನದಲ್ಲಿ 24-11-2022.. 10 ದಿನಗಳ ಉಜ್ಜಯನಿ, ಗುಜರಾತ್ ನಾಲ್ಕು ಜ್ಯೋತಿರ್ಲಿಂಗ, ಪಟೇಲ್ ಪ್ರತಿಮೆ ವಿಮಾನ ಪ್ರವಾಸ..29-12-22 ದೆಹಲಿ, ಕಾಶಿ, ಗಯಾ, ಪ್ರವಾಸ 8 ದಿನಗಳು. ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್, ತುಮಕೂರು ಫೋ: 8496044942

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್14/11/22 ಗುಜರಾತ್, ದ್ವಾರಕಾ, ಬೇಟ್‌ದ್ವಾರಕ, ನಾಗನಾಥ, ಸೋಮನಾಥ, Statue of Unity, ಮಾತೃಗಯಾ, ರಾಣಿಕಿವಾವ್. 9591017782,9964527782

DH ಪ್ರಜಾವಾಣಿ

BOOK YOUR REAL ESTATE

AD IN DECCAN HERALD ALL KARNATAKA + PRAJAVANI BENGALURU ON FRIDAY + SATURDAY + SUNDAY

@1070/-* Per Sqcm Single Column

conditions apply*

For More Details Contact:

9886213331 | 9845114560 | 9731810277 | 9901641752

080- 45557163 | 45557164

dhclassifieds@deccanherald.co.in www.dhclassifieds.com

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸೂರ್ಯಕುಮಾರ್ ಯಾದವ್

ಸೂರ್ಯಕುಮಾರ್ ಪ್ರಖರ ಸ್ಟ್ರೈಕ್‌ರೇಟ್

ಸಿಡ್ನಿ (ಪಿಟಿಐ): ಒಂದೂವರೆ ವರ್ಷದ ಹಿಂದೆ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಮುಂಬೈನ ಸೂರ್ಯಕುಮಾರ್ ಯಾದವ್ ಈಗ ಎಲ್ಲ ತಂಡಗಳ ಬೌಲರ್‌ಗಳಿಗೆ ಸಿಂಹಸ್ವಪ್ನರಾಗಿದ್ದಾರೆ.

ಇಲ್ಲಿಯವರೆಗೂ ಆಡಿರುವ 36 ಟಿ20 ಪಂದ್ಯಗಳಲ್ಲಿ 178ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸುತ್ತಿರುವ ಅವರ ನಿರ್ಭಿಡೆ ಆಟದಿಂದಾಗಿ ಭಾರತ ತಂಡವು ಮಹತ್ವದ ಗೆಲುವುಗಳನ್ನು ದಾಖಲಿಸಿದೆ. ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ 1111 ರನ್‌ಗಳನ್ನು ಗಳಿಸಿದ್ದಾರೆ. ಎಲ್ಲ ಬ್ಯಾಟರ್‌ಗಳಿಗಿಂತ ಮುಂದಿದ್ದಾರೆ. ಅದರಲ್ಲಿ 1 ಶತಕ ಹಾಗೂ 10 ಅರ್ಧಶತಕಗಳು ಸೇರಿವೆ. ನೆದರ್ಲೆಂಡ್ಸ್ ಎದುರು 25 ಎಸೆತಗಳಲ್ಲಿ 51 ರನ್ ಸೂರೆ ಮಾಡಿದರು. 'ಬ್ಯಾಟಿಂಗ್‌ಗೆ ಹೋದಾಗ ನನ್ನ ಯೋಜನೆಗಳು ಸ್ಪಷ್ಟವಾಗಿರುತ್ತವೆ. ಅದರ ಚೌಕಟ್ಟಿನೊಳಗೇ ಎಲ್ಲವನ್ನೂ ಮಾಡಲು ಪ್ರಯತ್ನಸುತ್ತೇನೆ' ಎಂದು ಮುಂಬೈಕರ್ ಹೇಳಿದರು.

ಜಸ್‌ಪ್ರೀತ್ ಬೂಮ್ರಾ ಅನುಪಸ್ಥಿತಿಯ ಕುರಿತು ಭುವನೇಶ್ವರ್ ಪ್ರತಿಕ್ರಿಯೆ

ನಮ್ಮ ಮೇಲೆ ಒತ್ತಡ ಇಲ್ಲ

ಸಿಡ್ನಿ (ಪಿಟಿಐ): ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಗಾಯಗೊಂಡಿರುವುದರಿಂದ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿಲ್ಲ. ಅದರಿಂದಾಗಿ ನಾವು ಹೆಚ್ಚುವರಿ ಅವಧಿ ಕಾರ್ಯನಿರ್ವಹಿಸಬೇಕಾದ ಒತ್ತಡವೇನಿಲ್ಲ ಎಂದು ಭಾರತ ತಂಡದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಹೇಳಿದ್ದಾರೆ.

ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗುರುವಾರ ನಡೆದ ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಜಯಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಬೂಮ್ರಾ ಅವರು ಅಲಭ್ಯರಾಗಿರುವುದರಿಂದ ತಂಡಕ್ಕೆ ನಷ್ಟವಾಗಿದೆ ಅವರು ತಂಡದಲ್ಲಿದ್ದರೆ ನಮ್ಮ ಬೌಲಿಂಗ್ ವಿಭಾಗದ ಶಕ್ತಿ ಹೆಚ್ಚಿರುತ್ತದೆ. ಅದರಿಂದಾಗಿ ನಮ್ಮ ಹೊರೆಯೂ ಕಡಿಮೆಯಿರುತ್ತದೆ. ಅವರು ತಂಡದಲ್ಲಿ ಇಲ್ಲದಿದ್ದರೂ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಉತ್ತಮವಾಗಿ ಆಡುತ್ತಿದ್ದೇವೆ' ಎಂದು ಹೇಳಿದರು.

ಏಷ್ಯಾ ಕಪ್ ಟೂರ್ನಿಯ ಪಂದ್ಯಗಳ ಡೆತ್ ಓವರ್‌ಗಳಲ್ಲಿ ತಮ್ಮ ವೈಫಲ್ಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇಷ್ಟು ವರ್ಷಗಳಲ್ಲಿ ಇದೊಂದು ಬಾರಿ ಈ ರೀತಿಯಾಗಿದೆ. ಆಯಿತು, ಹೋಯಿತು. ಅದರ ಬಗ್ಗೆ ಚಿಂತಿಸುತ್ತಿರಲು ಇದು ಸಮಯವಲ್ಲ.

ಭುವನೇಶ್ವರ್ ಕುಮಾರ್

ಟೀಕಾಕಾರರು ಹಾಗೂ ಮಾಧ್ಯಮಗಳು ಡೆತ್ ಓವರ್‌ಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹೇಳುತ್ತವೆ. ಆದರೆ, ತಂಡದಲ್ಲಿರುವವರಿಗೆ ಆ ಹೊತ್ತಿನ ಪರಿಶಿತಗಳ ಅರಿವು ಚೆನ್ನಾಗಿರುತ್ತದೆ' ಎಂದರು.

'ವಿಶ್ವಕಪ್ ಮುಗಿಯುವವರೆಗೂ ನಾನು ಸಾಮಾಜಿಕ ಜಾಲತಾಣಗಳಿಂದ ದೂರ ಉಳಿಯುತ್ತೇನೆ. ಆದ್ದರಿಂದ ಮಾಧ್ಯಮಗಳಲ್ಲಿ ಏನು ಸುದ್ದಿಗಳು ಹರಿದಾಡುತ್ತಿವೆ ಎಂಬ ಅರಿವು ನನಗಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಮೆಲ್ಬರ್ನ್‌ನಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ನನ್ನ ಎಸೆತಗಳು ನಿರೀಕ್ಷೆಗೂ ಮೀರಿ ಉತ್ತಮವಾಗಿ ಸ್ವಿಂಗ್ ಆದವು. ಅರ್ಷದೀಪ್ ಸಿಂಗ್ ಕೂಡ ಚೆನ್ನಾಗಿ ಬೌಲಿಂಗ್ ಮಾಡಿದರು. ಅವರೂ ಅವತ್ತು ಎರಡು ವಿಕೆಟ್ ಗಳಿಸಿದರು. ಅರ್ಷದೀಪ್ ತಮ್ಮ ಪದಾರ್ಪಣೆಯ ಪಂದ್ಯದಿಂದಲೂ ಅಮೋಘವಾಗಿ ಆಡುತ್ತಿದ್ದಾರೆ. ಮೊದಲ ವಿಶ್ವಕಪ್ ಟೂರ್ನಿ ಆಡುತ್ತಿರುವ ಅವರು ವಿರಾಟ್, ರೋಹಿತ್ ಹಾಗೂ ನನ್ನಿಂದ ಸಲಹೆ ಪಡೆದು ತಮ್ಮ ಕೌಶಲ ಉತ್ತಮಗೊಳಿಸಿಕೊಳ್ಳುತ್ತಿದ್ದಾರೆ' ಎಂದು ಶ್ಲಾಘಿಸಿದರು.

ಭಾರತ ತಂಡವು ಸೂಪರ್ 12 ಹಂತದ ಎರಡನೇ ಗುಂಪಿನ ಮೂರನೇ ಪಂದ್ಯದಲ್ಲಿ ಭಾನುವಾರ ದಕ್ಷಿಣ ಆಫ್ರಿಕಾ ವಿರುದ್ಧ ಪರ್ತ್‌ನಲ್ಲಿ ಆಡಲಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	2	1	0	1	3	4.450
ಇಂಗ್ಲೆಂಡ್	3	1	1	1	3	0.239
ಐರ್ಲೆಂಡ್	3	1	1	1	3	-1.169
ಆಸ್ಟ್ರೇಲಿಯಾ	3	1	1	1	3	-1.155
ಶ್ರೀಲಂಕಾ	2	1	1	0	2	0.450
ಅಫ್ಗಾನಿಸ್ತಾನ	3	0	1	2	2	-0.620
ಗುಂಪು 2						
ಭಾರತ	2	2	0	0	4	1.425
ದಕ್ಷಿಣ ಆಫ್ರಿಕಾ	2	1	0	1	3	5.200
ಜಿಂಬಾಬ್ವೆ	2	1	0	1	3	0.050
ಬಾಂಗ್ಲಾದೇಶ	2	1	1	0	2	-2.375
ಪಾಕಿಸ್ತಾನ	2	0	2	0	0	-0.050
ನೆದರ್ಲೆಂಡ್ಸ್	2	0	2	0	0	-1.625

ಆಸ್ಟ್ರೇಲಿಯಾ, ಇಂಗ್ಲೆಂಡ್ ಹಾದಿ ಕಠಿಣ

ಮೆಲ್ಬರ್ನ್‌ನಲ್ಲಿ ಮಳೆಯದ್ದೇ ಆಟ; 2 ಪಂದ್ಯಗಳು ರದ್ದು

ಮೆಲ್ಬರ್ನ್ (ಪಿಟಿಐ): ಭಾರಿ ಕುತೂಹಲಕ್ಕೆ ಮೂಡಿಸಿದ್ದ ಆಸ್ಟ್ರೇಲಿಯಾ– ಇಂಗ್ಲೆಂಡ್ ನಡುವಣ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ 'ಗುಂಪು–1' ರ ಪಂದ್ಯ ಮಳೆಯಿಂದ ರದ್ದುಗೊಂಡಿತು. ಐರ್ಲೆಂಡ್– ಅಫ್ಗಾನಿಸ್ತಾನ ಪಂದ್ಯವೂ ಮಳೆಯಿಂದಾಗಿ ನಡೆಯಲಿಲ್ಲ.

ಮೆಲ್ಬರ್ನ್‌ನಲ್ಲಿ ಶುಕ್ರವಾರ ನಡೆಯಬೇಕಿದ್ದ ಎರಡೂ ಪಂದ್ಯಗಳು ಮಳೆಯಿಂದ ರದ್ದಾಗಿರುವುದರಿಂದ 'ಗುಂಪು–1' ರಿಂದ ಸೆಮಿಫೈನಲ್ ಪ್ರವೇಶದ ಕನಸು ಕಂಡಿರುವ ತಂಡಗಳ ಹಾದಿ ಮತ್ತಷ್ಟು ಕಠಿಣವಾಗಿದೆ.

ಎರಡು ಪಂದ್ಯಗಳಿಂದ ಮೂರು ಪಾಯಿಂಟ್ಸ್ ಹೊಂದಿರುವ ನ್ಯೂಜಿಲೆಂಡ್ ತಂಡ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ಐರ್ಲೆಂಡ್ ತಂಡಗಳು ಮೂರು ಪಂದ್ಯಗಳಿಂದ ಮೂರು ಪಾಯಿಂಟ್ಸ್ ಹೊಂದಿದೆ. ಉತ್ತಮ ರನ್‌ರೇಟ್ ಇರುವುದರಿಂದ ಇಂಗ್ಲೆಂಡ್ ಎರಡನೇ ಸ್ಥಾನದಲ್ಲಿದ್ದರೆ, ಐರ್ಲೆಂಡ್ ಮೂರನೇ ಸ್ಥಾನದಲ್ಲಿದೆ.

ಆತಿಥೇಯ ಆಸ್ಟ್ರೇಲಿಯಾ ನಾಲ್ಕನೇ ಸ್ಥಾನದಲ್ಲಿದ್ದು, ಸೆಮಿಫೈನಲ್ ಪ್ರವೇಶಿಸಲು ಭಾರಿ ಕಸರತ್ತು ನಡೆಸಬೇಕಾದ ಅನಿವಾರ್ಯತೆ ಒದಗಿದೆ. ಇನ್ನುಳಿದ ಎರಡೂ ಪಂದ್ಯಗಳನ್ನು ಗೆಲ್ಲಲೇಬೇಕಾದ ಒತ್ತಡ ತಂಡದ ಮೇಲಿದೆ. ಇನ್ನೊಂದು ಪಂದ್ಯ ಮಳೆಯಿಂದ ರದ್ದಾದರೆ, ಸೆಮಿ ಪ್ರವೇಶದ ಸಾಧ್ಯತೆ ಕ್ಷೀಣಿಸಲಿದೆ.

ತಲಾ ಒಂದು ಗೆಲುವು ಮತ್ತು ಸೋಲು ಅನುಭವಿಸಿರುವ ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ತಂಡಗಳು ಶುಕ್ರವಾರ ಗೆಲ್ಲಲೇಬೇಕಾದ ಒತ್ತಡದಲ್ಲಿದ್ದವು. ಇದರಿಂದ ರೋಚಕ ಪೈಪೋಟಿ ನಿರೀಕ್ಷಿಸಲಾಗಿತ್ತು. ಆದರೆ ಮಳೆ ಅದಕ್ಕೆ ಅವಕಾಶ ನೀಡಲಿಲ್ಲ. ಪ್ರತಿ ಗುಂಪಿನಿಂದ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಸೆಮಿ ಪ್ರವೇಶಿಸಲಿವೆ.

ಅಫ್ಗನ್ ತಂಡದ ಎರಡು ಪಂದ್ಯಗಳು ಸೇರಿದಂತೆ ಈ ಟೂರ್ನಿಯಲ್ಲಿ ಇದುವರೆಗೆ ಒಟ್ಟು ನಾಲ್ಕು ಪಂದ್ಯಗಳು ಮಳೆಯಿಂದಾಗಿ ರದ್ದುಗೊಂಡಿವೆ.

ತಲಾ ಎರಡು ಪಾಯಿಂಟ್ಸ್ ಹೊಂದಿರುವ ಶ್ರೀಲಂಕಾ ಮತ್ತು ಅಫ್ಗಾನಿಸ್ತಾನ ತಂಡಗಳು 'ಗುಂಪು 1' ರಲ್ಲಿ ಕೊನೆಯ ಎರಡು ಸ್ಥಾನಗಳಲ್ಲಿವೆ.

ಡೆರಿಲ್ ಬಲ: ನ್ಯೂಜಿಲೆಂಡ್ ತಂಡದವರು ಟೂರ್ನಿಯ ಪಂದ್ಯದಲ್ಲಿ ಶನಿವಾರ ಶ್ರೀಲಂಕಾ ತಂಡವನ್ನು ಎದುರಿಸಲಿದ್ದು, ಆಲ್‌ರೌಂಡರ್ ಡೆರಿಲ್ ಮಿಚೆಲ್ ಅವರ ಆಗಮನದಿಂದ ಬಲ ಹೆಚ್ಚಿದೆ. ಕಳೆದ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಫೈನಲ್ ಪ್ರವೇಶಿಸುವಲ್ಲಿ ಮಿಚೆಲ್ ಪ್ರಮುಖ ಪಾತ್ರ ವಹಿಸಿದ್ದರು. ಕೈಬೆರಳಗಿನ ಗಾಯದ ಕಾರಣ ಅವರು ಆಸ್ಟ್ರೇಲಿಯಾ ವಿರುದ್ಧದ ಮೊದಲ ಪಂದ್ಯದಲ್ಲಿ ಆಡಿರಲಿಲ್ಲ.

ಆಸ್ಟ್ರೇಲಿಯಾ ತಂಡದ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಅಭಿಮಾನಿಗಳ ಜತೆ ಸೆಲ್ಫಿ ತೆಗೆದುಕೊಂಡರು –ಎಎಫ್‌ಪಿ ಚಿತ್ರ

ಇಂದಿನ ಪಂದ್ಯ

ನ್ಯೂಜಿಲೆಂಡ್– ಶ್ರೀಲಂಕಾ
ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಸಂಕ್ಷಿಪ್ತ ಸುದ್ದಿ

ಪ್ರಣಯ್, ಸಮೀರ್ ವರ್ಮಾಗೆ ಸೋಲು

ಪ್ಯಾರಿಸ್ (ಪಿಟಿಐ): ಭಾರತದ ಎಚ್.ಎಸ್.ಪ್ರಣಯ್ ಮತ್ತು ಸಮೀರ್ ವರ್ಮಾ ಅವರು ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸೋತರು. ಇದರೊಂದಿಗೆ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲಿಗೆ ತೆರೆಬಿತ್ತು.

ಗುರುವಾರ ನಡೆದ ಪಂದ್ಯದಲ್ಲಿ ಪ್ರಣಯ್ 19–21, 22–20, 19–21 ರಲ್ಲಿ ಚೀನಾದ ಲು ಗುವಾಂಗ್ ಜು ಕೈಯಲ್ಲಿ ಪರಾಭವಗೊಂಡರು. ಈ ರೋಚಕ ಕಾದಾಟ 1 ಗಂಟೆ 28 ನಿಮಿಷ ನಡೆಯಿತು.

ಸಮೀರ್ ವರ್ಮಾ 18–21, 11–21 ರಲ್ಲಿ ಥಾಯ್ಲೆಂಡ್‌ನ ಕನ್ಲಾವತ್ ವಿತಿಸರನ್ ಎದುರು ಸೋತರು. ಎದುರಾಳಿಯ ಶಿಸ್ತಿನ ಆಟಕ್ಕೆ ತಕ್ಕ ಪೈಪೋಟಿ ನೀಡಲು ಭಾರತದ ಆಟಗಾರ ವಿಫಲರಾದರು.ಭಾರತದ ಇನ್ನೊಬ್ಬ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಎದುರು ಸೋತು ಹೊರಬಿದ್ದಿದ್ದರು.

ಸೆಮಿಫೈನಲ್‌ಗೆ ಸಾತ್ವಿಕ್– ಚಿರಾಗ್: ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ಭಾರತದ ಜೋಡಿ 23–21, 21–18 ರಲ್ಲಿ ಜಪಾನ್‌ನ ತಕುರೊ ಹೊಹಿ– ಯೂಗೊ ಕೊಬಯಶಿ ಅವರನ್ನು ಮಣಿಸಿತು.

ಸೆಮಿಗೆ ಶಂಕರ್

ಸ್ಯಾಂಟಂಡರ್, ಸ್ಪೇನ್ (ಪಿಟಿಐ): ಭಾರತದ ಶಂಕರ್ ಮುತ್ತುಸ್ವಾಮಿ ಅವರು ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ತಲುಪಿದ್ದಾರೆ. ಇದರೊಂದಿಗೆ ಪದಕ ಖಚಿತಪಡಿಸಿದ್ದಾರೆ.

ಚಾಂಪಿಯನ್‌ಷಿಪ್‌ನ 19 ವರ್ಷದೊಳಗಿನವರ ವಿಭಾಗದ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಶಂಕರ್ 21-18, 8-21, 21-16ರಿಂದ ಚೀನಾದ ಹು ಜೆ ಆ್ಯನ್ ಅವರನ್ನು ಮಣಿಸಿದರು.

ವಂಚನೆ ಆರೋಪ: ನೇಮರ್ ನಿರಾಳ

ಬಾರ್ಸಿಲೋನಾ (ರಾಯಿಟರ್ಸ್): ಬ್ರೆಜಿಲ್ ಫುಟ್‌ಬಾಲ್ ಆಟಗಾರ ನೇಮರ್ ಅವರ ಮೇಲಿದ್ದ ಭ್ರಷ್ಟಾಚಾರ ಮತ್ತು ವಂಚನೆ ಆರೋಪಗಳನ್ನು ಸ್ಪೇನ್‌ನ ಸರ್ಕಾರಿ ಪರ ವಕೀಲರು ಕೈಬಿಟ್ಟಿದ್ದಾರೆ. ನೇಮರ್ ಅವರು ಬ್ರೆಜಿಲ್‌ನ ಸಂಟೋಸ್ ಕ್ಲಬ್ ತೊರೆದು ಸ್ಪೇನ್‌ನ ಬಾರ್ಸಿಲೋನಾ ಕ್ಲಬ್ ಸೇರುವ ಸಂದರ್ಭದಲ್ಲಿ ವಂಚನೆ ಎಸಗಿದ್ದರು ಎಂದು ಬ್ರೆಜಿಲ್‌ನ ಹೂಡಿಕೆದಾರ ಸಂಸ್ಥೆ ಡಿಐಎಸ್ ದೂರಿತ್ತು.

ರೊನಾಲ್ಡೊ ಗೋಲು: ಮ್ಯಾಂಚೆಸ್ಟರ್‌ಗೆ ಜಯ

ವಾಷಿಂಗ್ಟನ್ (ಎಪಿ): ಪಂದ್ಯದ ಕೊನೆಯ ಹಂತದಲ್ಲಿ ಕಾಲ್ಚಳಕ ತೋರಿದ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಮ್ಯಾಂಚೆಸ್ಟರ್ ಯುನೈಟೆಡ್ ತಂಡಕ್ಕೆ ಗೋಲು ಗಳಿಸಿಕೊಟ್ಟರು.

ಯೂರೋಪಾ ಲೀಗ್ ಟೂರ್ನಿಯಲ್ಲಿ ಶುಕ್ರವಾರ ನಡೆದ ಹಣಾಹಣಿಯಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ 3–0ಯಿಂದ ಶೆರಿಫ್ ತಿರಾಸ್ಪೋಲ್ ಎದುರು ಗೆದ್ದಿತು. ಇದರೊಂದಿಗೆ ನಾಕೌಟ್ ಸುತ್ತಿಗೆ ಅರ್ಹತೆ ಗಳಿಸಿತು. ಪಂದ್ಯದ 81ನೇ ನಿಮಿಷದಲ್ಲಿ ರೊನಾಲ್ಡೊ ಗೋಲು ದಾಖಲಿಸಿದರು. ಡಿಯಗೊ ಡ್ಯಾಲಟ್ 44ನೇ ನಿಮಿಷದಲ್ಲಿ ಮ್ಯಾಂಚೆಸ್ಟರ್ ತಂಡಕ್ಕೆ ಮೊದಲ ಗೋಲು ತಂದಿದ್ದರು. ಮಾರ್ಕಸ್ ರ್‍ಯಾಶ್‌ಫೋರ್ಡ್ 65ನೇ ನಿಮಿಷದಲ್ಲಿ ಗೋಲು ಹೊಡೆದಿದ್ದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರನ್ನು ಸನ್ಮಾನಿಸಲಾಯಿತು. ಕೆಎಸ್‌ಸಿಎ ಖಜಾಂಚಿ ವಿನಯ್ ಮೃತ್ಯುಂಜಯ, ಕ್ರಿಕೆಟಿಗರಾದ ಬ್ರಿಜೇಶ್ ಪಟೇಲ್, ಜೆ. ಅಭಿರಾಮ್, ಜಿ.ಆರ್. ವಿಶ್ವನಾಥ್, ಕಾರ್ಯದರ್ಶಿ ಸಂತೋಷ್ ಮೆನನ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬಿಸಿಸಿಐ ಅಧ್ಯಕ್ಷರಿಗೆ ಕೆಎಸ್‌ಸಿಎ ಸನ್ಮಾನ

ಭಾವುಕರಾದ ರೋಜರ್

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ರೋಜರ್ ಬಿನ್ನಿ ಅವರು ತಾವು ಕ್ರಿಕೆಟಿಗನಾಗಿ ಬೆಳೆಯಲು ವೇದಿಕೆಯಾದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಸನ್ಮಾನ ಸ್ವೀಕರಿಸಿದರು.

ಕರ್ನಾಟಕದಿಂದ ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೇರಿದ ರೋಜರ್ ಬಿನ್ನಿ ಅವರಿಗೆ ಐಪಿಎಲ್ ಸಮಿತಿಯ ನಿಕಟಪೂರ್ವ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಹಾಗೂ ಕ್ರಿಕೆಟ್ ದಂತಕಥೆ ಜಿ.ಆರ್. ವಿಶ್ವನಾಥ್ ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ರೋಜರ್, ತಮ್ಮ ತಂದೆಯನ್ನು ನೆನಪಿಸಿ ಭಾವುಕರಾದರು.

'ಇದು ನನಗೆ ಬಯಸದೇ ಬಂದ ಭಾಗ್ಯ. ಕಳೆದ ಎರಡು ವಾರಗಳಿಂದ ಹಲವಾರು ಜನ ಅಭಿಮಾನಿಗಳು, ಹಿತೈಷಿಗಳು ಹಾಗೂ ಸ್ನೇಹಿತರ ಅಭಿನಂದನೆಗಳ ಸಂದೇಶಗಳು ಬರುತ್ತಲೇ ಇವೆ. ಇಂತಹ ದೊಡ್ಡ ಹುದ್ದೆಗೆ ಏರಿರುವುದು ಸಂತಸ ತಂದಿದೆ. ಕ್ರಿಕೆಟ್‌ನಲ್ಲಿ ಇಲ್ಲಿಯವರೆಗೆ ಮಾಡಿರುವ ಸಾಧನೆಗಳ ಹಿಂದೆ ನನ್ನ ತಂದೆ, ತಾಯಿ , ಕುಟುಂಬದ ಬೆಂಬಲ ಅಪಾರ' ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆಎಸ್‌ಸಿಎ ಉಪಾಧ್ಯಕ್ಷ ಜೆ. ಅಭಿರಾಮ್ ಅವರು, 'ನಾನು ಮತ್ತು ರೋಜರ್ ಶಾಲಾ ಕ್ರಿಕೆಟ್ ದಿನಗಳಿಂದಲೂ ಒಡನಾಡಿಗಳು. ಅವರೊಬ್ಬ ಉತ್ತಮ ಅಥ್ಲೀಟ್ ಆಗಿದ್ದರು' ಎಂದರು.

ಈ ಸಂದರ್ಭದಲ್ಲಿ ರೋಜರ್ ಬಿನ್ನಿಯವರ ಪತ್ನಿ ಸಿಂಥಿಯಾ, ಕೆಎಸ್‌ಸಿಎ ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್, ತಿಲಕನಾಯ್ಡು ಮತ್ತಿತರರು ಹಾಜರಿದ್ದರು.

ಹಾಕಿ: ಭಾರತ ಶುಭಾರಂಭ

ಭುವನೇಶ್ವರ (ಪಿಟಿಐ): ಮನ್‌ದೀಪ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ಹಾಕಿ ತಂಡ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಶುಭಾರಂಭ ಮಾಡಿತು.

ಶುಕ್ರವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ 4–3 ಗೋಲುಗಳಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿತು. ಮನ್‌ದೀಪ್ 51 ಹಾಗೂ 56ನೇ ನಿಮಿಷಗಳಲ್ಲಿ ಗೋಲು ತಂದಿತ್ತರೆ, ಇತರ ಎರಡು ಗೋಲುಗಳನ್ನು ಮನ್‌ದೀಪ್ ಮೋರ್ (13ನೇ ನಿ.) ಹಾಗೂ ಹರ್ಮನ್‌ಪ್ರೀತ್ ಸಿಂಗ್ (41) ಗಳಿಸಿದರು. ನ್ಯೂಜಿಲೆಂಡ್ ತಂಡದ ಪರ ಸ್ಯಾಮ್ ಲೇನ್ (22 ಹಾಗೂ 35ನೇ ನಿ.) ಮತ್ತು ಜೇಕ್ ಸ್ಮಿತ್ (34ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಮೂರನೇ ಕ್ವಾರ್ಟರ್‌ನ ಕೊನೆಯಲ್ಲಿ ಭಾರತ 2–3 ರಲ್ಲಿ ಹಿನ್ನಡೆಯಲ್ಲಿತ್ತು. ಕೊನೆಯ ಕ್ವಾರ್ಟರ್‌ನಲ್ಲಿ ಚುರುಕಿನ ಆಟವಾಡಿದ ಮನ್‌ದೀಪ್ ಗೆಲುವನ್ನು ಎದುರಾಳಿಗಳಿಂದ ಕಸಿದುಕೊಂಡರು. ಭಾರತದ ಮೊಹಮ್ಮದ್ ರಹೀಲ್ ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಹಾಕಿಗೆ ಪದಾರ್ಪಣೆ ಮಾಡಿದರು.

ಫೈನಲ್‌ಗೆ ಜೂನಿಯರ್ ತಂಡ: ಭಾರತ ಜೂನಿಯರ್ ಪುರುಷರ ಹಾಕಿ ತಂಡವು ಜೋಹರ್ ಕಪ್ ಹಾಕಿ ಟೂರ್ನಿಯ ಫೈನಲ್ ತಲುಪಿದೆ.

ಮಲೇಷ್ಯಾದ ಜೋಹರ್‌ನಲ್ಲಿ ಟೂರ್ನಿಯುತ್ತಿರುವ ಟೂರ್ನಿಯ ರೌಂಡ್ ರಾಬಿನ್ ಮಾದರಿಯ ಕೊನೆಯ ಪಂದ್ಯದಲ್ಲಿ ಭಾರತ 5–5ರಿಂದ ಲ್ಲಿ ಮಲೇಷ್ಯಾ ಎದುರು ರೋಚಕ ಡ್ರಾ ಸಾಧಿಸಿತು.

ಪ್ರೊ ಕಬಡ್ಡಿ: ನರೇಂದರ್ ಮಿಂಚು

ಪುಣೆ (ಪಿಟಿಐ) ರೇಡರ್ ನರೇಂದರ್ ಅವರ ಸೊಗಸಾದ ಆಟದ ನೆರವಿನಿಂದ ತಮಿಳ್ ತಲೈವಾಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನ ಪುಣೆ ಲೆಗ್‌ನ ಮೊದಲ ಪಂದ್ಯದಲ್ಲಿ ಗೆಲುವು ಪಡೆದರು.

ಇಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ತಲೈವಾಸ್ 38–27 ಪಾಯಿಂಟ್‌ಗಳಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು. ನರೇಂದರ್ 13 ಪಾಯಿಂಟ್ಸ್ ಗಳಿಸಿದರೆ ಅವರಿಗೆ ತಕ್ಕ ಸಾಥ್ ನೀಡಿದ ಅಜಿಂಕ್ಯಾ ಪವಾರ್ ಆರು ಪಾಯಿಂಟ್ಸ್ ತಂದಿತ್ತರು.

ಪಂದ್ಯ ಟೈ: ಪುಣೇರಿ ಪಲ್ಟನ್ ಮತ್ತು ಹರಿಯಾಣ ಸ್ಟೀಲರ್ಸ್ ನಡುವಣ ದಿನದ ಎರಡನೇ ಪಂದ್ಯ 27–27 ರಲ್ಲಿ 'ಟೈ'ನಲ್ಲಿ ಕೊನೆಗೊಂಡಿತು.ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 34–29ರಿಂದ ಯುಪಿ ಯೋಧಾಸ್ ತಂಡದ ಎದುರು ಜಯ ಸಾಧಿಸಿತು.

ಇಂದಿನ ಪಂದ್ಯಗಳು

ಬೆಂಗಳೂರು ಬುಲ್ಸ್– ದಬಾಂಗ್ ಡೆಲ್ಲಿ (ರಾತ್ರಿ 7.30)

ತೆಲುಗು ಟೈಟನ್ಸ್– ಗುಜರಾತ್ ಜೈಂಟ್ಸ್ (ರಾತ್ರಿ 8.30)

ಬೆಂಗಾಲ್ ವಾರಿಯರ್ಸ್– ಯು ಮುಂಬಾ (ರಾತ್ರಿ 9.30)

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	7	5	2	0	27
ಪುಣೇರಿ	8	4	2	2	27
ಜೈಪುರ	8	5	3	0	26
ಬೆಂಗಳೂರು	7	4	2	1	24
ಬೆಂಗಾಲ್	7	4	3	0	21
ಹರಿಯಾಣ	8	3	4	1	21